ಶ್ರೀಮತ್ಪರಮಹಂಸ ಪರಿವ್ರಾಜಕಾಚಾರ್ಯ ಶ್ರೀ ಶ್ರೀ ೧೦೮ ಶ್ರೀ ಶ್ರೀಧರವೆಂಕಟೇಶಾಯಣಾವಧೂತ ಸದ್ಗುರವೇನಮಃ

ಶ್ರೀಃಸ್ತು

ಶ್ರೀ ಕೃಷ್ಣರಾಜ ಮಹಾರಾಜ ಕಂಠೀರವರ ವಂಶಾವತರಣ

ವೈಭವ ಗದ್ಯ

ಸ್ವಸ್ತಿ ಶ್ರೀಮಚ್ಚಂದ್ರ ವಂಶಮುಕ್ತಾಫಲಾಯಮಾನ ಯದುಸಂ
ತತಿಸಮುದ್ಭವವಾದಿಯದುಮಹಾರಾಜಕುಲಲಲಾಮಭೂತ ಬೃಹದ್ಬೆಟ್ಟ
ಚಾಮರಾಜತನೂಜ ತಿಮ್ಮರಾಜಾತ್ಮಜ ಮಹಾಚಾಮರಾಜತನೂಭವ
ಬೆಟ್ಟಚಾಮರಾಜನಂದನತಿಮ್ಮರಾಜಾಜ್ಞಾ ಪರಿಪಾಲಕಚಾಮರಾಜಪ್ರಿಯ
ತನಯ ಬೆಟ್ಟಚಾಮರಾಜ ಕರುಣಾಕಟಾಕ್ಷ ಸವಾಸಾದಿತ ಮಹಾರಾಜ್ಯಾ
ಧಿಪತ್ಯ ಧೌರೇಯ ರಾಜಾಧಿರಾಜ ಕರ್ಣಾಟಕಜನಪದ ರಾಜ್ಯಲಕ್ಷ್ಮೀ ತಾ
ಟಂಕಾಯಮಾನ ಮಹೀಶೂರನಗರ ಶ್ರೀರಂಗಪಟ್ಟಣಾಭಿಧ ಮಹಾಸಂ
ಸಾನ ವಿದ್ಯೋತಮಾನ ದಿವ್ಯರತ್ನ ಸಿಂಹಾಸನಾರೂಢ ರಾಜಕ್ಷಿತಿಪಾಲ
ಕುಲಾನಂದನ ಚಾಮರಾಜಮಹೀಪಾಲ ಪರಿಪಾಲಿತ ಮಹಾರಾಜ್ಯಧುರಂಧ
ರೇಮ್ಮಡಿರಾಜಸುತ ಸಂಪತ್ಪಲಾಯಿತ ಪಂಚರತ್ನ ನಿರ್ಮಾಣ ಧುರೀಣಾ
ಪ್ರತಿಮ ಭುಜಬಲ ಪರಾಕ್ರಮ ಸಮುತ್ಸಾರಿತವೈರಿವರ್ಗ ರಣಧೀರಕಂಠೀ
ರವ ನರಸಿಂಹರಾಜ ಮಹಾರಾಜ ಹೃದಯಾನಂದಕರ ಧರ್ಮೈಕನಿರತ
ಮಾನಸ ದೊಡ್ಡದೇವರಾಜ ವರತನಯ ನವಕೋಟಿನಾರಾಯಣ ಪದಾಲಂ
ಕೃತಸನುಸ್ತ ಮಯೂರಾದಾದಿವ್ಯವಸ್ಥಾಪಕ ಚಿಕ್ಕದೇವರಾಜಮಹಾರಾಜಾ
ತ್ಮಜ ಕಂಠೀರವ ಮಹಾರಾಜತನಯ ದೊಡ್ಡಕೃಷ್ಣರಾಜಕುಲೋದ್ಭವ
ಚಾಮರಾಜನಮಾಸಕ್ತರಾಜ್ಯಲಕ್ಷ್ಮೀಹೃದಯಾನಂದಕರೇಮ್ಮಡಿಕೃಷ್ಣ
ರಾಜತನೂಜ ನಂಜರಾಜಮಹಾಸಾಮ್ರಾಜ್ಯಧುರಂಧರ ಬೆಟ್ಟಚಾಮರಾಜ
ರಾಜ್ಯಲಕ್ಷ್ಮೀಸ್ವಯಂವರವರಾಯಮಾಣ ಸರ್ವಜನಸುಕೃತಾನಂದರಾಶಿ
ವಾರಾಶಿ ಕೌಸ್ತುಭಾಯಮಾನ ದೇವಬ್ರಾಹ್ಮಣ ಮನೋರಥಪರಿಪೂರಣ
ಕಲ್ಪಕಾಖಿಲಾಖಾಯಿತಭುಜಲತಾಲಂಕೃತ ಶ್ರೀಮಚ್ಚಾಮುಂಡಿಕಾಂಬಾ
ಚರಣಾರವಿಂದಭೃಂಗಾಯಮಾನಮಾನಸತಾಸಮಾಸಾದಿತಸಮಸ್ತಪುರು

ವಾರ್ಧ ಪರಿಶೋಭಿತ ಸತ್ಯಸಂಧ ಕೋಟಿ ಪಂಚಾಕ್ಷರೀಪುರಶ್ಚರ್ಯಾ ಪರಿ
ತೋಷಿತ ಶ್ರೀಕಂಠೇಶ್ವರಕರುಣಾಕಟಾಕ್ಷಪೂರ್ಣಪಾತ್ರ ಶ್ರೀಮನ್ಮ
ಹಾಮಂಡಲೇಶ್ವರ ಚಾಮೆರಾಜೇಂದ್ರ ಸಾರ್ವಭೌಮ ಧರ್ಮಪತ್ನೀ ಕಂಪಸಂಜ
ಸಮಂಬಿ ಗರ್ಭಸುಧಾಂಬುಧಿ ರಾಕಾಸುಧಾಕರಾಯಮಾನಃ ಸಪ್ತಮ
ಸ್ಥಾನಸ್ಥಿತ ಮೇಷಾದಿರಾಶ್ಯಷ್ಟಕಂಠ ಮೇಷಾಯುಗಾನ್ತರ್ಮಾರ್ತಿ ಕಲಿಯುಗ
ಜೀವನರತ್ನ ಲಕ್ಷ್ಮೀವ್ಯೋಮ ಸಂಪೂರ್ಣೇಂದಿತ ಶ್ರೀಮದ್ರಾಜಾಧಿರಾಜ
ಗುರುಮಣಿಕೊಲ್ಲಸಾನಂದವರ್ಧ ದಕ್ಷಿಣಾಯನ ಗ್ರೀಷ್ಮರ್ತುಕಟಕಸ್ಥ
ಪೂರ್ಣ ಕೃಷ್ಣ ಪ್ರತೀಯಾ ಚಂದ್ರವಾರ ಶ್ರವಣತಾರಾ ಪ್ರೀತಿಯೋಗ
ತೈತಿಲಕರಣ ದಿವಾಧಿಜಿನಸ್ಮರಣಾನುಗುಣ ಮೃಗರಾಶಿ ಕನ್ಯಾಲಗ್ನ
ವೆರಾಮ್ಯ ಪೂರ್ವಾಷಾಢ ಘಟಿಕಾಯಾಂ ಶನಿಶುಕ್ರಾಂಗಾರಕ ಗುರುಷು ವೃಷಭ
ಮೃಗಾಂಶ ತುಲಾಚಾಪರಾಶಿಯುಂತೇಷು ಬುಧಾರ್ಕರಾಹುಷು ಕರ್ಕಿಸ್ಥಿ
ತೇಷು ಚಂದ್ರಕೇತ್ವೋರ್ಮಿಥುನಸ್ಥಯೋ ವೈಧೃತಿಕಸೀಚಕಮೊಂದಾ
ಪಿತಾವೃಷೀಸುಸಮಯೇ ದ್ವಿಜರಾಜದಶಾಂತರೇ ಶ್ರೀ ಜಾನುಮಂಡಿಕಾಂಬಾ
ಮಹಾಪ್ರಸಾದ ಪರಿಕಲ್ಪಿತಾವತಾರಃ, ಸುಕೃತಿಸಂತತಿಚಿಂತಾಮಣಿಃ,
ಸೌಶ್ಯಾದಾರ್ಯಗಾಂಭೀರ್ಯ ಧೈರ್ಯಸ್ಥೈರ್ಯ ಚಾತುರ್ಯೌದಾರ್ಯ
ಸೌಂದರ್ಯ ವಿದ್ಯಾವಿನಯ ಶಕ್ತಿರಾಜನೀತಿ ತೇಜಸ್ಸಾಹಸಾದ್ಯನಂತ
ಕಲ್ಯಾಣಗುಣಗಣರತ್ನ ರತ್ನಾಕರಾಯಮಾನಃ, ಶಮದಮಕ್ಷಮಾದಯಾ
ದಾಕ್ಷಿಣ್ಯಾದ್ಯಾತ್ಮಗುಣಾಲಂಕೃತಃ, ಸಿದ್ಧಾರ್ಥಿವತ್ಸರ ಜ್ಯೇಷ್ಠ ಕೃಷ್ಣ
ತ್ರಯೋದಶೀಂದುವಾರ ರೋಹಿಣೀ ತಾರಾಕಲಿತ ಕನ್ಯಾಲಗ್ನ ಸುಮು
ಹೂರ್ತ ಕರ್ಣಾಟಕಮಹಾರಾಜ್ಯ ಪಟ್ಟಾಭಿಷಿಕ್ತಃ, ತುಲಾಪುರುಷ ಹಿರ
ಣ್ಯಾಗರ್ಭ ಗೋಸಹಸ್ರವೆಸುಂಧರಾಗ್ರದಾನಾದ್ಯನೇಕಮಹಾದಾನ ಸಮೇ
ಧಮಾನಕೀರ್ತಿಮಂಡಲೀಪ್ರಾಂಜ ವಿರಾಜಿತ ಸಕಲದಿಙ್ಮಂಡಲಃ, ಅಪರಿ
ಮಿತ ಮಾಹೀಕೂಪ ತಟಾಕದೇವಾಲಯ ಗೋಪುರಾನ್ನಸತ್ರ ಸೋಪಾನ
ಸರಿತ್ಸೇತುಮೆಂಟವ ಧರ್ಮಶಾಲಾರಾಮೋದ್ಯನೇಕ ಧರ್ಮಸಂಸ್ಥಾಪನ
ಧುರೀಣಃ, ರಜತಪೀಠಪುರ ಸುಬ್ರಹ್ಮಣ್ಯಾದಿ ದಿವ್ಯಕ್ಷೇತ್ರ ದೇವತಾದರ್ಶನ
ಸಮುದ್ರ ಪ್ರಮುಖ ಸಕಲ ತೀರ್ಥಯಾತ್ರಾಸ್ನಾನ ಪರಿಶುದ್ಧ ನಿಜಾಂತ
ರಂಗಃ, ಶ್ರೀತತ್ವ ನಿಧ್ಯಾದ್ಯನೇಕಗ್ರಂಥ ನಿರ್ಮಾಣಪ್ರಕಾಶಿತ ಸಕಲ

ಶಾಸ್ತ್ರಾರ್ಥ ಪಾಂಡಿತ್ಯ ವೈಭವಃ, ಭುಜ ಲಕ್ಷ್ಮೀದಿವ್ಯೋಪೇಂದ್ರ
ಪರಿಮಿತ ಶಕಾಬ್ದಸಂಗತ ರಾಜ್ಯಾಭಿಷೇಕಾದಿ ಷಷ್ಟಿತಮ ಸಿದಾ
ಧಿರ್ವರ್ಷ ವ್ಯೋಷಾಸಿತ ತ್ರಯೋದಶೀ ಭೌಮವಾರ ರೋಹಿಣೀ
ಕನ್ಯಾಲಗ್ನಾಭಿಜಿನ್ಮುಹೂರ್ತ ಯಥಾಶಾಸ್ತ್ರ ವಿಹಿತ ವರ್ಷವೈಭವಾಭಿಷೇಕ
ಮಹೋತ್ಸವ ಸಮುತ್ಪೋಜಿತ ಜಗದ್ವಿಖ್ಯಾತ ಮಹಾರಾಜ ಶ್ರೀಜಾ
ರೈಭಾವಃ, ಶ್ರೀಮತ್ಸಮಸ್ತ ಭೂಮಂಡಲ ಮಂಡನಾಯಮಾನ ಸಪಿಲ
ಶೇಷಾವತಂಸ ಕರ್ಣಾಟಕ ಜನಪದಸಂಪದಧಿಷ್ಠಾನ ಭೂತ ಶ್ರೀವನ್ಮಹಿ
ಶೂರೆ ಮಹಾಸಂಸ್ಥಾನಮಧ್ಯ ದೇದೀಪ್ಯಮಾನಾವಿಕಲ ಕಲಾನಿಧಿ ಕಾಲ
ಕ್ರಮಾಗತ ರಾಜಪ್ರತಿಪಾಲಪ್ರಮುಖನಿಖಿಲನಿಜ ರಾಜಾಧಿರಾಜ ಮಹಾ
ರಾಜ ಚಕ್ರವರ್ತಿಮಂಡಲಾನುಭೂತ ದಿವ್ಯರತ್ನ ಸಿಂಹಾಸನಾರೂಢಃ, ಶ್ರೀ
ಮದ್ರಾಜಾಧಿರಾಜ ರಾಜಪರಮೇಶ್ವರ ಪ್ರಾಢಪ್ರತಾಪಪ್ರತಿಮವೀರ ನರ
ಪತಿಬಿರುದೆಂತೆಂಬರ ಗಂಡ ಚಂಡಪ್ರಚಂಡೋದ್ದಂಡ ರಿವುತಿವಿರನೊ
ರ್ಗಂಡ ಲೋಕೈಕವೀರ ಯದುಕುಲಪಯಃಪಾರಾವಾರ ಕಲಾನಿಧಿ ಶಂಖ
ಚಕ್ರಾಂಕುಶಕುಠಾರ ಮಕರಮತ್ಸ್ಯ ಕರಭ ಸಾಳ್ವ ಗಂಡಭೇರುಂಡ
ಧರಣೀವರಾಹ ಹನುಮದ್ಗರುಡ ಕಂಠೀರವಾದ್ಯನೇಕ ಬಿರುದಾಂಕಿತಃ,
ಶ್ರೀಮಹಾವಿಷ್ಣು ರಿವ ಜಗತ್ಪಾಲಕಃ, ಶಂಕರ ಇವ ಸರ್ವಜ್ಞಾಕ್ಷಣ್ಮುಖ
ಇವ ಶಕ್ತಿಸಂಪನ್ನಃ, ಬೃಹಸ್ಪತಿರಿವ ಪ್ರಜ್ಞಾಶಾಲೀ, ಶ್ರೀರಾಮ ಇವ
ಸುಕೀರ್ತಿವೈಭವಃ, ಶ್ರೀಕೃಷ್ಣ ಇವ ಭಕ್ತರಕ್ಷಕಃ, ಸುಪ್ರಸನ್ನಾಸ್ಯ ಇವ
ಸದಾನ್ನದಾತಾ, ಸೂರ್ಯ ಇವ ತೇಜಸ್ವೀ, ಚಂದ್ರ ಇವ ಆಹ್ಲಾದಕರಃ,
ಇಂದ್ರ ಇವ ಐಶ್ವರ್ಯಭೋಗಸಂಪನ್ನಃ, ಹಿಮಾಚಲ ಇವ ಧೈರ್ಯವಾ,
ವೀರಭದ್ರ ಇವ ಶತ್ರುವಿಧ್ವಂಸೀ, ಕಾಲಾಗ್ನಿರುದ್ರ ಇವ ಪ್ರಚಂಡಕೋಪಃ,
ಸಮುದ್ರ ಇವ ಗಾಂಭೀರ್ಯವಾ, ಬಲೀಂದ್ರ ಇವ ದಾತಾರ್ಯವಾ,
ಭೂಮಿರಿವ ಕ್ಷಮಾನ್ವಿತಃ, ಪರಿಭದ್ರ ಇವ ಸತ್ಯಪ್ರತಿಜ್ಞಃ, ಭೀಮ
ಇವ ಪ್ರತಿಜ್ಞಾತಾರ್ಥಸಾಧಕಃ, ಅರ್ಜುನ ಇವ ಧನುರ್ವಿದ್ಯಾವಿಶಾರದಃ,
ಸಹದೇವ ಇವ ಭಾವಿಕಾರ್ಯಪರಿಜ್ಞಾತಾ, ಚಿಂತಾಮಣಿರಿವ ಚಿಂತಿತಾರ್ಥ
ಪ್ರದಾಯಕಃ, ಕಲ್ಪವೃಕ್ಷ ಇವ ಸರ್ವಾಭೀಷ್ಟದಾಯಕಃ, ಚಕ್ರಾಯ ಇವ
ನಿರ್ಲಿಪ್ತಃ, ಜನಕ ಇವ ಮಹಾಯೋಗೀ, ಧ್ರುವ ಇವ ಬಾಲ್ಯಪ್ರಾಪ್ತ

ಮಹಾರಾಜಾವಧಿ, ಮೋಕ್ಷಮಂಡಲೇಯ ಇನ ದೀಕ್ಷಾರ್ಥಯುಷ್ಮಾಕ್ಕ, ಶ್ರೀ ಚಾಮುಂತಾಪದಾಂಭೋಜ ಭ್ರಮವಾಯಿತಮಾನಸಕ್ಕ, ಶ್ರೀಕಂಠೇಶ್ವರ ಪ್ರಸಾದಲಬ್ಧ ಸರ್ವಸಾಮ್ರಾಜ್ಯಶಾಲೀ, ಶಿವಪೂಜಾಬದ್ಧ ದೀಕ್ಷಾಧುರೀಣಃ, ಆತ್ರೇಯಸಗೋತ್ರಾಬ್ಜಲಾಯನ ಸೂತ್ರಮುಕ್ತಾಖಾನುವರ್ತೀ ನಂಜರಾಜ ವಹರ್ಧಿಧ ಮಾಮ್ಮಣಿ ಶ್ರೀಕೃಷ್ಣರಾಜೇಂದ್ರ ಸಾರ್ವಭೌಮಸ್ಸರ್ವೋ ತ್ಕೃಷ್ಟಿ ಜಗದ್ವಿಖ್ಯಾತೋ ವಿರಾಜತೇ.

ಸ ಚಾ - ಖಿಜನಸಿಧ್ಯರ್ಥ ಸಿಂಹಾಸನಸಮಾಶ್ರಿತಃ ।
ಯ ದಂಬಾಯಾಂ ಸಂಯುಕ್ತೋ ರಾಜತೇ ಕೃಷ್ಣ ಭೂಮಣಿಃ (ಪತಿಃ) ॥

ಸಿತಲಸಿತಫಲಂ ರಮ್ಯಾರುದಾಕ್ಷಸಮೂಲಂ ।
ಕುಸುಕಮಯಸುಡೋಲಂ ಕಾವುಸೀಯಸ್ಥಲೀಲಂ ॥
ಸದಸನಪರಿಪಾಲಂ ಚಾರುಜಾವೀಂದ್ರಬಾಲಂ ।
ಹೃದಯಮತಸುಲಭ್ಯಂ ಸೌತಪಂ ಭೂರುಹಾಮಿ ॥

ಮುಮ್ಮಡಿಯ ಮಹಾಸಂಸ್ಥಾನದ ಈ ಸಂತಾನವೃಕ್ಷವು ಗದ್ಯಸಹ ಶಾಲೀವಾಹನಕ ೧೭೯೯ನೇ ಸಂವತ್ಸರದ ಆಷಾಢ ಬ ೦ ಗುರುವಾರದಲ್ಲಿ ಸರಿಗೆ ಚಿಕ್ಕಯ್ಯನ ಸೂಮ್ಮಗನಾದ ಚಿತ್ರಗಾರ ರಾಮಪ್ಪನಮಗನಾದ ಚಿತ್ರಗಾರರಿಗೆ ಗೊತ್ತುಗಾರ ಮಹಾಸನ್ನಿಧಾನದ ಚಾಕರನಾದ ತಿಪ್ಪಣ್ಣ ಬರೆದು ಬಿಸಿದ್ದು.

ದಟ್ಟಿಭಿಷ್ಟೀಕರ, ಲರ ಬಾಳ್ಳಿದಯಸ್ಸಿನ ಶ್ರೀಮ ಸ್ಥಾನಾರಾಜ
ಸಮಸ್ಥಾನ ಶ್ರೀ ಕೃಷ್ಣರ ಪಟ್ಟಿಯರಾದರು

ಶ್ರೀರಸ್ತು

ಶ್ರೀಮನ್ಮಹಾರಾಜರವರ ವಂಶಾವಳಿ

ದ್ವಿತೀಯ ಸಂಪುಟ

ಇಪ್ಪತ್ತೈರಚನೆಯ ಆಳಿಕೆ—ಶ್ರೀಮುಮ್ಮಡಿ ಕೃಷ್ಣ ರಾಜಒಡೆಯರವರು.

ಕ್ರಿ. ಶಕ 1799—1868

ಒಂದನೆಯ ಅಧ್ಯಾಯ

1. ಪೂರ್ವವೃತ್ತಾಂತ ಸಂಗ್ರಹ.—ಶ್ರೀಮದ್ದ್ವಾರಕಾನಗರೀ ಪ್ರಾಂತದಿಂದ ಯದುರಾಯರು ದಕ್ಷಿಣ ದೇಶಕ್ಕೆ ಬಂದು ಶ್ರೀಚಾಮುಂಡೇಶ್ವರೀ ದೇವತೆಯ ಕರುಣಾಕಟಾಕ್ಷಕ್ಕೆ ಪಾತ್ರರಾಗಿ ಮೈಸೂರು ರಾಜ್ಯವನ್ನು ಸ್ಥಾಪಿಸಿ ಕ್ರಿಸ್ತಶಕ 1799ನೆ ಯಿಸವಿಯವರೆಗೆ 400 ವರ್ಷಗಳಾದವು. ಈ ನಾಲ್ಕು ಶತಮಾನಗಳ ಕಾಲದಲ್ಲಿ 21 ಆಳಿಕೆಗಳು ಸಂದುವು. ಮೊದಲಿನ 8 ಆಳಿಕೆಗಳಲ್ಲಿ 179 ವರ್ಷಗಳು ಕಳದುವು. ಆ ಕಾಲದಲ್ಲಿ ಈ ಯಾದವ ಭೂಪತಿಗಳಿಗೆ ಈ ನೆಲವು ನೆಲೆಯಾಯಿತು. ಅನಂತರ 39 ಸಂವತ್ಸರ ರಾಜ್ಯಭಾರಮಾಡಿದ ಒಂಬತ್ತನೆಯ ಪಟ್ಟದ ರಾಜ ಒಡೆಯರವರು ವಿಶೇಷ ವಿಖ್ಯಾತರೆನಿಸಿ ಕ್ರಿಸ್ತಶಕ 1610ರಲ್ಲಿ ವಿಜಯನಗರದ ಚಕ್ರಾಧಿಪತ್ಯಕ್ಕೆ ಸೇರಿದ್ದ ಶ್ರೀರಂಗಪಟ್ಟಣದ ರಾಜ್ಯವನ್ನು ಸ್ವಾಧೀನ ಪಡಿಸಿಕೊಂಡು ಆ ನಗರದಲ್ಲಿ ಆಳಲಾರಂಭಿಸಿ ದೇಶಕೋಶಗಳನ್ನು ವಿಸ್ತರಿಸಿದರು. ತದುವಾಯ ಇವರ ಪರಂಪರೆಯಲ್ಲಿ ಅದೇ ಕ್ರಿಸ್ತಶಕ 17ನೆಯ ಶತಾಬ್ದದಲ್ಲಿ ಆಳಿದ 12ನೆಯ ಪಟ್ಟದ ಕಂಠೀರವ ನರಸರಾಜ ಒಡೆಯರವರೂ, 14ನೆಯ ಪಟ್ಟದ ಚಿಕ್ಕ ದೇವರಾಜ ಒಡೆಯರವರೂ, ತಮ್ಮ ಸಾಮರ್ಥ್ಯದಿಂದ ನಾಲ್ಕು ಗಡಿಗಳಲ್ಲಿಯೂ ಅನೇಕ ದುರ್ಗಗಳನ್ನು

ಕೈವಶ ಮಾಡಿಕೊಂಡು ಈ ರಾಷ್ಟ್ರವನ್ನು ಉನ್ನತಸ್ಥಿತಿಗೆ ತಂದರ
ತದನಂತರ ಕ್ರಿಸ್ತಶಕ 18ನೆಯ ಶತಮಾನದಲ್ಲಿ 18ನೆಯ ಪಟ್ಟ
ಇಮ್ಮಡಿ ಕೃಷ್ಣರಾಜಒಡೆಯರವರ ಅನುಗ್ರಹದಿಂದ ಹೆಸರುವಾಸಿ ಪಡೆ
ಸರ್ವಾಧಿಕಾರಿ ನವಾಬ ಹೈದರಲ್ಲೀಖಾನ್ ಬಹದ್ದರವರ ಸಾಹಸದಿಂ
ಕನಡಾ ಜಿಲ್ಲೆ, ನಗರಪಸೀಮೆ, ಚಿತ್ರದುರ್ಗ ಮೊಂತಾದ ಸಂಸ್ಥಾನಗಳ
ಮೈಸೂರು ದೇಶಕ್ಕೆ ಪಶ್ಚಿಮಾಗಿ ಉತ್ತರದಿಕ್ಕಿನ ಮೇರೆಯು ಸುಮಾರ
ಕೃಷ್ಣಾನದಿಯು ದಕ್ಷಿಣ ತೀರದವರೆಗೂ ವೃದ್ಧಿಗೊಂಡಿತು. ಮೈಸೂರ
ನೈಪುಣ್ಯಮೆಳಿಗಳ ಸಹಾಯವು ಹೈದರಾಬಾದ್ ನಿಜಾಮರಿಗೆ ಅವರ ಜೈತ್ರ
ಯಾತ್ರೆಗಳಲ್ಲಿ ತುಂಬಾ ಒತ್ತಾಸೆಯನ್ನುಂಟುಮಾಡಿತು. ಆರ್ಕಾಡ
ನವಾಬರ ಸೀಮೆಯಲ್ಲಿ ಕಲಹವುಂಟಾಗಿ ತಿರುಚನಾಪಲ್ಲಿ ಮುತ್ತಿ
ಯಾವಾಗ ಮೈಸೂರು ಮಹಾರಾಜರವರು ನವಾಬ ಮಹಮ್ಮದಲ್ಲಿಯವ
ಪ್ರಾರ್ಥನೆಯನ್ನಂಗೀಕರಿಸಿ ಆತನಿಗೆ ಮಾಡಿದ ಮಹೋಪಕಾರವು ಈ
ಮಹೀಪಾಲರ ಕೀರ್ತಿಯನ್ನು ವಿಶೇಷವಾಗಿ ಸ್ಫೂರ್ತಿಗೊಳಿಸಿತು. ಈ
ರೀತಿಯಲ್ಲಿ ಮೈಸೂರು ರಾಜ್ಯವು ವಿಖ್ಯಾತವಾಗುತ ಬಂದಿತು. ಅದೆ
ಶತಾಬ್ದದ ಅಂತ್ಯಭಾಗದಲ್ಲಿ ಸಂಭವಿಸಿದ ರಾಜಕೀಯ ಸಂದರ್ಭಗಳ
ಹೈದರಲ್ಲಿಯವರ ಕಾಲಾನಂತರ ಅವರನ್ನು ಹಿಂಬಾಲಿಸಿದ ಅವರ ಮಕ
ಳಾದ ಟಿಪ್ಪೂಸುಲ್ತಾನರು ಕ್ರಿಸ್ತಶಕ 1799ರಲ್ಲಿ ಇಂಗ್ಲಿಷ್ ಪ್ರಭ
ಗಳಿಂದ ಪರಾಜಯವನ್ನು ಹೊಂದಿ ಕಾಲಾಧೀನರಾದರು. ಆಗ ಅವ
ಮಕ್ಕಳನ್ನು ಜನಾನಾ ಸಮೇತ ಇಂಗ್ಲಿಷ್ ಸರ್ಕಾರದವರು ರಾಯ
ವೇಲೂರು ಕೋಟೆಗೆ ಕಳುಹಿಸಿಕೊಟ್ಟರು.

2. ದೊರೆಗಳವರ ಪಟ್ಟಾಭಿಷೇಕ.—ಆ ತರುವಾಯ ಸತ್ಪ್ರವೃತ್ತ
ರಾದ ಇಂಗ್ಲಿಷ್ ಸರ್ಕಾರದವರಿಂದ ಶ್ರೀಮನ್ಮಹಾರಾಜರು ಮುಮ್ಮಡಿ
ಕೃಷ್ಣ ರಾಜ ಒಡೆಯರವರು ತಮ್ಮ ಕುಲಕ್ರಮಾಗತನಾದ ಈ
ಮೈಸೂರು ರಾಜ್ಯದಲ್ಲಿ ಪಟ್ಟಾಭಿಷಿಕ್ತರಾದರು. ಮೈಸೂರು ಮತ್ತೆ
ರಾಜಧಾನಿಯಾಯಿತು. ಆಗ ಈ ರಾಜವರೇಣ್ಯರು ಬಾಲ್ಯದಶೆಯಲ್ಲಿದ್ದು
ದರಿಂದ ರಾಜ್ಯದ ಆಡಳಿತವನ್ನು ನಡೆಸಲು ಘನತೆ ಹೊಂದಿದ ಗವರ್ನರ್
ಜನರಲ್ ಲಾರ್ಡ್ ವೆಲ್ಲಿಸ್ಲಿಯವರು ಈ ವಂಶಾವಳಿಯ ಪ್ರಥಮ ಸಂಪುಟವ

గుహనారి జనపదే లాడ్జి వేచ్ఛ

ಕವರ್ ಆಫ್ ಕಾರ್ಡ್ ಪೆಟ್ಟಿಗೆ

೧೦ನೆಯ ಅಧ್ಯಾಯದಲ್ಲಿ ವಿವರಿಸಿರುವಂತೆ ಟಿಪ್ಪೂಸುಲ್ತಾನನ ಕಾಲದಲ್ಲಿ ತೋಷೀಖಾನೆಯ ಅಧಿಕಾರದಲ್ಲಿದ್ದ ಪೂರ್ಣಯ್ಯನವರನ್ನು ದಿವಾನ ಪದವಿಗೆ ನಿಯಮಿಸಿದರು.

3. ಮೈಸೂರು ರಾಷ್ಟ್ರದ ಮೇರೆಗಳು.—ಆ ಕಾಲದಲ್ಲಿ ಇಂಗ್ಲಿಷ್ ಸರ್ಕಾರದವರಿಗೂ ಮೈಸೂರು ಮಹಾರಾಜರವರಕಡೆ ಮಹಾಮೊತ್ತಶ್ರೀ ಲಕ್ಷ್ಮಮ್ಮಣ್ಣಿಯವರಿಗೂ ನಡೆದ ತಹನಾಮೆಯ ಪ್ರಕಾರ ಉತ್ತರಕ್ಕೆ ದಕ್ಷಿಣಮಹಾರಾಷ್ಟ್ರ ಸೀಮೆ ಮತ್ತು ಬಳ್ಳಾರಿ ಜಿಲ್ಲೆ; ಪೂರ್ವಕ್ಕೆ ಕರ್ನೂಲ್, ಕಡಪ, ಚಿತ್ತೂರು ಜಿಲ್ಲೆಗಳು; ದಕ್ಷಿಣಕ್ಕೆ ಶಾಲ್ಯ, ಕೊಯಮುತ್ತೂರು ಜಿಲ್ಲೆಗಳು; ಪಶ್ಚಿಮಕ್ಕೆ ಕೊಡಗು, ಕನರಾಜಿಲ್ಲೆ ಇವುಗಳ ನಡುವೆ ಉತ್ತರದಕ್ಷಿಣ ಸುಮಾರು 230 ಮೈಲಿ ಪೂರ್ವಪಶ್ಚಿಮ 190 ಮೈಲಿ ಈ ಪ್ರಾಂತವನ್ನೊಳಗೊಂಡ ಸೀಮೆಯು ಮೈಸೂರು ದೊರೆಗಳ ರಾಷ್ಟ್ರವೆಂದು ನಿಸ್ಕರ್ಷೆಯಾಯಿತು. ಇದಕ್ಕೆ ಆಕಾಲದಲ್ಲಿ ತಕ್ಕಾವಾದ ಕುಟ್ಟುವಳಿಯು ಅಂದಾಜು ಕಂಠೀರಾಯಿ ವರಹ 13,74,076. ಈ ದೇಶದ ರಕ್ಷಣಾರ್ಥವಾಗಿ ಇಂಗ್ಲಿಷ್ ಸರ್ಕಾರದವರು ತಮ್ಮ ಫೌಜನ್ನು ಸಹ ಸ್ವಲ್ಪಮಟ್ಟಿಗೆ ಇಲ್ಲಿರಿಸಿ ಅದಕ್ಕೆ ಅಧ್ಯಕ್ಷರಾಗಿ ಆಗಿನ ಗವರ್ನರ್ ಜನರಲ್‌ರವರ ತಮ್ಮಂದಿರಾದ ಕರ್ನಲ್ ವೆಲ್ಲಿಸ್ಲಿಯವರನ್ನು ನೇಮಿಸಿ ಮಹಾರಾಜರವರ ದರ್ಬಾರಿನಲ್ಲಿ ತಮ್ಮಕಡೆ ರೆಸಿಡೆಂಟ್ ಎಂಬ ಒಂದು ಹುದ್ದೆಯನ್ನು ಕಲ್ಪಿಸಿ ಇದಕ್ಕೆ ತಮಗೆ ಆಪ್ತರಾದ ಕರ್ನಲ್ ಬ್ಯಾರಿ ಕ್ಲೋಸ್ (Col. Barry Close) ಎಂಬ ಸರದಾರರನ್ನು ಮೊಕರರ್ರಾಡಿದರು. ಈ ಸರದಾರರಿಬ್ಬರೂ ಈ ಸೀಮೆಯನ್ನು ತಹಬಂದಿಗೆ ತರುವ್ರದಕ್ಕೆ ಪೂರ್ಣಯ್ಯನವರಿಗೆ ತುಂಬಾ ಸಹಾಯವೊಡಿದರು. ಕ್ಲೋಸ್ ಸಾಹೇಬರು ಸನ 1804ನೆ ಯಿಸವಿಯವರೆಗೆ ಸುಮಾರು 4½ ವರ್ಷ ಈ ದೇಶದಲ್ಲಿ ರೆಸಿಡೆಂಟರಾಗಿದ್ದರು. ಇವರಜ್ಞಾಪಕವಾಗಿ ಬೆಂಗಳೂರಿನಿಂದ ಮೈಸೂರಿಗೆ ಬರುವದಾರಿಯಲ್ಲಿ 27 ಮೈಲಿ ಫಾಸಲೆಯಲ್ಲಿರುವ ರಾಮಗಿರಿ ಎಂಬ ಊರಿಗೆ ಕ್ಲೋಸ್‌ಪೇಟೆ ಎಂಬ ಹೆಸರು ಉಂಟಾಯಿತು.

4. ಮಹಾಮಾತೃಶ್ರೀ ಲಕ್ಷ್ಮಮ್ಮಣ್ಣಿಯವರು.—ಮಹಾಮಾತೃಶ್ರೀ ಲಕ್ಷ್ಮಮ್ಮಣ್ಣಿಯವರು ಶ್ರೀಮುಮ್ಮಡಿ ಕೃಷ್ಣರಾಜಒಡೆಯರವರ ಪಿತಾ

ನುಹಿಯುನೆರು. ಈ ಮೆಹಾರಾಣಿಯವರು ಮೈಸೂರು ರಾಜವಂಶಕ್ಕೆ ಕ್ರಿ. ಶ. 18ನೆಯ ಶತಾಬ್ದದಲ್ಲಿ ಸಂಭವಿಸಿದ ವಿಷಮಕಾಲದಲ್ಲಿ ಭಾಗ್ಯದೇವತೆಯೆನಿಸಿದವರು. ಇವರು ಶೂರರಾದ ಬೆಟ್ಟದಕೋಟೆಮನೆತನದ ಕತ್ತಿಗೋಪಾರಾಜೇ ಅರಸಿನವರ ಪುತ್ರಿ; ಸ್ರ 1742ನೆಯ ಇಸವಿಯಲ್ಲಿ ಜನಿಸಿದರು. ಇವರನ್ನು 1759ನೆಯ ಇಸವಿಯಲ್ಲಿ ಮೈಸೂರು ದೊರೆಗಳು ಇಮ್ಮಡಿ ಕೃಷ್ಣರಾಜಒಡೆಯರವರಿಗೆ ಕೊಟ್ಟು ಸಂಭ್ರಮವಾಗಿ ವಿವಾಹಮಹೋತ್ಸವವು ಜರಿಗಿತು. ಆ ಕಲ್ಯಾಣಸಮಯದಲ್ಲಿ ವಿಚಿತ್ರತರವಾದ ಬಂಗು ಹಸೆಯು ಜಗಲಿಯನ್ನು ನಿರ್ಮಾಣಮಾಡಿ ತಂದೆಯಪ್ಪಿಸಿದ ಚನ್ನನಂಬಯನಿಗೆ 60 ವರಹಗಳ ವಂಶೋನವಿರುವ ಜಮೀನನ್ನು ಉಂಬಳಿಯಾಗಿ ಕೊಡುವಂತೆ ಖಾನೆಂದರವರು ಆಗ ಮೈಸೂರು ನಗರದ ಪೋಲೀಸು ಸೀಮೆಯ ವಿಚಾರಣಕರ್ತನಾಗಿದ್ದ ಚಿಕ್ಕಯ್ಯನಿಗೆ ನಿರೂಪವನ್ನು ಅಪ್ಪಣೆ ಕೊಡಿಸಿದರು.

5. ಈ ಮೆಹಾರಾಣಿಯವರು ಸತ್ಯಾಜಾಬದ್ಧರಾಗಿ ನಡೆಯುತ್ತ, ಪತಿಯ ಬಾಲ್ಯವಲ್ಲಿ ರಾಜ್ಯಾನುಭವವೆನ್ನು ಪಡೆದಿದ್ದ ತಮ್ಮ ಅತ್ತೆಯವೆನಿಸಿದ ದೇವಾಜಮ್ಮಣ್ಣಿಯವರ ವಿಶ್ವಾಸಕ್ಕೆ ಪಾತ್ರರೆನಿಸಿದರು. ಇವರಿಗೆ ಪುತ್ರಸಂತಾನವಿಲ್ಲ. ಇವರ ಪತಿಯು ಕಾಲಾನಂತರ ಇವರ ಸವತ್ತಿಯವರ ಪುತ್ರರಿಬ್ಬರಲ್ಲಿ ನಂಜರಾಜಒಡೆಯರವರು 4 ವರ್ಷವೂ ತರುವಾಯ ಅವರ ಸಹೋದರರು ಚಾಮರಾಜಒಡೆಯರವರು 6 ವರ್ಷವೂ ರಾಜ್ಯವಾಳಿದರು. ಆಮೇಲೆ ಈ ಮೆಹಾರಾಣಿಯವರ ಸ್ವೀಕೃತ ಪುತ್ರರು ಮೂರು ವರ್ಷದ ನಂತರ ಖಾಸ ಚಾಮರಾಜ ಒಡೆಯರವರಿಗೆ ಪಟ್ಟಾಭಿಷೇಕವಾಯಿತು. ಆಗತಮ್ಮ ಪತಿಯವರ ಪ್ರೀತಿಗೆ ಪಾತ್ರರೆನಿಸಿ ಸನ್ಮಾನಿತರಾಗಿ ಅಧಿಕಾರದಲ್ಲಿ ದಿನೇದಿನೇ ಪ್ರವರ್ಧಮಾನರಾದ ಸರ್ವಾಧಿಕಾರಿ ನವಾಬ ಹೈದರಲ್ಲಿಖಾನ್ ಬಹದ್ದರವರ ಮೂಲಕ ರಾಜ್ಯತಂತ್ರವನ್ನು ನಡೆಯುತ್ತಿತ್ತು.

6. ಆ ಕಾಲದಲ್ಲಿ ಮೆಹಾರಾಷ್ಟ್ರರಿಗೂ ಹೈದರಾಬಾದು ನಿಜಾಮರಿಗೂ ಕಡಪೆ, ಕರ್ನೂಲ್ ಮತ್ತು ಪೂರ್ವದಿಕ್ಕಿನಲ್ಲಿ ಕರ್ಣಾಟಕ [illegible]

ರಾಜರುಗಳಿಗೂ ಪರಸ್ಪರ ಕಲಹಗಳು ನಡೆಯುತಲಿದ್ದುವು. ಇವೆರು ಗಳಲ್ಲಿಯೂರೋಪ್ ಖಂಡದಿಂದ ಬಂದು ಪೂರ್ವಸಮುದ್ರತೀರದ ಮದ್ರಾಸ್ ನಗರದಲ್ಲಿ ನೆಲಸಿದ ಇಂಗ್ಲಿಷ್ ಈಸ್ಟ್‌ಇಂಡಿಯಾ ಕಂಪನಿಯವರೂ (English East India Company), ಮದರಾಸಿಗೆ ದಕ್ಷಿಣದಲ್ಲಿರುವ ಪುದುಚೇರಿ ಪಟ್ಟಣವಲ್ಲಿ ನಿಂತ ಫ್ರೆಂಚುದೇಶಸ್ಥರೂ, ಪರಸ್ಪರ ಪ್ರತಿ ಪಕ್ಷರಾಗಿ ಯುದ್ಧಗಳನ್ನು ನಡೆಸುತಲಿದ್ದರು. ಆಗ್ಗೆ ವಿಖ್ಯಾತಿಗೊಂಡಿದ್ದ ಮೈಸೂರು ರಾಜ್ಯದ ಸಾಹಾಯ್ಯವನ್ನು ಬಂದುಕಡೆ ಇಂಗ್ಲಿಷ್ ಸರ್ಕಾರದವರೂ ಮತ್ತೊಂದುಕಡೆ ಫ್ರೆಂಚ್ ಜನರೂ ಅಪೇಕ್ಷಿಸುತ್ತಲಿದ್ದರು. ನವಾಬ ಹೈದರಲ್ಲಿಯವರ ಪ್ರಾಬಲ್ಯವೆಷ್ಟಿದ್ದರೂ ಮಹಾರಾಣಿಲಕ್ಷ್ಮಣ್ಣಿಯವರ ಬುದ್ಧಿಕುಶಲತೆಯೂ, ಆಲೋಚನಶಕ್ತಿಯೂ ಈ ದೇಶವನ್ನು ಕಾಪಾಡಿದುವು. ಇವೆರು ಇಂಗ್ಲಿಷ್ ಸರ್ಕಾರದವರ ಪಕ್ಷವನ್ನು ವಹಿಸುವುದೇ ಯುಕ್ತವೆಂದು ಭಾವಿಸಿ ಆರೀತಿ ನಡೆದುದು ಈ ರಾಷ್ಟ್ರಕ್ಕೆ ಕಾಲಕ್ರಮದಲ್ಲಿ ಸಂಭವಿಸಿದ ವಿಪತ್ತಿನ ಪರಿಹಾರ ಕಾರಣವೆನಿಸಿ ಸಂಪತ್ಪ್ರದವಾಯಿತು. ತರುವಾಯ ದಿನದಿನಕ್ಕೆ ತಮಗೆ ಕಿರುಕುಳವು ಹೆಚ್ಚು ತಬರಲು ರಾಜ್ಯತಂತ್ರವಿಶಾರದೆಯರಾದ ಈ ಮಹಾರಾಣಿಯವರು ಆಗತಮ್ಮ ವೆಕೀಲರಾದ ತಿರುಮಲರಾಯರು, ನಾರಾಯಣರಾಯರು, ಇವರುಗಳ ಮೂಲಕ ಮದ್ರಾಸ್ ರಾಜ್ಯದ ಇಂಗ್ಲಿಷ್ ಗವರ್ನರವರೊಂದಿಗೆ ಅಂತರಂಗವಾಗಿ ಸಂಧಿ ನಡೆಸಿ 1782ನೆಯ ಇಸವಿಯಲ್ಲಿ ತಹನಾಮೆ ಮಾಡಿಕೊಂಡು ಆ ಗವರ್ನರವರ ಸಹಾಯದಿಂದ ಮತ್ತೆ ಸ್ವಕೀಯರಾಜ್ಯತಂತ್ರಸ್ವಾತಂತ್ರ್ಯವನ್ನು ಪಡೆಯುವದಕ್ಕೆ ಮಾಡಿದ ಸನ್ನಾಹಬಲದಿಂದ ಕರೂರು ಸ್ವಾಧೀನವಾಗಿ ಅಲ್ಲಿ ತತ್ಕಾಲಕ್ಕೆ ಮೈಸೂರು ಧ್ವಜವು ಸ್ಥಾಪಿತವಾಯಿತು. ಹೀಗೆ ಕಾಲದೇಶವರ್ತಮಾನವರಿತು ಈ ಮಹಾರಾಣಿಯವರು ನಡಿಸಿವ ಪ್ರಯತ್ನಗಳಿಂದ ಕಡೆಗೆ ದೈವಾನುಗ್ರಹವುಂಟಾಗಿ ಈ ಗ್ರಂಥದ ಪ್ರಥಮ ಸಂಪುಟದಲ್ಲಿ ವಿವರಿಸಿರುವಂತೆ ಇಂಗ್ಲಿಷ್ ಸರ್ಕಾರದವರು ಮಹಾರಾಷ್ಟ್ರರೊಡನೆಯೂ, ಹೈದರಾಬಾದಿನ ನಿಜಾಮರೊಡನೆಯೂ ಕಲೆತು ಇಂಗ್ಲಿಷ್ ಜನರ ಸೈನ್ಯವೂ ನಿಜಾಮನ ಸೈನ್ಯವೂ ಬಂದು ಶ್ರೀರಂಗಪಟ್ಟಣವನ್ನು ಮುತ್ತಿ ಹಲ್ಲುಮಾಡಿ ನವಾಧಿನ ಸಂವತ್ಸರ

ಚೈತ್ರಬಹುಳ ಅಮಾವಾಸ್ಯೆಯದಿನ (1799ನೆಯಿಸವಿ ಮೇ ತಾರೀಕು 4ನಲ್ಲಿ) ಟಿಪ್ಪುಸುಲ್ತಾನನನ್ನು ಸಂಹರಿಸಿ ಅವರಿಗೆ ಸೇರಿದ್ದ ಸೀಮೆಯನ್ನು ವಿಭಾಗಮಾಡುವ ಸಂದರ್ಭದಲ್ಲಿ ಮೈಸೂರು ರಾಜ್ಯಕ್ಕೆ ಮೇಲೆ ತಿಳಿಸಿರುವಂತೆ ಎಲ್ಲೆಕಟ್ಟನ್ನು ಗೊತ್ತುಮಾಡಿ ಅದನ್ನು ಆಗ ಐದುವರ್ಷಗಳ ವಯಸ್ಸಿನವರಾಗಿದ್ದ ಅಳ್ಳಮಹಾಸ್ವಾಮಿ ಖಾಸ್ ಚಾಮರಾಜ ಒಡೆಯರವರ ಪುತ್ರರು ಮುಮ್ಮಡಿ ಕೃಷ್ಣರಾಜ ಒಡೆಯರವರಿಗೆ ಉಳಿಸಿಕೊಟ್ಟು ಅವರಿಗೆ ಮೈಸೂರು ರಾಜಧಾನಿಯಲ್ಲಿ ರಾಜ್ಯಪಟ್ಟಾಭಿಷೇಕಮಾಡಿಸಿದರು. ಆಗ ಈ ಮಹಾಮಾತ್ಯಶ್ರೀಯವರು ಪೂರ್ವಮರ್ಯಾದೆಗಳನ್ನನುಸರಿಸಿ ಅರಮನೆಯಲ್ಲಿ ಪರಂಪರೆಯಾಗಿ ನಡೆದುಬಂದ ಪದ್ಧತಿಗಳನ್ನೂ, ದೇವತಾಸೇವಾದಿ ಕಾರ್ಯಗಳನ್ನೂ, ಸಂಪ್ರದಾಯಾನುಸಾರವಾಗಿ ಮತ್ತೆ ಸ್ಥಾಪಿಸಿದರು.

7. ಈ ಮಹಾತ್ಮಾಶಯವರು ತಮ್ಮ ಪೌತ್ರರಾದ ಅಳ್ಳಮಹಾಸ್ವಾಮಿಗಳು ಶ್ರೀಮುಮ್ಮಡಿ ಕೃಷ್ಣರಾಜ ಒಡೆಯರವರಿಗೆ ಪ್ರಥಮತಃ ಹುಟ್ಟಿದ ಕೋಟೆ ಗೋಪಾಲರಾಜೇ ಅರಸಿನವರ ಜ್ಯೇಷ್ಠ ಪುತ್ರಿಯರಾದ ದೇವಾಜಮ್ಮಣ್ಣಿಯವರನ್ನೂ, ತರುವಾಯ ಬಾಗಳಿ ದೇಶೀ ಅರಸಿನವರ ಪುತ್ರಿಯರು ಲಕ್ಷ್ಮೀವಿಲಾಸ ಸನ್ನಿಧಾನದ ದೇವಾಜಮ್ಮಣ್ಣಿಯವರನ್ನೂ, ಮಹಾಸಂಭ್ರಮದಿಂದ ವಿವಾಹಮಾಡಿಸಿದರು. ಹಿಂದೆ 1796ನೆಯ ಇಸವಿಯಲ್ಲಿ ದಕ್ಷಿಣ ರಾಷ್ಟ್ರದಲ್ಲಿ ಸಂಪ್ರಾಪ್ತವಾಗಿದ್ದ ಸಿಡುಬಿನ ಮೂಲಕ ಮಹಾರಾಜರು ಖಾಸ್ ಚಾಮರಾಜ ಒಡೆಯರವರಿಗೆ ಶ್ರೀರಂಗಪಟ್ಟಣದಲ್ಲಿ ಮರಣವು ಸಂಭವಿಸಿತು. ಆ ಜಾಡ್ಯವು ಆ ಕಾಲದಲ್ಲಿ ಜನರಿಗೆ ತುಂಬಾ ಭೀತಿಯನ್ನುಂಟುಮಾಡಿತು. ಅರಮನೆಯಲ್ಲಿ ಲಕ್ಷ್ಮೀವಿಲಾಸ ಸನ್ನಿಧಾನದವರಿಗೆ ಸಿಡುಬು ವಿಳದೆಯಿದ್ದ ಕಾರಣ ಮಹಾಮಾತ್ಯಶ್ರೀಯವರು ಚಿಂತಾಕ್ರಾಂತರಾಗಿದ್ದರು. ಈ ವರ್ತಮಾನವನ್ನು ಕೇಳಿ ಆಗ ರೆಸಿಡೆಂಟರಾಗಿದ್ದ ಮೇಜರ್ ವಿಲ್ಕ್ಸ್ (Major Wilks) ಸಾಹೇಬರು ಆಕಾಲದಲ್ಲಿ ನೂತನವಾಗಿ ಒಬ್ಬ ಇಂಗ್ಲಾಂಡು ದೇಶದ ವೈದ್ಯನು ಸಿಡುಬನ್ನು ಎಬ್ಬಿಸಿ ಆ ರೋಗದ ಬಾಧೆಯನ್ನು ತಗ್ಗಿಸಿ ಸುಲಭವಾಗಿ ಜನರಿಗೆ ಆರೋಗ್ಯವನ್ನುಂಟುಮಾಡುವ ವಿಧಾನವನ್ನು ಕಂಡುಹಿಡಿ

ದಿದ್ದುದನ್ನು ತಿಳಿಸಿದರು. ಆಗ ಇದನ್ನು ಮದ್ರಾಸು ಸರ್ಕಾರದವರು ತಮ್ಮ ಪ್ರಜೆಗಳಿಗೆ ಎಷ್ಟೆಷ್ಟು ಬಗೆಯಾಗಿ ಬೋಧಿಸಿದರೂ ಇದಕ್ಕೆ ಅವ ಕಾಶಕೊಡಲು ಜನರು ಹಿಂಜರಿಯುತಲಿದ್ದರು. ಆದರೂ ಮೈಸೂರಿ ನಲ್ಲಿ ರೆಸಿಡೆಂಟರವರ ಮಾತನ್ನು ಕೇಳಿ ಧೈರ್ಯವಾಗಿ ಮಹಾರಾಣಿ ಲಕ್ಷ್ಮ ಮ್ಮಣ್ಣಿಯವರು ಅಂತಹ ಭಯಂಕರವಾದ ದುರ್ವ್ಯಾಧಿಗೆ ಅಷ್ಟು ಸುಲಭ ವಾದ ಚಿಕಿತ್ಸೆಯನ್ನು ನಿರ್ಮಾಣಮಾಡಿದುದು ಅಶ್ಚರ್ಯಕರವೆಂದು ಅದನ್ನು ಶ್ಲಾಘಿಸಿ ಲಕ್ಷ್ಮೀವಿಲಾಸ ಸನ್ನಿಧಾನದವರಿಗೆ ಆ ಚಿಕಿತ್ಸೆಯನ್ನು ಮಾಡಿಸಿ ದರು. ಅದು ಸಫಲವಾಯಿತು. ಈ ರೀತಿ ಪ್ರಜಾಕ್ಷೇಮಕ್ಕೆ ಸಾಧಕ ವಾದ ಅಂಶದಲ್ಲಿ ಮೊದಲು ತಾವೇ ಉದ್ಯೋಗಿಸಿ ತಮ್ಮ ಸೊಸೆಯವರ ವಿಷಯದಲ್ಲಿಯೇ ಆ ಚಿಕಿತ್ಸೆಯ ಫಲಪ್ರದರ್ಶನವನ್ನು ಮಾಡಿದ ಈ ಮಹಾರಾಣಿಯವರ ಧೈರ್ಯವನ್ನು ಕೇಳಿ ಕೊಂಡಾಡಿ ಮದ್ರಾಸ್ ಗವರ್ನರ್ ಸಾಹೇಬರವರು ಮೈಸೂರು ರೆಸಿಡೆಂಟರವರ ಮೂಲಕ ದಿವಾನ್‌ಪೂರ್ಣಯ್ಯ ನವರಿಂದ ಈ ವಿದ್ಯಮಾನದ ತಪ್ಪಿಲು ರಿಪೋರ್ಟನ್ನು ತರಿಸಿಕೊಂಡು ಅದನ್ನು ತಮ್ಮ ರಾಜ್ಯದಲ್ಲಿ 1806ನೆ ಯಿಸವಿ ಜೂನ್ ತಿಂಗಳು 19ರಲ್ಲಿ ಪ್ರಸಿದ್ಧಿ ಪಡಿಸಿದರು. ಅದರಿಂದ ಮದ್ರಾಸ್ ರಾಷ್ಟ್ರ ಪ್ರಜೆಗಳು ಕ್ರಮೇಣ ನಿರ್ಭಯವಾಗಿ ಸಿಡುಬೆಬ್ಬಿಸುವ ಚಿಕಿತ್ಸೆಯನ್ನು ಮಾಡಿಸಿ ಅದರ ಪ್ರಯೋಜನವನ್ನು ಪಡೆಯಲು ಸೌಲಭ್ಯವುಂಟಾಯಿತು. ಇದು ಈ ಮಹಾರಾಣಿಯವರ ಹೆಸರುವಾಸಿಗೆ ಕಾರಣವಾಯಿತು.

8. ಮೊರೆಗಳಾದ ಮುಮ್ಮಡಿ ಕೃಷ್ಣರಾಜ ಒಡೆಯರವರಿಗೆ ಪಟ್ಟವಾದ 6 ನೆಯ ವರ್ಷ ಶಾ. ಶ ೧೭೨೬ನೆಯ ರಕ್ತಾಕ್ಷಿ ಸಂವತ್ಸರದ (1804–5ನೆಯಇಸವಿ) ಫಾಲ್ಗುಣ ಶುದ್ಧ ೫ ಶುಕ್ರವಾರದಲ್ಲಿ ಮಹಾ ಮಾತೃಶ್ರೀಯವರು ದಿವಾನ್ ಪೂರ್ಣಯ್ಯನವರು ಮುಂತಾದ ಬಹಳ ಮಂದಿ ಅಧಿಕಾರಿಗಳೊಡನೆ ತಾವೆಂದರವರೆದನ್ನು ಕರೆದುಕೊಂಡು ಬೆಟ್ಟಕ್ಕೆ ಹತ್ತಿಸಿ ಅವರಿಗೆ ಅಲ್ಲಿ ಕುಲದೇವತೆಯಾದ ಶ್ರೀಚಾಮುಂಡೇಶ್ವರಿ ಅಮ್ಮ ನವರ ಸಂದರ್ಶನ ಮಾಡಿಸಿ ಕಪ್ಪಕಾಣಿಕೆಗಳನ್ನೊಪ್ಪಿಸಿ ಉತ್ತನಹಳ್ಳಿ ಯಲ್ಲಿಯೂ ದೇವತಾದರ್ಶನಮಾಡಿಸಿ ಮೈಸೂರಿಗೆ ವಂಯಮಾಡಿಸಿದರು.

9. ತರುವಾಯ ಮೂರನೆಯ ವರ್ಷ 1805–6ನೆ ಕ್ರೋಧನ

ಸಂವತ್ಸರದ ಫಾಲ್ಗುಣ ಶುದ್ಧ ೫ ಶುಕ್ರವಾರ ಮೆಹಾಮೊತ್ಯಶ್ರೀ ಲಕ್ಷ್ಮಮ್ಮಣ್ಣಿಯವರು ತಾವಂದರವರಿಗೆ ನಂಜನಗೂಡಿನಲ್ಲಿ ಶ್ರೀಶ್ರೀಕಂಠೇಶ್ವರಸ್ವಾಮಿಯವರ ಸಂದರ್ಶನಮಾಡಿಸುವ ಉದ್ದೇಶದಿಂದ ಅವರನ್ನು ಆನೆಯಮೇಲೆ ಅಂಬಾರಿಯಲ್ಲಿ ಮುಹೂರ್ತಮಾಡಿಸಿ ಜನಾನಾ ಸವಾರಿ ಮತ್ತು ದಿವಾ ಪೂರ್ಣಯ್ಯನವರು ಮೊದಲಾದ ಅಧಿಕಾರಿಗಳೂ ರೆಸಿಡೆಂಟರು ಮೇಜರಿ ಮಾಲ್ಕಂ (Major Malcolm) ಸಾಹೇಬರವರೂ ಇವರುಗಳ ಸಮೇತರಾಗಿ ತುಂಬಾ ವೈಭವದಿಂದ ಪ್ರಯಾಣ ಬೆಳಸಿದರು. ಆಗ ಸಹಿನ ವೈತ್ಯಾಂತನ ಅರಮನೆಯ ಪಾತರಲೆಯನ್ನು ಇದರಂತೆ ಕಾಣಿಸಿದ : —

"ಸವಾರಿ ನಂಜನಗೂಡಿಗೆ ಅಂಬಾರೀಮೇಲೆ ಚಿತ್ತೈಸಿ ನಂಜನ
"ಗೂಡು ಅರಮನೆ ಬಾಗಲಿಗ ಬಂದು ಇಳಿಯುವ ಸಮಯದಲ್ಲಿ ದೊರೆ
"ಗಳವರು ಏರಿ ಯಿರುವ ಆನೆಯು ಮೆದಹತ್ತಿದಂತೆ ಆವೇಶಬಂದು ಮೂವು
"ತನ ಸ್ವಾಧೀನಕ್ಕೆ ನಿಲ್ಲದೆ ನದೀಸಮೀಪಕ್ಕೆ ಓಡಿಹೋದುದನ್ನು ನೋಡಿದ
"ರೆಸಿಡೆಂಟು ಸಾಹೇಬರು ಪೂರ್ಣಯ್ಯ ಸಹ ಬಹುಗಾಬರಿಯಿಂದ
"ಇಧಾರಂಬ ವರ್ತಮಾನವ್ರ ಅಂತಃಪುರದಲ್ಲಿರುವ ಮೆಹಾಮೊತ್ಯ ಶ್ರೀ
"ಯುವರುಗಳು ಮುಂತಾದವರಿಗೆಲ್ಲಾ ತಿಳಿದು ಬಹಳಗಾಬರಿಯಾಗಿ
"ದೊರೆಗಳವರಿಗೆ ಪಟ್ಟವಾಗಿ ೭ ವರ್ಷವಾದಾಗ್ಯೂ ಸ್ವಾಮಿ ದರ್ಶನಕ್ಕೆ
"ನಾವು ಬಾರದೆ ಪೂರ್ವನಂತೆ ಕಾಣಿಕೆಕಪ್ಪಗಳಂ ಒಪ್ಪಿಸದೆ ಇದ್ದದ್ದು
"ನಮ್ಮಿಂದ ಬಹಳ ತಪ್ಪಾಯಿತೆಂದು ಪ್ರಾರ್ಥನೆಯುಂ ಮಾಡಿಕೊಂಡ
"ನಂತರ ನಂಜುಂಡೇಶ್ವರ ಸ್ವಾಮಿಯು ದೊರೆಗಳವರಿಂದ ಬಹಳ
"ಸೇವೆಯುಂ ತೆಗದುಕೊಂಡು ಬಹುಕಾಲ ಸಂರಕ್ಷಣೆಯುಂ ಮಾಡ
"ಬೇಕೆಂದು ಕೃಪೆಯಿಟ್ಟು ಒಡಿಹೋದ ಆನೆಗೆ ಮೂವುತನ ಸ್ವಾಧೀನಕ್ಕೆ
"ಬರುವಂತೆ ಬುದ್ಧಿಯನುಂಟುಮಾಡಿ ಪೂರ್ವದಂತೆ ಆನೆಯು ಆನೆ
"ಬಾಗಲಿಗೆ ಬಂದ ಬಳಿಕ ದೊರೆಗಳವರು ಆನೆಯಿಂದಿಳಿದ ನಂತರ ಸ್ನಾನ
"ಸಂಧ್ಯಾವಂದನೆಯುಂ ನೆರವೇರಿಸಿ ದೇವಸ್ಥಾನಕ್ಕೆ ಚಿತ್ತೈಸಿ ದೇವರ
"ದರ್ಶನಮಂ ಮಾಡಿಕೊಂಡು ಪ್ರಾರ್ಥನೆ ಯಿದ್ದಂತೆ ಕಾಣಿಕೆ ಕಪ್ಪಗಳ
"ನ್ನೊಪ್ಪಿಸಿ ತೀರ್ಥಪ್ರಸಾದಮಂ ಸ್ವೀಕರಿಸಿಕೊಂಡು ಪುನಃ ಪ್ರದಕ್ಷಿಣ

"ಯಾಗಿ ಬಂದನಂತರ ದೇವಸ್ಥಾನದ ಉತ್ತರಪಾರ್ಶ್ವದ ಬಳಕ್ಕೆಸಾಲೆ
"ಅಂಕಣಗಳಂ ಪರಾಂಬರಿಸಿ ಇನ್ನೊಕೆಲವು ಕೈಸಾಲೆ ಅಂಕಣವಂ
"ಹೆಚ್ಚಿಸಿ ಪಂಚವಿಂಶತಿ ಲೀಲಾಮೂರ್ತಿಗಳಂ ಪ್ರತಿಪ ಯಂ ಮಾಡಿಸು
"ವಂತೆ ಪೂರ್ಣಯ್ಯನಿಗೆ ಅಪ್ಪಣೆಯಂಕೊಡಿಸಿ ಅರಮನೆಗೆ ಚಿತ್ತೈಸಿದ
"ನಂತರ ಮಹಾಮಾತೃಶ್ರೀಯವರು ಮುಂತಾದ ಸವಾರಿಗಳಲ್ಲಾ ನದಿ
"ಯಿಂದ ಸ್ನಾನವಂ ಮಾಡಿಕೊಂಡು ದೇವರ ದರ್ಶನಕ್ಕೆ ಚಿತ್ತೈಸುವ
"ಸಮಯದಲ್ಲಿ ದೊರೆಗಳವರ ಜನಕಜನನಿ ಹೆತ್ತಮ್ಮಯ್ಯನವರಾದ
"ಹೊನ್ನಾಜಮ್ಮಣಿಯವರು ತಾವುಪ್ರಾರ್ಥನೆಯಂ ಮಾಡಿಕೊಂಡಿದ್ದ
"ನಾಲ್ಕುಜನ ಅವ್ವೇರುಗಳಿಗೂ ಬಾಯಿಬೀಗವಂ ಚುಚ್ಚಿಸಿಕೊಂಡು
"ಕನಾತಿನವೊಳಗೆ ಹೆಜ್ಜೆನಮಸ್ಕಾರಗಳಂ ಮಾಡುತ್ತಾ ದೇವಸ್ಥಾನಕ್ಕೆ
"ಚಿತ್ತೈಸಿ ಪ್ರಾರ್ಥನೆಯಂ ಮಾಡಿ ಇದ್ದಂತೆ ಕಾಣಿಕೆ ಕಪ್ಪಗಳಂ
"ಸರ್ವರೂ ಒಪ್ಪಿಸಿ ದೇವರ ದರ್ಶನವಂ ಮಾಡಿ ತೀರ್ಥಪ್ರಸಾದಗಳಂ
"ಒಪ್ಪಿಸಿಕೊಂಡು ಅಲ್ಲಿ ೪ ದಿವಸಯಿದ್ದು ಅದೇಶುದ್ಧ ೫ ಮಂಗಳವಾರ
"ಮಹಿಸೂರಿಗೆ ಚಿತ್ತೈಸಿದರು."

10. ಮಹಾರಾಣಿ ಲಕ್ಷ್ಮಮ್ಮಣಿಯವರು 68 ವರ್ಷ ಜೀವಂ
ತರಾಗಿದ್ದು ಶುಕ್ಲ ಸಂವತ್ಸರ ಮಾಘಮಾಸ ಎಂದರೆ 1810ನೆ ಯಿಸವಿ
ಪಿಬ್ರವರಿ ತಿಂಗಳಲ್ಲಿ ಸ್ವರ್ಗಸ್ಥರಾದರು. ಕುಲೀನ ರಾಜಸಂತತಿ
ಯಲ್ಲಿ ಜನಿಸಿದ ಇವರು ಅಳಿಮೈಮಹಾಸ್ವಾಮಿ ಇಮ್ಮಡಿ ಕೃಷ್ಣರಾಜ
ಒಡೆಯರವರಿಗೆ ಪರಿಣಯವಾದ ತರುವಾಯ 51 ವರ್ಷಗಳಕಾಲ
ಇಹಲೋಕ ವ್ಯಾಪಾರ ನಿರತರಾಗಿದ್ದರು. ಇವರಲ್ಲಿ ರಾಜಭವನದಲ್ಲಿ
ಪತಿಯೊಂದಿಗೆ ಸಂಸಾರಸುಖವನ್ನನುಭವಿಸಿದುದು 7 ವರ್ಷಮಾತ್ರ.
ಉಳಿದ 44 ವರ್ಷಗಳಲ್ಲಿ ದೀರ್ಘಕಾಲ ಎಂದರೆ 33 ವರ್ಷಗಳು ಇವ
ರಿಗೆ ರಾಜ್ಯತಂತ್ರ ವಿಚಾರದಲ್ಲಿಯೂ ಮನಃಕ್ಲೇಶದಲ್ಲಿಯೂ ಸಂದುವು.
ಇವರ ಸಪತ್ನೀಪುತ್ರರೀರ್ವರೂ ಸ್ವಲ್ಪಕಾಲಮಾತ್ರ ರಾಜ್ಯವಾಳಿ
ಲೋಕಾಂತರಸ್ಥರಾದರು. ಬಳಿಕ ತಮಗೆ ಸ್ವೀಕೃತರಾದ ಖಾಸಾ ಚಾಮ
ರಾಜಒಡೆಯರವರನ್ನು ಬಾಲ್ಯದಲ್ಲಿ ಸಾಕಿ ಪ್ರವರ್ಧಮಾನಮಾಡಿದ ಈ
ಮಹಾರಾಣಿಯವರಿಗೆ ಆ ಮಹಾರಾಜರವರ ತರುವಾಯ ಅವರ ಪುತ್ರ

ರಾದ ಬಾಲ್ಯದಲ್ಲಿಯೇ ಮಾತಾಪಿತೃವಿಯೋಗವನ್ನು ಪಡೆದ ಮಹಾರಾಜರು ಮುಮ್ಮಡಿ ಕೃಷ್ಣ ರಾಜಒಡೆಯರವರ ಪಾಲನೆಯು ಆಗ ಕಾಲವೈಷಮ್ಯ ದಿಂದ ಕಷ್ಟತರವಾಯಿತು. ಬೇಡದವರ ಸಾಂಗತ್ಯ ಸಂಘಟಿಸಿತು. ಬೇಕಾ ದವರ ಸಹವಾಸ ತಪ್ಪಿತು. ಮಿತ್ರರು ದೂರಸ್ಥರಾದರು. ಶತ್ರುಗಳು ಸನ್ನಿಹಿ ತರಾದರು. ಆಹಾರಾದಿಗಳಿಗೂ ಅನುಕೂಲ ಕಡಿಮೆಯಾಯಿತು. ಕಡೆಗೆ ಇವರಿಗೆ ವಂಶಪರಂಪರೆಯಿಂದ ಬಂದ ರಾಜಮಂದಿರದ ನೆಲೆಯೂ ತಪ್ಪಿ ಹೊರಗಡೆ ಕುಟೀರನಿವಾಸವು ಪ್ರಾಪ್ತವಾಯಿತು. ಆಸ್ತಿಯೆಲ್ಲವೂ ಯತ್ನ ವಿಲ್ಲದೆ ನಷ್ಟವಾಯಿತು. ಹೀಗೆ ನಾನಾಮುಖವಾಗಿ ಕಷ್ಟನಿಷ್ಠುರಗಳಿಗೆ ಗುರಿಯಾದರೂ ತಾವು ಎದೆಗೆಡದೆ ವಿಪತ್ಪರಂಪರೆಯು ಬಂದೊದಗಿದ ಪಾಗೆಲ್ಲಾ ಧೈರ್ಯವನ್ನೆ ಅವಲಂಬಿಸಿ ಸಮಯವರಿತು ಪ್ರವರ್ತಿಸುತ ಕ್ಷಾತ್ರ ಧರ್ಮಾನುಸಾರ ದೂರದೃಷ್ಟಿಯಿಂದ ಸಾಹಸಮೊಡಿ ಕಾಲೋಚಿತಕೃತ್ಯ ಗಳನ್ನು ನೆರವೇರಿಸಿ ಮೈಸೂರು ರಾಜ್ಯಕ್ಕೆ ಉಳಿದ ಅಂಕುರವನ್ನು ಕಾಪಾಡಿದ ಈ ಮಹಾತ್ಮರಿಗೆ ಕಡೆಗೆ ದೈವಾನುಗ್ರಹದಿಂದ ದುಃಖಾಂಧ ಕಾರವು ತೊಲಗಿ ಸುಖಸೂರ್ಯೋದಯವು ದೃಶ್ಯವಾಗಿ ಮೈಸೂರು ರಾಜ ವಂಶವು ಶಾಶ್ವತವಾಯಿತು. ತರುವಾಯ 11 ವರ್ಷಗಳಕಾಲ ಈ ರಾಜ್ಯಾಂಕುರವು ಪ್ರವರ್ಧಮಾನ ವಾಗುವುದನ್ನು ನೋಡಿ ಸಂತೋಷಿಸುವ ಪುಣ್ಯವು ಈ ಮಹಾರಾಣಿಯವರಿಗೆ ಲಭಿಸಿತು.

11. ಸೇತುಶೀತಾಚಲಮಧ್ಯವರ್ತಿಯಾಗಿರುವ ಇಂಡಿಯಾ ಭೂಮಂಡಲಾಂತರ್ಗತವಾದ ಅನೇಕ ರಾಷ್ಟ್ರಗಳಲ್ಲಿ ಕ್ರಿ. ಶ. 18ನೆಯ ಶತಮಾನವು ಯುದ್ಧಯುಗವೆನಿಸಿತ್ತು. ಅನೇಕ ಸೀಮೆಗಳಲ್ಲಿ ಬದಲಾ ವಣೆಗಳು ನಡೆಯುತಲಿದ್ದುವು. ಈತಿಬಾಧೆಗಳು ಪ್ರಬಲಿಸಿದ್ದುವು. ಅಂತಹ ಕಷ್ಟಕಾಲದಲ್ಲಿಯೂ ತಮ್ಮ ಸಮಕಾಲಿಕರಾದ ಮೊಳವದೇಶ ದಲ್ಲಿ ಹೋಳ್ಕರ್‌ರಾಜ್ಯವನ್ನು ಕಾಪಾಡಿದ ಅಹಲ್ಯಾಬಾಯಿಯಂತೆಯೂ ಮೆತ್ತು ಕಲ್ಕತ್ತಾ ನಗರಕ್ಕೆ ಉತ್ತರದಿಕ್ಕಿನಲ್ಲಿರುವ ನತ್ತೋರು ಸಂಸ್ಥಾ ನವನ್ನು ಸಂರಕ್ಷಿಸಿದ ರಾಣಿಭವಾನಿಯಂತೆಯೂ ಈ ಮಹಾರಾಣಿ ಲಕ್ಷ್ಮಮ್ಮಣಿಯವರು ತುಂಬಾ ಸಾಹಸಮೊಡಿ ಮೈಸೂರು ರಾಜ್ಯಕ್ಕೆ ಸಂಭವಿಸಿದ ಆಪತ್ತನ್ನು ಕಡೆಗಾಣಿಸಿ ಯಶಸ್ವಿನಿಯರಾದರು.

Dear Sheffield

12. ಅಂತಃಕರಣ ಪರಿಶುದ್ಧಿ ಪೂರ್ವಕವಾದ ದೈವ ಭಕ್ತಿಯೂ, ದೈವಭಕ್ತಿಯಿಂದ ಲಬ್ಧವಾದ ಧೈರ್ಯವೂ, ಧೈರ್ಯದಿಂದುಂಟಾದ ಸಾಹಸ ಶಕ್ತಿಯೂ, ಸಾಹಸಶಕ್ತಿಸಂಜನಿತವಾದ ಸನ್ನಾಹದ ಸಲಕರಣೆಗಳೂ, ಇವು ಕಾರ್ಯಸಿದ್ಧಿಪ್ರದವೆನಲು ಈ ಮೆಹಾರಾಣಿ ಲಕ್ಷ್ಮಮ್ಮಣ್ಣಿಯವರ ವೃತ್ತಾಂತವು ನಿದರ್ಶನವಾಗಿ ಪರಿಣಮಿಸಿತು.

ಎರಡನೆಯ ಅಧ್ಯಾಯ.

ಮುಮ್ಮಡಿಕೃಷ್ಣರಾಜಒಡೆಯರವರ ಬಾಲ್ಯದಲ್ಲಿ ದಿವಾಣಪೂರ್ಣಯ್ಯನವರ ಆಡಳಿತ.

1. ರಾಜ್ಯದ ಆಡಳಿತಕ್ಕೆ ಏರ್ಪಟ್ಟ ನಿಯಮಗಳು.—ರಾಜ್ಯದ ಆಡಳಿತದಲ್ಲಿ ದಿವಾಣ ಪೂರ್ಣಯ್ಯನವರು ಮುಖ್ಯವಾದ ಪ್ರಮೇಯಗಳಲ್ಲಿ ರೆಸಿಡೆಂಟರವರ ಸಲಹೆಗನುಸಾರವಾಗಿ ನಡೆವಂತೆ ಏರ್ಪಾಡಾಯಿತು. ಆಗ ರೆಸಿಡೆಂಟರಿಗೆ ಅವರ ಮೇಲಿನ ಅಧಿಕಾರಸ್ಥನದವರು ತಿಳಿಸಿದ ಮುಖ್ಯಾಂಶಗಳೇನೆಂದರೆ:—ಮೊದಲು ದೇಶಸಂರಕ್ಷಣೆಗೆ ಗಮನ ಕೊಡತಕ್ಕದ್ದು; ಈ ಬಗ್ಗೆ ಇಷ್ಟೇಷೌಜು ಇರಬೇಕೆಂದು ನಿಯಮವಿಲ್ಲ. ಅವಶ್ಯಕತೆ ಕಂಡುಬಂದಾಗ ಸುತ್ತುಮುತ್ತಲೂ ಇರುವ ಇಂಗ್ಲಿಷ್ ಕಂಪೆನಿಯವರಿಂದ ಸೇನೆಯನ್ನು ಹೆಚ್ಚಾಗಿ ತರಿಸಿಕೊಳ್ಳಲೂ ಬಹುದು; ಆ ಪ್ರಾಂತಕ್ಕೆ ಬೇಕಾದಾಗ ಮೈಸೂರಲ್ಲಿರುವ ಸೇನೆಯಲ್ಲಿ ತಕ್ಕಮಟ್ಟಿಗೆ ಉಳಿಸಿಕೊಂಡು ನಿಂತದ್ದನ್ನು ಸಹಾಯವಾಗಿ ಕಳುಹಿಸಿಕೊಡಲೂ ಬಹುದು; ಈ ಮಿಲಿಟೇರಿ ಖಾಬಿನಲ್ಲಿ ಮದ್ರಾಸ್ ಗವರ್ನಮೆಂಟಿನೊಡನೆ ಕಾಗದಪತ್ರಗಳನ್ನು ನಡೆಸತಕ್ಕದ್ದು. ಇಂಗ್ಲಿಷ್ ಸರ್ಕಾರಕ್ಕೆ ಸಲ್ಲಬೇಕಾದ ಪಗದಿಯ ವಿಷಯದಲ್ಲಿ ಈ ರಾಜ್ಯವು ತತ್ಕಾಲಕ್ಕೆ ಕ್ಷೀಣದಶೆಯಲ್ಲಿದ್ದ ಕಾರಣ ಮೊದಲನೆಯ ವರ್ಷದಲ್ಲಿ 7ಲಕ್ಷ ಬಹದರಿ ವರಹಕ್ಕೆ ಬದಲಾಗಿ 7ಲಕ್ಷ ಕಂಠೀ

ರಾಯಿ ವರಹವನ್ನು ಅಂಗೀಕರಿಸಲಾಗುವುದು. ಎರಡನೆಯ ವರ್ಷದಲ್ಲಿಯೂ ಅವಶ್ಯಕತೆ ಕಂಡುಬಂದರೆ ಈ ಭಾಗದಲ್ಲಿ ತಕ್ಕಮಟ್ಟಿಗೆ ರಿಯಾಯಿತಿ ಮಾಡಲಾಯಿತು. ಸರದಾರರು ಮುಂತಾದವರಿಗೆ ಮೆರ್ಜಾದೆಯ ತಲಬನ್ನು (Stipend) ಮತ್ತು ನೌಕರಿಯಿಂದ ತೆಗೆದ ಆಯಾ ನೌಕರರಿಗೆ ಪೆನ್ಷನ್ನನ್ನು ಕೂಡಲೆ ನಿಷ್ಕರ್ಷೆಮಾಡಿ ಕ್ರಮವಾಗಿ ಪಾವತಿ ಮಾಡಿಸಬೇಕು. ದಿವಾನರ ನಡತೆ ಮತ್ತು ಆಡಳಿತ ಇವುಗಳ ವಿಷಯದಲ್ಲಿ ಗಮನವಿಟ್ಟು ದೇಶವನ್ನು ಅಭಿವೃದ್ಧಿಗೆ ತರಬೇಕು. ಮೊಲ್ಕಿಯ ಆಡಳಿತ, ಆದಾಯ ವ್ಯಯ, ವ್ಯಾಪಾರಕ್ಕೆ ಪ್ರೋತ್ಸಾಹ, ಸೂಕ್ತವಾದ ಕಾನೂನು ಮತ್ತು ನ್ಯಾಯಸ್ಥಾನಗಳ ಏರ್ಪಾಡು, ಸೀಮೆಯ ಸಂಪದಭಿವೃದ್ಧಿ, ಇವುಗಳಿಗೆಲ್ಲಾ ಅವಶ್ಯಕವಾಗಿ ಗಮನ ಕೊಡಬೇಕು; ಪಾಳ್ಯಗಾರರಿಗೆ ಅವರವರ ಸ್ಥಿತಿ ತರಗತಿಗಳಿಗನುಸಾರವಾಗಿ ನಗದಿ ಮೊಬಲಗನ್ನು ಯಥೋಚಿತವಾಗಿ ಪಾವತಿ ಮಾಡಬೇಕು. ಅವರಲ್ಲಿ ಯಾರಿಗೂ ಪಾಳಯಪಟ್ಟನ್ನು ಸ್ವಾಧೀನಮಾಡಲಾಗದು.

2. ಸರದಾರ ಜನರಿಗೆ ಪೆನ್ಷನ್ ಏರ್ಪಾಡು.— ಶ್ರೀಮನ್ಮಹಾರಾಜರವರಿಗೆ ಪಟ್ಟಾಭಿಷೇಕವಾದ ಬಳಿಕ ದೇಶವನ್ನು ತಹಬಂದಿ ಸ್ಥಿತಿಗೆತರುವುದು ಪ್ರಥಮಕರ್ತವ್ಯವಾಯಿತು. ನಿಜಾಂಸರ್ಕಾರದವರು ತಮ್ಮ ಪಾಲಿಗೆ ಬಂದ ರಾಷ್ಟ್ರದ ಪೈಕಿ ಟೀಪೂಸುಲ್ತಾನರ ಸೇನಾಧಿಪತಿ ಮಿರ್ ಕಮೊರುದ್ದೀನ್‌ಖಾನರವರಿಗೆ 10,000 ಕಂಠೀರಾಯಿ ವರಹಗಳು ಬಾಳುವ ಗುರ್ರಂಕೊಂಡ ಜಹಗೀರನ್ನು ಕೊಟ್ಟರು. ಇಂಗ್ಲಿಷ್ ಕಂಪೆನಿ ಬಹದ್ದರವರು ತಮಗೆ ಪ್ರಾಪ್ತವಾದ ಸೀಮೆಯ ವರಮಾನದಿಂದ ನವಾಬ್ ಹೈದರಲ್ಲಿಖಾನರು ಮತ್ತು ಟೀಪೂಸುಲ್ತಾನರು ಇವರುಗಳ ಬಂಧುವರ್ಗ ಪರಿವಾರಜನರುಗಳ ಗುಜರ್ರಾಬಿಗ್ಗೆ 2,40,000 ಕಂಠೀರಾಯಿ ವರಹ ನಗದಿ ಹಣವನ್ನು ಪ್ರತ್ಯೇಕಿಸಿ ಇದಕ್ಕೆ ಎರಡು ಲಕ್ಷದ ಫಂಡೆಂದು (Two lakh fund) ಪೆಸರಿಟ್ಟು ಇದರ ವೈದ್ಯಾಂಶದಿಂದ ಅವರವರಿಗೆ ಯಥೋಚಿತವಾಗಿ ತಿಂಗಳು ಕಟ್ಟಳೆಯ ಪೆನ್ಷನ್‌ಗಳನ್ನು ವಿಧಿಸಿದರು. ಟೀಪೂಸುಲ್ತಾನರಕಡೆ ಮುಖ್ಯ ಸರದಾರರು ಮುಂತಾದ ಅಧಿಕಾರಿಗಳ ಪೋಷಣಾರ್ಥವಾಗಿ ಮೈಸೂರು ಸರ್ಕಾರದಿಂದ

ಸ್ಟೇಟ್ ಪೆನ್ಷನ್ (State pension) ಗಳನ್ನು ಪ್ರತಿತಿಂಗಳಲ್ಲಿಯೂ ಪಾವತಿ ಮಾಡುವಂತೆ ಏರ್ಪಾಡಾಯಿತು. ಈ ಪೆನ್ಷನ್‌ಗಳು ಅವರವರ ಸಂತತಿಯನರಿಗೆ ಈಗಲೂ ಕಾಲಾನುಗುಣವಾಗಿ ನಡೆದು ಬರುತ್ತ ಲಿರುವುವು.

3. ಪಾಳೆಯಗಾರರ ವಿಚಾರ.—ಮೈಸೂರು ರಾಜ್ಯಕ್ಕೆ ಸೇರಿತವಾದ ಪ್ರಾಂತಗಳು ಹಿಂದೆ ಬಹುಕಾಲದಿಂದಲೂ ಅನೇಕ ಪಾಳ್ಯಪಟ್ಟುಗಳನಿಸಿ ದ್ದುವು. ವಿಜಯನಗರದ ಚಕ್ರಾಧಿಪತ್ಯವು ತಪ್ಪಿದ ತರುವಾಯ ಆಯಾ ಪಾಳೆಯಗಾರರು ತಮ್ಮಲ್ಲಿ ತಾವು ಆಗಾಗ್ಗೆ ಕಲಹಮಾಡಿಕೊಂಡು ಒಬ್ಬರ ಸೀಮೆಯನ್ನು ಮತ್ತೊಬ್ಬರು ಬಿಡಿಸಿಕೊಳ್ಳುತ್ತ, ತತ್ಕಾಲದಲ್ಲಿ ಪ್ರಬಲಿಸಿದವರ ಅಧಿಕಾರವು ಹೆಚ್ಚುತಲೂ ಇತರರದು ಕಡಿಮೆಯಾಗುತಲೂ ಇತ್ತು. ಮೈಸೂರು ದೊರೆಗಳಾದ ರಾಜಒಡೆಯರವರು ಪ್ರಬಲದಶೆಗೆ ಬಂದುದು ಮೊದಲು ಮೈಸೂರುದೇಶವು ವಿಸ್ತರಿಸುತ ಬಂದಹಾಗೆಲ್ಲಾ ಅವರೂ ಅವರ ಸಂತತಿಯವರಾದ ಪ್ರಭುಗಳೂ ಕ್ರಮೇಕ್ರಮವಾಗಿ ಪಾಳೆಯಗಾರರ ಸ್ವತಂತ್ರಾಧಿಕಾರವನ್ನು ತಪ್ಪಿಸಿದುದಲ್ಲದೆ ವಿಧೇಯರಾಗಿ ರಾಜಭಕ್ತಿಯಿಂದ ಕೂಡಿ ನಿಯಮಿತವಾದ ಪೇಷ್‌ಕಷ್ಟನ್ನು ಕ್ರಮವಾಗಿ ಸಲ್ಲಿಸುತ ಅವಶ್ಯಕವಾದಾಗೆಲ್ಲಾ ತಮ್ಮ ತಮ್ಮ ಸೇನೆಯೊಂದಿಗೆ ಸಹಾಯವನ್ನೊದಗಿಸುತ ರಾಜಹಿತೈಷಿಗಳನಿಸಿದ ಪಾಳೆಯಗಾರರಿಗೆ ಅವರವರ ಸೀಮೆಗಳನ್ನು ಉಳಿಸಿಕೊಟ್ಟು ಇತರರನ್ನು ನಿಗ್ರಹಿಸಿ ಅವರ ದೇಶಗಳನ್ನೆಲ್ಲಾ ಸರ್ಕಾರಕ್ಕೆ ಸೇರಿಸಿಕೊಂಡರು.

4. ಈ ಪದ್ಧತಿಯನ್ನೇ ತಮ್ಮ ಸರಕರ್ದಿಯಲ್ಲಿ ನವಾಬ ಹೈದರಲ್ಲಿ ಖಾನರೂ ಅನಂತರ ಟೀಪೂಸುಲ್ತಾನರೂ ಅನುವರ್ತಿಸಿದ್ದರು. ಆದರೆ 1791ನೆಯ ಇಸವಿಯಲ್ಲಿ ಟೀಪೂಸುಲ್ತಾನರು ತಾವು ಲಾರ್ಡ್‌ಕಾರ್ನ್‌ವಾಲೀಸರಿಂದ ಪರಾಜಯರು ಹೊಂದಿದನಂತರ ಗುಮ್ಮೊನಿನು ಮೇಲೆ ಸೆರೆಯಲ್ಲಿಟ್ಟಿದ್ದ ಜನರಲ್ಲಿ ಬಹಳಮಂದಿಯನ್ನು ಕೊಲ್ಲಿಸಿದರು. ಆಗ ದೊಡ್ಡ ದೊಡ್ಡ ಪಾಳೆಯಗಾರರ ವಂಶಸ್ಥರನೇಕರು ಮೃತರಾದರು. ಕೆಲವರು ಕಾಲಾಂತರದಲ್ಲಿ ತಮ್ಮ ತಮ್ಮ ಪಾಳೆಯಗಳನ್ನು ಸಾಧಿಸಿಕೊಳ್ಳಬೇಕೆಂದು ಆಲೋಚಿಸಿ ಬಿಡುಗಡೆಯಾದ ತರುವಾಯ ದೇಶಾಂತರಗತರಾಗಿ

ಸಮಯವನ್ನು ನಿರೀಕ್ಷಿಸುತಲಿದ್ದರು. ಇವರಲ್ಲಿ ಕೆಲವರು 1799ನೆ ಯಿಸವಿ ಸಿದ್ಧಾರ್ಥಿ ಸಂವತ್ಸರದಲ್ಲಿ ಮೈಸೂರು ಮಹಾರಾಜರವರಿಗೆ ಪಟ್ಟವಾದಾಗ ಜನಗಳನ್ನು ಕಟ್ಟಿಕೊಂಡು ಸ್ವತಂತ್ರಿಸುವುದಕ್ಕೆ ಪ್ರಯತ್ನಿಸಿ ಹಾವಳಿಮಾಡುತ ಬಂದರು. ಈ ವಿಷಮ ಸಂದರ್ಭವನ್ನು ನೋಡಿ ಅಲ್ಲಲ್ಲಿ ಬಹುಮಂದಿ ಪಟೇಲರುಗಳೂ ತಮ್ಮ ತಮ್ಮ ಗಡಿಗಳಲ್ಲಿ ಅಧಿಕಾರವನ್ನು ತಾವೇ ನಹಿಸುತ ಹಜೂರು ಅಪ್ಪಣೆಯನ್ನು ಜಾರೀಮಾಡುವುದಕ್ಕೆ ಉದ್ಯುಕ್ತರಾಗುವ ಅವಿಮಾಲರನೇಕರನ್ನು ಹಿಂಸಿಸಿದರು. ಆ ಸಮಯದಲ್ಲಿ ತಮಗಿದ್ದ ನೌಕರಿ ತಪ್ಪಿ ಬೇರೆ ಕಸಬಿಲ್ಲದೆ ಪೆಕ್ಷ್ಮ ಮುಂತಾದ ಯಾವ ರಿಯಾಯತಿಯೂ ದೊರೆಯದೆ ಕಾದಿದ್ದ ಕೆಲವುಮಂದಿ ಮುಸಲ್ಮಾನರೂ ಆ ಪಟೇಲರಿಗೆ ಸಹಾಯಕರಾದರು. ಈ ರೀತಿಯಾದ ಸಂದರ್ಭವೊದಗಿದುದರಿಂದ ದೇಶವನ್ನು ತಹಬಂದಿಗೆ ತರುವುದು ಆಗ ಕ್ರಮಸಾಧ್ಯವಾಯಿತು. ಆದಗೂ ಆ ಕಾಲದಲ್ಲಿ ಸೇನಾಧಿಪತ್ಯವನ್ನು ವಹಿಸಿದ್ದ ಮೇಜರ್ ಜನರಲ್ ಸರ್ ಆರ್ಥರ್ ವೆಲೆಸ್ಲಿಯವರೂ (Major General Sir Arthur Wellesley) ರೆಸಿಡೆಂಟರಾದ ಕರ್ನಲ್ ಸರ್ ಬ್ಯಾರಿ ಕ್ಲೋಸ್‌ರವರೂ (Col. Sir Barry Close)ದಿವಾ ಪೂರ್ಣಯ್ಯನವರಿಗೆ ಮಾಡಿದ ಸಾಹಾಯ್ಯದಿಂದ ಪ್ರತಿಬಂಧಕಗಳೆಲ್ಲವೂ ನಿವಾರಿತವಾದುವು. ಟೀಪೂಸುಲ್ತಾನರ ಕಾಲದಲ್ಲಿ ಫೌಜುದಾರಿಯನ್ನೂ ಮತ್ತು ಅಸಫ್ ನೌಕರಿಯನ್ನೂ ಮಾಡಿದ್ದ ದೊಡ್ಡಬಳ್ಳಾಪುರದ ಅರುಣಾಚಲಪಂಡಿತರನ್ನು ಪೂರ್ಣಯ್ಯನವರು ಚಿಕ್ಕಬಳ್ಳಾಪುರ, ಗುಮ್ಮನಾಯಕನಪಾಳ್ಯ, ಈ ಪ್ರಾಂತಕ್ಕೆ ನೇಮಿಸಿ ಕಳುಹಿಸಲು ಅವರು ಇಂಗ್ಲಿಷ್ ಫೌಜಿನೊಡನೆ ಹೋಗಿ ಅಲ್ಲಿನ ಪಾಳ್ಯಗಾರರನ್ನು ನಿಗ್ರಹಿಸಿ ಆ ಸೀಮೆಯನ್ನು ಸಮಾಧಾನ ಸ್ಥಿತಿಗೆ ತಂದರು. ಬಳ್ಳಂ ಅಂದರೆ ಮುಂಜರಾಬಾದು ನಾಡಿನ (ಐಗೂರು) ಪಾಳೆಯಗಾರ ವೆಂಕಟಾದ್ರಿನಾಯಕನು ಸ್ವಾತಂತ್ರ್ಯವನ್ನು ವಹಿಸಿ ಅವಿಧೇಯನಾಗಿ ಹಾವಳಿಮಾಡುತ ಬಂದನು. ಕಡೆಗೆ 1800ನೆ ಯಿಸವಿಯಲ್ಲಿ ಆ ಪ್ರಾಂತಕ್ಕೆ ರಸ್ತೆಮಾಡಿಸಿ ಇಂಗ್ಲಿಷ್ ಸೇನಾಧಿಪತಿಗಳಾದ ಘನತೆ ಹೊಂದಿದ ಕರ್ನಲ್ ವೆಲೆಸ್ಲಿಯವರೇ ಹೋಗಿ ಆತನನ್ನು ಜಯಿಸಿ ಸೆರೆ ಹಿಡಿದರು. ರಾಜಕಾರ್ಯ ದೃಷ್ಟಿಯಿಂದ ಆ ಪಾಳಯಗಾರನಿಗೆ ಮರಣ

ದಂಡನೆಯೇ ವಿಧಿಸಬೇಕೆಂದು ದಿವಾ ಪೂರ್ಣಯ್ಯನವರು ಸಲಹೆಕೊಟ್ಟ ದರಮೇಲೆ ಆತನನ್ನು ಅಲ್ಲಿಯೇ ಗಲ್ಲಿಗೆಹಾಕಿಸಿದರು. ಆ ಸಮಯದಲ್ಲಿ ಶ್ರೀರಂಗಪಟ್ಟಣದಲ್ಲಿ ಕಾರಾಗೃಹದಿಂದ ಬಿಡುಗಡೆಯಾದವರಲ್ಲಿ ಧೊಂಡಿಯಾವಾಗ್ ಎಂಬ ಮಹಾರಾಷ್ಟ್ರ ದೇಶಸ್ಥನು ಸೇನೆಯನ್ನು ಕಟ್ಟಿಕೊಂಡು ಮೈಸೂರುಸೀಮೆ, ಕನಡಾಜಿಲ್ಲೆ, ಮಲೆಬಾರ್, ಈ ಪ್ರಾಂತಗಳಲ್ಲೆಲ್ಲಾ ಲೂಟಿಮಾಡುತ ಬಂದನು. ಇವನನ್ನೂಲೂ ವೆಲೆಸ್ಲಿಯು ವರೇ ದಂಡಿನೊಡನೆ ಹೋಗಿ ಮಹಾರಾಷ್ಟ್ರ ಸೀಮೆಯ ಬಳಹೊಕ್ಕು ಅವನ ಬಲವನ್ನು ನಿರ್ಮೂಲನಮಾಡಿ ಅವನನ್ನು ಹಿಡಿದು ಸಂಹರಿಸಿದರು. ಅನಂತರ ದೇಶವೆಲ್ಲಾ ತಹಬಂದಿಗೆ ಬಂದಿತು. ಆಗ ಮೈಸೂರು ಸರ್ಕಾರದಿಂದ ಚಿತ್ರದುರ್ಗ, ಮೊಳಕಾಲ್ಮುರು, ಚಿಕ್ಕಬಳ್ಳಾಪುರ, ಗುಮ್ಮನಾಯಕನಪಾಳ್ಯ, ತರಿಕೆರೆ, ಮಂಜರಾಬಾದು, ಕೆಂಚನಗುಡ್ಡ, ಬಾಗಲೂರು, ರಾಯದುರ್ಗ, ಗುತ್ತಿ, ಗುಡಿಕೋಟೆ, ಗುಡಿಬಂಡೆ, ದೇವನಹಳ್ಳಿ, ಆನೆಕಲ್ಲು, ಮುಡಿಮಡಗು, ಆನೆಗೊಂದಿ, ವಿಜಯನಗರ, ಈ ಹದಿನೇಳು ಸ್ಥಳಗಳ ಪಾಳೆಯಗಾರರಿಗೆ ಅವರವರ ಸಿತಿತರಗತಿಗಳಿಗನುಸಾರ ಮುನ್ನಾಸಬು ಮಾಹೇಯಾನಾ ಮರ್ಯಾದೆಯ ತಲಬು (Stipend) ಮೊಕರೂರಾಯಿತು. ಅವರುಗಳು ಮೈಸೂರು ರಾಜಧಾನಿಯಲ್ಲಿ ವಾಸಮಾಡಬೇಕೆಂತಲೂ ಹೊರಗೆಲ್ಲಾದರೂ ಸಂಚಾರಮಾಡಬೇಕಾದರೆ ಸರ್ಕಾರದಿಂದ ಅಪ್ಪಣೆಪಡೆದು ಹೋಗಬೇಕೆಂತಲೂ ವ್ಯವಸ್ಥೆಯಾಯಿತು.

5. ಸೈನ್ಯವಿಭಾಗ: ಕುದುರೆಯ ಫೌಜು.—ಚಿರಕಾಲದಿಂದಲೂ ಮೈಸೂರು ಸಿಲೆದಾರರು ಹೆಸರುವಾಸಿ ಪಡೆದಿರುವರು. ಆಳಿದ ಮಹಾಸ್ವಾಮಿ ಇಮ್ಮಡಿ ಕೃಷ್ಣರಾಜ ಒಡೆಯರವರ ಕಾಲದಲ್ಲಿ ನವಾಬ ಹೈದರಲ್ಲಿ ಖಾನರು ಪ್ರಾಬಲ್ಯ ಪಡೆಯುವುದಕ್ಕೆ ಹಿಂದೆ ಬರ್ಕಿ ವೆಂಕಟರಾವ್, ಷೇರ್ ಖಾನದಖನಿ, ನಿಜಾಜಮಾಲ್ಹುಸೇನ್, ಇವರುಗಳ ಪಕ್ಷದಲ್ಲಿ 12,000 ನುಂದಿ ಸಿಲೆದಾರರು ಆಗಿನ ದಳವಾಯಿ ನಂಜರಾಜ ಅರಸಿನವರ ತಾಬೆಯಲ್ಲಿದ್ದರು. ಯುದ್ಧಸಂಬಂಧವಾದ ಕೆಲಸಗಳೇನೂ ಇಲ್ಲದಾಗ ಈ ಫೌಜಿದಲ್ಲಿ ಕೆಲವರನ್ನು ಮಾತ್ರ ಬಳಗತಿಯು ಬಂದೋಬಸ್ತಿಗೋಸ್ಕರ ಅವಶ್ಯಕವಾದ ಸ್ಥಳಗಳಲ್ಲಿ ಇರಿಸಿ, ಮಿಕ್ಕ ಎಲ್ಲಾ ಸೇನೆಯನ್ನೂ ಶ್ರೀರಂಗ

ಪಟ್ಟಣದ ಸಮೀಪದಲ್ಲಿಯೇ ಠಾಣೆ ಮಾಡಿಸಿರುವುದಾಗಿತ್ತು. ಮೊಹ
ಮೊಹರಂಗೂ ಬಹಳ ಕ್ರಮವಾಗಿ ಸೇನಾಜನರುಗಳಿಗೆ ತಲಬಿನ ಬಟವಾಡೆ
ಯಾಗುತ್ತಿತ್ತು. ಇದು ಆವುದಾದರೂ ಕಾರಣಾಂತರದಿಂದ ಬಾಕಿ
ನಿಂತಲ್ಲಿ ಸಾಲಾಖ್ಯೈರಿನಲ್ಲಿ ಇದನ್ನು ವ್ಯವಸ್ಥೆ ಮಾಡುವುದು ವಾಡಿಕೆ
ಯಾಗಿತ್ತು. ದೊಡ್ಡದೊಡ್ಡ ಸರದಾರರಿಗೆ ಸಂಬಳಕ್ಕೆ ಬದಲಾಗಿ ಜಹಗೀರು
ಕೊಟ್ಟಿತ್ತು.

6. ತರುವಾಯ ನವಾಬ ಹೈದರಲ್ಲಿಖಾನರವರು ಸವಾರರನ್ನು
ಖಾಸತಬೇಲಿಯೆಂತಲೂ, ಸಿಲೆದಾರರೆಂತಲೂ ಎರಡು ತಂಡವಾಗಿ ಮಾಡಿ
ದರು. ಖಾಸತಬೇಲಿಯಲ್ಲಿ ಹೊಸದಾಗಿ 2,000 ಹೆಣು ಕುದುರೆ ಸೇರಿ
ಒಟ್ಟು 14,000 ಕುದುರೆಗಳಿದ್ದವು. ಇದರ ಖರ್ಚೆಲ್ಲವನ್ನೂ ಸರ್ಕಾ
ರದವರೇ ವಹಿಸಿದ್ದರು. ಇದರಲ್ಲಿ ಎರಡು ಭಾಗಮಾಡಿ ಒಂದಕ್ಕೆ ಶ್ರೀಪತಿ
ರಾಯರೆಂಬವರನ್ನೂ, ಮತ್ತೊಂದಕ್ಕೆ ಬಾಗಿರ್ಕರ್ ರಾಮರಾಯರೆಂಬವ
ರನ್ನೂ ಸೇನಾನಾಯಕರಾಗಿ (Commander) ನೇಮಿಸಿದರು. ಸಿಲೆ
ದಾರಿ ಫಿರ್ಕಾದಲ್ಲಿ 28,000 ಕುದುರೆಗಳಿದ್ದವು. ಸಿಲೆದಾರರ ತಲಬು
ಮಾತ್ರ ಸರ್ಕಾರದಿಂದ ಪಾವತಿಯಾಗುತ್ತ ಉಳಿದ ಸಿಲೆದಾರರು ತಮ್ಮ
ತಮ್ಮ ಕುದುರೆಗಳನ್ನು ತಾವೇ ಒದಗಿಸಿಕೊಂಡು ಅವುಗಳ ದಾಣಾಕಾಚಾ
ಮುಂತಾದ ಖರ್ಚನ್ನು ವಹಿಸುತ್ತಿದ್ದರು. ಇದಲ್ಲದೆ ಸವಣೂರ
ನವಾಬರು 2,000 ಕುದುರೆಗಳನ್ನೂ ಚಿತ್ರದುರ್ಗ, ರಾಯದುರ್ಗ
ಮೊದಲಾದ ಪಳೆಯಗಾರರು 7,000 ಕುದುರೆಗಳನ್ನೂ
ಜಮಾಯಿಸಿಟ್ಟುಕೊಂಡು ಯಾವಾಗಲೂ ನವಾಬರೊಂದಿಗೆ ಇರಬೇಕೆಂಬ
ನಿಯಮವಾಗಿತ್ತು. ಹೀಗೆ ಒಟ್ಟು 51,000 ಕುದುರೆಗಳು ಸೇ
ಒಂದೊಂದು ಸಾವಿರಕ್ಕೊಂದೊಂದು ರಿಸಾಲೆಯಂತೆ ವಿಭಾಗವಾ
ರಿಸಾಲ್ದಾರರು ಪ್ರತಿಯೊಬ್ಬರಿಗೂ ತಿಂಗಳಿಗೆ ಒಂದುಸಾವಿರ ಮೊದ
ಮೂರುಸಾವಿರರೂಪಾಯಿಯವರೆಗೆ ತಲಬೂ ಇದಲ್ಲದೆ ಹೌದಾಸಮೇ
ವಾದ ಅನೇಗಾಗಿ ರುಸುಮೂ ಏರ್ಪಟ್ಟು ವರ್ಷ ವೊಂದಕ್ಕೆ ಹತ್ತು
ತಿಂಗಳ ತಲಬು ಠರಾವಾಗಿ ಈಖ್ಯೈಕಿ ಮೂರರಲ್ಲಿ ಎರಡುಭಾಗ ನಗ
ಯಾಗಿ ಮೊಹಿಯಾನಾ ಬಟವಾಡೆಯಾಗುತ್ತ ಉಳಿದ ಒಂದುಭಾಗ ಪ

ಯುದ್ಧರಂಗದಲ್ಲಿ ಕೈವೆಶವಾದ ನಾನಾವಿಧದ ಉಡುಪುಬುಟ್ಟಿಗಳ ರೂಪದಿಂದ ಎರಡು ಅಥವಾ ಮೂರು ವರ್ಷಕ್ಕೊಂದಾವೃತ್ತಿ ಸಂದಾಯವಾಗುತ್ತಿತ್ತು. ಈ ಸೈನ್ಯದಲ್ಲಿ 4,000 ಸಿಲೆದಾರರನ್ನು ಸರ್ವದಾ ಶ್ರೀರಂಗಪಟ್ಟಣದಲ್ಲಿಟ್ಟು ಉಳಿದವರಲ್ಲಿ ಅನೇಕ ಜನರಿಗೆ ಆಯಾ ಕಿಲ್ಲೆಗಳಲ್ಲಿ ಕೆಲಸವಿಲ್ಲದಿದ್ದಾಗ ಶ್ರೀರಂಗಪಟ್ಟಣಕ್ಕೆ ಐವತ್ತು ಮೈಲಿಗಳ ದೂರದೊಳಗಿರುವಂತೆ ನೇಮಕವಾಗಿತ್ತು. ಟೀಪೂಸುಲ್ತಾನರ ಕಾಲದಲ್ಲಿ ಖಾಸ್ ತಬೇಲಿಯ ಕುದುರೆಗಳ ಸಂಖ್ಯೆಯು 7,000. ಸಿಲೆದಾರರ ಕುದುರೆ ಮಿರ್‌ಸಾಹೇಬರದೂ ಸೇರಿ 1,500. ಈ ಫೌಜಿಗೆ ತಲಬು, ಕೆಲಸ ಮುಂತಾದ ಬಾಬುಗಳು ಅವರ ತಂದೆಯಕಾಲದಂತೆಯೇ ನಡೆಯುತ್ತಿದ್ದವು. ಶ್ರೀರಂಗಪಟ್ಟಣವು ಇಂಗ್ಲಿಷ್ ಸರ್ಕಾರದವರ ಕೈವೆಶವಾದಾಗ 12,500 ಕುದುರೆಗಳಿದ್ದುವು. ಇದರಲ್ಲಿ 3,200 ಕುದುರೆಗಳನ್ನು ಅವರು ಸ್ವಾಧೀನಮಾಡಿಕೊಂಡರು. ಕವೊರೊದ್ದೀನ್ ಖಾನರೇ ಮುಂತಾದ ಕೆಲವ್ರಮಂದಿ ಸುಲ್ತಾನರ ಸೇನಾನಾಯಕರೊಂದಿಗೆ 1,138 ಕುದುರೆಗಳು ಹೊರಟುಹೋದವು. ಮಿಕ್ಕ 8,162 ಕುದುರೆಗಳು ಚದರಿ ದೇಶಾಂತರಗತವಾದವು. ಸ್ಟ 1807ನೆ ಯಿಸವಿಯ ತಹನಾಮೆಯ ಪ್ರಕಾರ 500 ಬಾರ್ಗಿರ್ ಎಂದರೆ ಖಾಸ್ ತಬೇಲಿ ಕುದುರೆಯಲ್ಲದೆ 3,500 ಸಿಲೆದಾರರು ಇರಬೇಕೆಂದು ನಿಯಮವಾಯಿತು. ಪೂರ್ಣಯ್ಯನವರ ಕಾರ್ಕರ್ದಿಯ ಅಂತ್ಯಕಾಲದಲ್ಲಿ 3,314 ಜನರೂ 3,190 ಕುದುರೆಗಳೂ ಇದ್ದವು. ಇವುಗಳಿಗೆ ಸಾಲೀಯಾನ 2,70,613 ಕಂಠೀರಾಯಿ ನರಹಗಳ ಖರ್ಚು ದಾಖಲಾಗಿತ್ತು. ಸ್ಟ 1803-4ನೆ ಯಿಸವಿಗಳಲ್ಲಿ ಮಹಾರಾಷ್ಟ್ರರೊಂದಿಗೆ ಸಂಭವಿಸಿದ ಯುದ್ಧದಲ್ಲಿ ಬ್ರಿಟಿಷ್ ಸರ್ಕಾರದವರಿಗೆ 1799ನೆ ಯಿಸವಿಯ ತಹನಾಮೆಗನುಸಾರವಾಗಿ ಮೈಸೂರು ರಾಜ್ಯದಿಂದ ಒದಗಿದ ಸೇನೆ, ಸಾಮಾನು, ಸರಬರಾಯಿ ಮುಂತಾದ ಸಾಹಾಯ್ಯವು ಸಂಪೂರ್ಣವಾಗಿ ತೃಪ್ತಿಯನ್ನುಂಟುಮಾಡಿದುದರಿಂದ ಈ ಯುದ್ಧದಸಂಬಂಧವಾಗಿ ಮೈಸೂರು ಸರ್ಕಾರದವರು ಭಾರಿಯಾಗಿ ಹೆಚ್ಚು ಖರ್ಚನ್ನು ಸಹ ವಹಿಸಿ ತುಂಬಾಶ್ರದ್ಧೆಯಿಂದ ಅನೇಕವಿಧವಾಗಿ ಒತ್ತಾಸೆಮಾಡಿದರೆಂದು ಆಗಿನ ಗವರ್ನರ್ ಜನರಲ್ ಸಾಹೇಬರವರು ಸ್ಪಷ್ಟಪಡಿಸಿರುವರು.

7. ಬಾರಿಲಾಖೆ.—ಈ ರಾಷ್ಟ್ರವಲ್ಲಿ ನವಾಬ್ ಹೈದರಲ್ಲಿಖಾನರು ಪ್ರಾಬಲ್ಯಹೊಂದುವುವಕ್ಕೆ ಮುಂಚೆ ಮಳವಾಯಿ ನಂಜರಾಜ ಅರಸಿನವರ ಅಧಿಕಾರದಲ್ಲಿ ಬಾರುಸಿಪಾಯಿಗಳು 1,000 ಮಂದಿ ಮಾತ್ರ ಖಾಯಮ್ಮಾಗಿ ದ್ದರು. ಈ ಸಿಪಾಯಿ ಫೌಜು ಇತರತ್ರ ಅವಶ್ಯಕತೆ ಯಿಲ್ಲದಕಾಲದಲ್ಲಿ ಸಾಮಾನ್ಯವಾಗಿ ರಾಜಧಾನಿಯಾದ ಶ್ರೀರಂಗಪಟ್ಟಣದಲ್ಲಿಯೇ ಇರುತ್ತಿತ್ತು. ಇದಕ್ಕೆಲ್ಲ ತಲಬು ಬಹಳಮಟ್ಟಿಗೆ ಮೂಜಿಯಾನೆ ಸಲ್ಲುತ್ತಿತ್ತು. ಬಾಕಿ ಏನಾದರೂ ನಿಂತರೆ ಅದು ಸಾಲಾಖೈರಿನಲ್ಲಿ ವ್ಯವಸ್ಥೆಯಾಗುತ್ತಿತ್ತು. ಶ್ರೀಮನ್ಮಹಾರಾಜರು ಇಮ್ಮಡಿ ಕೃಷ್ಣ ರಾಜ ಒಡೆಯರವರ ಅನುಗ್ರಹದಿಂದ ನವಾಬ್ ಹೈದರಲ್ಲಿಖಾನರು ಸರ್ವಾಧಿಕಾರ ಪದವಿಯನ್ನು ಪಡೆದು ಈ ಬೀಕವನ್ನು ನಾನಾ ಮುಖವಾಗಿ ವಿಸ್ತರಿಸಿದಾಗ ಅವರು ಬಾರಿನ ಸಂಖ್ಯೆಯನ್ನು 76,000ಕ್ಕೆ ಹೆಚ್ಚಿಸಿ ಈ ಜನರಲ್ಲಿ ಅನೇಕರನ್ನು ಫ್ರೆಂಚ್ ಸರದಾರರ ತಾಬೆಯಲ್ಲಿಟ್ಟರು. ಈ ಒಟ್ಟು ಸೈನ್ಯದಲ್ಲಿ 22,000 ಮಂದಿ ಆಯಾ ಕಿಲ್ಲೆಗಳಿಗೂ ಮತ್ತು ಇತರ ಮುಖ್ಯ ಸ್ಥಳಗಳಿಗೂ ನೇಮಕವಾಗಿ ನಿಂತ 54,000 ಮಂದಿ ಯಾವಾಗಲೂ ಯುದ್ಧ ಸನ್ನದ್ಧರಾಗಿರುತ್ತಿದ್ದರು. ಈ ಇಲಾಖೆಗೆ ಗೋಲಂದಾಜಿನ 96 ಫಿರಂಗಿ ಮತ್ತು ಎತ್ತುಗಳೂ ಸೇರಿದ್ದುವು. ಈ ಇಲಾಖೆಯವರಿಗೆ ತಲಬು ಜಹಜೂರು ಸನ್ನಿಧಾನವಲ್ಲಿರುವವರಿಗೆ 15 ದಿನಕ್ಕೊಂದಾವೃತ್ತಿಯೂ, ಡಿಸ್ಟ್ರಿಕ್ಟುಗಳಲ್ಲಿರುವ ಜನರಿಗೆ ತಿಂಗಳಿಗೊಂದಾವೃತ್ತಿಯೂ ಪಾವತಿಯಾಗುತ್ತಿತ್ತು. ತರುವಾಯ 1792ನೆ ಯಿಸವಿಯಲ್ಲಿ ಇಂಗ್ಲೀಷು ಸರಕಾರಕ್ಕೆ ಬಿಟ್ಟು ಕೊಟ್ಟ ಸೀಮೆ ಹೋಗಲು ನಿಂತ ರಾಷ್ಟ್ರಕ್ಕಾಗಿ ಟೀಪೂಸುಲ್ತಾನರು 40,000 ಮಂದಿಯನ್ನು ಮಾತ್ರ ಉಳಿಸಿಕೊಂಡರು. ಅವರ ಅಂತ್ಯಕಾಲಕ್ಕೆ ಈ ಸಂಖ್ಯೆಯು 69,000ಕ್ಕೆ ಏರಿತು. ದಿವಾನ್ ಪೂರ್ಣಯ್ಯನವರು 1799ನೆ ಯಿಸವಿ ಡಿಸೆಂಬರು ಮಾಹೆಯಲ್ಲಿ 2270 ಮಂದಿ ಬಾರಿನವರನ್ನು ಮಾತ್ರ ನೌಕರಿಯಲ್ಲಿಟ್ಟುಕೊಂಡರು. ಸೀಮೆಯು ತಹಬಂದಿಯಮುಖವಾದಾಗ 1802ನೆ ಯಿಸವಿಯ ಅಂತ್ಯಭಾಗದಲ್ಲಿ, 1500 ಮಂದಿ ಸವಾರರು, 3,000 ಬಾರು, 2,500 ಜವಾನರು 12,000 ಕಂದಾಚಾರದವರು ಇಷ್ಟು ಸಿಬ್ಬಂದಿ ಪೊಕರರಾಗಿತ್ತು. ಅಮೇಲೆ

1803–4ರಲ್ಲಿ ನಡೆದಕಾಳಗದಲ್ಲಿ ಈ ಬಾರಿನ ಸಂಖ್ಯೆಯನ್ನು 8,000ಕ್ಕೆ ಬಡಾಯಿಸಿದರು. ಇದರಲ್ಲಿ ಬಂದು ಗೋಲಂದಾಜು ಪಟಾಲಂ ಸಹ ಸೇರಿತ್ತು. ಈ ಸೈನಿಕರನ್ನೆಲ್ಲ ಪಾಶ್ಚಾತ್ಯರ ಪದ್ಧತಿಯಂತೆ ರಿಜಮೆಂಟು ಗಳಾಗಿ ವಿಂಗಡಿಸಿ 1804ನೆ ಯಿಸವಿಯಲ್ಲಿ ಇವುಗಳಿಗೆ ನೇಪವ್ ಕಮ್ಯಾಂಡೆಂಟರನ್ನು ನೇಮಿಸಿದರು. ಈ ಜನರಿಗೆಲ್ಲ ಬ್ರಿಟಿಷ್ ಇಲಾಖೆಯ ಜನರಂತೆ ದಿರಸು ಕೊಡಲ್ಪಟ್ಟಿತು. ಇಂಗ್ಲಿಷ್ ಕಂಪನಿ ಸ್ಟೋರಿನಿಂದ ಪತ್ಯೇಕ ಸರಬರಾಯಿ ನಡೆಯಿತು. ಇಂಗ್ಲಿಷ್ ಪದ್ಧತಿಯಂತೆ ಡ್ರಿಲ್ ಕ್ರಮವು ಏರ್ಪಟ್ಟಿತು.

8. ಕಂದಾಚಾರದ ಇಲಾಖೆ.—ಕಂದಾಚಾರದ ಇಲಾಖೆಯು ಹಿಂದಿನ ಕಾಲದಲ್ಲಿ ಸೈನ್ಯದ ಸಿಬ್ಬಂದಿಗೆ ಸೇರಿತ್ತು. ಉಳಿದ ಮಹಾಪ್ರಭು ಗಳವರು 12,000 ಮಂದಿಯನ್ನು ಈ ಇಲಾಖೆಗೆ ದಾಖಲ್ಮಾಡಿ ಈ ಪೈಕಿ ಮೈಸೂರು ನಿವಾಸಿಗಳಾದ ಅರ್ಧಪಾಲು ಜನರನ್ನು ವಾರದ ಹೋಬಳಿಯ ವರೆಂತಲೂ, ಸಳಾಂತರದವರಾದ ಉಳಿದ ಅರ್ಧಭಾಗದವರನ್ನು ಪರದೇಶದ ಹೋಬಳಿಯವರೆಂತಲೂ ವಿಂಗಡಿಸಿದ್ದರು. ದೇಶಕೋಶ ಗಳನ್ನು ವಿಸ್ತರಿಸುತ್ತ ಬಂದಹಾಗೆಲ್ಲ ನವಾಬ್ ಹೈದರಲ್ಲಿಖಾನರು ಈ ಸಂಖ್ಯೆಯನ್ನು ಬಡಾಯಿಸಿ 1,10,000 ಮಂದಿಯನ್ನು ಜೊತೆಗೊಳಿಸಿ ಇವರಲ್ಲಿ 50,000 ಜನರನ್ನು ಕಿಲ್ಲೆ ಮುಂತಾದ ಸ್ಥಳಗಳನ್ನು ಭದ್ರಪಡಿಸುವಂತೆ ನೇಮಿಸಿ, ನಿಂತ 60,000 ಮಂದಿಯನ್ನು ದೇಶೀಯ ಸೈನ್ಯದ ಬತ್ತಾಸೆಗಾಗಿ ಇಟ್ಟು ಇವರಲ್ಲಿ ಅರ್ಧಪಾಲು ಜನರಿಗೆ ಸರ್ಕಾರದಿಂದ ಸಂಬಳ ಮುಂತಾದವುಗಳನ್ನು ಕೊಟ್ಟು ಉಳಿದ ಅರ್ಧಪಾಲಿನವರಿಗೆ ಈ ರಾಜರ ಆಧಿಪತ್ಯಕ್ಕೆ ಸೇರಿದ ಪಾಳೆಯಗಾರರಿಂದ ಭತ್ಯವನ್ನು ಕೊಡಿಸುತ್ತಿದ್ದರು. ಹುಜೂರು ಸನ್ನಿಧಾನದಲ್ಲಿದ್ದವರಿಗೆ ನಗದಿ ಹಣವೂ, ತಾಲ್ಲೂಕು ಪ್ರಾಂತಗಳಲ್ಲಿದ್ದವರಿಗೆ ಕೆಲವುಭಾಗ ನಗದಿಯಾಗಿಯೂ, ಉಳಿದಭಾಗವು ಜವಿನು ಮೊಲಕವಾಗಿಯೂ ತಲಬು ಸಲ್ಲುತ್ತಿತ್ತು. ಟೀಪೂಸುಲ್ತಾನರು ರಾಷ್ಟ್ರವು ಕಡಿಮೆಯಾದ ಮೇಲೆ ಈ ಸೈನ್ಯದಲ್ಲಿ 50,000 ಮಂದಿಯನ್ನು ಮಾತ್ರ ಉಳಿಸಿ ಕೊಂಡನು. ಸನ 1799ನೆ ಯಿಸವಿ ಸಿದ್ಧಾರ್ಥಿ ಸಂವತ್ಸರದಲ್ಲಿ ವಿವಾ

ಪೂರ್ಣಯ್ಯನವರು 20,027ಮಂದಿ ಕಂದಾಚಾರದವರನ್ನು ದಾಖಲ್ಮಾಡಿ ಕೊಂಡು ಕ್ರಮಕ್ರಮವಾಗಿ ಈ ಸಂಖ್ಯೆಯನ್ನು ಇನ್ನೂ ಹೆಚ್ಚಿಸಿ ಮೊಹತ್ತೂ ಬಂದರು. ಈ ಜನರಿಗೆ ಸ್ಥಳದ ತಲಬು ಮೊಹೇಯಾನ ಎರಡು ರೂಪಾಯಿ ಮೊದಲುಗೊಂಡು ಮೂರು ರೂಪಾಯಿಯವರೆಗೂ ಗೊತ್ತುಮಾಡಿ, ಪೂರ್ವಪದ್ಧತಿಗನುಸಾರವಾಗಿ ಅರ್ಧಭಾಗವನ್ನು ನಗದಿ ರೂಪವಾಗಿ ಸಂದಾಯಮಾಡಿ ಮಿಕ್ಕ ಅರ್ಧಭಾಗಕ್ಕೆ ಜವಿಾನನ್ನು ಕೊಟ್ಟಿದ್ದರು. ಇದಲ್ಲದೆ ಅವರವರ ಪ್ರಾಂತಗಳಿಂದ ಹೊರಗೆ ಸೌಕರಿಗೆ ಹೋದಾಗ ಅಂಥವರಿಗೆ ಹೆಚ್ಚಾಗಿ ತಲೆಯೊಂದಕ್ಕೆ ೨½ ರೂಪಾಯಿಯಂತೆ ಭತ್ಯವು ಸಲ್ಲುತ್ತಿತ್ತು. ಸೈನಿಕರ ಮನೆತನದವರು ಪ್ರತಿ ಮನೆಗೂ ಒಬ್ಬೊಬ್ಬನನ್ನು ಸರ್ಕಾರದ ನೌಕರಿಗೆ ಕಳುಹಿಸಿಕೊಟ್ಟು ಅವನನ್ನು ಬದಲಾಯಿಸಬೇಕಾದಾಗ ಅವರವರ ಸಂಸಾರದ ಅನುಕೂಲವಿದ್ದಂತೆ ಜೀಲಿ ಲಿಖನ್ನು ಬದಗಿಸಿ ಇಸಮು ಭರ್ತಿ ಮಾಡುವಂತೆ ನಿಯಾಮಕವಾಗಿತ್ತು. ಇಂತಹ ವಿಸ್ತಾರದಿನಿಂದ ಅವಶ್ಯಕವಾದಾಗ ಕ್ಷಿಪ್ರವಾಗಿ 20,000 ಮಂದಿ ಸೈನಿಕರನ್ನು ಬದಗಿಸಲು ಸೌಲಭ್ಯವಿತ್ತು. ಸರಿಸುಮಾರು ಈಗಿನ ಪೋಲೀಸಿನವರು ಮಾಡುವ ಅನೇಕವಾದ ಕೆಲಸಗಳನ್ನು ಆಗಿನ ಕಂದಾಚಾರದ ಜನರು ನಡೆಸುತ ಅಲ್ಲಲ್ಲಿ ಗ್ರಾಮಗಳನ್ನೂ ಸಣ್ಣ ಸಣ್ಣ ಕೋಟೆಗಳನ್ನೂ ರಕ್ಷಿಸುತಲಿದ್ದರು. ಇವರಲ್ಲಿ ಕೆಲವರು ಸರ್ಕಾರಿ ಅಂಚೆಯ ಟಪಾಲಿನ ಕೆಲಸಕ್ಕೂ ಡೋಲಿ ಮತ್ತು ಮೀನಾಗಳನ್ನು ಸಾಗಿಸುವುದಕ್ಕೂ ನೇಮಕವಾಗಿದ್ದರು. ಪೂರ್ಣಯ್ಯನವರ ದಿವಾಗಿರಿಯ ಅಂತ್ಯಕಾಲದಲ್ಲಿದ್ದ 16,461 ಮಂದಿ ಕಂದಾಚಾರದವರಿಗೆ ಸಾಲಿಯಾನ 1,77,622 ಕಂಠೀರಾಯಿ ವರಹಗಳ ಖರ್ಚು ದಾಖಲಾಗಿತ್ತು.

9. ಮಹಾರಾಷ್ಟ್ರರ ಮೇಲೆ ನಡೆಸಿದ ಯುದ್ಧದಲ್ಲಿ ಮೈಸೂರಿನಿಂದಾದ ಕುಮ್ಮಕ್ಕು; ಬ್ರಿಟಿಷ್ ಪ್ರತಿನಿಧಿಗಳು.—ಮೈಸೂರುದೇಶದಲ್ಲಿ ಸವಾರರೂ ಮತ್ತು ಬಾರಿಲಾಖಿಯ ಜನರೂ ಅಕಾಲದ ಸೇನೆಯ ಬಂದೋಬಸ್ತಿಗನುಸಾರವಾಗಿ ಒಳ್ಳೆಯಸ್ಥಿತಿಯಲ್ಲಿದ್ದರು. ಮಹಾರಾಷ್ಟ್ರರ ಮೇಲೆ 1802–4ನೆಯ ಸನವಿಗಳಲ್ಲಿ ಇಂಗ್ಲೀಷುಸರ್ಕಾರಕ್ಕೆ ಸಂಪ್ರಾಪ್ತವಾದ ಸಂಗ್ರಾಮದಲ್ಲಿ ಸವಾರಿಲಾಖಿಯ ಬಕ್ಷಿ ಬಾದಾಮಿ ಬ್ರಿಟಿಷ್ಪ್ರತಿನಿಧಿಗಳು ಮೈಸೂರು ಫೌಜನ್ನು

ತೆಗೆದುಕೊಂಡುಹೋಗಿ ಎಂತಹ ಅಪಾಯಸಮಯಗಳಲ್ಲಿಯೂ ಹಿಮ್ಮೆಟ್ಟದೆ ಸಾಹಸಮಾಡಿ ಇಂಗ್ಲಿಷ್ ಸಾಹಿನೀನಾಯಕರ ವಿಜಯ ವಿಖ್ಯಾತಿಗೆ ಕಾರಣರಾದರು. ಬಿಷ್ಟೋಪಂತರು ದೇಶಸ್ಥ ಸ್ಮಾರ್ತಬ್ರಾಹ್ಮಣರು. ಹಿಂದೆ ಇವರಪೂರ್ವಿಕರು ಅಹಮ್ಮದ್ನಗರದ ನಿಜಾಂಷಾಹಿ, ಬೀಜಾಪುರದ ಆದಿಲ್‌ಷಾಹಿ, ಈ ರಾಜ್ಯಗಳಲ್ಲಿ ದಳಪತಿಗಳಾಗಿದ್ದು ದಂಡಿನ ಮೆನೆತನದ ವರೆಂದು ಹೆಸರುಪಡೆದಿದ್ದರು ಅನಂತರ ಈ ಮೆನೆತನದವರು ಲಕ್ಷ್ಮೀಶ್ವರವೆಂಬ ಸ್ಥಳವನ್ನು ಸೇರಿದರು. ಅಲ್ಲಿ ಈ ವಂಶದವರಲ್ಲಿ ದಂಡಿನ ರಾಮರಾಯರೆಂಬವರೂ ಅವರಮಕ್ಕಳು ಲಿಂಗೋಪಂತರೆಂಬವರೂ ನವಾಬ್ ಅಂಕುಶಖಾನರಬಳಿ ಮುಖ್ಯ ಸೇನಾನಾಯಕರಾಗಿದ್ದರು. ಈ ಲಿಂಗೋಪಂತರ ಎರಡನೆಯಮಕ್ಕಳು ಬಿಷ್ಟೋಪಂತರು. ಇವರು ಪುಣೆ ರಾಜ್ಯದಲ್ಲಿ ಪ್ರಖ್ಯಾತ ಮಂತ್ರಿಗಳಾಗಿದ್ದ ನಾನಾಫಡ್ನವೀಸರವರ ಬಳಿ ನೌಕರಿಯಲ್ಲಿ ನಿಂತರು. ಅವರ ಅಣ್ಣಂದಿರಿಗೆ ವಿರಹಪಟ್ಟು ರಾಣಿಯಿಂದ ಮರಣವು ಸಂಭವಿಸಲಾಗಿ ಬಿಷ್ಟೋಪಂತರು ಹೋಗಿ ಆ ರಾಣಿಯನ್ನು ನಿಗ್ರಹಿಸಿ ಅಕ್ಕಗಿನ್ನ ರಾಜ್ಯವನ್ನು ತಪ್ಪಿಸಲು ಅದು ಪುಣೆ ಸಂಸ್ಥಾನಕ್ಕೆ ಸೇರಿತು. ಆಗ ಪೇಷ್ವೆಯವರು ಬಿಷ್ಟೋಪಂತರಿಗೆ ಬಾದಾಮಿ ಕೋಟೆಯ ಸರ್ಸುಬೆ ಕೆಲಸವನ್ನಿತ್ತರು. ಈ ಬಾದಾಮಿ ಕೋಟೆಯನ್ನು ನವಾಬ್ ಹೈದರಲ್ಲಿಖಾನರು ಮುತ್ತಿದಾಗ ಬಿಷ್ಟೋಪಂತರು ವ್ಯಕ್ತಪಡಿಸಿದ ಧೈರ್ಯ ಸಾಹಸಗಳನ್ನು ನವಾಬರು ನೋಡಿ ಕೊಂಡಾಡಿ ಆ ಕೋಟೆಯನ್ನು ಸಾಧಿಸಿದ ತರುವಾಯ ಅದರ ಆಧಿಪತ್ಯವನ್ನು ತಮ್ಮ ಪರವಾಗಿ ಬಿಷ್ಟೋಪಂತರಿಗೇ ಕೊಟ್ಟು ಕೆಲವುಕಾಲದಮೇಲೆ ಅವರನ್ನು ಶ್ರೀರಂಗಪಟ್ಟಣಕ್ಕೆ ಬರಮಾಡಿಕೊಂಡು ಅವರಿಗೆ ಸವಾರ್ ಬಕ್ಷಿಹುದ್ದೆಯನ್ನು ಸರಫರಾಜು ಮಾಡಿ ಸಿಲೆದಾರಫೌಜನ್ನೆಲ್ಲಾ ಅವರ ವಶಕ್ಕೆ ಕೊಟ್ಟರು. ನವಾಬರ ಕಾಲಾನಂತರ ಟೀಪೂಸುಲ್ತಾನರು ನಡೆಸಿದ ಜೈತ್ರಯಾತ್ರೆಗಳಲ್ಲೆಲ್ಲಾ ಬಿಷ್ಟೋಪಂತರು ಪುಂಬಾಶ್ರಮಪಟ್ಟು ಅವರಕಾರ್ಯಗಳನ್ನು ಸಾಧಿಸಿದರು ಆದರೂ ಟೀಪೂಸುಲ್ತಾನರಿಗೆ ಇಂಗ್ಲಿಷ್ ಸರ್ಕಾರದಿಂದ 1791–2ನೆ ಯಿಸವಿ ವಿರೋಧಿಕೃತು ಸಂವತ್ಸರದಲ್ಲಿ ಪರಾಜಯವಾದ ಸಂದರ್ಭದಲ್ಲಿ ಗುಮಾನಿಯಮೇಲೆ ಅಪರಾಧಿ ಅನಪರಾಧಿಗಳೆಂಬ ವಿಚಾರ

ವಿಲ್ಲದೆ ಅನೇಕರನ್ನು ಹಿಡಿದು ಸುಲ್ತಾನನು ಶ್ರೀರಂಗಪಟ್ಟಣದಲ್ಲಿ ರಾಘವೇಂದ್ರನಾಯಕನ ಮನೆ ಎಂಬ ಕಾರಾಗೃಹದಲ್ಲಿ ಕೂಡಿದಾಗ ಅವರಲ್ಲಿ ಬಿಷ್ಟೋಪಂತರೂ ಸೇರಿದ್ದರು. ಪ್ರತಿದಿನವಲ್ಲಿಯೂ ಟೀಪೂಸುಲ್ತಾನರು ಹತ್ತು ಇಪ್ಪತ್ತು ಜನರನ್ನು ರಾತ್ರಿಕಾಲದಲ್ಲಿ ಶಿರಚ್ಛೇದಕರೆಂಬ ಆಳುಗಳ ಕೈಲಿ ಕೊಲ್ಲಿಸುತ್ತಿದ್ದರು. ಬಂದುದಿನ ಬಿಷ್ಟೋಪಂತರನ್ನೂ ಕೊಂದು ಹಾಕುವಂತೆ ಆ ಕಾರಾಗೃಹದ ಮುಖ್ಯಸ್ಥನಿಗೆ ಚೀಟಿ ಬಂದುದರಿಂದ ಇವರನ್ನು ಪದ್ಧತಿಯು ಮೇರೆ ಬಂದು ಚಿಕ್ಕಮನೆಯ ಬಳಕ್ಕೆ ಕರೆಯಲು ಅವಕಾಶವಿಲ್ಲದ ಇವರು ಗೋಪ್ಯವಾಗಿ ತಮ್ಮ ದಿಂಬಿನಲ್ಲಿ ಇಟ್ಟು ಕೊಂಡಿದ್ದ ಬಂದು ಚೂರಿಯಿಂದ ತಿವಿದುಕೊಂಡರು. ಈ ವೃತ್ತಾಂತವನ್ನು ಶ್ರುತವಾಗುತಲೆ ಸುಲ್ತಾನರಿಗೆ ಈ ಶೂರನು ದೊರೆತಿಯಲ್ಲವೆಂದು ಈತನಪುಣ್ಯದಿಂದ ಕರುಣಾಕಟಾಕ್ಷವುಂಟಾಗಲು ಅವರು ಆಗ ಈತನನ್ನು ಪ್ರತ್ಯೇಕವಾಗಿಡಿಸಿ ಗಾಯ ಕಟ್ಟಿಸಿ ಪಾಸಿಮಾಡಿಸಿ ಈತನಿಗೆ ಸವಾರಿಲಾಖೆಯ ಬಕ್ಷಿಗಿರಿಯನ್ನಿತ್ತರು. ದೈವಾನುಗ್ರಹಬಲದಿಂದ ಈ ಪರಿಯಾಗಿ ಗಂಡವನ್ನು ತಪ್ಪಿಸಿಕೊಂಡು ಮೆತ್ತಿ ಸನ್ಮಾನವನ್ನು ಸಂಪಾದಿಸಿದ ಬಿಷ್ಟೋಪಂತರು 1799ನೆ ಯಿಸವಿ ಸಿದ್ಧಾರ್ಥಿ ಸಂವತ್ಸರದಲ್ಲಿ ಶ್ರೀರಂಗ ಪಟ್ಟಣವು ಹಲ್ಲಾ ಆಗಿ ಸುಲ್ತಾನರಿಗೆ ಮರಣಸಂಭವಿಸಿದಮೇಲೆ ಜಯ ಕಾಲಿಗಳಾದ ಇಂಗ್ಲಿಷ್ ಸೈನ್ಯಾಧ್ಯಕ್ಷರು ಲಾರ್ಡ್‌ಹ್ಯಾರಿಸ್ ಸಾಹೇಬರವರ ಲ್ಲಿಗೆ ಹೋಗಿ ಅವರ ಅಧೀನರಾಗಲು ಇವರ ಹುದ್ದೆಯನ್ನಿವರಿಗೆ ಆ ಸಾಹೇಬರು ಖಾಯಂಮಾಡಿದರು. ಇವರನ್ನು ವೀರಾಗ್ರಣಿಗಳಾದ ಇಂಗ್ಲಿಷ್ ಫೀಲ್ಡ್‌ಮಾರ್ಷಲ್ ಡ್ಯೂಕ್ ಆಫ್ ವೆಲಿಂಗ್ಟರವರು (English Field Marshall Duke of Wellington) ಬಹುವಾಗಿ ಕೊಂಡಾಡಿ ಇವರಮೊಹನತ್ತಿನ ವಿಷಯವಾಗಿ ಮೇಲ್ಪಟ್ಟ ಅಧಿಕಾರಿಗಳಿಗೆ ಶಿಫಾರಸು ಮಾಡಿದ್ದರಮೇಲೆ ಇವರಿಗೆ ಮೈಸೂರು ಸರ್ಕಾರದ ತಲಬಿಲ್ಲದೆ ಇಂಗ್ಲಿಷ್ ಸರ್ಕಾರದಿಂದಲೂ ಪ್ರತಿವರ್ಷವೂ 12,000 ರೂಪಾಯಿ ವೃತ್ತಿ ಮೊಕರರಾಯಿತು. ಇವರು 1808ನೆಯ ಇಸವಿಯಲ್ಲಿ ಸ್ವರ್ಗಸ್ಥರಾದರು. ಆಗ ಇವರ ತಮ್ಮಂದಿರು ರಾಮೆರಾಯರಿಗೆ ಸವಾರಿಲಾಖೆಯ ಬಕ್ಷಿಗಿರಿ ಮೊಕರರಾಯಿತು.

10. ಇಂಗ್ಲಿಷ್ ಫೌಜಿನಲ್ಲಿ ಉಂಟಾದ ಕಲಹದ ಶಾಂತಿಗೆ ಮೈಸೂರಿನಿಂದ ಸಹಾಯ.— ಮದ್ರಾಸು ರಾಜ್ಯದಲ್ಲಿ ಟೆಂಟು ಕಂಟೂನ್ಮೆಂಟ್ ಎಂದರೆ ಸರಂಜಾಮು ವೈಗೈರೆ ಇಸುಮು ಇಂಗ್ಲಿಷ್ ಮಿಲಟೇರಿ ಯಿಲಾಖೆಯು ಜನರಿಗೆ ಸಲ್ಲುತ್ತಿದ್ದದ್ದು ತಪ್ಪಿದ ಕಾರಣ ಆ ಜನರನೇಕರು ಅತೃಪ್ತರಾಗಿ 1809ನೆ ಯಿಸವಿಯಲ್ಲಿ ಅವಿಧೇಯತೆಯನ್ನು ತೋರ್ಪಡಿಸಿದರು. ಅವರಂತೆ ಶ್ರೀರಂಗಪಟ್ಟಣ ಚಿತ್ರದುರ್ಗಗಳಲ್ಲಿದ್ದ ಇಂಗ್ಲಿಷ್ ಸೇನೆಯವರೂ ಸೇರಿ ಮುಸಲತ್ತು ಮಾಡಿ ಪಿತೂರಿ ನಡೆಸಿದರು. ಆಗ ಶ್ರೀರಂಗಪಟ್ಟಣದ ಮೆಲೊಂದಿಗೆ ಬಂದು ಸೇರುವೆ ಉದ್ದೇಶದಿಂದ ಚಿತ್ರದುರ್ಗದವರು ಅಲ್ಲಿಯ ಬಜಾನೆಯನ್ನು ಲೂಟಿ ಮಾಡಿ 18ಲಕ್ಷ ವರಹಗಳನ್ನು ತಗೆದುಕೊಂಡು ಅಲ್ಲಿಂದ ಪ್ರಯಾಣ ಮಾಡಿದರು. ಈ ಉಭಯ ಸೇನೆಗಳೂ ಸೇರಿ ಕೊಳ್ಳದಂತೆ ಮಾಡುವುದು ತುಂಬಾ ಅವಶ್ಯಕವಾಯಿತು. ಈ ಕೆಲಸ ಕೊಲ್ಕೇಸ್ಕರ ಆಗಿನ ರೆಸಿಡೆಂಟರವರ ಇಷ್ಟಾನುಸಾರವಾಗಿ ದಿವಾನ್ ಪೂರ್ಣಯ್ಯನವರು ಮೈಸೂರಿನ ಸೇನೆಯನ್ನು ಒದಗಿಸಿದರು. ಆಗ ಸವಾರಿಲಾಖೆಯ ಬಕ್ಷಿ ರಾಮುರಾಯರು 3,000 ಸವಾರರು 1,500 ಬೂರು ಇವರೊಡನೆ ಹೋಗಿ ಶ್ರೀರಂಗಪಟ್ಟಣದಲ್ಲಿ ದಂಗೆಗೆ ಸೇರಿದ್ದ ಸೇನೆಯು ಅಲ್ಲಿಂದ ಹೊರಡದಂತೆ ನಿರೋಧಮಾಡಿ, ಬೆಂಗಳೂರಿನಿಂದ ಬಂದ ಇಂಗ್ಲಿಷ್ ಸೇನೆಗ ಸಹಾಯಮಾಡಿ, ಚಿತ್ರದುರ್ಗದಿಂದ ಕೆಪ್ಟ್ ಮಾಕಿಂಟಾಷ್(Capt. Mackintosh)ಎಂಬ ಸರದಾರನು ತಂದ ಫೌಜಿನ ಮೇಲೆ ಕವಿದು ಫ್ರೆಂಚ್‌ರಾಕ್ಸಿನ ಬಳಿಯಲ್ಲಿ ಹಿಂದಿನ ರೆಸಿಡೆಂಟರು ಮೇಜರ್ ವೆಬ್ ಸಾಹೇಬರವರ ಹೆಸರಿನಲ್ಲಿ ದಿವಾನ್ ಪೂರ್ಣಯ್ಯನವರು ಸ್ಥಾಪಿಸಿರುವೆ ಜಾ ಪಕಸ್ತಂಭದ (Memorial) ಮೈದಾನದಲ್ಲಿ ಯುದ್ಧ ಮಾಡಿ ಜಯಪೊಂದಿ ಆ ಸರದಾರರನ್ನು ಕೈಸೆರೆ ಹಿಡಿದು ತಂದು ರೆಸಿಡೆಂಟರವರಿಗೆ ಒಪ್ಪಿಸಿದರು. ಅನಂತರ ಆ ದಂಗೆಯು ಕ್ರಮೇಕ್ರಮವಾಗಿ ಶಾಂತವಾಯಿತು.

11. ಇಂಗ್ಲಿಷ್ ಸೇನೆಯ ನಿವಾಸಸ್ಥಾನ.— ಮೈಸೂರು ದೇಶದ ಸಂರಕ್ಷಣಾರ್ಥವಾಗಿ ಈ ಸೀಮೆಯಲ್ಲಿರುವಂತೆ 1799ನೆ ಯಿಸವಿಯಲ್ಲಿ ನಡೆದ ತಹನಾಮೆಯ ಪ್ರಕಾರ ನಿಷ್ಕರ್ಷೆಯಾದ ಇಂಗ್ಲಿಷ್ ಫೌಜನ್ನು

ಯೆಚಿತ್ಯ ತೋರಿದಂತೆ ಅಲ್ಲಲ್ಲಿ ಎಂದರೆ ಶ್ರೀರಂಗಪಟ್ಟಣ, ಚಿತ್ರದುರ್ಗ, ಬಿದನೂರು, ಸಿರಾ, ಪಾಳೆಗೆಡ, ಈ ಪ್ರಾಂತ್ಯಗಳಲ್ಲಿ ಕೆಲವು ಟೋಲಿಗಳನ್ನಿರಿಸಿ ನಿಂತದ್ದನ್ನೆಲ್ಲ ಅನುಕೂಲವಾದ ಸ್ಥಳಗಳಲ್ಲಿ ತಾಣ ಮಾಡುವಂತೆ ಸೂಚಿಸಿದ್ದರು. ಇವಕ್ಕೆ ಅನುಸಾರವಾಗಿ ಅವಶ್ಯಕತೆ ಕಂಡು ಬಂದಾಗ ಆ ಎಲ್ಲಾ ಸ್ಥಳಗಳಲ್ಲಿ ನಿಲ್ಲಿಸಿದ ಫೌಜು ಹೋಗಲಾಗಿ ಉಳಿದುದನ್ನು ಮೈಸೂರಿನಲ್ಲಿ ಇರಿಸಿತ್ತು. ಕೆಲವು ಕಾಲದ ಮೇಲೆ ಶ್ರೀರಂಗಪಟ್ಟಣ, ಸಿರಾ, ಮುಂತಾದ ಮಿಲಿಟೇರಿ ಸ್ಟೇಷನ್ಗಳಲ್ಲಾ ಕೇವಲ ಅನಾರೋಗ್ಯಕರವಾಗಿ ಕಂಡುಬರಲು ಇಂಗ್ಲಿಷ್ ಸರ್ಕಾರದವರು ಪರ್ಯಾಲೋಚಿಸಿ ತಮ್ಮ ಫೌಜನ್ನೆಲ್ಲಾ 1807ನೆ ಯಿಸವಿಯಲ್ಲಿ ಬೆಂಗಳೂರಿಗೆ ಕಳುಹಿಸಿಕೊಟ್ಟು, ಆನಗರವನ್ನು ತಮ್ಮ ಸೇನೆಗೆ ಮೂಲಸ್ಥಾನವನ್ನಾಗಿ (British Cantonment) ಮಾಡಿದರು.

12. ಪೋಲೀಸು.—ಹಿಂದಿನ ಮಹಾರಾಜರುಗಳ ಆಳಿಕೆಗಳಲ್ಲಿ ಈಗ ಪೋಲೀಸಿನವರಿಗೆ ನೇಮಕವಾಗಿರುವ ಕೆಲಸಗಳನ್ನು ಗ್ರಾಮ ನೌಕರರಾದ ಪಟೇಲರು, ಶ್ಯಾನಭೋಗರು, ತಳವಾರ, ತೋಟಿ, ನೀರಗಂಟಿ, ಕಾವಲ್ಗಾರ, ಕಟ್ಟೆಬಂದಿ, ಹಳೆಪೈಕ, ಉಂಬಳಿದಾರ್, ಅಮೆರುಗಾರರು, ಎಂಬ ಹೆಸರಿನವರು ನಡೆಸುತ್ತಿದ್ದರು. ಈ ಸಿಬ್ಬಂದಿಗೆ ಕಳ್ಳಕೊರಮರೂ ಸೇರಿ ಚಕೋರಿಮೊಲನ್ನು ಪತ್ತೆಮಾಡುವುದರಲ್ಲಿ ಸಹಾಯಕರಾಗಿದ್ದರು. ಹಿಂದಕ್ಕೆ ಅಲ್ಲಲ್ಲಿ ಪಟೇಲರು ಪ್ರಜೆಗಳಿಗೆ ಚಿತಾವಣೆಮಾಡಿ ತೊಂದರೆಯುಂಟುಮಾಡಿದ್ದು ತಿಳಿದುಬರಲು ಮಹಾರಾಜರು ಕಂಠೀರವನರಸರಾಜ ಒಡೆಯರವರು 1654ನೆ ಯಿಸವಿಯಲ್ಲಿ ಅವರ ಅಧಿಕಾರವನ್ನು ಕಡಿಮೆ ಮಾಡಿ ಅವರ ಇನಾಂ ಮುಂತಾದುದನ್ನು ಸರ್ಕಾರಕ್ಕೆ ಸೇರಿಸಿಕೊಂಡಿದ್ದರು. ತರುವಾಯ ಮಹಾರಾಜರು ಚಿಕ್ಕದೇವರಾಜ ಒಡೆಯರವರ ಆಳಿಕೆಯಲ್ಲಿ ಇವುಗಳಲ್ಲಿ ಕೆಲವು ಇನಾಮತಿಗಳು ಬಿಡುಗಡೆಯಾದುವು. ಬಾರ ಬಲೂತಿ ರುಸುಮುಗಳು ಕ್ರಮಬದ್ಧವಾಗಿ ಕ್ರಮಪಟ್ಟವು. ಅನಂತರ ಆಳಿದ ಅವರಪುತ್ರರು ಕಂಠೀರವ ಮಹಾರಾಜರು ಪಟೇಲರ ಇನಾಮನ್ನು ಜಪ್ತಿಮಾಡಿ ಇತರಗ್ರಾಮ ನೌಕರರ ಇನಾಮನ್ನು ಬಹಲಿಯಿಟ್ಟರು. ನವಾಬ್ ಹೈದರಲ್ಲಿಯವರು ಈ ವಿಷಯದಲ್ಲಿ ಬದಲಾವಣೆ

ಯೇನೂಮಾಡಲಿಲ್ಲ, ಸೈನ್ಯವನ್ನು ಹೆಚ್ಚಿಸಿ ಅಲ್ಲಲ್ಲಿ ತಕ್ಕ ಬಂದೋಬಸ್ತು ಉಸ್ತುವಾರಿಯ ವಿಚಾರಣೆಯನ್ನು ಮಾಡಿದರು. ಟೀಪೂಸುಲ್ತಾನರು ಅನೇಕ ಮಂದಿ ಪಟೇಲರು, ಉಂಬಳಿದಾರರು, ಅಮರಗಾರರನ್ನು ಕಡಿಮೆಮಾಡಿ ಹೊಸಬರಿಗೆ ಇನಾಮುಗಳಿಗೆ ಕಂದಾಯ ಹಾಕಿದರು. ಅವರ ಕ್ರೂರದಂಡನೆಯ ಭಯದಿಂದಲೂ ಅವರು ನೇಮಿಸಿದ ಆಸಫರ ಫೌಜು ಎಲ್ಲೆಲ್ಲಿ ಜಾಗರೂಕವಾಗಿರುತ್ತಿದ್ದುದರಿಂದಲೂ ಈ ಪೋಲೀಸಿನ ವಿಚಾರಣೆ ವಿಶೇಷವಾಗಿ ಹದಗೆಡದೆ ಇತ್ತು. ದಿವಾನ್ ಪೂರ್ಣಯ್ಯನವರು ಕಂದಾಚಾರದ ಜನರ ಮೂಲಕ ಬಹಳಮಟ್ಟಿಗೆ ಪೋಲೀಸು ಕೆಲಸಗಳನ್ನು ಮಾಡಿಸಿ ಪಟೇಲರ ಅಧಿಕಾರವನ್ನು ನಾನಾಮುಖವಾಗಿ ತಗ್ಗಿಸಿ ಹಿಂದಿನಿಂದ ಶಿವಾಯಿಜಮಯಲ್ಲಿ ದಾಖಲಾಗಿದ್ದ ಪಟೇಲರ ಇನಾಮತಿಗಳನ್ನು ಸರ್ಕಾರಕ್ಕೆ ಸೇರಿಸಿಬಿಟ್ಟರು.

13. ನ್ಯಾಯವಿಮರ್ಶೆ: ಸಿವಿಲ್ ಬಾಬು.—ಸಿವಿಲ್ (Civil) ಎಂದರೆ ಸ್ವತ್ತುಗಳ ಹಕ್ಕು ಬಾಧ್ಯತೆಯ ಮೊಕದ್ದಮೆಗಳಲ್ಲಿ ಹಿಂದಿನ ಮಹಾಪ್ರಭುಗಳ ಕಾಲದಲ್ಲಿ ಚರ್ಚಾಸ್ಪದವಾದ ಆಸ್ತಿಯ ಬೆಲೆಯೆಷ್ಟೊಬಲಗು ಕಡಿಮೆಯಾಗಿರಲಿ ಅಥವಾ ಭಾರಿಯಾಗಿರಲಿ ವಾದಿಯು ಆಯಾಸ್ಥಳಗಳಲ್ಲಿ ಗಣ್ಯರಾದ ಕೆಲವರನ್ನು ಪಂಚಾಯತರನ್ನಾಗಿ ಪ್ರಾರ್ಥಿಸಿ ಅವರಲ್ಲಿ ತನ್ನ ಅಹವಾಲನ್ನು ತಿಳಿಯಪಡಿಸಲು ಅವರು ಆದರ ವಿಚಾರಣೆಗೆ ಸ್ಥಳ ಕಾಲಗಳನ್ನು ನಿಷ್ಕರ್ಷೆ ಮಾಡಿ ಅಧಿಕಾರಿಗಳ ಮೂಲಕ ಪ್ರತಿವಾದಿ ಮತ್ತು ಸಾಕ್ಷಿಗಳನ್ನು ಬರಮಾಡಿಕೊಂಡು ಸಾಕ್ಷಾತ್ತಾಗಿ ವಿಚಾರಣೆಮಾಡಿ ವ್ಯವಸ್ಥೆ ಮಾಡುತ್ತಿದ್ದರು. ಪಂಚಾಯತರು ಕೊಡುವ ತೀರ್ಮಾನಕ್ಕೆ ತಾವು ಬದ್ಧರಾಗಿರುವೆವೆಂದು ಕಕ್ಷಿಗಾರರು ಒಪ್ಪಿ ಮುಚ್ಚಿಕೆಯನ್ನು ಬರೆದುಕೊಡಬೇಕಾಗಿತ್ತು. ಈರೀತಿ ತೀರ್ಮಾನವಮೇಲೆ ಅಪೀಲಿಗೆ ಅವಕಾಶವಿರಲಿಲ್ಲ ಆದರೆ ವಿಚಾರಣೆಯ ಕಾಲದಲ್ಲಿ ಕಕ್ಷಿಗಾರರೊಳಗೆ ಯಾರಿಗಾದರೂ ಅತೃಪ್ತಿಯುಂಟಾದರೆ ಅವರು ಆಯಾಸ್ಥಳದ ಮುಖ್ಯಾಧಿಕಾರಿಗಳಲ್ಲಿ ತಿಳಿಸುವ ಸ್ವಾತಂತ್ರ್ಯವಿತ್ತು. ಆಗ ಅದೇ ಪಂಚಾಯತರು ಆಸ್ಥಳಾಧಿಕಾರಿಗಳ ಎದುರಿಗೆ ವಿಚಾರಣೆಮಾಡಿ ದಸ್ತೈಜು ಮುಂತಾದ ದಾಖಲೆಯೇನಾದರೂ ಇದ್ದರೆ ತರಿಸಿ ನೋಡಿ ತೀರ್ಮಾನ ಮಾಳುತ್ತಿದ್ದರು.

ವಿಚಾರಣೆಯ ನಡೆವಳಿಕೆಗೆ ಲಿಖಿತಮೊಲಕ ದಾಖಲೆಯಿಡುತ್ತಿರಲಿಲ್ಲ. ತೀರ್ಪಿನ ನಕಲನ್ನು ಕಕ್ಷಿಗಾರರಿಗೆ ಕೊಡುತ್ತಲೂ ಇರಲಿಲ್ಲ. ಆದರೂ ಆಪೀಲಿಗೆ ಪುನಃ ವ್ಯಾಜ್ಯ ಬೆಳೆಯದಂತೆ ಕರಾರುನಾಮೆ ಬರೆಸಿ ಕಕ್ಷಿಗಾರರಿಗೆ ಕೊಡುತ್ತಿದ್ದರು. ಈ ವಿಸರ್ಜನೆಯು ಸಾಮಾನ್ಯವಾಗಿ ಜನರಿಗೆ ತೃಪ್ತಿಕರವಾಗಿತ್ತು. ಬಂದು ಬೇಳೆ ಕಕ್ಷಿಗಾರರು ಯಾರಾದರೂ ತಮ್ಮ ಮುಚ್ಚಳಿಕೆಗೆ ವಿರುದ್ಧವಾಗಿ ಅಮಿಾಲರಲ್ಲಿ ಫಿರ್ಯಾದು ಮಾಡುವುದಾದರೆ ಪಂಚಾಯತರ ತೀರ್ಪಿಗೆ ಮುಂಚೆಯೇ ಅರ್ಜಿತಿಮಾಡಬೇಕಾಗಿತ್ತು. ಅಂತಹ ಮೊಕದ್ದಮೆಗಳಲ್ಲಿ ಅಮಿಾಲರು ಗ್ರಾಮದ ಮುಖಂಡರನ್ನೂ ಅದೇ ಪಂಚಾಯತರನ್ನೂ ತಮ್ಮ ಕಚೇರಿಗೆ ಕರೆಸಿ ತಮ್ಮ ಸಮಕ್ಷದಲ್ಲಿ ವಿಚಾರಿಸಿ ವ್ಯವಸ್ಥೆಮಾಡುತ್ತಿದ್ದರು. ಆಗಲೂ ಲಿಖಿತಮೊಲಕ ದಾಖಲೆಯಿಡುತ್ತಿರಲಿಲ್ಲ. ಆಯಾಸ್ಥಳಗ ಮುಖ್ಯಾಧಿಕಾರಿಗಳನ್ನು ಪೂರ್ವಭಾವಿಯಾಗಿ ವಿಚಾರಿಸಿ ಅವರ ಅಭಿಪ್ರಾಯಗಳನ್ನು ತಿಳಿದುಕೊಳ್ಳದೆ ಮೊಕದ್ದಮೆಗಳನ್ನು ವ್ಯವಸ್ಥೆ ಮಾಡಲು ಅಮಲ್ದಾರರಿಗೆ ಅಧಿಕಾರವಿರಲಿಲ್ಲ. ನವಾಬ್ ಹೈದರಲ್ಲಿ ಮತ್ತು ಟೀಪೂಸುಲ್ತಾನರ ಕಾಲದಲ್ಲಿಯೂ ಬಹಳ ಮಟ್ಟಿಗೆ ಇದೇ ರೀತಿಯಲ್ಲಿ ನಡೆಯುತ್ತಿತ್ತು. ಆದರೆ ಇನಾಮತಿ ವಿಚಾರಣೆಗೂ ಮುಸಲ್ಮಾನರಲ್ಲಿ ಬಂದ ವ್ಯಾಜ್ಯಗಳ ದರ್ಯಾಪ್ತಿಗೂ ಹುಜೂರಲ್ಲಿ ಸದರ್ ಕೋರ್ಟು ಎಂಬುದಾಗಿ ಬಂದು ನ್ಯಾಯಸ್ಥಾನವೇರ್ಪಟ್ಟಿತ್ತು. ಇದಲ್ಲದೆ ಆಯಾ ಮುಖ್ಯನಗರಗಳಲ್ಲಿ ಸರ್‌ಖಾಜಿಗಳಿದ್ದರು. ಅವರಿಗೆ ತಕ್ಸೀರ್ ವಿಚಾರಣೆ ಮಾಡುವ ಅಧಿಕಾರವನ್ನು (Magisterial power)ಕೊಟ್ಟಿತ್ತು. ಅಮಲ್ದಾರರು ಆಸಫರ ಅಧಿಕಾರಕ್ಕೆ ಒಳಪಟ್ಟಿದ್ದರು.

14. ಪೂರ್ಣಯ್ಯನವರ ದಿವಾಗಿರಿಯಲ್ಲಿ ಕೆಲವು ಕಾಲ ನ್ಯಾಯವಿಮರ್ಶೆಗೆ ಪ್ರತ್ಯೇಕವಾದ ಇಲಾಖೆಯಿರಲಿಲ್ಲ. ಮುಖ್ಯಮುಖ್ಯವಾದ ಸ್ಥಳಗಳಲ್ಲಿ ಮುಸಲ್ಮಾನರ ಮೆತಸಂಬಂಧವಾದ ಮೊಕದ್ದಮೆಗಳನ್ನು ವ್ಯವಸ್ಥೆಮಾಡುವುದಕ್ಕೆ ಖಾಜಿಗಳನ್ನು ನೇಮಕಮಾಡಿದ್ದರು. ಹಿಂದೂ ಜನರಲ್ಲಿನಡೆದ ಮೊಕದ್ದಮೆಗಳು ಸಾಮಾನ್ಯವಾಗಿ ಮಾಮೂಲಿನಮೇರೆಗೂ ಮಾಮೂಲು ಗೊತ್ತಿಲ್ಲದಿದ್ದರೆ ಧರ್ಮಶಾಸ್ತ್ರಾನುಸಾರವಾಗಿಯೂ ಫೈಸ

ಲಾಗುತ್ತಿದ್ದವು. ಸಿವಿಲ್ ಬಾಬಿನಲ್ಲಿ ಅಮಲ್ದಾರರಿಗೆ 5 ವರ್ಷಗಳಿಗೆ ಮಿಾರದ ಭೆಲಿ ಬಾಳುವೆ ಸ್ವತ್ತಿನ ವಿಷಯವಾದ ಮೊಕದ್ದಮೆಗಳನ್ನು ಕಚೇರಿಯಲ್ಲಿ ದಾಖಲಿಟ್ಟು ಮಾಡಿ ತೀರ್ಮಾನಿಸಲು ಅಧಿಕಾರ ಕೊಟ್ಟಿತ್ತು. ಭಾರಿಮೊಕದ್ದಮೆಗಳ ವಿಚಾರಣೆಯು ಪಂಚಾಯತರ ಮೂಲಕ ನಡೆಯುತ್ತಿತ್ತು. ಇದರಲ್ಲಿ ಮೊದಲು ವಾದಿ, ತರುವಾಯ ಪ್ರತಿವಾದಿ, ಇವರ ಹೇಳಿಕೆಗಳನ್ನು ತೆಗೆದು ಕೊಂಡು ಅವುಗಳನ್ನು ಎರಡೆರಡಾವೃತ್ತಿ ಅವರವರಿಗೆ ಓದಿಹೇಳಿ ವ್ಯತ್ಯಾಸವೇನಾದರೂ ಇದ್ದುದನ್ನು ಅವರವರು ಸರಿಪಡಿಸಿದ ತರುವಾಯ ಅವರವರ ರುಜುಗಳನ್ನು ಪಡೆದು ಇಬ್ಬರು ಸಾಕ್ಷಿಗಳ ರುಜುವನ್ನೂ ಹಾಕಿಸುವದಲ್ಲದೆ ಒಬ್ಬ ಸರ್ಕಾರದ ಉದ್ಯೋಗಸ್ಥರ ರುಜುವನ್ನೂ ಮಾಡಿಸುವ ಪದ್ಧತಿಯಿತ್ತು. ಕಕ್ಷಿಗಾರರು ಉಭಯತ್ರರೂ ಹಿಂದೂಗಳಾಗಿದ್ದರೆ ಹಿಂದೂ ಜನರನ್ನು ಪಂಚಾಯತರನ್ನಾಗಿ ನೇಮಕ ಮಾಡುತ್ತಿದ್ದರು. ಕಕ್ಷಿಗಾರರು ಭಿನ್ನಜಾತಿಯವರಾಗಿದ್ದರೆ ಆಯಾ ಜಾತಿಯ ಇಬ್ಬರಿಬ್ಬರನ್ನು ಕಲಾಯಿಸಿ ಹೆಚ್ಚಾಗಿ ಐದನೆಯವರನ್ನು ಪ್ರತಿವಾದಿಯ ಜಾತಿಯಿಂದ ನೇಮಿಸುತ್ತಿದ್ದರು. ಪಂಚಾಯತರಲ್ಲಿ ಭಿನ್ನಾಭಿಪ್ರಾಯವುಂಟಾಗದಿದ್ದರೆ ಅಮಲ್ದಾರರು ಪಂಚಾಯತರ ತೀರ್ಪನ್ನೇ ಖಾಯಂಮಾಡಿ ನಡೆವಳಿಕೆಯನ್ನು ಹುಜೂರಿಗೆ ರವಾನಿಸುತ್ತಿದ್ದರು. ಭಿನ್ನಾಭಿಪ್ರಾಯ ಬಂದ ಪಕ್ಷದಲ್ಲಿ ಅಥವಾ ಮೊಕದ್ದಮೆಯಲ್ಲಿ ಕಕ್ಷಗಾರಿದ್ದರೆ ಅಮಲ್ದಾರರುಗಳ ರಿಪೋರ್ಟಿನೊಡನೆ ಆ ನಡೆವಳಿಕೆಯೆಲ್ಲಾ ದಿವಾನರವರ ಸಮ್ಮುಖಕ್ಕೆ ಕ್ರುತವಾಗಿ ಅವರು ರಿಸಿಡೆಂಟು ಸಾಹೇಬರೊಂದಿಗೆ ಆಲೋಚಿಸಿ ಅಖೈರು ತೀರ್ಮಾನವೆನ್ನು ಮಾಡುತಲಿದ್ದರು. ಅವಶ್ಯಕತೆಯಿದ್ದಲ್ಲಿ ದಿವಾನರವರು ತಾವೇ ವಿಚಾರಣೆ ಮಾಡುತಲಿದ್ದರು. ಎಲ್ಲಾ ಮೊಕದ್ದಮೆಗಳಲ್ಲಿಯೂ ಕಕ್ಷಿಗಾರರಿಗೆ ದಿವಾನರವರಲ್ಲಿ ಅಪೀಲ್ ಮಾಡುವ ಸ್ವಾತಂತ್ರ್ಯವಿತ್ತು. ದಿವಾನರವರು ಸಂಸ್ಥಾನದಲ್ಲಿ ಆಗಾಗ್ಗೆ ಸಂಚಾರ ಮಾಡುತಲಿದ್ದ ಕಾರಣ ಇದಕ್ಕೆ ಸಾಲಭ್ಯವಿತ್ತು. ಪೂರ್ಣಯ್ಯನವರು 1805ನೆಯ ಇಸವಿಯಲ್ಲಿ ನ್ಯಾಯವಿಮರ್ಶಗಾಗಿ ಅದಾಲತ್ತು ಕೋರ್ಟು ಎಂಬ ಹೆಸರಿನಲ್ಲಿ ಪ್ರತ್ಯೇಕವಾಗಿ ಒಂದು ನ್ಯಾಯಸ್ಥಾನವನ್ನು ಏರ್ಪಡಿಸಿ ಅದಕ್ಕೆ ಇಬ್ಬರು ಬಕ್ಷಿಗಳನ್ನು ಜಡ್ಜಿಗಳಾಗಿ ನೇಮಿಸಿ

ಇಬ್ಬರು ಶಿರಸ್ತೆದಾರರನ್ನು ಮೊಕರರ್ಮಾಡಿದುದಲ್ಲದೆ ಒಬ್ಬ ಖಾಜಿಯನ್ನೂ, ಒಬ್ಬ ಪಂಡಿತರನ್ನೂ, ಮುತಫರ್ ಖಾತಿನಿಂದ (Mutfarkhat) ಆರುಮಂದಿ ಮಾಬ್ಬರ್ ಜನರನ್ನೂ ಸಹ ಚುನಾಯಿಸಿ ಇವರನ್ನು ಕಮಿಟಿವಾಲಾ ಹಕೀಂ ಅಥವಾ ಪಂಚಾಯತರು ಎಂದು ಮೊಕರರ್ಮಾಡಿದರು. ಈ ಕೋರ್ಟ್‌ನಲ್ಲಿ ವಿಚಾರಣೆಗೆ ಕಾನೂನನ್ನೇನೂ ವಿಧಿಸಲಿಲ್ಲ. ಪಂಚಾಯತರು ಮಾಡುವ ವಿಚಾರಣೆಯು ಜಡ್ಜಿಯವರ ಪ್ರತ್ಯಕ್ಷದಲ್ಲಿ ನಡೆಯುತ್ತಿತ್ತು. ಕಕ್ಷಿಗಾರರ ಮುಚ್ಚಳಿಕೆಯನ್ನು ಪಡೆಯುತ್ತಿರಲಿಲ್ಲ. ವಾದಿಪ್ರತಿವಾದಿಗಳ ಎದುರಿಗೆ ಸಾಕ್ಷಿಗಳನ್ನು ವಿಚಾರಿಸಿ ದಸ್ತಾವೇಜು ದಾಖಲೆಯನ್ನು ನೋಡುತ್ತಿದ್ದರು. ಸಾಕ್ಷಿಗಳಿಂದ ಪ್ರಮಾಣ ಮಾಡಿಸುತ್ತಿರಲಿಲ್ಲ. ಲಿಖಿತಮೂಲಕವಾಗಿ ದಾವಾದಾಖಲೆಯನ್ನು ಪಡೆದು ಅದಕ್ಕೆ ಉತ್ತರ ಪ್ರತ್ಯುತ್ತರಗಳನ್ನು ಬರೆಸುವ ಪದ್ಧತಿಯಿರಲಿಲ್ಲ. ಈ ಕೋರ್ಟ್‌ಗೆ ಮೊದಲು ನೇಮಕವಾದ ಜಡ್ಜಿಗಳು ವ್ಯಾಸರಾಯರು ಮತ್ತು ಅಹಮದ್‌ಖಾನರು. ಇವರಿಬ್ಬರೂ ಸೇರಿ ಮೊಕದ್ದಮೆಗಳನ್ನು ವಿಚಾರಣೆಮಾಡಿ ತೀರ್ಮಾನಿಸುತ್ತಿದ್ದರು. ಸಾಮಾನ್ಯವಾಗಿ ಅಂಶಗಳಲ್ಲಿ ಇವರ ತೀರ್ಮಾನವು ದಿವಾನರವರಿಂದ ಮಂಜೂರಾಗುತ್ತಿತ್ತು. ಭಾರಿಮೊಕದ್ದಮೆಗಳಾದರೆ ಜಡ್ಜಿಗಳು ದಿವಾನರಲ್ಲಿ ಅಲೋಚಿಸಿ ಕ್ರಮವನ್ನು ನಡೆಸುತ್ತಿದ್ದರು. ಈ ಕೋರ್ಟ್‌ನಲ್ಲಿಯೇ ಸ್ವತ್ತಿನ ಹಕ್ಕು ಬಾಧ್ಯತೆ ಮುಂತಾದ ಅಂಶಗಳು (ಸಿವಿಲ್) ಮತ್ತು ತಪ್ಪಿ ತಸ್ಥರ ಸಂಬಂಧವಾದ ಮೊಕದ್ದಮೆಗಳು (ಕ್ರಿಮಿನಲ್) ಇವುಗಳ ವಿಚಾರಣೆ ಯಾಗುವದಲ್ಲದೆ ಮುಲ್ಕಿ ಎಂದರೆ ರೆವಿನ್ಯೂ ಬಾಬಿನಲ್ಲಿ ರೈತರು ಮುಂತಾದವರ ಸಿರ್ಯಾದುಗಳನ್ನು ಸಹ ವ್ಯಾಸರಾಯರು ಕೇಳಿ ವ್ಯವಸ್ಥೆ ಮಾಡುತ್ತಿದ್ದರು. ಮತ್ತು ವ್ಯಾಸರಾಯರು ಅರಮನೆಗೆ ಸೇರಿದ ಷಾಗಿರ್ದಾಪೇಷ್ ಕಛೇರಿಯ ಕೆಲಸವನ್ನೂ, ಸಂದಲ್ ಇಲಾಖೆಯ ಕೆಲಸವನ್ನೂ ಸಹ ನೋಡುತ್ತಿದ್ದರು. ಮತಸಂಬಂಧವಾದ ಅಂಶಗಳನ್ನು ಪಂಚಾಯ್ತರನ್ನು ನೇಮಿಸಿಕೊಂಡು ವ್ಯವಸ್ಥೆ ಮಾಡುತ್ತಿದ್ದರು. ತಾಲ್ಲೂಕುಗಳ ನಡೆವಳಿಕೆಗಳೂ ಹಿಂದಿನ ಮಹಾಪ್ರಭುಗಳವರ ಆಳಿಕೆಗಳಲ್ಲಿ ಮಾಡಿದ ವರ್ಮಾಡಿಗನುಸಾರವಾಗಿಯೇ ಮೇಲೆ ತಿಳಿಸಿರುವಂತೆ

ಪೂರ್ಣಯ್ಯನವರ ಕಾಲದಲ್ಲಿಯೂ ನಡೆದವು. ಅಹಮೆದ್‌ಖಾನರು ಕಾಲಾಧೀನರಾದಮೇಲೆ ವ್ಯಾಸರಾಯರೊಬ್ಬರೇ ಜಡ್ಜಿಯಾಗಿ ಕೆಲಸ ನಡೆಸಿದರು.

15. ಕ್ರಿಮಿನಲ್ ಬಾಬು.—ಗ್ರಾಮಾಂತರಗಳಲ್ಲಿ ಸಾಮಾನ್ಯವಾಗಿ ದನ, ಜಿನಸು, ಬಟ್ಟೆ, ಇವುಗಳ ಕಳವುಮುಂತಾದ ಕ್ರಿಮಿನಲ್ ಬಾಬಿನ ಚಿಲ್ಲರೆ ಮೊಕದ್ದಮೆಗಳನ್ನು ಆಯಾ ಪೇಷವಾರ, ಶ್ಯಾನಭೋಗ, ಗೌಡರುಗಳು ವಿಚಾರಣೆಮಾಡಿ ಅಪರಾಧಿಗಳಿಗೆ ಯಥೋಚಿತವಾಗಿ ದೇಹದಂಡನೆ ಅಥವಾ ಪದರಿತಡೆಯರೂಪವಾದ ಶಿಕ್ಷೆಯನ್ನು ವಿಧಿಸಲು ಅವರಿಗೆ ಅಧಿಕಾರ ಕೊಟ್ಟಿತ್ತು. ಗುಮಾನಿಯ ಮೇಲೆ ಪಹರೆಯಲ್ಲಿ ತಡೆದಿಟ್ಟದ್ದವರನ್ನು ಕದ್ದ ವಸ್ತು ಪತ್ತೆಯಾದ ಮೇಲೆ ಬಿಡುತ್ತಿದ್ದರು. ಈ ಅಂಶಗಳಿಗೆಲ್ಲಾ ಅಮಿಾಲರಿಗೆ ಗ್ರಾಮ ನೌಕರರಿಂದ ವರದಿಯಾಗುತ್ತಿತ್ತು. ಖೂನಿ, ದರೋಡೆ, ಮೊದಲಾದ ಭಾರಿ ಮೊಕದ್ದಮೆಗಳಲ್ಲಿ ಗ್ರಾಮದ ಅಧಿಕಾರಿಗಳು ಮೊದಲು ವಿಚಾರಣೆಮಾಡಿ ಖೈದಿಗಳನ್ನು ಸಾಕ್ಷಿಗಳಸಮೇತವಾಗಿ ಅಮಲ್ದಾರರ ಬಳಿಗೆ ಕಳುಹಲು ಅವರು ಶಿಲ್ದಾರರೊಂದಿಗೆ ವಿಚಾರಿಸಿ ಅದರ ಫಲಿತಾಂಶವನ್ನು ತಮ್ಮ ಅಭಿಪ್ರಾಯದೊಡನೆ ಮುಜೂರಿಗೆ ಅರಿಕೆ ಮಾಡಿದ್ದರಮೇಲೆ ಸಾದರವಾಗುವ ಆಜ್ಞೆಗನುಸಾರ ಮರಣದಂಡನೆ ಅಥವಾ ಆಮರಣಾಂತವಾಗಿ ಬೆಟ್ಟದ ಮೇಲಿನ ದುರ್ಗಗಳಲ್ಲಿ ಸೆರೆ, ಅಂಗಚ್ಛೇದ, ಇತ್ಯಾದಿ ದಂಡನೆಗಳನ್ನು ವಿಧಿಸುತ್ತಿದ್ದರು. ಲಿಖಿತಮೂಲಕ ದಾಖಲೆಯೇನನ್ನೂ ಇಡುತ್ತಿರಲಿಲ್ಲ ನವಾಬ್ ಹೈದರಲ್ಲಿ ಮತ್ತು ಟೀಪೂ ಸುಲ್ತಾನರವರ ಕಾಲದಲ್ಲಿ ಈ ಬಾಬಿನಲ್ಲಿ ವಿಶೇಷ ಬದಲಾವಣೆಯೇನೂ ನಡೆಯಲಿಲ್ಲ; ಆದರೆ ಪಜೂರಲ್ಲಿ ಸದರ್ ಕೋರ್ಟೆಂಬ ಒಂದು ನ್ಯಾಯಸ್ಥಾನ ಮೊಕರರಾಗಿ ಅವರಲ್ಲಿ ಮುಸಲ್ಮಾನರಿಗೆ ಅವರ ಮತಪದ್ಧತಿಯ ಮೇರೆಗೆ ಖುರಾನನ್ನು ಅನುಸರಿಸಿ ನ್ಯಾಯವಿಮರ್ಶೆಯಾಗುತ್ತಿತ್ತು. ದಿವಾಣಪೂರ್ಣಯ್ಯನವರು ಖೂನಿ ದರೋಡೆ ಮೊದಲಾದ ಭಾರಿ ಮೊಕದ್ದಮೆಗಳನ್ನು ತಾವು ವಿಚಾರಿಸಿ ಶಿಸ್ತಿಡೆಂಟರವರ ಅಭಿಪ್ರಾಯ ತಿಳಿದು ತೀರ್ಮಾನಿಸುತ್ತಿದ್ದರು. ಖೂನಿ ಅಥವಾ ಸೀಪೆಯ ಸರಹದ್ದಿ

ನಲ್ಲಿ ನಡೆದ ಲೂಟಿ ಇಂತಹ ತಪ್ಪಿತಗಳಿಗಲ್ಲದೆ ಇತರವಾದವೊಕದ್ದ ಮೆಗಳಲ್ಲಿ ದಿವಾನರವರು ಮರಣದಂಡನೆಯನ್ನು ವಿಧಿಸಲಿಲ್ಲ. ಕಳ್ಳವುದರೋಡೆ ಮೊದಲಾದವುಗಳಿಗೆ ಆಯಾ ತಪ್ಪಿತಗಳಸ್ವಭಾವವನ್ನೆರಿತು ಉಚಿತವಾದ ಅವಧಿಯನ್ನು ಕ್ಲೃಪ್ತಮಾಡಿ ಅಪರಾಧಿಗಳಿಗೆ ಶಿಕ್ಷೆಯನು ವಿಧಿಸುತ್ತಿದ್ದರು.

16. ಮುಳ್ಳಿ ಆಡಳಿತ: ಜವಿಾನು ಮೊದಲಾದ ಜಪ್ತಾಬಾಖು.— ಶ್ರೀಮನ್ಮಹಾರಾಜರವರಿಗೆ ಪಟ್ಟಾಭಿಷೇಕವಾದೊಡನೆಯೇ ದಿವಾನ್ ಪೂರ್ಣಯ್ಯನವರು ಅದುವರೆಗೆ ಸರ್ಕಾರಕ್ಕೆ ಬರಬೇಕಾಗಿದ್ದ ಕಂದಾಯ ಮುಂತಾದ ತೆರಿಗೆಯ ಬಾಕಿಯನ್ನೆಲ್ಲಾ ಮೆಜರೆಯಾಗಿ ಬಿಟ್ಟುಕೊಟ್ಟು ಜವಿಾನು ಮತ್ತು ಸಾಯರು ಬಾಬುಗಳಲ್ಲಿ ಹಿಂದಿನ ಮಹಾಪ್ರಭುಗಳವರ ಕಾಲದಲ್ಲಿದ್ದಂತೆಯೇ ತೆರಿಗೆಯನ್ನು ಮಾಖಿಲ್ಮಾಡಿದರು. ಇದರಿಂದ ದೇಶಾಂತರಗತರಾಗಿದ್ದ ಪ್ರಜೆಗಳು ಕ್ರಮೇಕ್ರಮವಾಗಿ ಈ ಸೀಮೆಯಲ್ಲಿ ಅವರವರ ಸ್ಥಾನಗಳಿಗೆ ಸುರಕ್ಷಿತವಾಗಿ ಬಂದು ಸೇರಿಕೊಳ್ಳಲು ಸೌಲಭ್ಯ ವುಂಟಾಯಿತು. ದಿವಾನರೂ, ರೆಸಿಡೆಂಟರೂ, ತಾಲ್ಲೂಕುಗಳಲ್ಲಿ ಸಂಚಾರ ಮಾಡಿ ಅಲ್ಲಲ್ಲಿಯ ವಿದ್ಯಮಾನಗಳನ್ನು ವಿಚಾರಿಸಿ ತಿಳಿದು ಸಾಧ್ಯವಾದ ಮಟ್ಟಿಗೂ ಜನರಿಗೆ ಅನುಕೂಲಗಳನ್ನು ಕಲ್ಪಿಸಿದರು. ಆಗಿನಕಾಲಕ್ಕೆ ಅನುಗುಣವಾಗಿ ಪೂರ್ಣಯ್ಯನವರು ಅಲ್ಲಲ್ಲಿ ಸಾಧ್ಯವಾದಮಟ್ಟಿಗೂ ಜವಿಾನು ಪೈಮೊಯಿಷಿಯಿಂದ ಬೀಜವರಿಯ ಮೇಲೆ ಕಂದಾಯವೆನ್ನು ಠರಾವ್ ಮಾಡಿ ಹಿಂದಕ್ಕೆ ಹೆಚ್ಚಿನ ತೆರಿಗೆಯನ್ನು ಹಾಕಿದ್ದುದರಿಂದ ಬಂಜರಿದ ಜವಿಾನುಗಳ ವಿಷಯದಲ್ಲಿ ವಿಚಾರಣೆಯು ಮೂಲಕ ಮುನಾಸಬು ರಿಯಾಯಿತಿ ಮಾಡಿದರು. ಕೆವಿನ್ಯೂಬಾಬೆಲ್ಲಾ ಅಮೊನಿ ವಿಚಾರಣೆಯಲ್ಲಿತ್ತು. ಕುಷ್ಕಿ ಜವಿಾನಿಗೆ ಅದರಲ್ಲಿ ಆಗುವ ಉತ್ಪತ್ತಿಯು ಮೂರು ಭಾಗಗಳಲ್ಲಿ ಬಂದು ಭಾಗದ ಬೆಲೆ ಎಷ್ಟಾಗುವುದೋ ಅಷ್ಟು ಕಂದಾಯವೆನ್ನು ಕೊಡಬೇಕೆಂತಲೂ ತರಿಜವಿಾನಿಗೆ ಅವರ ಉತ್ಪತ್ತಿಯಲ್ಲಿ ಅರ್ಧವನ್ನು ಧಾನ್ಯರೂಪವಾಗಿ ಸಲ್ಲಿಸಬೇಕೆಂತಲೂ ವಿಧಾಯಕವಾಗಿತ್ತು. ದವಸಕ್ಕೆ ಬದಲಾಗಿ ಆಗಿನ ಸಂವಾಸರಿ ದರದಂತೆ ನಗದಿ ಹಣವೂ ವಸೂಲಾಗುವುದುಂಟು. ಆದರೆ ರೈತರಿಗೂ ಜವಿಾಲರಿಗೂ ಈ ದರದ ವಿಷಯದಲ್ಲಿ ಒಡಂಬಡಿಕೆ

ಯೋಗದ ಪಕ್ಷದಲ್ಲಿ ದವೆಸವೇ ವೆಸೂಲಾಗುತ್ತಿತ್ತು. ಜಮೀನು ತೆರಿಗೆ ಯಲ್ಲಿ ಮೆಸೆಗಂಬಾಯವೂ, ಏರುಗಂಬಾಯವೂ, ದರ ಒಂದು ಹಣದಂತೆ ಸೇರಿತ್ತು. ರೈತರಿಗೆ ಬೇಕಾದರೆ ಮುನಾಸಬು ತಕಾವಿ ಕೊಡುವುದಕ್ಕೂ ಅವರು ಕ್ರಮವಾಗಿ ವ್ಯವಸಾಯ ಮಾಡುತ್ತಾರೆಯೋ ಇಲ್ಲವೋ ಎಂದು ವಿಚಾರಿಸುವುದಕ್ಕೂ ಏರ್ಪಾಡಾಗಿತ್ತು. ಮೆಲೆನಾಡು ಸೀಮೆ, ನಗರ, ಬಿದನೂರು, ಬಳ್ಳಂ (ಮಂಜರಾಬಾದು) ಈ ಪ್ರದೇಶಗಳಲ್ಲಿ ಜಮೀನು ದಾರರಿಗೆ ಹಿಂದಿನ ರಾಜರು ಶಿವಪ್ಪನಾಯಕರ ವಿಸ್ತಾರಂತೆ ನಗದಿ ಕಂದಾಯ ವನ್ನು ಪಾವತಿಮಾಡುವ ಷರತ್ತಿನಿಂದ ಜಮೀನಿನ ಮೇಲೆ ಹಕ್ಕಿತ್ತು. ತಮ್ಮ ತಮ್ಮ ಜಮೀನುಗಳನ್ನು ಅವರವರು ವಂಶಪಾರಂಪರ್ಯವಾಗಿ ಅನುಭವಿಸುತ್ತಿದ್ದರು. ನವಾಬ್ ಹೈದರಲ್ಲಿಖಾನರು 1763ನೆ ಯಿಸವಿ ಯಲ್ಲಿ ನಗರ, ಬಿದನೂರು ಸಂಸ್ಥಾನಗಳನ್ನು ಸಾಧಿಸಿದಾಗ ಅಲ್ಲಿನ ಪ್ರಮು ಖರಾದ ಜಮೀನುದಾರರನ್ನು ಸಮಾಧಾನಗೊಳಿಸಲು ಪ್ರಯತ್ನಿಸಿದರು. ಆದರೂ ಅವರು ಪಿತೂರಿ ಮಾಡಿದುದು ತಿಳಿದುಬರುತ್ತಲೆ ಅವರುಗಳ ಆಯುಧಗಳನ್ನು ಸರ್ಕಾರಕ್ಕೆ ತೆಗೆದುಕೊಂಡು ಈ ಪಿತೂರಿಗೆ ಸೇರಿದ್ದವ ರಲ್ಲಿ ಸುಮಾರು 300 ಮಂದಿಯವರೆಗೂ ಕೊಲ್ಲಿಸಿ ಜಮೀನುದಾರರಿಗೆ ನಡೆಯುತ್ತಿದ್ದ ಅರ್ಧ ಕಂದಾಯದ ರಿಯಾಯಿತಿಯನ್ನು ತಪ್ಪಿಸಿ ಪೂರಾ ಕಂದಾಯವನ್ನು ದಾಖಲ್ಮಾಡಿ ಅವರು ಸೈನ್ಯಕ್ಕೆ ಜನರನ್ನು ಒದಗಿಸಿ ಕೊಡಬೇಕೆಂದಿದ್ದ ಪೂರ್ವಪದ್ಧತಿಯನ್ನು ತಪ್ಪಿಸಿದರು. ಈ ಏರ್ಪಾಡು 1792ನೆ ಯಿಸವಿಯಲ್ಲಿ ಟೀಪೂಸುಲ್ತಾನರಿಗೂ ಮತ್ತು ಇಂಗ್ಲಿಷ್ ಸರ್ಕಾರದವರಿಗೂ ಆದ ತಹನಾಮೆಯ ಕಾಲದವರೆಗೂ ನಡೆಯಿತು. ಆಗ ಸುಲ್ತಾನರಿಗೆ ರಾಷ್ಟ್ರಾವು ಕಡಿಮೆಯಾದ ಕಾರಣ ಅವರು ತಮಗೆ ಉಳಿದ ಸೀಮೆಯಲ್ಲಿ ತೆರಿಗೆಯನ್ನು ಹೆಚ್ಚಿಸಿದರು. ತರುವಾಯ ಪೂರ್ಣಯ್ಯನವರ ಕಾಲದಲ್ಲಿ ಬಿದನೂರು ಜಮೀನುದಾರರು ತಮಗೆ ಶಿವಪ್ಪನಾಯಕರ ವಿಸ್ತಾರಪ್ರಕಾರ ಕಂದಾಯವನ್ನು ಕಡಿಮೆಮಾಡಿ ಸೈನ್ಯಕ್ಕೆ ಜನರನ್ನು ಕುಮ್ಮಕ್ಕು ಕೊಡುವ ಹಕ್ಕನ್ನು ಮತ್ತೆ ಉಂಟು ಮಾಡಿಕೊಡಬೇಕೆಂದು ವಿಜ್ಞಾಪಿಸಿಕೊಳ್ಳಲು ಪೂರ್ಣಯ್ಯನವರು ಆ ಪ್ರಾರ್ಥನೆಯನ್ನು ಅಂಗೀಕರಿಸಲಿಲ್ಲ. ಪೂರ್ಣಯ್ಯನವರು ಮೈಸೂರು

ಸಂಸ್ಥಾನವನ್ನು 120 ತಾಲ್ಲೂಕುಗಳಾಗಿ ವಿಭಾಗಮಾಡಿ ಪ್ರತಿ ತಾಲ್ಲೂಕಿಗೂ ಒಬ್ಬೊಬ್ಬ ಅಮಿಾಲರನ್ನು ನೇಮಿಸಿದರು. ಅವರೆಲ್ಲಾ ಆಯಾ ತುಕಡಿ (ಡಿಸ್ಟ್ರಿಕ್ಟ್) ಸುಬೇದಾರರುಗಳ ಅಧಿಕಾರಕ್ಕೆ ಒಳಪಟ್ಟಿದ್ದರು. ಪ್ರತಿ ತುಕಡಿಯ ಖಜಾನೆಗೂ ಒಬ್ಬೊಬ್ಬ ಗೊಲ್ಲನಿದ್ದನು. ಖಜಾನೆಯು ಬೀಗದಕೈ ಅವನಬಳಿ ಯಿತ್ತು. ಲೆಕ್ಕಕ್ಕೆ ವಿಚಾರಸ್ತದಾರನು ಜವಾಬ್ದಾರನಾಗಿದ್ದನು. ಖಜಾನೆಗೆ ಅಮಲ್ದಾರರ ಮೊಹರಾಗುತ್ತಿತ್ತು. ಈ ಮೂರುಮಂದಿಯೂ ಸೇರಿದಲ್ಲದೆ ಖಜಾನೆಯ ಬಾಗಿಲನ್ನು ತೆರೆಯುತ್ತಿರಲಿಲ್ಲ. ಖಜಾನೆಗೆ ಇಸಾರ್ಗಾಗಿ ಬಂದ ಧನವೆನ್ನೆಲ್ಲಾ ಖಜಾನೆಯ ಸರಾಫನು ಪರೀಕ್ಷೆಮಾಡಿ ನೋಡಿ ಚೀಲಗಳಿಗೆ ತುಂಬಿ ತನ್ನ ಮೊಹರು ಮಾಡುತ್ತಿದ್ದನು. ಖೋಟಾನಾಣ್ಯವೇನಾದರೂ ಕಂಡುಬಂದರೆ ಅದಕ್ಕೆ ಸರಾಫನು ಜವಾಬ್ದಾರನಾಗಿದ್ದನು. ಜಮಿಾನುಬಾಬು ಅಲ್ಲದೆ ಇತರ ವಿಧವಾದ ವೆರಮಾನಗಳಲ್ಲಿ ಫಾರೆಸ್ಟಿನಲ್ಲಿ ಬೆಳೆದ ಗಂಧ, ನಾಗುವಾನಿ, ಮೆರಮುಟ್ಟು, ಆಬಕಾರಿ, ಕೇಂದಿ, ಷರಾಬು, ಗಾಂಜ, ತಂಬಾಕು, ವೀಳೆಯದೆಲೆ, ಅಡಿಕೆಯ ಮೇಲಿನ ಸುಂಕಗಳು, ಇವುಗಳು ಮುಖ್ಯವಾದವುಗಳಾಗಿದ್ದವು. ಲ್ಯಾಂಡ್‌ರೆವಿನ್ಯೂ ಎಂದರೆ ಜಮಿಾನುಬಾಬಿನಲ್ಲಿ ಪೂರ್ಣಯ್ಯನವರ ದಿವಾಣಗಿರಿಯ ಮೊದಲನೆಯ ವರ್ಷದಲ್ಲಿ 59¼ ಲಕ್ಷರೂಪಾಯಿ ಉತ್ಪತ್ತಿಯಾಗಿ ಎರಡನೆಯ ವರ್ಷದಲ್ಲಿ ದೇವರ ತಕ್ಕಮಟ್ಟಿಗೆ ತಹಬಂದಿಗೆ ಬರಲು ಉಪಕ್ರಮವಾದುದರಿಂದ ಉತ್ಪತ್ತಿಯು 65½ ಲಕ್ಷಕ್ಕೆ ಏರಿತು. ತರುವಾಯ ಅವರು ನಡೆಸಿದ ಸೈಮಾಯಿಷಿ ಮುಂತಾದ ವಿಚಾರಣೆಯ ಮೂಲಕ ಹೆಚ್ಚುತ ಬಂದು 1807 ಮತ್ತು 1808–9 ಈ ಯಿಸವಿಗಳಲ್ಲಿ 71½ ಲಕ್ಷ ರೂಪಾಯಿ ಹುಟ್ಟುವಳಿಯಾಗಿ ಅನಂತರ 1809–10ರಲ್ಲಿ 64 ಲಕ್ಷಕ್ಕೂ 1810–11ನೆ ಯಿಸವಿಯಲ್ಲಿ 60½ ಲಕ್ಷಕ್ಕೂ ತಗ್ಗಿತು. ಪೂರ್ಣಯ್ಯನವರ ಕಾರ್ಯದರ್ಶಿಯಲ್ಲಿ ದಸ್ತಾಲಾ ಸರಾಸರಿ ವರ್ಷವೊಂದಕ್ಕೆ 86½ ಲಕ್ಷರೂಪಾಯಿ ಎಲ್ಲಾಬಾಬುಗಳಿಂದಲೂ ಒಟ್ಟು ಹುಟ್ಟುವಳಿಯಾದಂತೆ ತಿಳಿದುಬಂದಿದೆ.

17. ಖರ್ಚಿನ ಬಾಬು.—ಸಂಸ್ಥಾನದ ಒಟ್ಟು ಖರ್ಚಿನಲ್ಲಿ ಇಂಗ್ಲಿಷ್ ಕಂಪೆನಿಯವರಿಗೆ ಸಲ್ಲಬೇಕಾದ ಪಗಡಿ, ಅರಮನೆಯ ಖರ್ಚು, ರಾಜ್ಯ

ಭಾರದ ಸಿಬ್ಬಂದಿ, ಇಲಾಖೆಗಳ ಲವಾಜಮೆ, ಮೆರ್ಯಾದೆ ತಲಬು (Stipends), ಪೆಷ್ಕಸ್, ಛತ್ರ, ದೇವಸ್ಥಾನ, ದರ್ಗಾ ಮುಂತಾದುದರ ಖರ್ಚು; ಕಟ್ಟಡ, ಕೆರೆ, ಕುಂಟೆ, ಕಾಲುವೆಗಳ ಕಾಮಗಾರಿ ಇವು ಮುಖ್ಯವಾದ ಬಾಬುಗಳು. ದಿವಾ ಪೂರ್ಣಯ್ಯನವರಿಗೆ ಸುಮಾರು 500 (ಐದುನೂರು) ಕಂಠೀರಾಯಿ ವರಹವಲ್ಲದೆ ಸಾಲೀಮಾನ ದೇಶದ ಉತ್ಪತ್ತಿಯಲ್ಲಿ ಖರ್ಚೆಲ್ಲವೂ ಕಳದುಉಳಿದ ನಿವ್ವಳ ಜಮಾನಲ್ಲಿ ಕೇಂಪ ಅರ್ಧ ರೂಪಾಯಿಯಂತೆ ರುಸುಂ ಸಹ ಪಾವತಿಯಾಗುತ್ತಿತ್ತು. ಇಲಾಖೆಯ ಸಿಬ್ಬಂದಿಗಳಲ್ಲಿ ಕಾಲಾನುಗುಣವಾಗಿಯೂ ಆಯಾ ಅಧಿಕಾರಿಗಳ ಮರ್ಯಾದೆಗನುಸಾರವಾಗಿಯೂ ಅವರವರಿಗೆ ತಲಬು ಮೂಕರರಾಗಿತ್ತು. ಮುಂಜರಾಯಿ ಬಾಬಿನಲ್ಲಿ ನವಾಬ್ ಹೈದರಲ್ಲಿಖಾನರು ಮತ್ತು ಟೀಪ್ಪುಸುಲ್ತಾನರು ಇವರುಗಳ ಕಾಲದಲ್ಲಿ ದೇವಸ್ಥಾನ ಅಗ್ರಹಾರಾದಿಗಳಿಗೆ 1,93,959 ವರಹವೂ, ಮಠಗಳಿಗೆ 20,000 ವರಹವೂ, ಮಹಮ್ಮದೀಯರ ದರ್ಗಾ ಮುಂತಾದುವುಗಳಿಗೆ 20,000 ವರಹವೂ ಸೇರಿ ಒಟ್ಟು 2,33,959 ವರಹಗಳು ಸಲ್ಲುತ್ತಿದ್ದವು. ಪೂರ್ಣಯ್ಯನವರು ಜಮಾನಿಗೆ ಬದಲಾಗಿ ಸಾಧ್ಯವಾದಮಟ್ಟಿಗೂ ನಗದಿ ಹಣ ಪಾವತಿಯಾಗುವಂತೆ ಏರ್ಪಡಿಸಿ ಹಿಂದೆ ಸರ್ಕಾರಕ್ಕೆ ದಾಖಲಾಗಿದ್ದ ಅನೇಕ ದೇವಾದಾಯ ಬ್ರಹ್ಮಾದಾಯ ಛಟವೊನ್ಯಗಳನ್ನು ಬಹಲ್‌ಮಾಡಿ ಪ್ರಯಾಣಿಕರ ಅನುಕೂಲ್ಯಕ್ಕೋಸ್ಕರ ಅಲ್ಲಲ್ಲಿ ಕೆಲವೆಡೆ ಅನ್ನಸತ್ರಗಳನ್ನು ಏರ್ಪಡಿಸಿದರು. ಒಟ್ಟಿನ ಮೇಲೆ 1803–4ನೆ ಯಿಸವಿಯಿಂದ ಈ ಬಗ್ಗೆ ಸುಮಾರು 57,450 ಲಕ್ಷ ವರಹ ಖರ್ಚು ದಾಖಲಾಯಿತು. ಮಿಲಿಟೀರಿ ಯಿಲಾಖೆಯ ಬಾಬಿನಲ್ಲಿ ಸಾಮಾನ್ಯವಾಗಿ ಸಾಲಿಯಾನ ಅವಶ್ಯಕವಾದ ಖರ್ಚಲ್ಲದೆ ಮೇಲೆ ಹೇಳಿದಂತೆ ಮಹಾರಾಷ್ಟ್ರದೇಶದಲ್ಲಿ ನಡೆದ ಯುದ್ಧಕ್ಕೋಸ್ಕರ ಹೆಚ್ಚಾಗಿ 5 ಲಕ್ಷ ವರಹಗಳು ಬರ್ಚಾಗಿ ಈ ಸೀಮೆಯಿಂದ ಇಂಗ್ಲೀಷ್ ಸರ್ಕಾರದವರಿಗೆ ತೃಪ್ತಿಕರವಾಗಿ ಸಹಾಯವಾಯಿತು.

18. ಮತಪ್ರಮುಖ ಕಾಮಗಾರಿಗಳು.—ಪೂರ್ಣಯ್ಯನವರು ಮೈಸೂರು ರಾಜಧಾನಿಯಲ್ಲಿ ಕೋಟೆಯನ್ನೂ ಅರಮನೆಯಲ್ಲಿ ಕೆಲವು ಭಾಗಗಳನ್ನೂ ಬಡಾವಣೆ ಮಾಡಿಸಿದುದಲ್ಲದೆ ಬೆಂಗಳೂರು ಕೋಟೆಗೂ ಚನ್ನ

ಪಟ್ಟಣದ ಕೋಟೆಗೂ ಆ ಕಾಲದಲ್ಲಿ ಅವಶ್ಯಕವಾಗಿ ಕಂಡು ಬಂದ ರೀತಿಯಲ್ಲಿ ಕಾಮಗಾರಿಗಳನ್ನು ನಡೆಸಿದರು. ಇದಲ್ಲದೆ ಬಹು ಕಾಲದಿಂದಲೂ ಶಿಥಿಲವಾಗಿದ್ದ ಕೆಲವು ಕೆರೆ ಕುಂಟೆ ನಾಲೆ ಮುಂತಾದುವುಗಳನ್ನು ದುರಸ್ತು ಮಾಡಿಸಿ, ಶ್ರೀರಂಗಪಟ್ಟಣದ ಬಳಿಯಲ್ಲಿ ಕಾವೇರೀ ನದಿಯ ಮೇಲೆ ಈಗ ವೆಲೆಸ್ಲಿ ಬ್ರಿಡ್ಜ್ (Wellesley Bridge) ಎಂದು ಕರೆಯುವ ಭಾರಿ ಸೇತುವೆಯನ್ನು ಸಹ ಕಟ್ಟಿಸಿ, ಆ ಪ್ರಾಂತದಿಂದ ಮೈಸೂರು ರಾಜಧಾನಿಗೆ ಕಾವೇರೀ ನದಿಯ ನೀರು ಬರುವಂತೆ ಮಾಡುವುದಕ್ಕೋಸ್ಕರವಾಗಿ ಬಂದು ಕಾಲುವೆಯನ್ನು ತೆಗೆಸಿದರು. ಇದನ್ನು ಪೂರ್ಣಯ್ಯನವರ ನಾಲೆಯೆನ್ನುತ್ತಾರೆ. ಆದರೆ ಇದರಲ್ಲಿ ಅವರು ಸಂಕಲ್ಪಿಸಿದಂತೆ ಜಲ ಪ್ರವಾಹವು ಬರಲಿಲ್ಲ.

19. ಲಾರ್ಡ್ ವೆಲೆಂಷಿಯಾ (Lord Valentia) ಸಾಹೇಬರು ಮೈಸೂರಿಗೆ ಬಂದದ್ದು.*—ಇಂಗ್ಲೆಂಡು ದೇಶದಲ್ಲಿ ಆ ಕಾಲದಲ್ಲಿ ತುಂಬಾ ಐಶ್ವರ್ಯವಂತರಾಗಿ ಮಾನ್ಯ ಮಂಡಲಿಗೆ ಸೇರಿದ್ದ ಲಾರ್ಡ್ ವೆಲೆಂಷಿಯಾ (Lord Valentia) ಎಂಬ ಸರದಾರರು ಅಲ್ಲಲ್ಲಿ ದೇಶ ಸಂಚಾರಮಾಡುತ್ತ ಇಂಡಿಯಾ ದೇಶಕ್ಕೆ ಬಂದು ಕಲ್ಕತ್ತಾ ರಾಜಧಾನಿಯಲ್ಲಿ ಗವರ್ನರ್‌ಜನರಲ್ ಲಾರ್ಡ್ ವೆಲೆಸ್ಲಿಯವರ ಸಂದರ್ಶನವನ್ನು ಮಾಡಿ ಮುಖ್ಯ ಮುಖ್ಯವಾದ ನಗರಗಳನ್ನು ನೋಡುತ್ತ ಮದ್ರಾಸಿಗೆ ಸೇರಿ ಅಲ್ಲಿಂದ ಸನ್ 1804ನೆ ಯಿಸವಿ ಫೆಬ್ರವರಿ 23ನೆಯ ತಾರೀಖಿನಲ್ಲಿ ಪ್ರಯಾಣ ಮಾಡಿ ರಾಯಪೇಲೂರು ಮಾರ್ಗವಾಗಿ ಮೈಸೂರು ಸೀಮೆಗೆ ಬಂದರು. ಅವರು ಮೈಸೂರು ಗಡಿಯನ್ನು ಪ್ರವೇಶಮಾಡುತ್ತಲೆ ದಿವಾನ್ ಪೂರ್ಣಯ್ಯನವರು ಪೂರ್ವ ಭಾವಿಯಾಗಿ ಅವರ ಅಗಸನನ್ನು ಕೋಸ್ಕರ ಸಾದರ್ಪಡಿದ್ದ ಪುಕುಮಿನಂತೆ ಅಲ್ಲಿನ ಸರಹದ್ದಿನ ಕೆಲ್ಲಗಾರರೂ ಅಮಲ್ದಾರರೂ ಆ ಸಾಹೇಬರ ಭೇಟಿ ಮಾಡಿ ಅವರ ಪಾಲಕಿಯನ್ನು ಮುಂದೆ ನಡೆಸುವುದಕ್ಕೆ ಬೆಸ್ತರನ್ನೂ ಅವರ ಸಾಮಾನುಗಳನ್ನು ತರುವುದಕ್ಕೆ ಬೇಕಾದ ಜನರನ್ನೂ ಒದಗಿಸಿಕೊಟ್ಟು ಅವರ ಊಟ ಉಪಚಾರಗಳಿಗೆ ಅವಶ್ಯಕವಾದ ವಿಚಾರಣೆ ಮಾಡಿದರು.

* ಈ ವಿಷಯವನ್ನು ಇಲ್ಲಿ ಆ ಸಾಹೇಬರ ಪ್ರಯಾಣ ವೃತ್ತಾಂತ ಲೇಖನದಿಂದ ಸಂಗ್ರಹಿಸಿದೆ

ಈ ರೀತಿಯಲ್ಲಿ ಪ್ರತಿ ಮಜಲಿನಲ್ಲಿಯೂ ಕ್ರಮವಾಗಿ ಅವರಿಗೆ ಸರಬರಾಯಿ ನಡೆಯಿತು. ಅವರು ಬೆಂಗಳೂರನ್ನು ನೋಡಿ ಅಲ್ಲಿಂದ ಮೆದೂರು ಮಾರ್ಗವಾಗಿ ಶ್ರೀರಂಗಪಟ್ಟಣಕ್ಕೆ ದಯಮಾಡಿಸಿದರು. ಅಲ್ಲಿಗೆ ದಿವಾನರವರ ಕಡೆಯಿಂದ ಹೋದ ಬಚಿ ರಾಯರೂ ಮತ್ತು ಅಲ್ಲಿದ್ದ ಇಂಗ್ಲಿಷ್ ಕಂಪನಿ ಫೌಜಿನ ಅಧ್ಯಕ್ಷರು ಕರ್ನಲ್ ಡಿಮ್ಯೂರ್ (Colonel Delleuron) ರವರೂ ಉಚಿತ ಮರ್ಯಾದೆಗಳೊಡನೆ ಲಾರ್ಡ್‌ವೆಲ್ಲೆಷಿಯೂ ಯುವರನ್ನು ಬರಮಾಡಿಕೊಂಡು ಟಿಪ್ಪೂಸುಲ್ತಾನರವರ ಅರಮನೆಯಲ್ಲಿ ಇಳಿಸಿದರು. ತರುವಾಯ ದಿವಾಪೂರ್ಣಯ್ಯನವರ ಪುತ್ರರು ನರಸಿಂಗರಾಯರು ಬಚಿ ರಾಯರೊಡನೆ ಹೋಗಿ ಲಾರ್ಡ್‌ವೆಲ್ಲೆಷಿಯೂ ಸಾಹೇಬರ ಭೇಟಿ ಮಾಡಿ ಅವರ ಆಗಮನದಿಂದ ಶ್ರೀಮನ್ಮಹಾರಾಜರವರು ತಮಗೆ ಉಂಟಾದ ಆನಂದವನ್ನು ಸೂಚಿಸಿ ಆ ಸರದಾರರ ಕ್ಷೇಮವನ್ನು ವಿಚಾರಿಸಿ ಅವರು ಮೈಸೂರಿಗೆ ದಯಮಾಡಿಸಬೇಕೆಂಬುದಾಗಿ ತಿಳಿಸುವಂತೆ ದಯಪಾಲಿಸಿದ ಆಜ್ಞೆಯನ್ನು ಅವರಿಗೆ ಶ್ರುತಪಡಿಸಿದರು. ಆಗ ದಿವಾನರವರು ಸೇನೆಯೊಂದಿಗೆ ಪರಸ್ಥಳದಲ್ಲಿದ್ದುದರಿಂದ ತಾವೇ ಶ್ರೀರಂಗಪಟ್ಟಣಕ್ಕೆ ಬಂದು ಆ ಸಾಹೇಬರನ್ನು ನೋಡಲು ಅವಕಾಶವಾಗಲಿಲ್ಲವೆಂಬುದನ್ನೂ ಅವರಿಗೆ ನರಸಿಂಗರಾಯರು ತಿಳಿಸಿದರು. ಶ್ರೀರಂಗಪಟ್ಟಣದಿಂದ ಮರುದಿನ ಪ್ರಾತಃಕಾಲ ಹೊರಟು ಲಾರ್ಡ್‌ವೆಲ್ಲೆಷಿಯೂ ಸಾಹೇಬರು ಮೈಸೂರಿಗೆ ಬರುವಾಗ ಮಾಮೂಲಿನಂತೆ ಇಸ್ತೆಕಪಾಲಿನ ಸ್ಥಳಕ್ಕೆ ಉಚಿತ ಮರ್ಯಾದೆಗಳೊಡನೆ ನರಸಿಂಗರಾಯರೂ ಬಚಿ ರಾಯರೂ ಹೋಗಿ ಅವರ ಭೇಟಿ ಮಾಡಿ ಆಗ ಕಾಲೋಚಿತವಾಗಿ ಸಿಂಗರಿಸಿದ ಮೊತ್ತ ಪೇಟೆಯು ಮಾರ್ಗವಾಗಿ ಅವರನ್ನು ಕರೆದುಕೊಂಡು ಬಂದು ದಸಡೆಂಟವರಿಗೋಸ್ಕರ ನಿಯಮಿತವಾಗಿದ್ದ ಬಂಗಲೆಯಲ್ಲಿ ಇಳಿಸಿದರು. ಅವರಿಗೆ ಅಲ್ಲಿ ತಕ್ಕ ಮರ್ಯಾದೆಯೊಡನೆ ಊಟ ಉಪಚಾರಗಳು ನಡೆದುವು.

20. ತರುವಾಯ ಲಾರ್ಡ್‌ವೆಲ್ಲೆಷಿಯಾಯವರು ಶ್ರೀಮನ್ಮಹಾರಾಜರವರ ಸಂದರ್ಶನಾರ್ಥವಾಗಿ ದಯಮಾಡಿಸಿ ಅರಮನೆಯೊಳಕ್ಕೆ ಪ್ರವೇಶಮಾಡಿದಾಗ ಎತ್ತರವಾದ ಬಾಲಖಾನೆಯಲ್ಲಿ ಮಹಾರಾಜರವರು ನವರತ್ನಾಲಂಕೃತವಾದ ದಂತದ ಸಿಂಹಾಸನದಮೇಲೆ ಮುಹೂರ್ತಮಾಡಿ

ದ್ದರು. ಆ ಸಾಹೇಬರು ಇಂಗ್ಲಿಷ್ ಸರದಾರರ ಮಾಮೂಲಿನಂತೆ ಅದಟಿ ಸಲಾಂ ಮಾಡಿ ಖಾವೆಂದರವರ ಎಡಪಾರ್ಶ್ವದ ಕುರ್ಚಿಗಳಮೇಲೆ ತಮ್ಮ ಪರಿಜನರೊಂದಿಗೆ ಕುಳಿತುಕೊಂಡು ಮಹಾಸ್ವಾಮಿಯವರಿಗೆ ವೆಂಶಪಾರಂಪರ್ಯವಾದ ಸಿಂಹಾಸನಪ್ರಾಪ್ತಿಯುಂಟಾದ ವಿಷಯದಲ್ಲಿಯೂ ಅವರ ಮೈತ್ರಿಯಲ್ಲಿ ಬ್ರಿಟಿಷ್ ಜನರಿಗಿರುವ ಭರವಸೆಯ ವಿಷಯದಲ್ಲಿಯೂ ತಮ್ಮ ಸಂತೋಷವನ್ನು ಕ್ಯಾತಪಡಿಸಿದರು. ಅದಕ್ಕೆ ಖಾವೆಂದರವರು ಇದೆಲ್ಲವೂ ಇಂಗ್ಲಿಷ್ ಸರ್ಕಾರದವರಿಂದ ಲಭಿಸಿತೆಂದು ಹೇಳಿ ತಮ್ಮ ಕೃತಜ್ಞತೆಯನ್ನು ಸೂಚಿಸಿದರು. ಮೈಸೂರು ಪಟ್ಟಣದ ವಿಷಯವಾಗಿಯೂ ಮತ್ತು ಅನೇಕವಾದ ಇತರ ಅಂಶಗಳನ್ನು ಕುರಿತೂ ಅವರು ಮಾಡಿದ ಪ್ರಶ್ನೆಗಳಿಗೆಲ್ಲಾ ಮಹಾರಾಜರವರು ಸುಮಾರು 11 ವರ್ಷ ವಯಸ್ಸಿನ ಬಾಲಕರಾದರೂ ಯಾವ ತಡೆಯೂ ಇಲ್ಲದೆ ಕ್ರಮವಾಗಿ ಸದುತ್ತರಗಳನ್ನು ಅಪ್ಪಣೆ ಕೊಟ್ಟರು. ಆಗ ಆ ಸರದಾರರು ರತ್ನಖಚಿತವಾದ ಹಿಡಿಯುಳ್ಳ ಒಂದು ಪಟ್ಟಾಕತ್ತಿಯನ್ನು ನಜರ್ಮಾಡಲು ಖಾವೆಂದರವರು ತಾವು ಕ್ಷತ್ರಿಯ ಕುಲೋತ್ಪನ್ನರಾದ ಕಾರಣ ಇದು ತಮಗೆ ಅಮೂಲ್ಯವೆಂದು ಹೇಳಿ ಅದನ್ನು ಸ್ವೀಕರಿಸಿ ಅದಕ್ಕೆ ಪ್ರತಿಯಾಗಿ ಉತ್ತಮವಾದ ಒಂದು ಮೌಕ್ತಿಕಹಾರ, ಒಂದು ಜೋಡಿ ಚಾಮರ, ಒಂದು ಜೋಡಿ ಬೀಸಣಿಗೆ, ಎರಡು ಶ್ರೀಗಂಧದ ಕೋಲುಗಳು, ಗಂಧದ ಎಣ್ಣೆಯ ಎರಡು ಶೀಷೆಗಳು ಈ ವಸ್ತುಗಳನ್ನು ದಯಪಾಲಿಸಿ ಅವರನ್ನು ಸನ್ಮಾನಿಸಿದರು. ಅನಂತರ ಹಾರ ವೀಳ್ಯ ಮುಂತಾದ ಮರ್ಯಾದೆಗಳೆಲ್ಲಾ ಮಾಮೂಲಿನಂತೆ ನಡೆದಮೇಲೆ ಆ ಸರದಾರರು ಖಾವೆಂದರವರ ಅಪ್ಪಣೆ ಪಡೆದು ಶ್ರೀರಂಗಪಟ್ಟಣದ ಮಾರ್ಗವಾಗಿ ಹಿಂದಿರುಗಿ ಜಿಂಗಳೂರಿಗೆ ಪ್ರಯಾಣ ಮಾಡಿದರು.

21. ಪೂರ್ಣಯ್ಯನವರಿಗೆ ಜಹಗೀರು ಕೊಟ್ಟದ್ದು.—ದಿವಾನ್ ಪೂರ್ಣಯ್ಯನವರು ಮೈಸೂರು ಸಂಸ್ಥಾನದ ದಿವಾನ್‌ಗಿರಿಯನ್ನು ತಮಗೆ ವೆಂಶಪಾರಂಪರ್ಯವಾಗಿ ನಡೆಸಿಕೊಡುವಂತೆ ಮಾಡಬೇಕೆಂದು ಇಂಗ್ಲಿಷ್ ಸರ್ಕಾರವನ್ನು ಕೇಳಿಕೊಂಡರು. ಇದರ ಮೇಲೆ ಆ ದಿವಾನರು ಮೈಸೂರು ಸರ್ಕಾರದ ಕೆಲಸವನ್ನು ತೃಪ್ತಿಕರವಾಗಿ ನಡೆಸಿರುವುದನ್ನು

ನರಿಗಣಿಸಿ ಅವರಿಗೆ ಯಥೋಚಿತವಾಗಿ ಬಂದು ಜಹಗೀರನ್ನು ಕೊಡ ಬಹುದೆಂದು ಇಂಡಿಯಾ ಗವರ್ನಮೆಂಟಿನವರು ತೀರ್ಮಾನಿಸಲು ಅದಕ್ಕನುಸಾರವಾಗಿ ಖಾವೆಂದರವರು ರೆಸಿಡೆಂಟರವರ ಸಲಹೆಯ ಮೇರೆಗೆ ಮೈಸೂರು ಡಿಸ್ಟ್ರಿಕ್ಟಿಗೆ ಸೇರಿದ ಎಳಂದೂರು ಪ್ರಾಂತ್ಯವನ್ನು ಸ್ವ 1807ನೆ ಯಿಸವಿ ಡಿಸೆಂಬರು 27ನೆಯ ತಾರೀಖಿನಲ್ಲಿ ನಡೆದ ದರ್ಬಾರಿನಲ್ಲಿ ದಿವಾಣಪೂರ್ಣಯ್ಯನವರಿಗೆ ಜಹಗೀರಾಗಿ ಅಪ್ಪಣೆ ದಯಪಾಲಿಸಿದರು. ಇದು ಅವರ ಸಂತತಿಯವರಿಗೆ ಪರಂಪರೆಯಾಗಿ ನಡದುಬರುತ್ತಲಿದೆ.

22. ಖಾಸಂದರವರು ಮುದ್ದ ರಾಜ್ಯಭಾರವನ್ನು ಸ್ವೀಕರಿಸಿದ್ದು.—ಸೊರೆಗಳವರಿಗೆ ಬಾಲ್ಯವು ಕಳೆಯುತ್ತ ಬಂದಹಾಗೆಲ್ಲ ಅವರಿಗೆ ರಾಜ್ಯದ ಆಡಳಿತಗಳನ್ನು ತಿಳಿಯಲು ಕುತೂಹಲವು ಹೆಚ್ಚಿ ಆಗಿನ ಸಂದರ್ಭಗಳಲ್ಲಿ ಖಾವೆಂದರವರು ಪ್ರದರ್ಶಿಸಿದ ಪ್ರಜ್ಞೆ, ತಾಳ್ಮೆ, ವಿವೇಕ, ಬುದ್ಧಿ ಕುಶಲತೆ ಇತ್ಯಾದಿ ಸುಗುಣಗಳು ಬ್ರಿಟಿಷ್ ಸರ್ಕಾರದವರಿಗೆ ಮೆಚ್ಚಿಕೆಯನ್ನುಂಟುಮಾಡಿದುವು. ಆಗ ಆ ಸರ್ಕಾರದವರು ಸ್ವ 1811ನೆ ಯಿಸವಿಯಲ್ಲಿ ಮಹಾಸ್ವಾಮಿಯವರು ರೆಸಿಡೆಂಟರವರ ಅನುಮತಿಯಿಂದ ಮುದ್ದುರಾಜ್ಯಭಾರ ವಹಿಸಿದುದನ್ನು ಅನುಮೋದಿಸಿದರು. ಅನಂತರ ಪ್ರಭುಗಳವರು ವೈದಧಕೆಯಲ್ಲಿ ದೌರ್ಬಲ್ಯವನ್ನು ಪಡೆದಿದ್ದ ದಿವಾಣಪೂರ್ಣಯ್ಯನವರ ಮೇಲೆ ಸಂಪೂರ್ಣ ಕಟಾಕ್ಷವಿಟ್ಟು ಅವರ ಪೂರ್ವಾ ತಲಬು 500 ವರಹಗಳನ್ನೂ ಅವರಿಗೆ ಪೆನ್ಷನ್ ಅಪ್ಪಣೆ ದಯಪಾಲಿಸಿದರು.

(ತರುವಾಯ 1812ನೆಯಿಸವಿ ಮಾರ್ಚಿ ಮಾಹೆಯಲ್ಲಿ ದಿವಾಣಪೂರ್ಣಯ್ಯನವರು ಸ್ವರ್ಗಸ್ಥರಾಗಲು ಅವರಿಗೆ ಸಲ್ಲುತ್ತಿದ್ದ 500 ವರಹಗಳನ್ನು ಪ್ರಭುಗಳವರು ಅವರ ಜ್ಯೇಷ್ಠ ಪುತ್ರರು ಅನಂತರಾಯರಿಗೆ ಪೆನ್ಷನ್ನಾಗಿ ಅಪ್ಪಣೆ ದಯಪಾಲಿಸಿದರು.)

ಮೂರನೆಯ ಅಧ್ಯಾಯ.

ದೊರೆಗಳವರ ಖುದ್ದು ದೌಲತ್ತು: ಕ್ರಿ. ಶ. 1811 ರಿಂದ 1881 ರ ವರೆಗೆ.

ದೊರೆಗಳವರ ರಾಜ್ಯಭಾರಕ್ರಮ.—ಶ್ರೀಮನ್ಮಹಾರಾಜರವರು ರಾಜ್ಯಭಾರವನ್ನು ನಡೆಸುವುದರಲ್ಲಿ ಅದಕ್ಕೆ ಸಂಬಂಧಿಸಿದ ವಿಷಯಗಳನ್ನೆಲ್ಲವನ್ನೂ ಚೆನ್ನಾಗಿ ಗ್ರಹಿಸಿ, ರೆಸಿಡೆಂಟರ ಅಭಿಪ್ರಾಯವನ್ನರಿತು, ಸೂಕ್ತಾನುಸಾರ ಪ್ರವರ್ತಿಸುತ್ತ, ಆಯಾ ನೌಕರಿಗಳಿಗೆ ಯೋಗ್ಯರನ್ನು ನೇಮಿಸುತ್ತ ಬಂದರು. ಆಗ ಬಾಳಾಜಿರಾಯರು, ರಾಮೆರಾಯರು, ಗೋವಿಂದರಾಯರು, ಹಿಮ್ಮೆಟ್ಟಾರ್‌ಖಾನರು ಎಂಬೀ ಸರದಾರರು ದೊರೆಗಳವರ ಸನ್ನಿಧಾನದಲ್ಲಿ ಮುಖ್ಯಾಧಿಕಾರಿಗಳಾಗಿದ್ದರು.

2. ಪ್ರಭುಗಳವರು ಪೂರ್ವ ನಿಬಂಧನೆಯುಮೇರೆಗೂ ತಮ್ಮ ಬುದ್ಧಿಪ್ರೌಢತೆಯ ಪ್ರಭಾವದಿಂದಲೂ ದೇಶದಲ್ಲಿ ಪ್ರಜೆಗಳಿಗೆ ಕ್ಷೇಮವನ್ನುಂಟುಮಾಡುವುದಕ್ಕೂ, ಈತಿಬಾಧೆಯನ್ನು ಹೋಗಲಾಡಿಸುವುದಕ್ಕೂ ನಿರ್ವಿಘ್ನವಾಗಿ ರಾಜಕಾರ್ಯಗಳು ನಡೆಯುವುದಕ್ಕೂ ತಕ್ಕಂತೆ ಆಲೋಚಿಸಿ ಅಪ್ಪಣೆಕೊಡಿಸಿದ ವ್ಯವಸ್ಥೆಯಿಂದ 18 ಕಛೇರಿಗಳೂ, 125ಗಡಿ ಎಂದರೆ ತಾಲ್ಲೂಕುಗಳೂ ಮತ್ತು ಈ ಗಡಿಗಳ ಒಟ್ಟು ವಿಚಾರಣೆ ಮಾಡುವುದಕ್ಕೂ ಕೇಸ್ಕರ ಈ ಗಡಿಗಳಲ್ಲಿ ಕೆಲವು ದೂರದಲ್ಲಿರುವುದರಿಂದ ಅಲ್ಲಿಯ ನಡೆವಳಿಕೆಗಳನ್ನು ತಿಳಿಯಲು ಆ ಗಡಿಗಳಿಗೆ ಸವಿಾಪವಾಗಿರುವಂತ 6 ಫೌಜುದಾರಿ (ತುಕಡಿ)ಗಳೂ ಸ್ಥಾಪಿತವಾದುವು.

ಅದರವಿವರ:—

ಕಛೇರಿಗಳು.

1 ದಿವಾಕಛೇರಿ.	5 ಸಂದಲ್‌ಕಛೇರಿ.
2 ಕಿಲ್ಲೆಕಛೇರಿ.	6 ಸವಾರ್‌ಕಛೇರಿ.
3 ಕಟ್ಟೀಕಛೇರಿ.	7 ತೊಷೇಖಾನೆ.
4 ಬಾರ್ಗೀರ್‌ಕಛೇರಿ.	8 ಕವಿಟಕಛೇರಿ.

9 ಫಿರ್ಕಾದುಕಛೇರಿ.
10 ಮೋದೀಖಾನೆ.
11 ಕಂದಾಬಾರಕಛೇರಿ.
12 ಬಾರ್‌ಕಛೇರಿ.
13 ಬಾರಿಗಾಟೆಕಛೇರಿ.
(Body Guards)
14 ದುಬ್ಬಾಂಬಾರಕಛೇರಿ.
15 ಜೆನತೆಕಛೇರಿ.
16 ಅಂಚೆಆಪ್ತಪುಣಲೆಕಛೇರಿ.
17 ಷಾಗಿರ್ದಪೇಷ್ಕಛೇರಿ.
18 ಜಿಲ್ಲೂಕಛೇರಿ.

6 ತುಕಡಿಗಳು ಮತ್ತು 125 ತಾಲ್ಲೂಕುಗಳು :—

ಅಷ್ಟಗ್ರಾಮದ ತುಕಡಿ; ಇದಕ್ಕೆ ತಾಲ್ಲೂಕು 28.

1 ಮಿಟ್ಟಾಶ್ರೀರಂಗಪಟ್ಟಣ.
2 ಮೈಸೂರುಅಷ್ಟಗ್ರಾಮ.
3 ಮೈಸೂರು.
4 ಪಟ್ಟಣಅಷ್ಟಗ್ರಾಮ.
5 ಮಂಡ್ಯ.
6 ಮದ್ದೂರು.
7 ಮಳವಳ್ಳಿ.
8 ಸೋಸಲೆತಲಕಾಡು.
9 ತಾಯೂರು.
10 ನಂಜನಗೂಡು.
11 ಕಳಲೆ.
12 ಹುಲ್ಲಹಳ್ಳಿ.
13 ಪರದನಹಳ್ಳಿ.
14 ಗುಂಡ್ಲುತೆರಕಣಾಂಬಿ.
15 ಹೆಗ್ಗವಾಡಿಪನಕೋಟೆ.
16 ಪುರಪಾಪಟ್ಟಣ.
17 ಟಿಪ್ಪುದಪ್ಪರ.
18 ಎಡತೊರೆ.
19 ಸಾಲಗ್ರಾಮ.
20 ಒಂಕನಕೆರೆ.
21 ಆಲ್ಕೊಗುಪ್ಪೆ.
22 ಮೇಲುಕೋಟೆ.
23 ಕೆರ್ಕ್ಕೀರಿ.
24 ಚನ್ನರಾಯಪಟ್ಟಣ.
25 ನುಗ್ಗಹಳ್ಳಿ.
26 ನಾಗಮಂಗಲ.
27 ಬಳ್ಳೂರು.
28 ಕೆಂಚೆಗೌಡು.

ಬೆಂಗಳೂರು ತುಕಡಿ; ಇದಕ್ಕೆ ತಾಲ್ಲೂಕು 28.

1 ಬೆಂಗಳೂರು.
ಕೃಷ್ಣರಾಜಪುರ, ಯಲಹಂಕ, ಬೇಗೂರು, ಬಿದದಿ, ಹುಳಗೂರು
ಹೋಬಳಿ 2ಕ್ಕೆ ಉತ್ತನಹಳ್ಳಿ, ಕಬ್ಬಿಣದಕಾವಡಿ.
2 ಚನ್ನಪಟ್ಟಣ.
3 ರಾಮನಗರಿ(ಕೊಲ್ಲಾಪಟೆ)
4 ಕಾನಕಾನಹಳ್ಳಿ.
5 ಹಾರೋಹಳ್ಳಿ.

6 ಹುಲಿಯೂರುದುರ್ಗ.
7 ನೆಲಮಂಗಲ.
8 ನಿಜಗಲ್ಲು.
9 ಭೈರವದುರ್ಗ.
10 ಮಾಗಡಿ.
11 ಹೊಸಕೋಟೆ.
12 ಮುಳಬಾಗಿಲು.
13 ಸರ್ಜಾಪುರ.
14 ಕೋಲಾರ.
15 ಬೇತಮಂಗಲ.
16 ಬೂದಿಕೋಟೆ.
17 ಮುಳಬಾಗಿಲು.
18 ಆನೇಕಲ್ಲು.
19 ದೊಡ್ಡಬಳ್ಳಾಪುರ.
20 ಗೌರಿಬಿದನೂರು.
21 ಚಿಕ್ಕಬಳ್ಳಾಪುರ.
22 ದೇವನಹಳ್ಳಿ.
23 ಚಿಂತಾಮಣಿ.
(ಅಂಬಾಜಿದುರ್ಗ)
24 ವಿಜಯಕಾಲಿವಿ.
(ಶ್ರೀನಿವಾಸಪುರ.)
25 ಜಂಗಮಕೋಟೆ.
26 ಗುಡಿಬಂಡೆ.
27 ಶಿಡ್ಲಘಟ್ಟ.
28 ಗುಮ್ಮನಾಯಕನಪಾಳ್ಯ

ಚಿತ್ರದುರ್ಗದ ತುಕಡಿ; ಇದಕ್ಕೆ ತಾಲ್ಲೂಕು 13.

1 ಚಿತ್ರದುರ್ಗ.
2 ಹಿರಿಯೂರು.
3 ಅಣಜಿ.
4 ದಾವಣಗೆರೆ.
5 ಹೊಳಲಕೆರೆ.
6 ಹೊಸದುರ್ಗ.
7 ಮಾಯಿಕೊಂಡ.
8 ಕಣಕುಪ್ಪ.
9 ಬಿಳಿಚೋಡು.
10 ಪುತ್ತೋಡು.
11 ತಳಕು.
12 ದೊಡ್ಡೇರಿ.
13 ಮೊಣಕಾಲ್ಮುರು.

ಮಂಜರಾಬಾದು ತುಕಡಿ; ಇದಕ್ಕೆ ತಾಲ್ಲೂಕು 13.

1 ಮಂಜರಾಬಾದು.
2 ಮಹಾರಾಜನದುರ್ಗ.
3 ನರಸೀಪುರ.
4 ಆರೆಕಲ್‌ಗೂಡು.
5 ಕೃಷ್ಣರಾಜಪೇಟೆ.
6 ಗ್ರಾಮ.
7 ಹಾಸನ.
8 ಬೇಲೂರು.
9 ಬಾಣಾವರ.
10 ಸಕ್ಕರೆಪಟ್ಣ.
11 ಹಾರ್ನಹಳ್ಳಿ.
12 ಗರುಡನಗೆರೆ.
13 ಚಿಕ್ಕಮಗಳೂರು.

ನಗರದ ತುಕಡಿ; ಇದಕ್ಕೆ ತಾಲ್ಲೂಕು 24.

1 ಬೆದನೂರು (ನಗರ).
2 ಅನಂತಪುರ.
3 ಶಿವಮೊಗ್ಗೆ.
4 ಹೊಳೆಹೊನ್ನೂರು.
5 ಕಡೂರು.
6 ಅಜ್ಜಂಪುರ.
7 ತರೀಕೆರೆ.
8 ಕಡೂರು.
9 ಚನ್ನಗಿರಿ.
10 ಬಸವಾಪಟ್ಟಣ.
11 ಹೊಳೆದುರ್ಗ.
12 ಮಂಜಗದ್ದೆ.
13 ಶಿಕಾರಿಪುರ.
14 ಉಡುಗಣಿ.
15 ಜಂಬಳಿಸವಟ್ಟಿ.
16 ಸೊರಬ.
17 ಲಕ್ಕುವಳ್ಳಿ.
18 ಬನವಾಸಿ.
19 ಯೆಗಟಿ.
20 ಬಿದರಹೊಸ್ಕೊಪ್ಪ.
21 ಕೊಪ್ಪ.
22 ಚಂದ್ರಗುತ್ತಿ.
23 ಇಕ್ಕೇರಿಸಾಗರ.
24 ಹರಿಹರ.

ಮದ್ದಗಿರಿ ತುಕಡಿ; ಇದಕ್ಕೆ ತಾಲ್ಲೂಕು 19.

1 ಮದ್ದಗಿರಿ.
2 ಮಿಡಗೇಶಿ.
3 ಚನ್ನರಾಯದುರ್ಗ.
4 ಕೊರಟಗೆರೆ.
5 ಮಾಕಳಿದುರ್ಗ.
6 ತುಮಕೂರು.
7 ದೇವರಾಯದುರ್ಗ.
8 ಹೆಬ್ಬೂರು.
9 ತುರುವೇಕೆರೆ.
10 ಕಡಬು.
11 ಗುಬ್ಬಿ.
12 ಶೀರ್ಥ.
13 ಕಂದಿಕೆರೆ.
14 ಚಿಕ್ಕನಾಯಕನಪಳ್ಳಿ.
15 ಬೂದಿಹಾಳು.
(ಶ್ರೀರಾಮಪಟ್ಟಣ)
16 ಹೊನ್ನವಳ್ಳಿ.
17 ಪಾವಗಡ.
18 ಹಾಗಲವಾಡಿ.
19 ನಿಜಗಲ್ಲು.

ಇದಲ್ಲದೆ ಸರಸಾಯರು 5.

1 ದಾರುಲ್ ಸಲ್ತನತ್ (ಮೈಸೂರು ರಾಜಧಾನಿ) ಕೊತ್ವಾಗಾಲಿಂದ ಕೂಡಿದ ಸಾಯರು.

1 ಅತ್ತಿಗುಪ್ಪೆಸರಸಾಯರು.

2 ನಗರಕ್ಕೆ ಸೇರಿದ ಸರಸಾಯರು.

1 ಚಿಕ್ಕಬಳ್ಳಾಪುರದ ತುಕಡಿಗೆ ಸೇರಿದ ಸರಸಾಯರು.

ಹೀಗೆ ವಿಂಗಡಿಸಿದ 125 ತಾಲ್ಲೂಕುಗಳಲ್ಲಿ ಪ್ರತಿತಾಲ್ಲೂಕಿಗೂ ಒಬ್ಬ ಸುಬೇದಾರ, ಒಬ್ಬ ಪೇಷ್ಕಾರ, ಇಬ್ಬರು ಶಿರಸ್ತೆದಾರರು ಮತ್ತು ಗುಮಾಸ್ತೆ, ಮುನಷಿ ಮುಂತಾದ ಹಲವರು ಲೆಕ್ಕವವರು, ಓಲೆಕಾರ ಜನರಿಗೆ ಗೊತ್ತಾಗಿ ಒಬ್ಬ ಕಿಲ್ಲೆದಾರ, ಠಾಣಾದಾರ, ಮತ್ತು ಕಂಡು ಕೇಳಿದ ವರ್ತಮಾನಗಳನ್ನು ಬರೆಯತಕ್ಕ ಅಂಚೆ ಊಳಿಗದವರಿಗೆ ಗೊತ್ತುಗಾರನಾಗಿ ಒಬ್ಬ ಅಂಚೆಮುತ್ಸದ್ದಿ, ಕೊತ್ವಾಲ್‌ಚಾವಡಿ ಮೊದಲಾದ ಹಲವು ಜಾವಣಿಗಳು, ಆಯಾ ಗ್ರಾಮದ ಪ್ರಜೆಗಳಿಗೆ ಗೊತ್ತುಗಾರರಾಗಿ ಗೌಡ, ಶ್ಯಾನುಭೋಗ, ಶೇಕದಾರರು, 6 ತುಕಡಿಗಳಿಗೂ 6 ಫೌಜುದಾರರು, ಅವರ ಕಛೇರಿಗಳಿಗೆ ಶಿರಸ್ತೆದಾರ, ಗುಮಾಸ್ತೆ, ಮುನಷಿ ಮುಂತಾದ ಜನರು ಈ ರೀತಿ ತಕ್ಕ ಸಿಬ್ಬಂದಿಯನ್ನು ಖಾಯಂದರು ಅಪ್ಪಣೆ ದಯಪಾಲಿಸಿ, ಸರ್ಕಾರಕ್ಕೆ ಹಣವು ಕಾಲಕಾಲಕ್ಕೆ ಸರಿಯಾಗಿ ಬರುವಂತೆ ನಿಬಂಧನೆ ಮಾಡಿದರು. ಈ ಪ್ರಕಾರ ಪೂರ್ವಕ್ಕಿಂತಲೂ ಅತಿಶಯವಾಗಿ ದೇಶದಲ್ಲೆಲ್ಲ ವ್ಯವಸ್ಥೆ ಮಾಡಿ ಬಳಿಕ ತಮ್ಮ ಸೇನೆಯನ್ನು ವಿಭಾಗಮಾಡಿ ಅದು ದೇಶಸಂರಕ್ಷಣಾರ್ಥವಾಗಿ ಆಯಾ ಗಡಿಗಳಲ್ಲಿಯೂ ಆರು ಫೌಜು ಕಛೇರಿಗಳಲ್ಲಿಯೂ ಇರುವಂತೆ ನೇಮಕ ಮಾಡಿದರು.

3. ಅರಸುಗಳು ಮುಂತಾದವರಿಗೆ ಮಾಡಿದ ಏರ್ಪಾಡು.—ಪರಮದಯಾಶಾಲಿಗಳಾದ ದೊರೆಗಳವರು ತಮ್ಮ ಬಂಧುಜನಗಳು ಸುಲ್ತಾನರ ಬಾಧೆಯಿಂದ ಜೀವನಕ್ಕಿಲ್ಲದೆ ಕಷ್ಟಪಡುತ್ತಿರುವರೆಂಬುದನ್ನು ತಿಳಿದು ಅವರು ಎಲ್ಲೆಲ್ಲಿದ್ದಾರೆಂದು ವಿಚಾರಿಸಿ, ದೇಶಾಂತರಗಳಲ್ಲಿ ವಾಸ ಮಾಡಿಕೊಂಡು ದೀನರಾಗಿ ತುಂಬಾ ದರಿದ್ರರಾಗಿರುವ ಅರಸುಗಳನ್ನೂ ಕುಮಾರರುಗಳನ್ನೂ ಕರೆತರಿಸಿ ಅವರುಗಳನ್ನು ವಿದ್ಯಾಯುಕ್ತರನ್ನಾಗಿಯೂ ಆಚಾರವಂತರನ್ನಾಗಿಯೂ ಮಾಡಿಸಿ ಅವರುಗಳಿಗೆ ಮನೆಗಳನ್ನು ಕೊಟ್ಟು ಸಂಬಳಗಳನ್ನು ಗಂಟುಮಾಡಿ ಉಪನಯನ ವಿವಾಹಾದಿಗಳನ್ನು ಮಾಡಿಸಿ ಅಮೂಲ್ಯ ವಸ್ತ್ರಾಭರಣಗಳನ್ನೂ ಗ್ರಾಮ ಭೂಮಿಗಳನ್ನೂ ಕೊಟ್ಟು ವದ್ದಲ್ಲದೆ ಕೆಲವು ಜನರಿಗೆ ಅಧಿಕಾರಗಳನ್ನೂ ಸಹ ದಯಪಾಲಿಸಿ ಸಂ

ರಕ್ಷಣೆ ಮಾಡಿದರು. ಹೀಗೆಯೇ ಹಿಂದೆ ಉನ್ನತಸ್ಥಿತಿಯಲ್ಲಿದ್ದು ತದು ವಾಯ ನಿರ್ಗತಿಕರಾದ ಇತರ ವಂಶಸ್ಥರನೇಕರಿಗೆ ಯಥೋಚಿತವಾಗಿ ಪ್ರೋತ್ಸಾಹವಿತ್ತು ಅವರವರ ಬುದ್ಧಿಶಕ್ತಿತಾರತಮ್ಯಾನುಸಾರವಾಗಿ ಅವರವರಿಗೆ ಉದ್ಯೋಗಗಳನ್ನಿತ್ತು ಉದ್ಧಾರಮಾಡಿದಂತೆಯೂ ತಿಳಿಯಬರುತ್ತೆ.

4. ದೊರೆಗಳವರು ಬೆಂಗಳೂರಿಗೆ ಸವಾರಿ ಬಿತ್ತೈಸಿದ್ದು.—ಸ್ವ 1811ನೆ ಯಿಸವಿ ಅಕ್ಟೋಬರ್ ತಿಂಗಳಲ್ಲಿ ಖಾವೆಂದರು, ರೆಸಿಡೆಂಟರು ಆನರೆಬಲ್ ಮೆಟ್ಕಾಫ್ ಸಾಹೇಬರವರ ಸಮೇತವಾಗಿ ಬೆಂಗಳೂರಿಗೆ ಪ್ರಯಾಣ ಬೆಳೆಯಿಸಿದರು. ಆಗ ಐದ್ ಮೈಸೂರು ಫೌಜು ನಾಲ್ಕುಸಾವಿರ ಬಾರು ಮಂಥೋಚಿತವಾಗಿ ಸವಾರರು ಸಹ ಸಂಗಡ ಹೊರಗಿದ್ದರು. ಅಲ್ಲಿ ನಗರವನ್ನು ಪ್ರವೇಶಿಸುವಾಗ ಒಂದು ಪಾರ್ಶ್ವದಲ್ಲಿ ಎರಡು ರಿಜಿಮೆಂಟ್ ಬ್ರಿಟಿಷ್ ಕ್ಯಾವಲ್ರಿ (British cavalry) ಎಂದರೆ ಕುದುರೆ ಸವಾರರೂ ಮತ್ತೊಂದು ಪಾರ್ಶ್ವದಲ್ಲಿ ಐದು ರಿಜಿಮೆಂಟ್ ಇನ್‌ಫೆಂಟ್ರಿ (Infantry) ಎಂದರೆ ಸಿಪಾಯಿಗಳೂ ಜಾಸ್ತಿ ಸವಾರಿಯೊಂದಿಗೆ ಬಂದು ಖಾವೆಂದರಿಗೆ ಕ್ರಮವಾಗಿ ತೋಪ್ಗಳುಮುಂತಾದ ಮರ್ಯಾದೆಗಳು ನಡೆದುವು. ಅದೇ ತಿಂಗಳು 14ನೆಯ ತಾರೀಖಿನಲ್ಲಿ ದೊರೆಗಳವರು ಕುದುರೆ ಜೂಜನ್ನು ಪರಾಂಬರಿಸಲುದಯಮಾಡಿದಾಗ ಅವರಿಗೋಸ್ಕರ ಅನೇಕ ಜನ ಇಂಗ್ಲೀಷ್ ಸುದಾರರೂ, ಭಾರಿ ಉದ್ಯೋಗಸ್ಥರೂ, ಮುಖಂಡರಾದ ಇತರ ಪ್ರಜೆಗಳೂ ಸೇರಿ ರಮಣೀಯವಾದ ಒಂದು ನೋಟದ ಸ್ಥಾನ (Stand) ವನ್ನು ನಿರ್ಮಿಸಿ ಅಲ್ಲಿಗೆ ಖಾವೆಂದರನ್ನು ಉಚಿತ ಮರ್ಯಾದೆಗಳೊಡನೆ ಬರಮಾತಿಕೊಂಡು ಸನ್ಮಾನಿಸಿದರು. ಮೂರನೆಯದಿನ 15 ನೆಯ ತಾರೀಖಿನಲ್ಲಿ ಖಾವೆಂದರು ಕೋಟೆಯ ಅವಮನೆಯಲ್ಲಿ ದರ್ಬಾರುಮಾಡಿ ಅಲ್ಲಿ ಅನೇಕಜನ ಇಂಗ್ಲೀಷ್ ಸುದಾರರನ್ನೂ, ಅವರ ಸ್ತ್ರೀಜನರನ್ನೂ ಮರ್ಯಾದೆಯಿಂದ ಸತ್ಕರಿಸಿದರು. ತರುವಾಯ ಖಾವೆಂದರು ಇಂಗ್ಲೀಷ್ ಸೇನೆಯ ಪ್ರತಿಯೊಂದು ಯೂರೋಪಿಯರ್ ರಿಜಿಮೆಂಟಿಗೂ ಒಂದೊಂದು ಸುವಿರ ವರಹವನ್ನೂ ಪ್ರತಿಯೊಂದು ನೇಟಿವ್ ರಿಜಿಮೆಂಟಿಗೂ ಐದುನೂರು ವರಹವನ್ನೂ ಬಹುಮಾನವಾಗಿ ವಿಧಿಪಾಲಿಸಿದರು.

೯. ಬೆಂಗಳೂರು ಲಷ್ಕರ್.—ಬೆಂಗಳೂರಿನಲ್ಲಿ ಬ್ರಿಟಿಷ್ ಸರ್ಕಾರ ದವರು ಸ್ಥಾಪಿಸಿದ ಲಷ್ಕರ್ ಸ್ಥಾನಕ್ಕೆ ಖಾವಂದರು ಸಂದರ್ಭಾನುಸಾರ ಅವಶ್ಯಕವಾದ ಜಮೀನು ಮುಂತಾದ ಸಹಾಯವನ್ನು ಧಾರಾಳವಾಗಿ ಒದಗಿಸಿಕೊಟ್ಟರು. ಆ ಸಿವಿಲ್ ಮತ್ತು ಮಿಲಿಟರಿಸ್ಟೇಷನ್ (Civil and Military Station) ದಿನೇದಿನೇ ಅಭಿವೃದ್ಧಿಯನ್ನೈದುತ ಬಂತು.

6. ಮೊರಗಳಿವರ ಪೀಕಸಂಚಾರ.—ಬಳಿಕ 1820ನೆ ಯಿಸವಿ ಡಿಸೆಂಬರು ಮೊದಲು 1821ನೆ ಯಿಸವಿ ಮಾರ್ಚಿಯವರೆಗೂ ದೊರೆಗಳವರು ದೇಶಸಂಚಾರ ಬೆಳಯಿಸಿ ಅಷ್ಟಗ್ರಾಮ, ಮಂಜರಾಬಾದು, ನಗರ, ಮೆದ್ದಗಿರಿ ಮುಂತಾದ ಪೈದಾನ ಮತ್ತು ಮೆಲೆನಾಡಿನಲ್ಲಿರುವ ಕೆಲವು ಮುಖ್ಯಸ್ಥಳಗಳನ್ನು ಪರಾಮರ್ಶಿಸಿ ಜನರ ಸ್ಥಿತಿ ತರಗತಿಗಳನ್ನು ನೋಡಿ ಅವರ ಹಾಲ್ ಅಹವಾಲ್ ವಿಚಾರಿಸಿ ಸಾಧ್ಯವಾದ ಮೆಟ್ಟಗೂ ಪ್ರಜಾ ಪ್ರಯೋಜನಾರ್ಹವಾದ ಕಾರ್ಯಗಳನ್ನು ನರವೇರಿಸಿದರು. ಈ ಸಂಚಾರ ಪೂರೈಸಿಕೊಂಡು ಖಾವಂದರು ಮೈಸೂರಿಗೆ ಚಿತ್ತೈಸಿದ ಮೇಲೆ ದಯಪಾಲಿಸಿದ ಅಪ್ಪಣೆಯಂತೆ ಆಗ ಬಕ್ಷಿಯವರಾಗಿದ್ದ ರಜಾಖಾನರೆಂಬವರು ಅರಮನೆಯ ಮುಂಭಾಗದ ಪೂರ್ವದಿಕ್ಕಿನಲ್ಲಿ ಮನೋಹರವಾದ ಸೆಜ್ಜೆ ಎಂಬ ದರ್ಬಾರು ಸ್ಥಾನವನ್ನು ಕಟ್ಟಿಸಿದರು.

7. ಶಿವಮೊಗ್ಗೆಯಲ್ಲಿರುವ ಕೃಪ ರಾಜಪೇಟೆಯು ಆ ನಗರಕ್ಕೆ ಖಾಸ್ ಸವಾರಿ ಚಿತ್ತೈಸಿದ್ದರ ಜ್ಞಾಪಕಾರ್ಥವಾಗಿ ನಿರ್ಮಿತವಾದಂತೆಯೂ ಮತ್ತು ಅದೇ ಸಮಯದಲ್ಲಿ ಅಲ್ಲಿನ ಅಂಬಿಗರು ಖಾಸ್ ಆನೆಗಳನ್ನು ತುಂಗಾನದಿ ದಾಟಿಸಿದಾಗ ಮಾಡಿದ ಮೆಹನತ್ತನ್ನು ಪ್ರಭುಗಳವರು ಚಿತ್ತಕ್ಕೆತಂದು ಅವರಿಗೆ ಯಥೋಚಿತವಾಗಿ ಆ ಕಾಲದಲ್ಲಿ ತೆರಿಗೆಯ ರಿಯಾಯಿತಿಯನ್ನು ಅಪ್ಪಣೆದಯಪಾಲಿಸಿದಂತೆಯೂ ತಿಳಿಯಬರುತ್ತೆ.

8. ನ್ಯಾಯವಿಮರ್ಶೆ: ಸಿವಿಲ್ ಬಾಬ್ತು.—ನ್ಯಾಯನಿರ್ಮೆಯ ಬಾಬಿನಲ್ಲಿ ದೊರೆಗಳವರು ರೆಸಿಡೆಂಟರವರ ಅನುಮತಿಯಿಂದ ಅನೇಕವಾದ ಬದಲಾವಣೆಗಳನ್ನು ಮಾಡಿದರು. ಮೈಸೂರಿನಲ್ಲಿ ಒಂದು ಸದರ್ ಕೋರ್ಟನ್ನು ಹೊಸಬಾಗಿ ಸ್ಥಾಪಿಸಿ ಅದಕ್ಕೆ ಇಬ್ಬರು ಬಕ್ಷಿಗಳನ್ನು ಮುಖ್ಯಾಧಿಕಾರಿಗಳಾಗಿ ನೇಮಕರಾಡಿದರು. ಅದಕ್ಕೆ ಅಧೀನವಾಗಿ

ಮೂರು ಬೇರೆ ಕೋರ್ಟುಗಳನ್ನೇರ್ಪಡಿಸಿ ಪ್ರತಿಯೊಂದಕ್ಕೂ ಇಬ್ಬಿಬ್ಬರು ಹಕೀಮರೆಂಬ ಜೆಸರಿನಿಂದ ಪ್ರೆಸಿಡೆಂಟರನ್ನು ನೇಮಿಸಿದರು. ಈ ನಾಲ್ಕು ಕೋರ್ಟುಗಳಲ್ಲಿ ಮೊದಲನೆಯದಾದ ಸದರ್ ಕೋರ್ಟನಲ್ಲಿ 500 ರೂಪಾಯಿಗೆ ಮೇಲ್ಪಟ್ಟ ಸಿವಿಲ್ ಮೊಕದ್ದಮೆಗಳು ದಾಖಲಾಗಿ ವಿಚಾರಣೆ ನಡೆದು ತೀರ್ಮಾನವಾಗುತ್ತಿತ್ತು; ಮತ್ತು ಈ ಕೋರ್ಟನವರು ಕೆಳಗಿನ ಮೂರು ಕೋರ್ಟನವರ ತೀರ್ಮಾನಗಳನ್ನೂ ತರಿಸಿನೋಡಿ ಅವ್ರಗಳನ್ನು ಮಂಜೂರು ಅಥವಾ ತಿದ್ದುಪಾಟುಮಾಡಿ ಅವರ ಡಿಕ್ರಿಗಳನ್ನು ನೋಡಿ ಅವುಗಳಿಗೆ ತಮ್ಮ ಮೊಹರು ಮಾಡುತ್ತಿದ್ದರು. ಇದು ಹೊರತು ಯಾವ ಡಿಕ್ರಿಯೂ ಜಾರಿಯಾಗುತಿರಲಿಲ್ಲ. ಎರಡನೆಯ ಕೋರ್ಟಿಗೆ 100 ರೂಪಾಯಿಗೆ ಮೇಲ್ಪಟ್ಟು 500 ರೂಪಾಯಿವರೆಗೆ ಸಿವಿಲ್ ಮೊಕದ್ದಮೆಗಳು ಸೇರಿದ್ದವು. ಮೂರನೆಯ ಕೋರ್ಟಿಗೆ 100 ರೂಪಾಯಿಗೆ ವಿುರದ ವ್ಯಾಜ್ಯಗಳನ್ನು ವ್ಯವಸ್ಥೆಮಾಡುವ ಅಧಿಕಾರವಿತ್ತು. ನಾಲ್ಕನೆಯ ಕೋರ್ಟನಲ್ಲಿ ಮೇಜಸ್ಟ್ರೇಟ್ ಮೊಕದ್ದಮೆ ಎಂದರೆ ತಕ್ಸೀರು ಅಪಾದನೆಯಾದವರಿಗೆ ಸಂಬಂಧಿಸಿದ ಮೊಕದ್ದಮೆಗಳು ವ್ಯವಸ್ಥೆಯಾಗುತ್ತಿದ್ದುವು. ಈ ನಾಲ್ಕು ಕೋರ್ಟುಗಳೂ ಒಂದೇ ಸ್ಥಳದಲ್ಲಿದ್ದು ಬೇರೆ ಬೇರೆ ಜಿಲ್ಲೆಗಳ ಅಧಿಕಾರಕ್ಕೆ ಒಳಪಟ್ಟಿದ್ದರೂ ಆಯಾ ಕೋರ್ಟಿಗೆ ಬೇರೆ ಬೇರೆ ಸಿಬ್ಬಂದಿಯು ನೇಮಕವಾಗಿತ್ತು. ಅವುಗಳಲ್ಲಿ ಮದ್ರಾಸು ಸೀಮೆಯ ನ್ಯಾಯವಿಮರ್ಶೆಯ ಕಾನೂನನ್ನು ಅನುಸರಿಸಿ ವಿಚಾರಣೆ ನಡೆಯುತ್ತಿತ್ತು. ಸಾಕ್ಷಿಗಳ ಕೈಯಲ್ಲಿ ಪ್ರಮಾಣಮಾಡಿಸಿ ಅವರ ವಿಚಾರಣೆಯಾಗುತ್ತಿತ್ತು. ವಾದಿಯು ದಾಖಲಮಾಡಿದ ದಾವಾಕ್ಕೆ ಪ್ರತಿವಾದಿಯು ಉತ್ತರವೂ ಅದಕ್ಕೆ ವಾದಿಯು ಜವಾಬೂ ತರುವಾಯ ಪ್ರತಿವಾದಿಯು ಪ್ರತ್ಯುತ್ತರವೂ ಇವುಗಳು ಕೋರ್ಟಿಗೆ ದಾಖಲಾಗುತ್ತಿದ್ದುವು. ಸೂಕದ್ದಮೆಗಳಿಗೆ ಫೀಜು ಪರ್ಹಾಡಾಗಿ ಈ ಬಾಬಿನಿಂದ ವಸೂಲಾದ ಹಣದ ಮೂರು ಪಾಲಿನಲ್ಲಿ ಎರಡು ಪಾಲು ಸರ್ಕಾರಕ್ಕೆ ಜಪ್ತಿಯಾಗಿ ಉಳಿದ ಒಂದು ಪಾಲು ಕಕ್ಷಿಗಾರರ ಕಡೆಯ ವಕೀಲರಿಗೆ ಫೀಜಾಗಿ ಸಲ್ಲುತ್ತಿತ್ತು. ಸದರ್ ಕೋರ್ಟನವರ ಫೈಸಲೆಯ ಮೇಲ ಬೊರೆಗಳವರಲ್ಲಿ ಅಪೀಲು ಮಾಡುವುದಕ್ಕೆ ನಿಯಮವಿಲ್ಲ. ಆದರೂ ಕಕ್ಷಿಗಾರರೇನಾದರೂ ಅವರ

ಅಹುವಾನ್ನು ಮೆಹಾರಾಜರವರ ಸನ್ನಿಧಾನದಲ್ಲಿ ಅರಿಕೆ ಮಾಡಿಕೊಂಡರೆ, ಖಾವಂದರು ನ್ಯಾಯಾಧಿಪತಿಗಳಿಂದ ಸಮಜಾಯಿಷಿ ಕೇಳುತ್ತಿದ್ದರು.

9. ಡಿಕ್ರಿಯಂತೆ ಹಣ ಕೊಡದವರನ್ನು ಅವರು ಸಂದಾಯ ಮಾಡಬೇಕಾದ ಮೊಬಲಗನ್ನು ಪಾವತಿ ಮಾಡುವವರೆಗೂ ಸೆರೆಯಲ್ಲಿಟ್ಟು ಅವರಿಗೆ ಎದುರು ಪಕ್ಷಿಗಾರರಿಂದ ದಿನ 1ಕ್ಕೆ ಬಂದು ಹಣದಂತೆ ಭತ್ಯೆ ಕೊಡಿಸುತ್ತಿದ್ದರು. ಸಾಲಗಾರರು ಸರ್ಕಾರದ ನೌಕರರಾಗಿದ್ದರೆ ಈ ರೀತಿ ನಿರ್ಬಂಧಕ್ಕ ಬದಲಾಗಿ ಡಿಕ್ರಿಯ ಮೊಬಲಗನ್ನು ಅವರ ಅರ್ಧತಲಬಿನ ಜಪ್ತಿಮೂಲಕ ವಸೂಲ್ಮಾಡುತ್ತಿದ್ದರು.

10. ಸದರ್ ಕೋರ್ಟ್‌ಗೆ ಮೊದಲು ಬಾಕರಸಾಹೇಬರು, ಗುಲಾಂಮೊಹಿಯುದ್ದೀನ್ ಮೇಕ್ರಿ ಎಂಬವರು ಬಕ್ಷಿಗಳಾಗಿ ನೇಮಕವಾದರು. ಬಾಕರಸಾಹೇಬರು ಕೆಲಸದಿಂದ ನಿವೃತ್ತರಾದಮೇಲೆ ಕೆಲವು ಕಾಲ ಗುಲಾಂಮೊಹಿಯುದ್ದೀನ್ ಮೇಕ್ರಿಯವರೊಬ್ಬರೇ ಬಕ್ಷಿಯಾಗಿದ್ದರು. ಅವರ ತರುವಾಯ ಕೋರ್ಟ್ ಪಾಜಿ ಸೈದಲ್ಲಿಯವರಿಗೆ ಪಂಗಾಮಿ ಬಕ್ಷಿಗಿರಿಯಾಯಿತು. ಇವರೊಂದಿಗೆ ಶ್ರೀನಿವಾಸರಾಯರೆಂಬವರೂ ಮೊಕರರಾದರು. ಈ ಇಬ್ಬರೂ ಸುಮಾರು 10 ತಿಂಗಳು ಬಕ್ಷಿಗಳಾಗಿದ್ದರು. ಆಗ ಖಾಜಿಯವರು ಸ್ವರ್ಗಸ್ಥರಾಗಲು ಶ್ರೀನಿವಾಸರಾಯರೊಬ್ಬರೇ ಕೋರ್ಟ್‌ಕೆಲಸಗಳನ್ನೆಲ್ಲ ನಿರ್ವಹಿಸಿದರು. ಅವರನ್ನು ಚೀಫ್‌ಕೋರ್ಟ್‌ಜಾಖಾನರೆಂಬವರು ಹಿಂಬಾಲಿಸಿದರು. ಇವರಿಗೆ ಕೆಲಸ ತಪ್ಪಿದ ಮೇಲೆ ಮತ್ತೆ ಗುಲಾಂಮೊಹಿಯುದ್ದೀನ್ ಮೇಕ್ರಿಯವರೇ ಖಾವಂದರವರ ಆಜ್ಞಾನುಸಾರ ಬಕ್ಷಿಕೆಲಸವನ್ನು ಮಾಡಿ ತರುವಾಯ ಇಂಗ್ಲೀಷು ಸರ್ಕಾರದಿಂದ ನಿಯಾಡಾದ ಅದಾಲತ್ತು ಕೋರ್ಟಿನ ಜಡ್ಜಿಗಳಲ್ಲಿಯೂ ಒಬ್ಬರಾಗಿ ಅಧಿಕಾರ ಮಾಡಿದರು.

11. ಕ್ರಿಮಿನಲ್ ಬಾಬು.—ಕ್ರಿಮಿನಲ್ ಮೊಕದ್ದಮೆಗಳಿಗೆ ಬೋರೆಗೌಡರವರ ಪಾಲತ್ತಿನಲ್ಲಿ ಪೂರ್ಣಯ್ಯನವರ ದಿವಾಗಿರಿಯಲ್ಲಿದ್ದ ಪದ್ಧತಿಯಂತೆಯೇ ಶಿಕ್ಷೆಯನ್ನು ವಿಧಿಸುತ್ತಿದ್ದರು. ಈ ಮೊಕದ್ದಮೆಗಳು ಮೇಲೆ ತಿಳಿಸಿದ ನಾಲ್ಕನೆಯ ಕೋರ್ಟ್‌ನಲ್ಲಿ ವಿಚಾರಣೆಯಾಗಿ ವ್ಯವಸ್ಥೆಯಾಗುತ್ತಿದ್ದುವು. ಈ ಕೋರ್ಟ್‌ನ ಹಕೀಮರಲ್ಲಿ ಒಬ್ಬರ ತರುವಾಯ

GRI 22 1MN MAY 25 1931

ಮೆತ್ತೊಬ್ಬರು ಅಧಿಕಾರವಹಿಸಿ ಹದಿನೈದುದಿನ ಫಿರ್ಯಾದುಗಳನ್ನು ದಾಖಲ್ಮಾಡಿಕೊಂಡು ಆಮೇಲೆ ಹದಿನೈದುದಿನ ಅವುಗಳ ವಿಚಾರಣೆ ನಡೆಸುತ್ತಿದ್ದರು. ಇಲ್ಲಿ ಚಿಲ್ಲರೆ ತಕ್ಸೀರುಗಳಲ್ಲದೆ ಜೋರಿ, ದರೋಡೆ ಮೊಂತಾದ ಮೊಕದ್ದಮೆಗಳೆಲ್ಲ ದರ್ಖಾಸ್ತಿಯಾಗಿ ನಡೆದ ತೀರ್ಮಾನವು ಸದರ್ ಕೋರ್ಟಿಗೆ ಹೋಗಿ ಆ ಕೋರ್ಟಿನವರು ಶಿಕ್ಷೆಯನ್ನು ನಿಧಿಸುತ್ತಿದ್ದರು. ಭಾರಿ ಭಾರಿ ಮೊಕದ್ದಮೆಗಳಲ್ಲಿ ಬಕ್ಷಿಯವರು ದೊರೆಗಳವರಿಗೆ ಶ್ರುತ ಸಡಿಸಿ ಅಪ್ಪಣೆ ಪಡೆಯುತ್ತಿದ್ದರು. 1825–26ನೆ ಯಿಸವಿಯಲ್ಲಿ ಹಣಗಾರನಾದ ಅಪರಾಧಿಯೊಬ್ಬನು ತನ್ನ ಪ್ರವ್ಯೆ ಬಲದಿಂದ ಅವನ ಮಹಾಪರಾಧಕ್ಕೆ ವಿಹಿತವಾದ ಮರಣದಂಡನೆಯನ್ನು ತಪ್ಪಿಸಿಕೊಳ್ಳಲು ಪ್ರಯತ್ನಿಸುವ ಅಂಶವು ಬಾವೆಂದರವರ ಚಿತ್ತಕ್ಕೆ ವಿದಿತವಾಗಲಾಗಿ ಪ್ರಭುಗಳು ಮನ್ನಿಸದೆ ಅವನನ್ನು ತಕ್ಕ ಶಿಕ್ಷೆಗೆ ಗುರಿಮಾಡುವಂತೆ ಅಪ್ಪಣೆ ದಯಪಾಲಿಸಿದರು.

12. ಪೊಲೀಸು.—ಪೊಲೀಸು ಬಾಬಿನಲ್ಲಿ ಸಾಮಾನ್ಯವಾಗಿ ಪೂರ್ಣಯ್ಯನವರ ದಿವಾಣಗಿರಿಯಲ್ಲಿ ನಡೆದ ಪದ್ಧತಿಯೇ ಆಚರಣೆಯಲ್ಲಿತ್ತು. ರಾಜಧಾನಿಯಲ್ಲಿ ಪೊಲೀಸಿನ ಅಧಿಕಾರಿಗಳಿಗೆ ಬಾರಿಲಾಲೆಯವರು ಸಹಾಯರಾಗಲು ಅವಕಾಶ ಕೊಟ್ಟಿತ್ತು. ಮಾಮೂಲಿನಂತೆ ಗ್ರಾಮಗಳ ಕಾವಲುಗಾರರೂ, ಕಂದಾಚಾರದವರೂ ಆಯಾ ಅಮಲ್ದಾರರ ತಾಬೆಯಲ್ಲಿ ತಮ್ಮ್ಮತಮ್ಮ್ಮ ಕೆಲಸಗಳನ್ನೆಲ್ಲ ಕ್ರಮವಾಗಿ ಮಾಡುತ್ತಿದ್ದರು.

13. ಮಿಲಿಟೇರಿ ಯಿಲಾಖೆ: ಸವಾರರು.—ಹಿಂದಕ್ಕೆ ಶಿಲೆದಾರ್ ಫೌಜಿನಲ್ಲಿ ರಿಜಮೆಂಟುಗಳನ್ನು ವಿಂಗಡಿಸಿರಲಿಲ್ಲ. ಈ ಸೇನೆಯು ಟೋಲೆಗಳು ರಿಸಾಲ್ದಾರರ ಕೈಕೆಳಗಿದ್ದವು. ಟೋಲೆ 1ಕ್ಕೆ 80 ರಿಂದ 150 ಮಂದಿಯವರೆಗೂ ಜನರಿದ್ದರು. ಆಯಾ ರಿಸಲ್ದಾರರಿಗೆ ತಲಬು 50 ರಿಂದ 500 ರೂಪಾಯಿಯವರೆಗೂ ಸಲ್ಲುತ್ತಿತ್ತು. ಈ ಫೌಜಿಲ್ಲಿ ಇಬ್ಬರು ಬಕ್ಷಿಗಳ ಅಧಿಕಾರಕ್ಕೊಳಪಟ್ಟಿತ್ತು. ಈಚೆಗೆ ಶಿಲೆದಾರಿ ಯಿಲಾಖೆಯಲ್ಲಿ ತಿದ್ದುಪಾಟಾಗಿ 7* ತುಕಡಿಗಳನ್ನೆರ್ಪಟ್ಟು ಪ್ರತಿಯೊಂದಕ್ಕೂ

*1. ಸಿಂದಫಟ್ಟ. 2. ಕಟ್ಟೆ. 3. ಹುಲಿಯೂರುದುರ್ಗ. 4. ನಾಗಮಂಗಲ. 5. ಚನ್ನರಾಯನಪಟ್ಟಣ. 6. ಚನ್ನಪಟ್ಟಣ. 7. ಕುಣಿಗಲು.

ಒಬ್ಬೊಬ್ಬ ತುಕಡಿದಾರನನ್ನು ನೇಮಿಸಿದರು. ಇದರಿಂದ ಕ್ರಮೇಣ ರಿಜಮೆಂಟುಗಳು ಹೊಕರಾದುವು. ಆಗ್ಗೆ ಮೆಹಾರಾಷ್ಟ್ರದೇಶವು ಇನ್ನೂ ತಹಬಂದಿಗೆ ಬಂದಿರಲಿಲ್ಲವಾಗಿ ಮೈಸೂರು ಫೌಜಿನಲ್ಲಿ ತೆಗೆದುಹಾಕಿದ ಮರಾಟ ಪೆಂಡಾರಿಜನರೂ, ಹಿಂದಿನ ಟೀಪೂಸುಲ್ತಾನರ ಸೈನ್ಯದ ವರೂ ಮೆಹಾರಾಷ್ಟ್ರದೇಶಕ್ಕೆ ಹೋಗಿ ಅಲ್ಲಿ ನೌಕರಿಗೆ ಸೇರದಂತೆ ಆ ಜನರಿಗೂ ಸುಪ್ತು ಇಲಾಖೆಯ ಶಿಲೆದಾರರಿಗೂ ಸಾಗುವಳಿಗಾಗಿ ಜಮೀನುಗಳನ್ನು ಕೊಟ್ಟದ್ದರಿಂದ ಆ ಜನರು ಇಲ್ಲಿ ನ್ಯಾಯವಾಯ ಜೀವಿಗಳನಿಸಿ ನ್ಥಳವಂತರಾದರು. ಶಿಲೆದಾರರೂ ಯುದ್ಧವಿಲ್ಲದ ಕಾಲದಲ್ಲಿ ಜಿರಾಯಿತಿ ಕೆಲಸಗಳನ್ನು ಮಾಡಿಕೊಳ್ಳುತ ತಿಂಗಳಿಗೆ ಎರಡಾವೃತ್ತಿ ಗಣತಿಗೆ ಹಾಜರಾಗುತ್ತಿದ್ದರು.

14. ಬಾರ್ಗಿರ್.–(Bargir) ಇಂಗ್ಲಿಷ್ ಕಂಪನಿ ಕ್ಯಾವೆಲ್ರಿಯ ಪದ್ಧತಿಯಂತೆ ಏರ್ಪಟ್ಟ 500 ಮಂದಿ ಸವಾರರು ಕ್ಲೋಸಪೇಟೆಯಲ್ಲಿ ವೊಕ್ಕಾಂ ಮಾಡಿದ್ದರು. ಇವರಿಗೆ ಬಾರ್ಗಿರ್ ಎಂಬ ಹೆಸರು ಕೊಟ್ಟಿತ್ತು. ಇವರು ಚನ್ನಾಗಿ ತರಬೇತಾಗಿ ಉತ್ತಮಸ್ಥಿತಿಯಲ್ಲಿರುತ್ತ ಮುಖ್ಯವಾಗಿ ಖಾವಂದರವರ ಬಾಡಿಗಾರ್ಡ್ ಕೆಲಸ ಮಾಡುತ್ತಿದ್ದರು. ಇವರಲ್ಲಿ ಕೆಲವರನ್ನು ಅಲ್ಲಲ್ಲಿ ರಾಷ್ಟ್ರರಕ್ಷಣೆಯ ಕೆಲಸಕ್ಕೂ ಉಪಯೋಗಿಸುತ್ತಿದ್ದರು.

15. ಮಹಾರಾಷ್ಟ್ರರ ಮೇಲೆ ಇಂಗ್ಲಿಷ್ ಸರ್ಕಾರದವರು ನಡಿಸಿದಯುದ್ಧದಲ್ಲಿ ಮೈಸೂರಿನಿಂದ ಆದ ಒತ್ತಾಸೆ.—ಮೆಹಾರಾಷ್ಟ್ರರಮೇಲೆ ಇಂಗ್ಲಿಷ್ ಸರ್ಕಾರದವರಿಗೆ 1814ನೆ ಯಿಸವಿಯಲ್ಲಿ ಯುದ್ಧೋದ್ಯಕ್ರಮವಾದಾಗ ಖಾವಂದರವರು ಇಂಗ್ಲಿಷ್ ಸೇನೆಯ ಒತ್ತಾಸೆಗೋಸ್ಕರ ಮೈಸೂರು ಸವಾರಿಲಾಖೆಯ ಬಕ್ಷಿ ರಾಮರಾಯರನ್ನೂ ಬಕ್ಷಿ ಭೀಮರಾಯರನ್ನೂ ಶಿಲೆದಾರ್ ಫೌಜು ಸಮೇತ ಅಪ್ಪಣೆಕೊಟ್ಟು ಕಳುಹಿಸಿದರು. ಈ ಸಂಗ್ರಾಮಯಾತ್ರೆಯಲ್ಲಿ ನಾಲ್ಕುವರ್ಷ ಅನೇಕ ಸ್ಥಳಗಳಲ್ಲಿ ಲಡಾಯಿಗಳು ನಡೆದುವು. ತಮಗೆ ನೇಮಕವಾದ ಕೆಲಸಗಳನ್ನೆಲ್ಲ ಬಕ್ಷಿಯವರು ತೃಪ್ತಿಕರವಾಗಿ ನಡೆಸಿದರು. ಆಗ ಸಿಲೆದಾರರಿಗೆ ಆಯುಧಗಳು ಕತ್ತಿ, ಭರ್ಜಿ, ಬಂದೂಕು, ಪಿಸ್ತೂಲು ಎಂಬಿನ್ನುಗಳನ್ನು ಕೊಟ್ಟದ್ದರು. ಬ್ರಿಗೇಡಿಯರ್ ಜನರಲ್

ಸರ್ ಜಾನ್ ಮೊಲ್ಕಂ (Brigadier General Sir John Malcolm) ಸಾಹೇಬರು 1817ನೆ ಯಿಸವಿಯಲ್ಲಿ ಹೋಳ್ಕರ ರಾಜರಮೇಲೆ ಮೊಹಿದ್ ಪುರ (Malidpur) ದ ಬಳಿಯಲ್ಲಿ ಮಾಡಿದ ಘೋರ ಯುದ್ಧದಲ್ಲಿ ಕೇಪ್ಟನ್ ಗ್ರಾಂಟ್ ಸಾಹೇಬರ ಕೈಕೆಳಗೆನಿಂತು ಮೈಸೂರು ಫೌಜು ತುಂಬಾ ಮೆಜ ನತ್ತನ್ನು ಮಾಡಿತು. ಆಗ ಇಂಗ್ಲೀಷ್ ಸೇನೆಗೆ ವಿಜಯವಾಯಿತು. ಬಹಳಮಂದಿ ಮೈಸೂರು ಸವಾರರು ಶತ್ರುಗಳ ಜೆನ್ನುಹತ್ತಿ ಅವರ ಆನೆ, ಒಂಟೆ ಸಾಮಾನು ಸರಂಜಾಮು ಮುಂತಾದುದನ್ನು ಬಹಳ ಮೆಟ್ಟಿಗೆ ಸ್ವಾಧೀನಪಡಿಸಿಕೊಂಡು ತಂದೊಪ್ಪಿಸಿದರು. ಇದರಲ್ಲಿದ್ದ ಜವಾಹಿರಿಹಿಂಡಿ, ಮತ್ತು ಮಖಮಲ್ ಜರ ಸಹಿತವಾದ ಒಂದು ಕತ್ತಿಯು ಹೋಳ್ಕರ್ ಮಹಾರಾಜರದೆಂದು ತಿಳಿಯಬಂತು. ಅದನ್ನು ಬಕ್ಷಿಯ ವೆರು ಮೊಲ್ಕಂಸಾಹೇಬರಿಗೆ ಕೊಡುವುದಕ್ಕೆ ಪ್ರಯತ್ನಿಸಿದರು; ಅವರು ತೆಗೆದುಕೊಳ್ಳಲು ಒಪ್ಪಲಿಲ್ಲ. ಆಗ ಬಕ್ಷಿಯವರು ಅದನ್ನು ತಂದು ಶ್ರೀಮನ್ಮಹಾರಾಜರವರಿಗೆ ನಜರ್ ಒಪ್ಪಿಸಿದರು. ಖಾವಂದರು ವಿಜಯಾಂಕ ವಾದ ಆ ಕತ್ತಿಯನ್ನು ಮೈಸೂರು ಫೌಜನ್ನು ಆದರಿಸಿ ಪ್ರೋತ್ಸಾಹ ದಿಂದ ನಡೆಸಿ ಜಯಶೀಲರಾದ ಮೊಲ್ಕಂ ಸಾಹೇಬರಿಗೆ ಕೊಟ್ಟರು. ಆಗ ಅವರು ಅದನ್ನು ಕೃತಜ್ಞತಾಪೂರ್ವಕವಾಗಿ ಗೌರ್ನರ್ ಜನರಲ್ ಲಾರ್ಡ್ ಹೇಸ್ಟಿಂಗ್ಸ್‌ರವರ ಅನುಜ್ಞೆಯನ್ನು ಪಡೆದು ಅಂಗೀಕರಿಸಿದರು.

16. ಆನಂತರ ಮೈಸೂರು ಸವಾರರು ಕೇಪ್ಟನ್ ಗ್ರಾಂಟ್ ರವರ ಸಂಗಡ ಹೋಗಿ ಮಂಡಿಸೂರೆಂಬ ಸ್ಥಳದ ಬಳಿ ಹೋಳ್ಕರ್ ರಾಜರ ದಂಡಿನ ಮೇಲೆ ಕವಿದು ಯುದ್ಧಮಾಡಿದರು. ಸಂಪೂರ್ಣ ವಿಜಯ ವುಂಟಾಯಿತು. ಆಗ ಹೋಳ್ಕರ್ ಮಹಾರಾಜರು ಸಂಧಿಯನ್ನಪೇಕ್ಷಿ ಸಲು ಬ್ರಿಟಿಷ್ ಸರ್ಕಾರದವರು ಸಂದರ್ಭಾನುಸಾರ ಅವರೊಂದಿಗೆ ತಮ ಸಾನು ಮಾಡಿಕೊಂಡರು.

ಬಕ್ಷಿರಾಮರಾಯರೂ ಅವರ ಸಹೋದರರಾದ ಭೀಮರಾಯರೂ ಪೆಂಢಾರಿ ಜನರಮೇಲೆ ಯುದ್ಧ ಮಾಡಿ ಅವರನ್ನು ನಿಗ್ರಹಿಸಿ ಜಯಶೀಲರಾದುದಲ್ಲದೆ ಪೇಷ್ವೆ ಬಾಜೀರಾಯರ ಮಿಸ್ಸಿಟ್ಟು ಅವರನ್ನು ಕೆರೆ ಹಿಡಿಯುವುದರಲ್ಲಿ ತುಂಬಾ ಸಾಹಸ ಮಾಡಿದರು. ಇವರುಗಳ

ಮೊದಲನೆತ್ತನ್ನು ಪರಿಗಣಿಸಿ ಪ್ರಾಪಂದರವರು ಬಕ್ಷಿರಾಮರಾಯರಿಗೆ (6000) ಆರುಸಾವಿರ ರೂಪಾಯಿ ಅಂದಾಜಿನ ಗ್ರಾಮಗಳನ್ನೂ ಬಕ್ಷಿ ಭೀಮರಾಯರಿಗೆ (4000) ನಾಲ್ಕು ಸಾವಿರ ರೂಪಾಯಿ ವರಮಾನವುಳ್ಳ ಗ್ರಾಮಗಳನ್ನೂ ಜಹಗೀರಾಗಿ ಅನ್ವಿಸಿ ಬಳುವಳಿಸಿದರು. ಬಕ್ಷಿರಾಮರಾಯರಿಗೆ ಪ್ರತ್ಯೇಕವಾಗಿ ಮದ್ರಾಸು ಗವರ್ನಮೆಂಟಿನಿಂದಲೂ ತಿಂಗಳು 1ಕ್ಕೆ 800 ರೂಪಾಯಿ ಪೆನ್ಷನ್ ಹೊಕರಾಗಿತ್ತು.

17. ಈ ಪ್ರಾಂತ್ಯದಲ್ಲಿ ಬ್ರಿಟಿಷ್ ಸರ್ಕಾರಕ್ಕೆ ಸಹಾಯಾರ್ಥವಾಗಿ ಮೈಸೂರಿಂದ ಬರಗಿಸಿದ ಸಿಪಾಯಿ ಫೌಜಿನ ಪಿಪ್ಪಯವಾಗಿ ಸರ್ಜಾನ್‌ಮೊಲ್ಕಂ ಮತ್ತು ಅನರಬಲ್ ಕೋಲ್ ಇವರುಗಳು ಕೊಟ್ಟಸಲಹೆಯಂತೆ ಅದನ್ನು ತಿದ್ದುಪಾಟು ಮಾಡಲು ಪ್ರಾಪಂದರವರು ಅಂಗೀಕರಿಸಿದುದು ಶುಭೋದರ್ಕವೆನಿಸಿ ಸಂತೋಷಕರವಾಗಿ, ದೊರೆಗಳವರ ವಿಷಯ ಭಾವ, ಸನ್ಮನೋವೃತ್ತಿ, ಇವುಗಳನ್ನು ವ್ಯಕ್ತಪಡಿಸಿತೆಂದೂ, ಆ ಫೌಜು ಬ್ರಿಟಿಷ್ ಕಮಾಂಡರ್ ಇನ್‌ಚೀಫ್: ಸರ್‌ಥಾಮ್ಸ್ ಹಿಸ್ಲಾಪ್ ರವರ ಅಜ್ಞಾನುಸಾರ ನಡೆದುಕೊಳ್ಳುತ್ತ ಶ್ರದ್ಧಾಭಕ್ತಿಪೂರ್ವಕ ಯುಕ್ತಿಯಿಂದ ಧೈರ್ಯವನ್ನು ತೋರ್ಪಡಿಸಿ ತೃಪ್ತಿಕರವಾಗಿ ಪೆಸರನತ್ತು ಮಾಡಿತೆಂದೂ, ಆಗ ಆ ಪ್ರಾಂತದಲ್ಲಿ ತುಂಬಾ ದಾಸಳಿ ಮಾಡುತ್ತಿದ್ದ ಪೆಂಡಾರಿ ಜನರ ನಿಗ್ರಹಾರ್ಥವಾಗಿ ಸಕಾಲದಲ್ಲಿ ದೊರೆಗಳವರು ಮಾಡಿದ ಸಹಾಯವು ಫಲಕಾರಿಯಾಯಿತೆಂದೂ, ಪ್ರಭುಗಳವರು ತಹನಾಮೆಯು ನಿಬಂಧನೆಗಿಂತ ಅತಿಶಯವಾಗಿಯೂ ನಿರೀಕ್ಷಣೆಗಿಂತ ಹೆಚ್ಚಾಗಿಯೂ ಬತ್ತಾಸೆ ನಡೆಸಿರುವರೆಂತಲೂ, ಇದಕ್ಕೆ ಪ್ರಾಪಂದರವರಿಗೆ ಬ್ರಿಟಿಷ್‌ರವರಲ್ಲಿರುವ ಪ್ರಾಮಾಣಿಕವಾದ ದೃಢವಿಶ್ವಾಸವು ಕಾರಣವೆಂತಲೂ, ಆಗಿನ ಗವರ್ನರ್ ಜನರಲ್ ಮಾರ್ಕ್ವಿಸ್ ಆಫ್ ಹೇಸ್ಟ್ಟಿಂಗ್ಸ್ ಸಾಹೇಬರವರು ದೊರೆಗಳವರಿಗೆ ಆ ಕಾಲದಲ್ಲಿ ಬರೀತಾಗಳನ್ನು ಬರೆದು ಅದರಲ್ಲಿ ಪ್ರಭುಗಳವರು ಬಕ್ಷಿರಾಮರಾಯರಿಗೂ ಬಕ್ಷಿ ಭೀಮರಾಯರಿಗೂ ಜಹಗೀರು ದಯಪಾಲಿಸಿದುದನ್ನು ಪರಿಗಣಿಸಿ ಉಭಯ ಸರ್ಕಾರಗಳಿಗೂ ಇನ್ನೂ ಅತಿಶಯವಾಗಿ ಸ್ನೇಹಸಂಬಂಧವು ಜೀವದ ಅಭ್ಯುದಯಕ್ಕೆ ಕಾರಣವಾಗಬೇಕೆಂಬುದನ್ನು ತಾವು ಸಮಾವೃಷ್ಟಿಯಲ್ಲಿಷ್ಟವುಳ್ಳವರೆಂದು ಸಮ್ಮತಿಸಿದರು. ಬಳಿಕ ಸರ್ 1825ನೆ

MAY 25 1937

MAY 25 1937

MAY 25 1937

MAY 25 1939

MAY 25 1939

ಯಿಸವಿಯಲ್ಲಿ ಆ ಗವರ್ನರ್ ಜನರಲ್ ಸಾಹೇಬರವರು ಇಂಗ್ಲೆಂಡ್ ದೇಶದಲ್ಲಿರುವ ಮೇಲ್ಪಟ್ಟ ಅಧಿಕಾರಿಗಳಿಗೆ ಬರೆದ ಲೇಖನದಲ್ಲಿ ಮೇಲೆ ಸೂಚಿಸಿದ ಸಂಗ್ರಾಮದಲ್ಲಿ ಹಾವೆಂದರವರು ಉತ್ಸಾಹದಿಂದ ಶ್ರದ್ಧಾಪೂರ್ವಕವಾಗಿ ಬ್ರಿಟಿಷ್ ಸರ್ಕಾರಕ್ಕೆ ಮಾಡಿದ ಸಾರ್ಥಕವಾದ ಸಾಹಾಯ್ಯವನ್ನು ಪ್ರಸ್ತಾವಿಸಿ ದೊರೆಗಳವರು ಸನ್ಮಾನಾರ್ಥರೆಂಬ ಅಂಶವನ್ನು ಶ್ರುತಪಡಿಸಿದರು.

18. ಈ ಯುದ್ಧ ನಡೆವ ಕಾಲದಲ್ಲಿ ಹಿಂದೆ ಎಂದೆಂದಿಗೂ ಅರಿಯದ ಕಾಲರಾ (Cholera) ಎಂಬ ಮಾರಿಕಾ ಜಾಡ್ಯವು ಸಂಪ್ರಾಪ್ತವಾಗಿ ಮೈಸೂರಿಗೆ ವ್ಯಾಪಿಸಿ ಜನರಿಗೆ ಕಷ್ಟನಷ್ಟಗಳು ಸಂಭವಿಸಿದುವು. ಆಗ ಅವರ ನಿವಾರಣಾರ್ಥವಾಗಿ ದೊರೆಗಳವರು ಸಾಧ್ಯವಾದ ವಿಚಾರಣೆಯನ್ನು ಅಪ್ಪಣೆ ದಯಪಾಲಿಸಿದರು.

19. ಬಾರು.—ಬಾರಿನವರ ಸಂಖ್ಯೆಯು ಸರ್ 1800 ರಲ್ಲಿ 2270 ಇದ್ದುದು 1803—4 ರಲ್ಲಿ 8000 ವರೆಗೂ ಹೆಚ್ಚಿ ಇಂಗ್ಲೀಷ್ ಪದ್ಧತಿಯಂತೆ ಕವಾಯಿತು ಕ್ರಮದಲ್ಲಿ ಸುಶಿಕ್ಷಿತವಾಗಿತ್ತು. ಪ್ರಭುಗಳವರ ಆಳಿಕೆಯ 1817ನೆ ಯಿಸವಿಯಲ್ಲಿ ಕೆಲವುಕಾಲ ಬಾರಿನ ರಿಜಿಮೆಂಟುಗಳು ಬ್ರಿಟಿಷ್ ಆಫೀಸರುಗಳ ಕೈಕೆಳಗಿದ್ದು ತರುವಾಯ ಇಲಾಖೆ ಬಕ್ಷಿಯವರ ತಾಬೆಗೆ ಸೇರಿ 8 ಪಟಾಲಂ ಆಗಿ ವಿಭಕ್ತವಾಯಿತು. ಪ್ರತಿ ಪಟಾಲಂನಲ್ಲಿಯೂ 500 ಮಂದಿಯಂತೆ ಒಟ್ಟು 4000 ಬಾರ್ ಶಿಪಾಯಿಗಳಿದ್ದರು.

20. ವಿದ್ಯಾ ಪ್ರಚಾರ.—ಹಿಂದಿನ ಕಾಲದಿಂದಲೂ ಮುಖ್ಯಮುಖ್ಯವಾದ ಗ್ರಾಮಗಳಲ್ಲಿಯೂ ಪಟ್ಟಣಗಳಲ್ಲಿಯೂ ಬಾಲಕರ ವಿದ್ಯಾಭ್ಯಾಸಕ್ಕೆ ಪಾಠಶಾಲೆಗಳಿದ್ದುವು. ಅವು ಅಲ್ಲಲ್ಲಿ ದೊರೆತ ಮಂಟಪ, ಛತ್ರ, ದೇವಾಲಯ ಪ್ರಾಕಾರ, ಸತ್ಕಾರದ ಖಾಲಿಕಟ್ಟಡದ ವೆಸಾರೆ ಇಂತಹ ಸ್ಥಳಗಳಲ್ಲಿ ನೆಲಸಿದ್ದುವು. ಅವುಗಳಲ್ಲಿ ಆ ಸವಿಾಪದ ಹಳ್ಳಿಗಳ ಪುಡುಗರೂ ಬಂದು ಓದುತ್ತಿದ್ದರು. ಅಲ್ಲಿನ ಉಪಾಧ್ಯಾಯರಿಗೆ ವಿದ್ಯಾರ್ಥಿಗಳ ಪಾಲಕರಲ್ಲಿ ಭೂ ಸ್ಥಿತಿಯಿದ್ದವರು ಧಾನ್ಯರೂಪವಾಗಿಯೂ ಇತರರು ಕೊಕ್ಕವಾಗಿಯೂ ಅವರವರ ಅನುಕೂಲವಿದ್ದಂತೆ ವೇತನ ಸಲ್ಲಿಸುತ್ತಿದ್ದರು. ತುಂಬಾ ಬಡವರಿಗೆ ಧರ್ಮಾರ್ಥವಾಗಿ ಪಾಠವು ನಡೆಯುತ್ತಿತ್ತು. ಉಪನ್ನ

ರಾವ ವಿದ್ಯಾರ್ಥಿಗಳು ತಾವು ಶಿಕ್ಷಿತರಾದ ತರುವಾಯ ತಮ್ಮ ತಮ್ಮ ಯೋಗ್ಯತಾನುಗುಣವಾಗಿ ಗುರು ದಕ್ಷಿಣೆಯನ್ನು ಒಪ್ಪಿಸುತಲಿದ್ದರು. ಆ ಪಾಠಶಾಲೆಗಳಲ್ಲಿ ಜಾತಿಮರ್ಯ್ಯಾದ ಬಾಲಕರಿಗೂ ಮತ್ತು ಅವರೊಡನೆ ಸೇರತಕ್ಕ ಇತರ ಮೆತವರಿಗೂ ಓದು, ಬರಹ, ಲೆಕ್ಕಾಚಾರ, ಕೈ ಬರಹದ ಕಾಗದ ಪತ್ರಗಳನ್ನು ಓದುವುದು, ಕನ್ನಡದ ಜೈಮಿನಿ ರಾಮಾಯಣ ಭಾರತ ಭಾಗವತಾದಿ ಪುರಾಣೇತಿಹಾಸ ಕಥಾಗರ್ಭಿತ ಗ್ರಂಥಗಳ ಪಠನ, ನಿಘಂಟು ಎಂದರೆ ಅಮರ ಇದಲ್ಲದೆ ಕನ್ನಡಿಗರಿಗೆ ಕಬ್ಬಿಗರ ಕೈಪಿಟಿ, ತೆಲುಗಿನವರಿಗೆ ಆಂಧ್ರನಾಮಸಂಗ್ರಹ ಇವು ಮೊಂತಾದ ಕೋಶಗಳು ನೀತಿಪಾಠ ಸೂತ್ರಪಾಠಗಳು ಪಂಚಾಂಗ ಸಂಬಂಧನಾದ ತಿಥಿ ವಾರನಕ್ಷತ್ರಾದಿಗಳ ಸಾಮಾನ್ಯಲಕ್ಷಣ ಇವುಗಳನ್ನು ಕಲಿಸುತ್ತಿದ್ದರು. ಪ್ರತ್ಯೇಕವಾಗಿ ಓದತಕ್ಕ ಹುಡುಗರಿಗೆ ಅವರವರ ಜಾತಿ ಮತಾನುಸಾರವಾಗಿ ದೇಶಭೇದಕಾವ ಪಾಠಗಳನ್ನು ಕಲಿಸುವುದಕ್ಕೆ ತಕ್ಕ ಸ್ಥಳಗಳಿದ್ದುವು. ಬಾಲಕರುಗಳ್ಳ ಕಾಲಾನುಗುಣವಾಗಿ ಆಟಪಾಟಗಳಿಗೂ ಅಂಗಸಾಧನೆಗೂ ಅವಕಾಶವಿತ್ತು. ಅಲ್ಲದೆ ನೀರಿನಲ್ಲಿ ಈಜುವುದು ಬಿಲುವಿದ್ಯೆ ಕವಣೆಗುರಿ ಮೊದಲಾದ ಅಂಗರಕ್ಷಣೆಯ ತಂತ್ರಗಳನ್ನೂ ಅಭ್ಯಾಸಮಾಡಿಸುತ್ತಿದ್ದರು. ಈ ರೀತಿ ಶಿಕ್ಷಯಾಗುತಲೆ ಬಾಲಕರು ಅವರವರ ಪೋಷಕರಲ್ಲಾಗಲಿ, ಬಂಧುಮಿತ್ರ ಜನರಲ್ಲಾಗಲಿ ಕಸಬು ವಿದ್ಯೆಗಳನ್ನೂ ಕೃಷಿ, ವ್ಯಾಪಾರ, ವೈವಹಾರ ಲಕ್ಷಣಗಳನ್ನೂ ಕಲಿಯುತಲಿದ್ದರು. ಪ್ರೌಢ ಶಾಸ್ತ್ರಾಭ್ಯಾಸಾಭಿಲಾಷಿಗಳಾದವರು ರಾಜಧಾನಿಯಲ್ಲಾಗಲಿ ಸ್ಥಳಾಂತರಗಳಲ್ಲಾಗಲಿ ಅನುಕೂಲಿಸಿದೆಡೆಯಲ್ಲಿ ವಿದ್ವಾಂಸರ ಬಳಿಗೆ ಹೋಗಿ ಅವರಿಂದ ಉಪದಿಷ್ಟರಾಗುತ್ತಿದ್ದರು. ಈ ರೀತಿಯಾವ ಪುರಾತನ ಪದ್ಧತಿಯು ನಿರ್ವಿಘ್ನವಾಗಿ ನಡೆಯುವುದಕ್ಕೆ ದೊರೆಗಳವರು ತಮ್ಮ ಆಳಿಕೆಯಲ್ಲಿ ಕಾಲಾನುಸಾರವಾಗಿ ತಕ್ಕ ಪ್ರೋತ್ಸಾಹವನ್ನಿತ್ತರು.

21. ಸಾ 1818ನೆ ಯಿಸವಿಯಲ್ಲಿ ಮೆಹಾರಾಷ್ಟ್ರದೇಶವಲ್ಲಿ ಮೆಮೋನ್ನೆ ತರಾಗಿದ್ದ ಪುಣೆ ಪೇಷ್ವೆಯನುವೆರು ಬ್ರಿಟಿಷರವರಿಗೆ ಎದುರಾಳಿಗಳನಿಸಿ ತವುಗೆ ಬಂದು ಶತಾಬ್ದಿಂದಲೂ ಬಂದಿದ್ದ ವೈಭವವನ್ನು ಕಳೆದುಕೊಂಡರು. ಆಗ ಅಲ್ಲಿನ ಪ್ರಮುಖರಾದ ವಿದ್ವಾಂಸರು ದೇಶಾಂತರಗತರಾಗ

ಬೇಕಾಯಿತು. ಇದಕ್ಕೆ ಪೂರ್ವದಲ್ಲೇ ತಂಜಾವೂರು ಸಂಸ್ಥಾನದ ಸ್ವತಂತ್ರಾಧಿಪತ್ಯವು ಅಸ್ತಮಿಸಿತ್ತು. ಆದುದರಿಂದ ಮಹಾರಾಷ್ಟ್ರದಿಂದಲೂ ದಕ್ಷಿಣ ದೇಶದಿಂದಲೂ ಬಂದ ವಿದ್ವಾಂಸರಿಗೆ ಈ ದೇಶದಲ್ಲಿ ಗಣ್ಯರೆನಿಸಿದ್ದ ಪಂಡಿತರಿಗಿದ್ದಂತೆಯೇ ಶ್ರೀಮನ್ಮಹಾರಾಜರವರ ಔದಾರ್ಯವು ಕಲ್ಪವೃಕ್ಷ ಸದೃಶವಾಯಿತು. ಅಲ್ಲದೆ ದೊರೆಗಳವರು ಮೈಸೂರುರಾಜಧಾನಿಯಲ್ಲಿ ನೆಲಸಿರುವ ಶ್ರೀಪರಕಾಲ ಸ್ವಾಮಿಗಳವರ ಮಠಕ್ಕೂ ಇತರ ಅನೇಕ ಮಠಗಳಿಗೂ, ಸಮಯೋಚಿತವಾಗಿ ವಿಶೇಷ ಸಾಹಾಯ್ಯವನ್ನು ಅಪ್ಪಣೆ ದಯಪಾಲಿಸಿದರು. ಸಂಗೀತ, ಸಾಹಿತ್ಯ, ಮಂತ್ರಶಾಸ್ತ್ರ, ಅಲಂಕಾರ, ತರ್ಕ, ವೈದ್ಯ, ಜ್ಯೋತಿಷ, ವೇದಾಂಶ, ವ್ಯಾಕರಣಾದಿ ನಾನಾ ಶಾಸ್ತ್ರಗಳಲ್ಲಿಯೂ, ಪುರಾಣೇತಿಹಾಸಾದಿಗಳಲ್ಲಿಯೂ, ಕೌಶಲವಿದ್ಯೆಗಳಲ್ಲಿಯೂ ಗಣ್ಯರಾದವರನೇಕರು ಬಾವೆಂದವರ ಆಸ್ಥಾನದಲ್ಲಿ ಭೂಷಣವಾಗಿದ್ದರು. ಅವರುಗಳಿಗೆ ಯಥಾಯೋಗ್ಯವಾಗಿ ಇನಾಂಗ್ರಾಮಮುಂತಾದ ಜೀವನೋಪಾಯಗಳನ್ನು ಪ್ರಭುಗಳವರು ಕಲ್ಪಿಸಿದರು. ಅವರಲ್ಲಿ ತ್ರ್ಯಂಬಕಶಾಸ್ತ್ರಿಗಳೆಂಬವರೂ ಅವರ ಮಕ್ಕಳಾದ ಸಹಚತುರ್ಭಾಷ್ಯಶಾಸ್ತ್ರಿ ಪಂಡಿತರು; ಕಾಶೀನಾಥಶಾಸ್ತ್ರಿಗಳೂ ವಿಶ್ವನಾಥಶಾಸ್ತ್ರಿಗಳೂ ವ್ಯಾಕರಣಶಾಸ್ತ್ರಿ ನಿಪುಣರು; ರಾಜೇಶ್ವರಶಾಸ್ತ್ರಿಗಳು ವ್ಯಾಕರಣ ಶಾಸ್ತ್ರಜ್ಞರೇ ಅಲ್ಲದ ಮಂತ್ರಶಾಸ್ತ್ರದಲ್ಲಿ ಅದ್ವಿತೀಯವೆನಿಸಿದ್ದರು; ತಿರುಪತಿ ಬಾಳಾಚಾರ್ಯರು ತರ್ಕದಲ್ಲಿ ಪ್ರಖ್ಯಾತರು; ಅವರ ತಮ್ಮನಾದ ಅವರ ಪುತ್ರರಾದ ಶ್ರೀನಿವಾಸಾಚಾರ್ಯರು ತರ್ಕಶಾಸ್ತ್ರವಿಧಿವಿನಿಸಿನ ಆ ಶಾಸ್ತ್ರದಲ್ಲಿ ಬಹುಮಂದಿಗೆ ಗುರುಗಳಾಗಿದ್ದರು. ಸನಾಮಧೇಯ ವಿದ್ವತ್ತೆಗಳಾದ ಸುದರ್ಶನಾಚಾರ್ಯರು ಅಲಂಕಾರ ಶಾಸ್ತ್ರವಿಶಾರದರು. ಹೀಗೆಯೇ ಇನ್ನೂ ಅನೇಕರು ಹೆಸರುವಾಸಿ ಪಡೆದಿದ್ದರು. ಇವರೇ ಮೊದಲಾದವರ ಮೂಲಕವಾಗಿಯಲ್ಲದೆ ಆಯಾ ಮಠಾಧಿಪತಿಗಳ ನಿವಾಸವ್ಯಾಜದಿಂದಲೂ ಕ್ರಮವಾಗಿ ವಿದ್ಯಾವ್ಯಾಸಂಗವು ನಡೆಯುತ್ತಿತ್ತು. ಬದ್ಧೆಬ್ಬೆ ಪಡೆದ ವಿದ್ವಾಂಸರ ಮನೆಯು ಒಂದೊಂದು ಶಾಸ್ತ್ರಶಾಲೆಯೆನಿಸಿತ್ತು. ಕೆಲವು ಮಂದಿ ಪಂಡಿತರು ನಿರ್ವ್ಯಾಜ್ಯರಿಗಳಿಗೆ ದಾರಪರಿಗ್ರಹವಾಗಿ ವಿದ್ಯಾದಾನದೊಂದಿಗೆ ಅನ್ನದಾನವನ್ನು ಸಹ ಮಾಡುತ್ತಿದ್ದರು. ಅನೇಕಮಂದಿ

ಲೌಕಿಕರೂ, ವೈದಿಕರೂ, ವಿದ್ಯಾರ್ಥಿಗಳಿಗೆ ತಮ್ಮ ತಮ್ಮ ಮನೆಗಳಲ್ಲಿ ಉಪ ಒನಯನಾದಿಗಳನ್ನು ನಡೆಸಿಸುವರು.

ಅವರವರ ಸ್ಥಿತಿ ಗತಿ ಮತಗಳಿಗನುಸಾರವಾಗಿಯೂ, ಕಾಲಾನುಗುಣವಾಗಿಯೂ, ಅವರವರ ಮಾತಾಪಿತೃಗಳಿಂದಲಾಗಲಿ ಇತರ ಹಿರಿಯರು, ಅಥವಾ ಕುಲಗುರುಗಳಿಂದಲಾಗಲಿ ವಿದ್ಯಾವಂತರಾದ ವರ ಮನೆಗಳಲ್ಲಿ ಹೆಣ್ಣು ಮಕ್ಕಳಿಗೂ ಸಾಧ್ಯವಾದಮಟ್ಟಿಗೆ ವಿದ್ಯಾಭ್ಯಾಸವು ನಡೆಯುತ್ತಿತ್ತು. ಅವರಿಗೆ ಸಾಮಾನ್ಯವಾಗಿ ಓದು, ಬರಹ, ಲೆಕ್ಕಾಚಾರ ಇವುಗಳನ್ನು ಕಲಿಸುತ್ತಿದ್ದರು. ಅನೇಕರಿಗೆ ಸ್ತೋತ್ರ ಪಾಠಗಳೂ, ಧರ್ಮನೀತಿಗರ್ಭಿತವಾದ ಶ್ಲೋಕಗಳೂ, ಪದಗಳೂ, ನಿಘಂಟು ಕೂಡ ವಾಚಕೋವಿಧೇಯವಾಗಿ ಬರುತ್ತಿದ್ದುವು. ಅವರುಗಳ ಬುದ್ಧಿಯನ್ನು ತಿದ್ದುವುದಕ್ಕೂ, ಪುರಾಣಾದಿಗ್ರಂಥಗಳ ಪರಿಚಯವು ಅವರಿಗೆ ಉಂಟಾಗುವುದಕ್ಕೂ ವಿಶೇಷವಿತ್ತು. ಆ ಕಾಲದಲ್ಲಿ ಈಗಿನಂತೆ ಅಚ್ಚು ಪುಸ್ತಕಗಳು ಸಿಕ್ಕುತ್ತಿರಲಿಲ್ಲ. ಆದರೂ ಅಲ್ಲಲ್ಲಿ ಜೀರ್ಣಾವಸ್ಥೆಗೆ ಬಂದ ಹಳೆ ಓಲೆಯ ಪುಸ್ತಕ, ದೇಶೀಯಕಾಗದಗಳ ಬರವಣಿಗೆಯ ಪುಸ್ತಕ, ಕವಿತೆ ಇವುಗಳು ದೊರೆಯುತ್ತಿದ್ದುವು. ಅರಮನೆಯಲ್ಲಿಯೂ ಗ್ರಂಥ ಲೇಖಕರು ಹಲವುಮಂದಿ ಇದ್ದಂತೆ ತಿಳಿಯಬರುತ್ತೆ. ಈ ತೆರನಾಗಿ ಪ್ರಭುಕಟಾಕ್ಷವೀಕ್ಷಣದಿಂಪುಂಟಾದ ಕಾಲೋಚಿತ ಪ್ರೋತ್ಸಾಹದಿಂದ ವಿದ್ಯೆಯು ನಾನಾಮುಖವಾಗಿ ವ್ಯಾಪಿಸಿತು.

22. ಸಿಂಹಾಸನ.—ಮೈಸೂರು ಪ್ರಭುಗಳವರ ಸಿಂಹಾಸನವು ಮೊಗಲಾಯಿ ಚಕ್ರವರ್ತಿ ಔರಂಗಜೇಬ್ ಬಾದಷಹರವರ ಕಾಲದ್ದೆಂಬ ಪ್ರತೀತಿಯೊಂದು ಕೆಲವೆಡೆ ನೆಲಸಿರುವುದು. ಇದಕ್ಕೆ ತಕ್ಕ ಸಾಧಕವೇನೂ ಕಂಡುಬರುವುದಿಲ್ಲ. ಆ ಬಾದಷಹರವರು ಸನ್ 1690ನೆ ಯಿಸವಿಯ ಸಮಯದಲ್ಲಿ ಮೈಸೂರು ದೊರೆಗಳಿಗೆ ಜಂತದ ಸಿಂಹಾಸನಾರೋಹಣವನ್ನು ಮಾಡುವ ಗೌರವವನ್ನು ದೊಸಪಾಗಿ ಕೊಟ್ಟಂತೆ ಹೇಳುತ್ತಾರೆಂದು ಮೇಜರ್ ವಿಲ್ಕ್ಸ್ ಸಾಹೇಬರವರು ನುಡಿದಿರುವರು. ಇದಕ್ಕೆ ಕಾರಣವೇನೂ ಕಾಣುವುದಿಲ್ಲ. ಮೈಸೂರು ನೃಪಾಲರಿಗೆ ಆ ಸಾರ್ವಭೌಮರು ಜಂತದ ಸಿಂಹಾಸನವನ್ನು ಕಳುಹಿಸಿಕೊಟ್ಟರೆಂದು "ಮೈಸೂರು ಚರಿತ್ರಸಾರ"

ನೆಂಬ ಈನ್ನಡದ ಪುಸ್ತಕದಲ್ಲಿ ಬರದಿರುವುದಕ್ಕೂ ಆಧಾರವೇನೋ ತಿಳಿಯು ಬರುವುದಿಲ್ಲ. ಮೈಸೂರು ಪ್ರಭುಗಳವರ ಪುರಾತನ ಸಿಂಹಾಸನದ ಆನು ಪೂರ್ವೀ ವೃತ್ತಾಂತವನ್ನು ಆಗಲೇ ಈ ಗ್ರಂಥದ ಪ್ರಥಮ ಸಂಪುಟದಲ್ಲಿ ವಿವರಿಸಿದೆ. ಅದರಲ್ಲಿ ಹೇಳಿರುವಂತೆ ಔರಂಗಜೇಬ್ ಬಾದಷಹರವರ ಪಿತಾ ಮಹರಾದ ಜಹಂಗೀರ್ ಚಕ್ರವರ್ತಿಯವರ ಸಮಕಾಲಿಕರಾಗಿದ್ದ ಈ ಸೀಮೆಯ ದೊರೆಗಳು ರಾಜಬಿಡೆಯರವರು ಇವನ್ನು ಆರ್ಜಿಸಿದವರು. ಈ ಅರ್ಥವನ್ನು ತಿರುಮಕೂಡಲು ನರಸಿಪುರದಲ್ಲಿ ಮೊರೆತಿರುವ ಸ್ಕ 1748ನೆ ಯಿಸವಿಯ ಶಾಸನದಲ್ಲಿ—

"ಸೋಽಯಂ ರಾಜನೃವಾಗ್ಯಣೀಸ್ತುಮಸುಲಕ್ಷ್ಮೀಚೂಲಾಮಂಜರಾ।
"ಜ್ಜಿತ್ವಾನೋರ್ಬ್ಬಗ ವಿಕ್ರಮಕ್ರಮಭರೈಃ ಶ್ರೀರಂಗಪುರ್ಯ್ಯಾಲಸ ಧೀಃ।
"ಆರುಹ್ಯಾದ್ಭುತ ಚಿತ್ರರತ್ನ ಖಚಿತಂ ಸೌವರ್ತ್ತುಂಗಸಿಂಹಾಸನಂ।
"ಸಾಮ್ರಾಜ್ಯಶ್ರಿಯಮಾಪ ತತ್ರನಿಖಿಲ ಕ್ಷೋಣೀಶಸಾಮ್ಯಾಂಪ್ರಿಕಃ॥

ರಾಜಬಿಡೆಯರವರು ನಿಜಭುಜಬಲದಿಂದ ತಿರುಮಲರಾಯನನ್ನು ಸೋಲ್ಪ ದಲ್ಲಿ ಜಯಿಸಿ, ಶ್ರೀರಂಗಪಟ್ಟಣವನ್ನು ಸ್ವಾಧೀನಪಡಿಸಿಕೊಂಡು ಅಲ್ಲಿ ಅದ್ಭುತವಾದ ಶ್ರೇಷ್ಠತರ ರತ್ನಖಚಿತ ಸಿಂಹಾಸನಾರೋಹಣವಾಗಿ ಸಾಮ್ರಾಜ್ಯ ಲಕ್ಷ್ಮೀಧುರಂಧರರೆನಿಸಿ ಸಾಮಂತನರಪತಿಗಳಿಂದ ವಂದ್ಯ ರಾದರೆಂದು ಹೇಳಿರುವುದು ಪೋಷಿಸುತ್ತೆ.

ಇನ್ನೂ ಶ್ರೀರಂಗಪಟ್ಟಣದ ತಾಲ್ಲೂಕಿನಲ್ಲಿ ದೊರೆತಿರುವ 1646ನೆ ಯಿಸವಿಯ ಶಾಸನವು—

"ಜಯತುಶ್ರೀಪತೇರ್ವಾ ಮನೇತ್ರವಂಶಾಬ್ಧಿ ಚಂದ್ರವಾಃ।
"ಕಲಾನಿಧಿರುದಾರಶ್ರೀಃ ಕಂಠೀರವನೃಸಿಂಹರಾಟ್।
"ಶ್ರೀಮತ್ಪಶ್ಚಿಮ ರಂಗಪಟ್ಟಣಪರೇ ಸಿಂಹಾಸನೇಸಂಸ್ಥಿತಃ।
"ಮುಕ್ತಾಛತ್ರಸುವರ್ಣಮತ್ಸ್ಯ ಮಕರಾಕಾರಧ್ವಜೈರ್ಲ್ಲಾಂಛಿತಃ॥

ಶ್ರೀಮತ್ಕಂಠೀರವ ನೃಸಿಂಹ ಭೂಪಾಲರು ಮುತ್ತಿನ ಛತ್ರ, ಚಿನ್ನದ ಮತ್ಸ್ಯಮಕರಾಕಾರದ ಬಿರುದುಗಳು ಇವುಗಳಿಂದ ಅಂಕಿತ ರಾಗಿ ಶ್ರೀರಂಗಪಟ್ಟಣವಲ್ಲಿ ಸಿಂಹಾಸನಾಧೀಶ್ವರರಾಗಿದ್ದರೆಂದು ಉದ್ಘೋಷಿಸುತ್ತೆ.

ಅವಲ್ಲದೆ ಅದೇ ತಾಲ್ಲೂಕಿನಲ್ಲಿ ಸಿಕ್ಕಿರುವ 1678 ನೆಯಿಸವಿಯ ಶಾಸನದಲ್ಲಿ—

"ಶುಭಮಸ್ತು ಸ್ವಸ್ತಿಶ್ರೀ ವಿಜಯಾಭ್ಯುದಯ ಪಾಲವಾಪನ ಶಕ ವರ್ಷ
"೧೬೦೦ ಸಂದ ವರ್ತಮಾನವಾದ ಕಾಲಯುಕ್ತಿ ಸಂವತ್ಸರದ ಆಷಾಢಶುದ್ಧ ೧೦
"ರಲ್ಲು ಬಿರುದಂತಂಬರಗಂಡ, ಬೋಕ್ಕೆಕವೀರ, ಶ್ರೀಮನ್ಮಹಾರಾಜಾಧಿರಾಜ ಪರ
"ಮೇಶ್ವರ ಪ್ರೌಢಪ್ರತಾಪಪ್ರತಿಮವೀರ ನರಪತಿ ಶ್ರೀಚಿಕದೇವ ಮಹಾರಾಜಬಡೆ
"ಯುತ್ತಮ್ಮನವರು ಶ್ರೀರಂಗಪಟ್ಟಣದಲ್ಲಿ ರತ್ನ ಸಿಂಹಾಸನಾರೂಢರಾಗಿ ಪೃಥ್ವೀ
"ರಾಜ್ಯಂಗೈಯುತ್ತಿರಲು"

ಎಂದು ಬಿಕ್ಕಣಿಸಿರುವುದರಿಂದ ಮಹಾರಾಜರು ಚಿಕ್ಕದೇವರಾಜಬಡೆಯರವರು ಸ್ವಯಂರತ್ನ ಸಿಂಹಾಸನಾಧಿಪರಾಗಿದ್ದರೆಂದು ವ್ಯಕ್ತಪಡುತ್ತೆ.

ಹೀಗೆ ವಿಚ್ಛಿತ್ತಿಯಿಲ್ಲದೆ ಇದುವರೆಗಾಗಲೇ 300 ಮುನ್ನೂರು ವರ್ಷಗಳಿಗೆ ಕಡಿಮೆಯಿಲ್ಲದ ಕಾಲದಿಂದಲೂ ಪುತ್ರ ಪೌತ್ರ ಪಾರಂಪರ್ಯವಾಗಿ ಯದುಕುಲತಿಲಕರಾದ ಮೈಸೂರು ದೊರೆಗಳು ಸಿಂಹಾಸನಸ್ಥರಾಗಿರುವರು. ಇವರಲ್ಲಿ ಶ್ರೀಮುಮ್ಮಡಿ ಕೃಷ್ಣರಾಜ ನೃಪಾಲ ಮೌಳಿಗಳು ಅಪೂರ್ವವಾಗಿ ಸುದೀರ್ಘಕಾಲ ಎಂದರೆ 69 ವರ್ಷಗಳ ಪರ್ಯಂತ ವಿಕ್ರಮ ಪ್ರಕಾರ ಆದಿಸ್ವರತ್ನ ಸಿಂಹಾಸನಾಸೀನರಾಗಿ ಹಿಂದಿನಕಾಲದಲ್ಲಿ ಜಂತದಿಂದ ನಿರ್ಮಿತವಾಗಿದ್ದ ಆ ಸಿಂಹಾಸನಕ್ಕೆ ಸ್ವ 1812—14 ಇಸವಿಗಳಲ್ಲಿ ಅನುರೂಪವಾದ ಜಿನ್ನದ ಕೆಲಸವನ್ನು ಅಪ್ಪಣೆ ದಯಪಾಲಿಸಿದರು ಬಳಿಕ ಅದು ಆ ಭಾವಂದರವರ ಆಜ್ಞಾನುಸಾರ ಸ್ವರ್ಣಮಯವಾದ ಶಿರಾಣಿಯಿಂದಲೂ ಅಲಂಕೃತವಾಯಿತು.

23. ಪಾಳೆಯಗಾರರಿಗೆ ಇಜಾಫೆ.—ಪಾಳೆಯಗಾರರಿಗೆ 1799ನೆಯಿಸವಿಯಲ್ಲಿ ಸೀಮೆಯು ವ್ಯವಸ್ಥೆಯಾದಾಗ ವಿಧಿಸಿದ್ದ ಮರ್ಯಾದೆ ತಲಬನ್ನು (Stipend) ಭಾವಂದರವರು ಕ್ರಮವಾಗಿ ನಡೆಸಿಕೊಂಡು ಬಂದುದಲ್ಲದೆ ಅವರಲ್ಲಿ ಅನೇಕರಿಗೆ ಕಾಲೋಚಿತವಾಗಿ ಇಜಾಫೆಯನ್ನು ಸಹ ಅಪ್ಪಣೆ ದಯಪಾಲಿಸಿದರು.

24. ಮುಜರಾಯಿ.—ಛತ್ರ, ದೇವಸ್ಥಾನ, ಮಠ, ಮುಸಾಫರ್ ಖಾನೆ, ದರ್ಗ, ಮಸೀದಿ, ಫಕೀರ್‌ಪರ್ವಾಡಿ ಇವು ಮೊದಲಾದ ಮುಜರಾಯಿ ಖಾತೆಗಳನ್ನು ಭಾವಂದರವರು ವಿಚಾರಿಸಿ ಅಭಿವೃದ್ಧಿಪಡಿಸಿ ಇದರ

ಸಂಬಂಧವಾದ ಬರಾವೆರ್ಜುಗಳನ್ನೆಲ್ಲ ಅಯೂ ಸ್ಪೌಜುದಾರರು ತರಿಸಿ ಕೊಂಡು ತನಿಖೆಮಾಡಿ ಕರಾರುವಾಕ ಲೆಕ್ಕದ ಮೇರೆಗೆ ಬಟವಾಡೆ ಮಾಡಿಸ ಬೇಕೆಂತಲೂ ಮುಖಾದಲೆ ಮುಂತಾದ ಖರ್ಚಿಗೆ ಅವಕಾಶವಾಗದಂತೆ ನೋಡಿಕೊಳ್ಳಬೇಕೆಂತಲೂ ಸನ್ 1826 ರಲ್ಲಿ ಹುಕುಂನಾಮೆಕೊಡಲ್ಪಟ್ಟಿ ದರು. ಈ ಇಲಾಖೆಯ ಧರ್ಮಗಳು ಕ್ರಮವಾಗಿ ನಡೆದುವೆ ವಿಷಯದಲ್ಲಿ ಸೊರೆಗಳಿವೆರು ತುಂಬಾ ಆಸಕ್ತಚಿತ್ತರಾಗಿ ಮೇಲುಕೋಟೆ ಮುಂತಾದ ಭಾರಿ ದೇವಸ್ಥಾನಗಳಲ್ಲಿ ಕೆಲಸನಡೆಸಲು ಅರ್ಹರಾದ ಪಾರು ಪತ್ಯಗಾರರನ್ನು ಬದ್ದಿ ನೇಮಿಸಿ ಅಪ್ಪಣೆ ಕೊಡಿಸುತ್ತಿದ್ದರು.

25. ಮುಲ್ಕಿ ಮುಂತಾದ ಬಾಬುನಲ್ಲಿ ಖಾವಂದರವರಿಂದ ಅಪ್ಪಣೆಯಾದ ಹುಕುಂನಾಮೆ.—ಸನ್ 1819ನೆ ಯಿಸವಿ ಮಾರ್ಚಿ ತಾರೀಖು 26 ರಲ್ಲಿ ಆಳ್ವಿಮಹಾಸ್ವಾಮಿಗಳವರು ಮುಲ್ಕಿ ಮುಂತಾದ ಬಾಬುಗಳಲ್ಲಿ ತಾಲ್ಲೂಕು ಅಮಿಲರುಗಳಿಗೆ ಸಾದರ್ಪಡಿಸಿದ ಒಂದು ಹುಕುಂ ನಾಮೆ ಈಚಿಗೆ ದೊರೆತಿದೆ. ಇದರಲ್ಲಿ (1) ತಾಲ್ಲೂಕಿಗೆ ಹೊಸ ಅಮಿಲರು ಸೊಕರರಾದಲ್ಲಿ ಅವರಿಗೆ ಮಾಜಿ ಅಮಿಲರು ಕಾಗದಪತ್ರ, ತಸವೀಕು, ಜಿನಸು, ಮುಂತಾದುದನ್ನು ವಹಿಸಿಕೊಡುವುದು (2) ಮುಲ್ಕಿ ಬಾಕಿವೆ ಸೂಲಿ (3) ಮಾಜಿ ಅಮಿಲ, ಶಿರಸ್ತೆದಾರ ಮೈಸೆರೆ ಜನರುಗಳ ಬಗ್ಗೆ ಬದ್ದು ಬದ್ದು, ಭಪಾವಣೆ ವಿಚಾರಗಳಲ್ಲಿ ನಡೆಸತಕ್ಕ ಕ್ರಮ (4) ಮಾಜಿ ಅಮಿಲರ ಕಾಲದಲ್ಲಿ ಬೆಟ್ಟ ವರ್ತಕರು ಮೊದಲಾದವರು ಸರ್ಕಾರಕ್ಕೆ ಬಾಕಿ ಮಾಡಿದ್ದು ಮುಂತಾದ್ದರ ಸಮಜಾಯಿಷಿ (5) ರೈತನು ಜಮೀನು ಭಪಾವಣೆಮಾಡಿದ್ದು, ಕುಳತೆರಿಗೆ, ಪಾಳುಭೂಮಿಯು ಸಾಗುವಳಿ ಮುಂತಾದ ವಿಷಯ (6) ಸರ್ಕಾರಕ್ಕೆ ಬರತಕ್ಕ ದವಸ (7) ಭಾದ್ರಪದ ಪೌಸದಿಂದ ಕಾರ್ತಿಕಮಾಸದವರೆಗೆ ಅಮಿಲ ಶಿರಸ್ತೆದಾರರು ಸಹ ಕಸಬಿ ಯಲ್ಲಿ ಇದ್ದುಕೊಂಡು ಮಾಡತಕ್ಕದ್ದು, ಸಾಲ ಮೂಡಿ ನಗದಿಲೆಕ್ಕದ ತಂಬೂರಿ ಮುಂತಾದ ಕೆಲಸ (8) ಮಾರ್ಗಶಿರ ಪುಷ್ಯಮಾಸಗಳಲ್ಲಿ ವೈಶಾಖದ ಸಾಗುವಳಿಗೂ, ಕಬ್ಬಿನ ಸಾಗುವಳಿಗೂ ಅಮಿಲ ಶಿರಸ್ತೆದಾರರು ಪ್ರತಿಗ್ರಾಮಕ್ಕೂ ಹೋಗಿ ಅಲ್ಲಿ ಕೆರೆಗಳಲ್ಲಿರುವ ನೀರಿನ ಲಭ್ಯದ ನೋಡಿ ಇಷ್ಟೇಸಾಗುವಳಿ ಆಗಬೇಕೆಂದು ಮೇರೆ ನಡೆಸತಕ್ಕ ಕ್ರಮ.

(9) ತಾಲ್ಲೂಕು ಮೆಜಕೂರು ಜಮೋಬಂದಿ ಕ್ರಮ (10) ಅಮೋನಿ ದವೆಸವೆನ್ನು ಜತನವೆಮಾಡಿ ಲಾಭ ಬರುವಂತೆ ವಿಕ್ರಯಿಸುವುದು (11) ತಾಲ್ಲೂಕು ಮೆಜಕೂರಲ್ಲಿ ಪೈರು ಆಗತಕ್ಕ ಸರ್ಕಾರದ ಕೆರೆಗಳಿಗೂ, ಕೊಡಗಿ ಕೆರೆಗಳಿಗೂ ಕಾಮಗಾರಿ ಮಾಡಿಸತಕ್ಕದ್ದು (12) ಜೀವಾರಸು ಮೇಲಿನ ವಿಲೆವಾರಿ (13) ಸರ್ಕಾರದ ತಸ್ತೀಕು, ರಹದಾರಿ, ನಿರೂಪ, ಇವುಗಳನ್ನ ನುಸರಿಸಿ ಖರ್ಚುಮಾಡತಕ್ಕದ್ದು (14) ಮೊಹೆವಾರಿ ಜಮೋಖರ್ಚುಲೆಕ್ಕದ ತಯಾರಿ ಮತ್ತು ಕಿಸ್ತು ವೆಸೂಲಿ (15) ನಾದಾರು ಕುಳಕ್ಕೆ ತಕಾನಿಕೊಡುವುದು (16) ಆಮಿಾಲ ಶಿರಸ್ತೆದಾರರುಗಳು ಪ್ರತಿದಿನವೂ ನಡೆದ ವಿದ್ಯಮಾನಗಳನ್ನು ರಿಪ್ರೋರ್ಟುಮಾಡುವುದು (17) ಸರ್ಕಾರಕ್ಕೆ ಫರಮಾಯಿಷಿ ಜಿನಸು ಮುಂತಾದವನ್ನು ಕಳುಹಿಸತಕ್ಕ ವಿಷಯ (18) ಬಂದು ತಾಲ್ಲೂಕಿನಿಂದ ಮೆತ್ತೊಂದು ತಾಲ್ಲೂಕಿಗೆ ಸಂಸಾರಸಮೇತ ಹೋಗುವ ರೈತರಿಗೆ ಅನುಕೂಲಿಸುವಂತೆ ಜವಿಾನು ಕೊಟ್ಟು ಅವರಿಗೆ ನೆಲೆಯನ್ನುಂಟುಮಾಡಿಕೊಡುವ ವಿಷಯ (19) ರೈತಜನರ ದನಕರುಗಳಿಗೆ ಉಂಟಾಗುವ ಹುಲಿ ಹಂಗಾಂನಿವಾರಣೆ ಮಾಡುವುದು (20) ಆಮಿಾಲ, ಶಿರಸ್ತೆದಾರ, ಅಂಜಿಕೆ ಮುತ್ಸದ್ದಿ ಮುಂತಾದ ಸರ್ಕಾರದ ನೌಕರರು ಅವರವರಿಗೆ ಅಧಿಕಾರವಿರುವ ತಾಲ್ಲೂಕುಗಳಲ್ಲಿ ಜವಿಾನು ವ್ಯವಸಾಯ ಮಾಡಲಾಗದೆಂಬ ವಿಷಯ (21) ತಾಲ್ಲೂಕು ಮೆಜಕೂರಲ್ಲಿ ವಾರದ ಹೊಲ ಗದ್ದೆ ಪೈಕಿ ಸಾಬುಕಿನಿಂದ ಹುಟ್ಟು ವೆಳ ಜಾಸ್ತಿಯಾಗುತ್ತಿದ್ದದ್ದು ಆಮಿಾಲ, ಶಿರಸ್ತೆದಾರ, ಸ್ಥಳದ ಪಾರು ಪತ್ಯಗಾರ ಮೊದಲಾದವರೇನಾದರೂ ಹೀನ ಕಂದಾಯಕ್ಕೆ ಮಾಡಿದ್ದರ ಆ ಬಾಬು ವಿಚಾರಣೆಮಾಡಿ ಕ್ರಮಪಡಿಸುವುದು; ಈ ಇಪ್ಪತ್ತೊಂದು ಅಂಶಗಳನ್ನು ಕುರಿತು ವಿವರವಾಗಿ ಹುಕುಂನಾಮೆ ಅಪ್ಪಣೆಯಾಗಿದೆ. ಇದರಿಂದ ಸೀಮೆಯ ಆಡಳಿತವನ್ನೂ ಕಾಲಸ್ಥಿತಿಯನ್ನೂ ಅರಿತು ಸರ್ಕಾರಕ್ಕೆ ಅನುಕೂಲ, ಪ್ರಜೆಗೆ ಪ್ರಯೋಜನ, ರೈತಪರವರ್ಷಿ ಇವುಗಳ ಮೇಲೆ ಸಂಪೂರ್ಣ ದೃಷ್ಟಿಯಿಟ್ಟು ಸರ್ಕಾರದ ಉದ್ಯೋಗಸ್ಥರು ಮಾಡತಕ್ಕ ಕೆಲಸಗಳ ವಿಷಯವಲ್ಲಿಯೂ, ಜಮೋ ಖರ್ಚು ಮುಂತಾದ ಬಾಬುಗಳಲ್ಲಿಯೂ ಖಾನೆಂದವರು ವಿಚಕ್ಷಣೆಯಿಂದ ಆಜ್ಞೆ ದಯಪಾಲಿಸಿದ

ಕ್ರಮವು ವ್ಯಕ್ತವಾಗುತ್ತೆ. ಆ ಜುಕುಂನಾಮಿಯ ಸ್ವಭಾವವನ್ನು ತಿಳಿಸುವುದಕ್ಕೋಸ್ಕರ ಅದರಲ್ಲಿರುವ ಕೆಲವು ಕಲಮುಗಳನ್ನು ಯಥಾಸ್ಥಿತವಾಗಿ ಇಲ್ಲಿ ತೋರಿಸಿದೆ.

*　　*　　*　　*　　*

*　　*　　*　　*　　*

*　　*　　*　　*　　*

ಮೂರನೆಯ ಕಲಂ.—ಮೋಜಿ ಅಮೀಲು ಶಿರಸ್ತ್ದಾರ ವಗೈರೆ ಜನರು ತಾಲ್ಲೂಕಿನಲ್ಲಿ ತೈನಾತಿ ಪೈಕಿ ಗುಂಜಾಯಿಷಿ ವಗೈರೆ ಭಪಾಯಿಸಿ, ಲಂಚಗಳು ತೆಗೆದುಕೊಂಡು ಶಿವಾಯಿ ಜಮೆ ವಗೈರೆ ಕಲಮುಗಳಲ್ಲಿ ಭಪಾಯಿಸಿ ತಪಜ್ಜುಬಾಬು ಪೈಕಿ ಇಲ್ಲದಪರಚ್ಜು ಬಿಟ್ಟಿದು ಮುಮುಗಬದುಗ ಮೊತದ್ದು, ಇದು ಶಿವಾಯಿ ಫಿರ್ಯಾದು ವಗೈರೆ ದರಿಯಾಫ್ತ್ತಿ ಮಾಡುವಲ್ಲಿ ಪಕ್ಷಪಾತಮಾಡಿ ಬಲವಂತನಿಂದ ಯಲ್ಲಿಪರಿಯಂತನಕ್ಕೂ ನಗವಾಗಲಿ, ಜಿನಸು ಆಗಲಿ ರುಷವತ್ತು ಯಂಬದಾಗಿ ತೆಗೆದುಕೊಂಡು ಯಿರುವಂಥಾದ್ದು, ಯಾವತ್ತು ಗೈರವಾಜಬೀ ಲೆಕ್ಕಾಚಾರ ಸಾಫ್ಷಿ ರುಜು ಮೊಹಾಬಿಲೆಯಿಂದ ಕೂಲಂಕಷ ದರಿಯಾಫ್ತ್ತಿಮಾತಿ ಯಾರಯಾರಕಡೆ ರುಜು ಆಗುತ್ತಾಯಿಫೆಯೋ ಆಯಾ ಜನರಿಂದ ದಸ್ತ್ಖತ್ತು ತೆಗೆದುಕೊಂಡು ರುಜು ಆದ ಐವೆಜು ಬೇಬಾಕಿಯಾಗಿ ವಸೂಲುಮಾಡಿಕೊಳ್ಳಬೇಕು. ಮುಂದಕ್ಕೆ ಮೋಜಿ ಅಮೀಲ ಶಿರಸ್ತ್ದಾರ ಕೇಕದಾರ ವಗೈರೇರು ಖಾತರ ನಿಮಿತ್ಯ ದರಿಯಾಫ್ತ್ತಿಮಾಡದೆ ತಾತ್ಸಾರ ಮಾಡಿಬಿಟ್ಟಿದ್ದು ರುಜು ಆದದ್ದೇ ಉಂಟಾದರೆ ಹಾಲಿ ಅಮೀಲ ಕೊಡಬೇಕು. ಇದು ತಿಳಿದು ಪತ್ತುವಳಿ ಬಾಬತಿನಲ್ಲಿಯೂ ಬಲವಂತದಿಂದ ಬಿಟ್ಟಿ ಬೇಗಾರಿಯಲ್ಲಿ ಜೊಲಗದ್ದೆಗಳ ಮಾಡಿಸಿಕೊಂಡು ಯಿದ್ದಾಗ್ಯೂ ಸಹ ಇದು ಯಾವತ್ತು ಗೌಡ ಶ್ಯಾನುಭೋಗ ಕೆಟ್ಟಿ ವರ್ತಕ ವಗೈರೆ ಜನರಿಂದ ಯಥಾವತ್ತಾಗಿ ದರಿಯಾಫ್ತ್ತಿ ಮಾಡಿ ರುಜು ಮುಚ್ಚಲಿಕೆಯು ಬರೆಸಿಕೊಂಡು ಮೋಜಿ ಅಮೀಲಗೆ ಅವನ ಅಮಲ್‌ನಲ್ಲಿ ನಡೆದು ಇರುವೆ ವಿದ್ಯಮಾನಕ್ಕೆ ಮಹಜರು ಬರೆದುಕೊಡಬೇಕು.

*　　*　　*　　*　　*

ಐವನೇಕಲಂ.—ಸಂವತ್ಸರ ಪುರು ಆಗುತ್ತಲೇ ಚೈತ್ರ, ವೈಶಾಖ ಜ್ಯೇಷ್ಠ ಮಾಸದಲ್ಲಿ ಅಮಿಾಲ, ಶಿರಸ್ತೇದಾರಸಹ ತಾಲ್ಲೂಕು ಮಟ್ಟ ಕೂರಿನ ಗ್ರಾಮಗಳಿಗೆ ಹೋಗಿ ಯಾವತ್ತು ಕುಳವಾರು ಸುವರ್ಣಾದಾಯ ದರಿಯಾಫ್ತು ಮಾಡಿ ಯಾರಾದರೂ ಸ್ಥಳವಂಚನೆಯಲ್ಲಿ ಮೆಸಲಾ ಬಬ್ಬ ರೈತನು ಕಂದಾಯದ ಹೊಲಕ್ಕೆ ಆಜೂಬಾಜು ಇರುವಂಥಾ ಭೂಮಿ ಹೊಲಗಳ ಕಂದಾಯ ಕೊಡಬಿಕೆಬಕು ಭೂಮಿ ದಾಖಲು ಮಾಡಿಕೊಂಡು ಇರುವಂಥಾದ್ದು ಗೌಡ ಶ್ಯಾನುಭೋಗರು ಕೆಲವು ಹೊಲಗಳ ಕಂದಾಯ ಸರಕಾರಕ್ಕೆ ದಾಖಲು ಮಾಡದೆ ಅನುಭವಿಸಿಕೊಂಡು ಬರುವಂಥಾದ್ದೂ ಸಹ ಇದುಹೊತ್ತು ಕುಳವಂಚನೆಯಲ್ಲಿ ಕೆಲವು ಕುಳಗಳ ತೆರಿಗೆ ವೈರ ದಾಖಲು ಮಾಡದೆ ಇರುವದು ಈ ಶಿವಾಯಿ ಮೆಸಲಾ ಬಬ್ಬ ರೈತನು ಪ್ರಾಕಾರಭ್ಯ ನಾಲ್ಕು ವರಹ ಕಂದಾಯ ಕೊಡುವಂಥಾವನು ಸ್ಥಳದವರ ಆಸರೆಯಿಂದ ಬಂದು ವರಹಾ ಎರಡು ವರಹ ಕಮ್ಮಿ ಮಾಡಿಸಿಕೊಂಡು ಇನ್ನಲ್ಲಿಯೂ ಇನಾಮುದಾರರು ಬಾರಾಬಲೂತಿ ಜನರು ತಮಗೆ ಸರಕಾರದಿಂದ ಜಾರಿಯಾಗಿರುವ ಭೂಮಿ ಅಲ್ಲದೆ ಜಾಸ್ತಿ ಭೂಮಿ ಸ್ಥಳದವರ ಬಂದ ಕಟ್ಟಿನಿಂದ ದಾಖಲು ಮಾಡಿಕೊಂಡು ಅನುಭವಿಸುತ್ತ ಇರುವಂಥಾದ್ದು ಸಹ ಜೆನ್ನಾಗಿ ದರಿಯಾಫ್ತು ಮಾಡಿ ಆಯಾ ಕುಳಕ್ಕೆ ಯಥಾವತ್ತಾಗಿ ಲೆಕ್ಕಾಚಾರದ ಮೇರೆಗೆ ರುಜುಮಾತಿಕೊಟ್ಟು ರೈತ ರಜಾವಂದೀಯಿಂದ ಸಮಗ್ರ ಸುವರ್ಣಾದಾಯಕ್ಕೆ ರೈತನಾರು ಕಂದಾಯದ ಚೀಟು ಬರೆಸಿ ಶಿರಸ್ತೇದಾರರ ರುಜು ಹಾಕಿಸಿ ಹರಪರ ರೈತರಿಗೂ ಚೀಟುಗಳು ಕೊಡುವದು ಶಿವಾಯಿ ಹಾಲಿ ಹಾಜರಿರುವ ಭೂಮಿಯನ್ನು ಚನ್ನಾಗಿ ವಾರಕ್ಕೆ ಸಾಗುವಳಿ ಮಾಡುವ ಹಾಗೆ ಆಯಾ ಗ್ರಾಮಗಳ ಲೇಕದಾರ, ಗೌಡ, ಶ್ಯಾನುಭೋಗ ವೈರೆ ರೈತರಿಗೆ ಸಹ ಉತ್ತಮ ಪ್ರಕಾರ ಕಾಲಕಾಲವರಿತು ವೈರು ಮಾಡುವಂತೆ ತಾಕೀತು ಮಾಡಿ ಗೌಡಗಳಿಂದ ಮುಚಳಿಕೆ ಬರೆಸಿಕೊಂಡು ಸದರೀ ಗ್ರಾಮಗಳಲ್ಲಿ ಕಂದಾಯದ ಭೂಮಿ ವಾರದ ಸಾಗುವಳಿ ಹೋಗಲಾಗಿ ಪ್ರಾಕುರೈತರು ಮಾಡಿದ್ದ ಭೂಮಿಯಲ್ಲಿ ಕೌತಿಪರಾರಿ ಆದವರ ಪಾಳುಭೂಮಿಯು ಅನಾದಿ ಬಂಜರು ಭೂಮಿಯು ಭೋಚರಾಕಾಗಿರುವ ಭೂಮಿ ಸಹ ಎಷ್ಟು

ಇದಯೋ ಚನ್ನಾಗಿ ನೋಡಿ ಆಯಾ ಗ್ರಾಮದ ಪ್ರಜೆಗಳಿಗೆ ರಜಾ ಮಂದೀಯಿಂದ ಸಾಗುವಳಿ ಮಾಡಬೇಕು. ಪಾಳುಭೂಮಿ ಸಾಗುವಳಿ ಮಾಡುತ್ತೇನೆಂದು ಆ ಗ್ರಾಮದ ರೈತರೇ ಆಗಲಿ ಸಮೀಪದ ಗ್ರಾಮದ ರೈತವೆಗೈರೇರು ಆಗಲಿ ದರಖಾಸ್ತು ಮಾಡಿದಲ್ಲಿ ಅದಕ್ಕೆ ಸದ ಆವಿೂಲ ತೀರಸ್ತೆದಾರರ ರುಜುವಿನಿಂದ ಶ್ರಯಪಟ್ಟೆ ಬರೆದುಕೊಡುವ ಕಾಯಿದೆ ತಪ್ಪಿಸೀಲು:—

೧. ಕೆಲವು ಪೌತಿಪರಾರಿ ವೆಗೈರೆ ರೈತರು ಮಾಡುತ್ತಿದ್ದು ಭೂಮಿ ಪಾಳುಬಿದ್ದದ್ದು ಕಂದಾಯವಿಲ್ಲದೆ ವಾರಕ್ಕೆ ಸಾಗುವಳಿಯಾಗಿ ಇದ್ದ ಭೂಮಿ ಸಹ ರೈತರು ರಜಾವೆಂದೀಯಿಂದ ವಾರಕ್ಕೆ ಕೇಳಿದರೆ ವಾರಕ್ಕೆ ಮೊಕರರು ಮಾಡಿಕೊಡಬೇಕು. ಕಂದಾಯಕ್ಕೆ ಕೇಳಿದಲ್ಲಿ ವಾಜಬೀಕ್ರಾಕಿನ ಕಂದಾಯ ಪ್ರಕಾರ ಕಂದಾಯಕ್ಕೆ ಸಾಗುವಳಿ ಮಾಡ ಬೇಕು. ಅಥವಾ ಒಂದು ವರ್ಷಕ್ಕೆ ಪೂರಾ ಕಂದಾಯ ಕೊಡಲಾರೆವು ಎಂಬದಾಗಿ ಶ್ರಯಕ್ಕೆ ಕೇಳಿದಲ್ಲಿ ಭೂಮಿಯ ವಿಧವರಿತು ಮೂರು ವರ್ಷ ದೊಳಗೆ ಶ್ರಯಕ್ಕೆ ಮೊಕರರು ಮಾಡಿಕೊಟ್ಟು ಶ್ರಯದ ಪ್ರಕಾರ ಖರ್ಚು ತೆಗೆದುಕೊಂಡು ಶ್ರಯಭರ್ತಿ ಆದಮೇಲೆ ಆ ಭೂಮಿಗೆ ಪೂರಾ ಕಂದಾಯ ತೆಗೆದುಕೊಳ್ಳುತ್ತಾ ಬರಬೇಕು.

೨. ಬಹುಕಾಲದ ಪಾಳು ಭೂಮಿಯಲ್ಲಿ ಗಿಡಬೆಳದಿರುವೆಭೂಮಿ ಅನಾದಿ ಪಾಳುಭೂಮಿ ಸಹ ಇದ್ದರೆ ಆಭೂಮಿ ಗಿಡ ಮುಂತಾದ್ದನ್ನು ಕಡಿದು ಸಾಗುವಳಿ ಮಾಡತಕ್ಕ ರೈತರು ವಾರಕ್ಕೆ ದರಖಾಸ್ತು ಮಾಡಿದರೆ ಮೊದಲವರ್ಷ ಏನು ಹುಟ್ಟುವಳಿ ಆಗುತ್ತಾ ಇದೆಯೋ ಯಾವತ್ತೂ ರೈತರಿಗೆ ಮಾಫುಮಾಡಬೇಕು. ಎರಡನೇ ವರ್ಷದಲ್ಲಿ ಆದ ದವಸದಲ್ಲಿ ಮೂರುಪಾಲು ರೈತರಿಗೆ ಒಂದುಪಾಲನ್ನು ಸರಕಾರಕ್ಕೆ ತೆಗೆದುಕೊಳ್ಳು ವುದು. ಮೂರನೆಯ ವರ್ಷದಲ್ಲಿ ಹುಟ್ಟುವಳಿ ಆದ ದವಸದ ಬೈಕಿ ಎರಡು ಪಾಲು ರೈತರಿಗೂ ಒಂದುಪಾಲು ಸರಕಾರಕ್ಕೂ ತೆಗೆದುಕೊಳ್ಳಬೇಕು. ನಾಲ್ಕನೆಯ ವರ್ಷದಿಂದ ಹುಟ್ಟುವಳಿ ಆದ ದವಸದಲ್ಲಿ ಸರಕಾರಕ್ಕೆ ಅರ ವಾಸಿ ರೈತರಿಗೆ ಅರವಾಸಿ ಮೇರೆಗೆ ಕೊಡಬೇಕು. ಅಥವಾ ಇದೇ ಭೂಮಿ ಕಂದಾಯಕ್ಕೆ ಕೇಳಿದಲ್ಲಿ ಭೂಮಿ ವಿಧವರಿತು ಮೂರು ವರ್ಷದಿಂದ

ಅಪುವೆಷ್ಟು ಒಳಗೆ ಶ್ರಯುಕ್ಕೆ ಮೊಕರರು ಮಾಡಿಸಿಕೊಟ್ಟು ಶ್ರಯುದ ಪ್ರಕಾರ ಕಂದಾಯದ ಐವಜು ತೆಗೆದುಕೊಳ್ಳಿಬೇಕು. ಶ್ರಯು ಭರ್ತಿ ಆವಮೇಲೆ ಜಿಪ್ತಿಬೀತೆ ಮೇರೆಗೆ ಪೂರಾ ಕಂದಾಯ ತೆಗೆದುಕೊಳ್ಳಿಬೇಕು.

೫. ಬೇಗಡೆ ಪಾಳು ಭೂಮಿಗೆ ತಮ್ಮ ಕೈಯಿಂದ ಐವಜು ಹೇರಳ ವಾಗಿಮುಟ್ಟಿಸಿ ಆಗತಿಮಾಡಿಗರಿಕೆಬೇರು ಸಮಗ್ರತೆಗೆದು ಭೂಮಿ ಸಾಗು ವಳಿ ಮಾಡುತ್ತೀನೆಂದು ದರಖಾಸ್ತು ಮಾಡಿದವರಿಗೆ ಶ್ರಯುಕ್ಕೆ ಕೊಡಬೇ ಕಾದರೆ ಆಗ್ರಾಮಗಳ ರಿವಾಜು ಪ್ರಕಾರಬ್ಯ ಇದ್ದದ್ದಕ್ಕೆ ಕಮ್ಮಿಮಾ ಡದೆ ವಾಜುವಿ ಪದ್ಧತಿ ಇದ್ದಪ್ರಕಾರ ಶ್ರಯುಪಟ್ಟೆ ಬರೆದುಕೊಟ್ಟು ಶ್ರಯುದ ಮೇರಿಗೆ ನಡೆಸಿ ಶ್ರಯು ತೀರಿದಮೇಲೆ ಪೂರಾ ಕಂದಾಯ ತೆಗೆದುಕೊಳ್ಳಿ ಬೇಕು.

೪. ತಾಲ್ಲೂಕು ಮೆಜಕೂರು ಪೈಕಿ ಗುತ್ತಿಗೆದಾರ ಗೌಡ, ಶ್ಯಾನುಭೋಗರು ಮುಂತಾದ ಜನರ ಉಪದ್ರವದಿಂದ ನಾವಾರಿಯೂಗಿ ಬಿಗರ ತಾಲ್ಲೂಕಿಗೆ ಹೋಗಿರುವ ರೈತರು ಯಾವಯಾವ ತಾಲ್ಲೂಕಿನಲ್ಲಿದ್ದಾರೆಯೊ ದರೋಬಸ್ತರ ಪತ್ತೀಹತ್ತಿಸಿ ಸದರಹೂ ರೈತರಿಗೆ ನಂಬಿಕೆಯಿಂದ ಕರೆ ತರಿಸಿ ಕೌಲು ಕರಾರು ಕೊಟ್ಟು ರಜಾವಂದೀ ಮಾಡಿ ಆಯಾ ಸಳ ದಲ್ಲಿಟ್ಟು ಸದರಹೂ ರೈತರಿಗೆ ಜವಿನಾನು ಮೈಸೈರೆ ಕೊಟ್ಟು ಅವರವ್ರ ಗೆ ಮನೆಗಳು ಬಿತಿಸಿಕೊಟ್ಟು ಜೀರಾಯಿತು ಕೆಲಸವಲ್ಲಿಪಬೇಕು. ಬಂದು ಬೇಳೆ ರೈತರು ತಕಾವೀ ಕೇಳಿದಲ್ಲಿ ಮುನಾಸಬು ನೋಡಿ ದರ ನಾಂಗರು ೧ ಕ್ಕೆ ಗು ೪ ನಾಲ್ಕು ವರಹಾದ ಪ್ರಕಾರ ತಕಾವಿ ಕೊಡಿಸಿಕೊಟ್ಟು ಫಸಲಮೇಲೆ ಐವಜು ವಸೂಲು ಮಾಡಿಕೊಳ್ಳಿಬೇಕು. ಈ ಮೇರೆಗೆ ರೈತರಿಗೆ ಸಮುಜಾಯಿಷಿ ಮಾಡಿ ಪ್ರಾಕು ಮಾಡುತ್ತಿದ್ದ ಭೂಮಿಗಳಿಗೆ ಕಂದಾಯದ ಚೀಟುಗಳು ಬರದುಕೊಟ್ಟದರಿಂದಲೂ, ಮುಂದೆ ಪಾಳು ಭೂಮಿ ಆಯಾ ರೈತರು ದರಖಾಸ್ತು ಮಾಡಿದವರಿಗೆ ಶ್ರಯುಪಟ್ಟೆ ಬರೆದು ಕೊಡುವುದರಿಂದ ಸಹ ರೈತರಿಗೆ ಖಾತರಿ ಜವುಬ್ದಾರಿ ಹೇರಳವಾಗಿ ಆಬಾದು ಆಗುವದರಿಂದ ರೈತರು ಬಂದಾನೊಂದು ನಿಮಿತ್ತವಾಗಿ ಎರಡ ನೇ ತಾಲ್ಲೂಕಿಗೆ ಹೋಗಿದ್ದ ರೈತರು ಭರವಸೆಯಿಂದ ಯಥಾಪ್ರಕಾರ ಬಂದು ಸೇರುವುದರಿಂದ ರೈತರಿಗೆ ಕೌಲುಕೊಟ್ಟಪ್ರಕಾರ ನಡೆಸಿದಲ್ಲಿ

ರೈತರು ರಾಜೀಆಗಿ ಹೀದಳವಾಗಿ ಭೂಮಿ ಸಾಗುವಳೀ ಮಾಡುತ್ತಾರೆ. ಯಾವ ಆಮಿಾಲನು ಕೌಲು ಬರೆದುಕೊಡುತ್ತಾನೆಯೋ ಆ ಕೌಲುಪ್ರಕಾರ ನಡೆಸಬೇಕು. ಬಂದುವೇಳೆ ಆಮಿಾಲ ತಗ್ಗೆರಾಗಿ ಎರಡನೇ ಆಮಿಾಲ ಬಂದಾಗ್ಯೂ ಮೊದಲ ಆಮಿಾಲ ಬರೆದುಕೊಟ್ಟ ಕೌಲುಪ್ರಕಾರ ನಡೆಸ ಬೇಕು. ಈ ಮೇರೆ ಕೌಲು ನಡೆಸದೆ ಇದ್ದರ ಅಮೆಲು ಮಾಡುವನ ಮೇಲೆ ಸಪ್ತಯುತರಾಜೀ ಆದೀತು. ಈ ಪ್ರಕಾರ ತಾಲ್ಲೂಕು ಮಜ ಕೂರು ಗ್ರಾಮಾನುಗ್ರಾಮಗಳ ಸಾಗುವಳಿ ಜ್ಯೇಷ್ಠಮಾಸದ ವರಗೆ ಮೂರು ತಿಂಗಳಲ್ಲಿ ಭೈಸಲು ಮಾಡಬೇಕು. ಸೀಮೆಯಲ್ಲಿ ಕೀಜದಾರ ಗೌಡ, ಶ್ಯಾನುಭೋಗ ವಗ್ಗೈರೆ ಜನರು ರೈತರ ಕಡೆಯಿಂದ ಜಿನಸು ವಗ್ಗೈರೆ ತೆಗೆದುಕೊಂಡು ಕ್ರಯದ ಹಣ ಕೊಡದೆ ಮಜೂರಿ ಕೊಡದೆ ಬಿಟ್ಟ ಜೀಗಾರಿಯಿಂದ ತಮ್ಮ ಮನೇ ಕೆಲಸ ಜಿವಾಯಿತು ವಗ್ಗೈರೆ ಕೆಲಸ ಮಾಡಿಸಿ ಇದ್ದದ್ದು ರೈತರಿಗೆ ಪೆಟ್ಟು ಕೊಲೆಯಿಂದ ಜುಲುಮಿಜಬರದಸ್ತೀ ಮಾಡುವದು ಸಹ ಜನ್ನಾಗಿ ದರ್ಯಾಪ್ತು ಮಾಡಿ ಜಿನಸು ತೆಗೆದುಕೊಂಡಿರುವುದಕ್ಕೆ ಕ್ರಯದ ಐನೂರು ತರಿಸಿ ಮೊಲೇಕರಿಗೆ ಕೊಡಿಸಬೇಕು. ಮಜೂರಿ ಕೊಡದೆ ಕೆಲಸ ಮಾಡಿಸಿಕೊಂಡದ್ದರಿಂದ ಮಜೂರಿ ಐವತ್ತು ತರಿಸಿ ವಾಜಬಿ ಮಜೂರಿ ಐವತ್ತನ್ನು ರೈತರಿಗೆ ಕೊಡಿಸಬೇಕು. ಜುಲುಮು, ಜಬರದಸ್ತಿ, ಪೆಟ್ಟು, ಕೊಲೆ ಮಾಡಿದವರಿಗೆ ಜನ್ನಾಗಿ ಶಿಕ್ಷೆಮಾಡಿ ಮುಂದೆ ಈ ಪ್ರಕಾರ ಅನ್ಯಾಯವಾಗದ ಹಾಗೆ ತಕಯೂದ ಇಡಬೇಕು. ಈ ಮೇರೆ ಗ್ರಾಮಾನುಗ್ರಾಮಕ್ಕೂ ಆಮಿಾಲ ತಿರಸ್ತೀದಾರು ಹೋಗಿ ಜನರ ಫಿರಿಯಾದನ್ನು ವಿಚಾರಣೆ ಮಾಡಿ ಒಂಜೋಟಿನ್ನು ಮಾಡಿಸಬೇಕು. ಆಮಿಾಲ, ತಿರಸ್ತೀದಾರ್ರು, ಹೆಚ್ಚೀದಾರ್ರು, ವಗ್ಗೈರೆ ಜನರು ತಮ್ಮ ಮನೆಕೆಲಸಗಳಿಗೆ ರೈತರ ಕಡೆಯಿಂದ ಬಿಟ್ಟ ಜೀಗಾರಿಮಾಡಿಸ ಕೆಲಸವಿಲ್ಲ. ಇದರಮೇಲೆ ಮಾಡಿಸಿದರ ಸಪ್ತಯುತರಾಜೀಹಾಸಲು ಆದೀತು.

ಆರನೇಕಲು:—ಆಷಾಢ ಶ್ರಾವಣ ಎರಡು ತಿಂಗಳಲ್ಲಿ ಆಮಿಾಲ ತಿರಸ್ತೀದಾರರು ತಾಲ್ಲೂಕವ ಮೇಲೆ ಜೋಗಿ ಕಾರ್ತೀಕದ ಸಾಗು ವಳಿ ಕಾರ್ತಾರಂಭವ ಸಾಗುವಳಿ ಸಹ ಮಾಡುತಕ್ಕದ್ದಕ್ಕೆ ಕೇಳ

ದಾರಿ ಗೌಡ ಶ್ಯಾನುಭೋಗರಿಗೆ ಸಹ ಮೋಹಸಲಿ ಮೂಡಿ ಹೇರಳವಾಗಿ ಸರಕಾರಕ್ಕೆ ಸೂಡಿಬರುಸಂತೆ ಉತ್ತಮ ಪ್ರಕಾರ ಸಾಗುವಳಿ ಮಾಡ ಬೇಕು. ಸದರೀ ಪ್ರಕಾರ ಸಾಗುವಳಿ ಆದ್ದಕ್ಕೆ ಅಮಿಾಲ ಶೀಕದಾರ ವೆಗ್ಗೆಬೀತ ಕಡೆಯಿಂದ ವಿಚಕಾರಣೆ ಮೂಡಿಕೊಳ್ಳುತ್ತಾ ಬರಬೇಕು. ಇದು ಶಿವಾಯಿ ವೈಶಾಲ ಫಲವು ಜೋಳದ ಫಲವು ಸಹ ಕಟಾವಿಗೆ ತಯಾರಾಗಿ ಬರುತ್ತದೆ. ಆವರಿಂದ ಅಮಿಾಲ ಶಿರಸ್ತೇದಾರರು ಪಸುಗೆ ಮೂಡಿಸಬೇಕು. ಪಸುಗೆ ಮೂಡಿಸುವೆ ಕ್ಕಾಯಿದೆ ಕುಲ್ಲು ಆದ ದವಸದ ಪೈಕಿ ಅಯಾತಾಲ್ಲೂಕಿನ ಮೊಮೊಲು ಪ್ರಕಾರ ಆಯಗಳು ಪಗ್ಗೆರೆ ಸರಕಾರಕ್ಕೆ ಬರತಕ್ಕದು. ಸಕಲಾಯನ ಪೈಕಿ ತೆಗದುಕೊಂಡು ಬಾಕಿ ನಿಂತ ದವಸಕ್ಕೆ ದಬ್ಬಳತೆ ಎಂಬುದಾಗಿ ಸರ್ಕಾರಕ್ಕೆ ಹೇರಳವಾಗಿ ಜಾಸ್ತಿ ಬರುವ ಹಾಗೂ ರೈತರಿಗೆ ಹಾಗಪಾಲು ದವಸಬರುವಹಾಗೂ ಅಳತೆಮೂಡಿಸಿ ಕೊಡುವೆದ್ದರಿಂದ ಸಹ ಇಂಥಾ ಬೇಜಾ ಅಳತೆಮೂಡಿಸದೆ ಸಮವಾಗಿ ಅಳತೆಮೂಡಿಸಿ ಎರಡು ರಾಶಿ ಸರಿಯಾಗಿ ಮೂಡಿಸಿ ಒಂದುಪಾಲು ಸರಕಾರಕ್ಕೆ ತೆಗೆದುಕೊಂಡು ನಿಂತ ಒಂದುಪಾಲು ರೈತರಿಗೆ ಕೊಡಬೇಕು. ಹೀಗೆಂಬ ರೈತರು ನಾಖುಷಿ ಆಗದಹಾಗೆ ಕುಲ್ಲು ಆದ ದವಸಕ್ಕೆ ವಾಜಬಿ ಆಯವೆಗ್ಗೆರೆ ಹೋಗಲಾಗಿ ಬಾಕಿನಿಂತದ್ದರಲ್ಲಿ ವಾಜಬಿ ಅಳತೆಮಾಡಿಸಿ ಸಮವಾಗಿ ಎರಡುರಾಶಿ ಮೂಡಿಸಿ ಯಿದರಲ್ಲಿ ರೈತರು ಒಪ್ಪಿದ ಅರ್ಧವನ್ನು ರೈತರಿಗೆ ಕೊಡಬೇಕು. ಮಿಕ್ಕ ಅರ್ಧದವಸದ ರಾಶಿಯನ್ನು ಸರ್ಕಾರಕ್ಕೆ ದಾಖಲುಮಾಡಬೇಕು. ಈ ಮೇರೆ ಅಮಲುಮಾಡದೆ ಹೆಚ್ಚು ಕಡಮೆ ಅಳತೆಮೂಡಿಸಿದಲ್ಲಿ ಅಮಿಾಲ ಶಿರಸ್ತೇದಾರರಮೇಲೆ ಸಖ್ತಾಯತರಾಜಿ ಹಾಗಲು ಆದೀತು.

ವಿಳನೇಕಲಂ:—ಭಾದ್ರಪದ ಮೊಸದ ಲಾಗಾಯ್ತು ಕಾರ್ತಿಕ ಮೊಸದವರೆಗೆ ಅಮಿಾಲ ಶಿರಸ್ತೇದಾರರು ಸಹ ಕಸಬಿಯಲ್ಲಿ ಯಿದ್ದು ಕೊಂಡು ಮೂಡತಕ್ಕದ್ದು.

೧. ತಾಲ್ಲೂಕಿನ ತೆಕದ ಸಾವೆಸೂಲು ಬಾಕಿ ತಯಾರು ಮಾಡ ತಕ್ಕದ್ದು. ಜಮೂಬಂದಿ ಪ್ರಕಾರ ಎನು ಜಮೆ, ಶಿವಾಯಿ ಜಮೆಯೂ ಗುದಸ್ತಾ ಬಾಕಿ ಸುದಾ ದಾಖಲುಮಾಡಿ ಏಕಂದರೆ ಜಮೆಗೆ ಯಿದಪಾಲು

ಘರಮಾಯಿಷಿ ಮೈಸೂರಿ ದರೋಬಸ್ತು ಕಛೇರಿಗೆ ಸನ್ನದುವಾರ್ ರಶೀದಿ ಪೇರಿಗೆ ತಸದೀಕಿನ ದಾಖಲೆ ಪೇರ ಸಹ ಸನ್ನದು ಬಿಚ್ಚು ಬರೆದು ಬಾಕಿ ಐವೆಜಿಗೆ ಹಾಲ್ ಹಾಜರು ಜಿನಸಿಗೆ ಜಿನಸುವಾರು ಆಯಾ ಜಿನಸಿನ ಧಾರಣೆ ಸಹ ತಪಶೀಲು ಬರೆದು ಸದರೀ ಬರೆದಿರುವ ಪ್ರಕಾರ ಶಿರಸ್ತೇದಾರರ ಕಡೆಯಿಂದ ತಯಾರು ಮಾಡಿಸಿ ಅವಿಾಲಸ ದಸ್ಕತ್ತು ಸೂಜರು ಮಾಡಿಸಿ ಶಿರಸ್ತೇದಾರರ ದಾಖಲೆ ಹಾಕಿಸಿ ಪ್ರತಿವರ್ಷವೂ ಭಾದ್ರಪದ ಶುದ್ಧ ೧೫ ರವರಿಗೆ ಕಳುಹಿಸಿ ಕೊಡಬೇಕು.

೬. ಸಾಲುಗುದಸ್ತಾ ಬಾಕಿಯಲ್ಲಿ ಬಂದು ಕಾಸೂ ಬಾಕಿ ನಿಲ್ಲದಂತೆ ಶ್ರಾವಣ ಶುದ್ಧ ೧೫ ರೊಳಗೆ ವಸೂಲು ಮಾಡಬೇಕು. ಒಂದು ವೇಳೆ ಅಲ್ಪಸ್ವಲ್ಪ ಬಾಕಿ ನಿಂತದ್ದಾದರೆ ಭಾದ್ರಪದ ಬಹುಳ ೩೦ ರವರಿಗೆ ಬೇಬಾಕಿಯಾಗಿ ವಸೂಲು ಮಾಡಬೇಕು. ವಸೂಲ್ಮಾಡದೆ ಮುಂದೆ ಆಶ್ವೀಜ ಮಾಸದಲ್ಲಿ ಮುಂಗಂದಾಯದ ಹಣ ವಸೂಲು ಮಾಡುವದಕ್ಕೆ ಸುರು ಆಗುವದರಿಂದ ಬಾಕಿಬಾಬತು ಐವೆಜನ್ನು ಭಾದ್ರಪದಬಹುಳ ೩೦ ರೊಳಗಾಗಿ ಮುಕಾಯಿಯಾಗಿ ವಸೂಲು ಮಾಡಬೇಕು.

೭. ಜ್ಯೇಷ್ಠ ಬಹುಳ ೩೦ ಆಗುತ್ತಲೇ ಪ್ರತಿವರ್ಷವೂ ಒಟ್ಟು ನಗದೀ ಜಮಾ ಬಿಚ್ಚು ತಪ್ಪಿಲೆಯವರು ತಯಾರ್ಮಾಡಿಸಿ ಆಷಾಢ ಶುದ್ಧ ೧೦ ರವರಿಗೆ ಬಂದು ತಲಪುವ ಹಾಗೆ ಕಳುಹಿಸಬೇಕು.

೮. ಮುಂಗಂದಾಯದ ಐವೆಜು ವಸೂಲು ಮಾಡತಕ್ಕದ್ದಕ್ಕೆ ಪ್ರತಿ ವರುಷವೂ ಹಜೂರಿಂದ ಬುದ್ಧಿ ನಿರೂಪ ಸಾದರಾಗುವದರಿಂದ ಆಶ್ವೀಜ ಶುದ್ಧ ೧೦ ದಿವಸ ಜಾಳಿಗೆ ಪೂಜೆಮಾಡಿಸಿ ದರೋಬಸ್ತು ಶೇಕದಾರ, ಗೌಡ, ತ್ಯಾನುಭಾಗರಿಗೆ ಸಹ ಮುಂಗಂದಾಯದ ಐವೆಜು ವಸೂಲು ಮಾಡಿಕೊಂಡು ಬರುವ ಹಾಗೆ ಚೀಟುಗಳನ್ನು ಬರೆಸಿ ಕಳುಹಿಸಿದಲ್ಲಿ ಆಯಾ ಹೋಬಳಿಗಳ ಶೇಕದಾರನು ಗ್ರಾಮಗಳ ಗೌಡ, ತ್ಯಾನುಭಾಗರನ್ನು ಕೂಡಿಸಿಕೊಂಡು ರೈತವಾರ್ ಐವೆಜು ವಸೂಲು ಮಾಡಿಕೊಂಡು ಪ್ರತಿ ಗ್ರಾಮದ ಐವೆಜಿಗೆ ಪ್ರತ್ಯೇಕ ಪ್ರತ್ಯೇಕವಾಗಿ ಗಂಟುಕಟ್ಟಿಸಿ ಆಯಾ ಗ್ರಾಮದ ಗೌಡ ತ್ಯಾನುಭಾಗರನ್ನು ಸದರಹೂ ಐವೆಜಿನ ಗಂಟಿನಸಹ ಅವಿಾಲಸ ಕಛೇರಿಗೆ ತಂದು ಅವಿಾಲ ಶಿರಸ್ತೇ

ದಾರರ ಪೊಟ್ಟಾ ಗ್ರಾಮವಾರು ನಾಣ್ಯವಾರು ಯಿರಸಾಲು ಪಟ್ಟಿಯನ್ನು ಗ್ರಾಮದ ಶ್ಯಾನುಭೋಗರ ಕಡೆಯಿಂದ ಬರಸಿಕೊಂಡು ಶೇಕದಾರನು ತನ್ನ ದುಜು ಪಾಕಿ ಯಿರಸಾಲು ಪಟ್ಟಿ ಕಛೇರಿಗೆ ಕೊಡಬೇಕು. ಆ ಮೇರಿಗೆ ಐವಜು ಪಾರದಾವಣಿ ಮಾಡಿಕೊಂಡು ಕಳಿಪಿ ಹಣವನ್ನು ನಾಪಸ್ ಕೊಟ್ಟು ಬಾಕಿ ಐವಜಿಗೆ ಆಗಿಂದಾಗ್ಗೆ ಆಮಿಾಲನ ರುಜು ತನ್ನ ಮೊಹರಿಸಿಂದ ಪೆರಸ್ತೀದಾರರ ಮಾಖಲೆಯಿಂದ ಸಪ ಶೇಕದಾರ ಮಾರೀಕತ್ತು ಹೋಬಳಿ ಶೇಕದಾರ್ರಿಗೆ ರಶೀದಿ ಕೊಡಬೇಕು. ಈ ಪ್ರಕಾರ ಐವಜು ಬಂದವಕ್ಕೆ ಆಗಿಂದಾಗ್ಗೆ ರಶೀತಿ ಕೊಡದೆಯಿದ್ದರೆ ಯಿನಮೂತಿನ ಪಕ್ಕು ಬಂದಲ್ಲಿ ಆಮಿಾಲರಮೇಲೆ ಸತ್ಯಯುತರಾಜಿಯಾಗಿ ಮುಂದೆ ಅವನ ರೋಜಗಾರಿ ನಿಲ್ಲಿಕ್ಕವ್ದಿಲ್ಲ. ಬದಸ್ತೂರು ಬಂದೊಂದು ಹೋಬಳಿ ಶೇಕದಾರನು ಬಂದೊಂದು ಗ್ರಾಮದ ಕುಳಿಗಳಿಂದ ಐವಜು ಬಂದವಕ್ಕೆ ಆಯಾ ಶ್ಯಾನುಭೋಗನ ಕಡೆಯಿಂದ ಕುಳಮಾರು ರಶೀದಿ ಒರೆಸಿ ತನ್ನ ರುಜು ಶ್ಯಾನುಭೋಗನ ರುಜು ಸಪ ಮೂಡಿ ರಶೀದಿ ಕೊಡುತ್ತಾ ಬರುವದು. ಈ ಪ್ರಕಾರ ಆಗಿಂದಾಗ್ಗೆ ವಿಚಾರಣೆ ತೆಗೆದುಕೊಂಡು ಬಂದ ಬಂದ ಹಣಕ್ಕೆ ರಶೀದಿ ಕೊಡುವದಕ್ಕೂ ಯಿಲ್ಲದ್ದಕ್ಕೂ ವಿಚಾರಿಸಿ ರಶೀದಿಗಳನ್ನು ಕೊಡದ ಇವರೆ ಆ ರೀಕದಾರ ಶ್ಯಾನುಭೋಗರಿಗೆ ನಶಿ ಹತ್ತು ಮೂಡಿ ಅವರಿಗೆ ಬವಲಿ ಯಿತಬಾರಿ ಶೇಕದಾರ ಶ್ಯಾನಭೋಗರನ್ನ ಮೊಕರರ್ಮಾನಿಟ್ಟು ಮುಂದೆ ಸದರಿ ಬಂದ ಪ್ರಕಾರ ನಡೆದುಕೊಳ್ಳುವದು. ಶಿವಾಯಿ ಸಾಯರು ಸ್ಥಳಪಟ್ಟಿಡಿ ಬಾಜೆಬಾಬು ಶೇಂದಿ ಷರಾಬು ಎಲ್ಲಿ ಎಲ್ಲಿ ಪರಿಯಂತರಕ್ಕೂ ಅಲಾಯಿವಾ ಬಾಬು ಇಪ್ಪೆಯೊ ಅದು ಯಾವತ್ತು ಬಾಬಿಗೂ ತಿಂಗಳುಗಟ್ಟಿಪ್ರಕಾರ ಐನಜು ವಸೂಲಾಗತಕ್ಕದ್ದನ್ನೆಲ್ಲಾ ವಸೂಲು ಮಾಡಿಕೊಳ್ಳಿಬೇಕು. ಆದೇಮೇರೆ ಕಾರಿಕ ಸ್ಥಳಪಟ್ಟಿಡಿ ವಗ್ಗೈರೆ ಐವಜನ್ನು ಪಸ್ತು ಬಂದೀ ಪ್ರಕಾರ ವಸೂಲು ಮಾಡಿಕೊಂಡು ಮುಟ್ಟಿದ್ದಕ್ಕೆ ಆಯಾ ಬಾಬಿನ ಯಿಜಾರದಾರಿಗೆ ರಶೀದಿ ಕೊಡುತ್ತಾ ಬರುವದು. ಗುತ್ತಿಗೆದಾರ ವಗ್ಗೈರೆ ಜನರಿಂದ ಎರಡು ಮೂರು ವಾಯಿದೆ ಐವಜು ಬಾಕಿ ಯಿಡದೆ ತಿಂಗಳಾಗುವದೂಸೂ ವಸೂಲು ಮಾಡಿಕೊಳ್ಳುವದು. ಈ ಜಾಬಿತ್ತು ಸೀಲಿಗೆ ಐವಜು

ವೆಸೂಲು ಮಾಡಿಕೊಂಡು ನಿಮ್ಮ ತಾಲ್ಲೂಕಿನ ಸಾಗುವಳಿಗೆ ಯಿಾ ಸಂವ
ತ್ಸರ ಖಚ್ಚು ಆಥವಾ ವಗ್ಗೈರಿ ಸ್ಥಳ ಖಚ್ಚು ಹೋಗಲಾಗಿ ನಿಂತ
ಐವೆಜಿಗೆ ತ್ರೈಚಾಯಿ ಬಂದುಬಾಲಿಗೆ ಸರಿಯಾಗಿ ಐವೆಜು ಜಮ
ಮಾಡಿ ಕಮ್ಮಿಬೀಳದಂತೆ ಕಾತೀಕ್ಷಿಕ ಬಹುಳ ಪಿಂ ಮೊಳಗಾಗಿ ವೆಸೂಲು
ಮಾಡಿ ಯಿರಸಾಲು ಪಟ್ಟಿ ತಜೀನ ಸಹ ಐವೆಜಿನ ಹಮೀರಪ ಅಯಾ
ಸಿಲ್ದಾರರ ಮೋರೀಫತ್ತು ಭಾರಿ ಬದರಿಕೆಯಿಂದ ಹಜೂರು ವಜಾ
ನೆಗೆ ಐವೆಜು ಸಂದಾಯಮಾಡಿ ರಸೀದಿ ತರಿಸಿಕೊಳ್ಳುವದು. ಬದ
ಸ್ತೂರು ದುಯ್ಯೋಡಿನ್ನು ಮೊಗ್ಗೂ ಪಿರಲೂಗಯ್ದು ಫಾಲ್ಗುಣ ಬಹುಳ ಪಿಂ
ಮಿನಹೂತಮೊಂಗಾವೆಗಾನೆ ಸುವರ್ಣಾದಾಯದ ಬಾಕಿ ತೆಂಗಳು
ಗುನ್ನೆ ವೆಸೂಲಾಗತಕ್ಕ ಐವೆಜು ಕಾರ್ತಿಕ ಮಾಸದ ಶುದ್ಧ ಪಾಡ್ಯ ಮೊದಲ್ಗೊಂಡು
ಮಹಾಸೂಲು ಆಗುತ್ತಾ ಇರ್ಪ. ಈ ಮೊಹಸೂಲಿನಲ್ಲಿ ಸ್ಥಳ ಖಚ್ಚು
ಹೋಗಲಾಗಿ ಬಾಕಿ ಐವೆಜು ಯಿಜಾರಾದಾರು ವಗ್ಗೈರಿ ಜನಗಳಿಂದ
ಮುಂಡೆಯಾಗಿ ವಸೂಲುಮಾಡಿಕ್ಕೊಂಡು ಫಾಲ್ಗುಣ ಬಹುಳ ಪಿಂ
ವೆಳಗಾಗಿ ಹಜೂರು ಖಜಾನೆಗೆ ಯಿರಸಾಲು ಮಾಡಿ ರಸೀದಿ ತರಿಸಿಕ್ಕೊಳ್ಳು
ವೆವು. ಬದಸ್ತೂರು ದಿಯ್ಯೋಂ ಪಿಸ್ತಿನ ಐವೆಜಿಗೆ ಜ್ಯೇಷ್ಠ ಬಹುಳ ಪಿಂ
ವರೆಗೆ ವೈಕುಂಠದ ಮೊಹಸೂಲು ದರೋಬಸ್ತು ಕಟಾವಾಗಿ, ಮಾಲೀಸ್ತು
ಆಗುತ್ತಾ ಇರ್ಪೆಯಾಗಿ, ದಿಯ್ಯೋಂ ಪಿಸ್ತಿನ ಐವೆಜು ನಾಲು ಆನೈರು ಜ್ಯೇಷ್ಠ
ಬಾಹುಳ ಪಿಂ ವೆಳಗಾಗಿ ಬಂದು ಕಾಸೂ ಬಾಕಿ ನಿಲ್ಲದಂತ ಮುಂಡೆಯಾಗಿ
ವಸೂಲು ಮಾತಿ ಐವೆಜು ಹಜೂರಿಗೆ ಯಿರಸಾಲು ಮಾಡಬೇಕು. ಇದರ
ನ್ಮೀಲಿಯೂ ಅಮೋನಿ ದವೆಸವಿಸ್ಪಿ ಅದವೆಸ ಹೊರ್ತು ಅಲ್ಪಸ್ವಲ್ಪ ಸೂಲು
ಮುಂಡೆ ಐವೆಜಿಗೆ ಸೂವಿರ ಸುವಿರವಮಿನ್ನೂರು ನೆಪ ಬಾಕಿ ನಿಂತಲ್ಲಿ
ಅಷಾಢ ಬಹುಳ ಪಿಂ ವೆಳಗಾಗಿ ದರೋಬಸ್ತು ಬಂದು ಕಾಸು ಬಾಕಿ
ನಿಲ್ಲದಂತೆ ಮುಂಡೆಯಾಗಿ ವೆಸೂಲುಮಾತಿ ಐಜಾನೆಗೆ ಯಿರಸಾಲು ಮಾಡಿ
ರಸೀದಿ ತರಿಸಿಕೊಳ್ಳುವದು.

೫. ಗೈತರ ಮೊಹಸೂಲು ಬಿಡುವದಕ್ಕೆ ಸಮಿಗ್ರ ಐವೆಜು
ಬಾಬರು ಕೊಡುತ್ತಾಯಿದ್ದಾರಯೋ ಅವರಿಗೆ ಸ್ವಲ್ಪವಾದರೂ ಆಟಕಾವು
ನೂಪವೆ ದರೋಬಸ್ತು ಮೊಹಸೂಲು ಬಿಟ್ಟುಬಿಡುವುದು. ಕೆಲವುಜನ

ರೈತರು ಸಾಕಲ್ಯವಾಗಿ ಐವೆಜು ಕೊಟ್ಟಿದೆ ಅರ್ಧ ಮುಕ್ಕಾಲುಪಾಲು ಐವೆಜು ಕೊಟ್ಟರೆ ಅವೇಮುರೆಗೆ ಅರೆಪಾಲಿಮುಕ್ಕಾಲುವಾಶಿ ಮೆಹ ಸೂಲು ಬಿಡಬೇಕು. ಏನೆಂಬ ಐವೆಜು ಕೊಟ್ಟ ರೈತರ ಮೆಹಸೂಲು ಬಿಡದೆ ಅಟಕಾವ್ರ ಮಾಡಪಕಲಸಿಲ್ಲ. ಯಾವಯಾವ ರೈತಮೈರೇರು ಯಾವಯಾವ ಪ್ರಕಾರ ಐವೆಜು ಕೊಡುತ್ತಾರೆಯೋ ಆಯಾ ಮೇರೆಗೆ ಮೆಹಸೂಲು ಬಿಟ್ಟುಕೊಂಡುವ್ರರು. ಐವೆಜು ಸಾಕಲ್ಯವಾಗಿ ಕೊಟ್ಟಿದ್ದ ರೈತರ ಮೆಹಸೂಲು ಅಟಕಾವ್ರ ಮಾಡಿರುವೆ ವಿವೆರ ಹಜೂರಿಗೆ ಪ್ರತ ವಾದಲ್ಲಿ ಚಮಾಲಗೆ ನಶಿದುತ್ತಾನೀಕಾಗಿ ಮೊಕರರು ತಿಳಿದು ಸದರಿ ಬರೆದಿರುವೆ ಪ್ರಕಾರ ನಡೆವುಕೆ ಕ್ಯೆಗೊವೆವು.

ಎಂಟನೇ ಕಲಂ:—ಮೊಗೆಶಿರ ಪುಸ್ಯಮಾಸಕ್ಕೆ ಮೈಕಾಲು ಸುಗು ವೆಳಿಗೂ ಕಡ್ಲಿನ ಸಾಗುವೆಳಿಗೂ ಆವಿಾಲ ಶಿರಸ್ತೇದಾರರು ಪ್ರತಿ ಗ್ರಾಮಕಕ್ಕೂ ಹೋಗಿ ಆ ಗ್ರಾಮದ ಕೆರೆಗಳಲ್ಲಿ ಯಿರುವೆ ನೀರಿನೆ ಆಧಾರ ನೋಡಿ ಇಪ್ಪತ್ತುಮಡಗೆ ಭೂಮಿ ಸಾಗುವಳಿ ಮಾಡಬೇಕೆಂದು ಮೊಕ ರಮ್ಮಾಡಿ ಭೂಮಿಗೆ ಗೊಬ್ಬರ ಮೈೈರ ದಾಕಿ ಚನ್ನಾಗಿ ಪೈರು ಮಾಡು ವೆಹಾಗೆ ಅಲ್ಲಿನ ವಿಚಕ್ಷಣ ಗೌಡ ಶ್ಯಾನುಭೂಗ ಅದ್ದಿಕದತೋಟಿ ವೆಗ್ಗೆರೆ ಜನರಮೀಲೆ ತಕ್ಕಯೂನಯಿಟ್ಟು ಗದ್ದೆ ವೆಗ್ಗೆರೆ ಪೈರು ಜ್ಯೇಷ್ಠ ಬಹುಳ ಪಿಂವೊಳಗಾಗಿ ಕಟಾಸ್ರು ಆಗುವೆಂತ ಸಾಗುವಳಿ ಮಾಡಬೇಕು. ಯೀಪ್ರ ಕಾರವಾದರೆ ಅಲಸ್ಯಗೂಡಿ ಪೈರು ಮಾಡಿದಲ್ಲಿ ಮುಂದೆ ಶ್ರಾವಣ ಭಾದ್ರ ಪದ ಮಾಸದಲ್ಲಿ ಪೈರು ಕಟಾಸ್ರು ಆದಲ್ಲಿ ಪೈರು ಮುಂದಿನ ವರ್ಷದ ಜಮಾಬಂದಿಗೆ ದಾಖಲಾಗುತ್ತಾವಿಲ್ಲೆ. ಇದು ಚನ್ನಾಗಿ ತಿಳಿದು ಜ್ಯೇಷ್ಠ ಬಹುಳ ಪಿಂ ವೆಳಗಾಗಿ ಪೈರು ಕೊಯಿವಿಗೆ ಆಗುವೆಯಾಗೆ ಮೈಕಾಲಿನ ಸಾಗುವೆ ಮಾಡಿ ಬೀಜ ಯಾವೆತ್ತು ಮಾಘ ಬಹುಳ ಪಿಂ ವೆಳಗಾಗಿ ಬಿತ್ತಿ ಆಗುವೆಂತೆ ಮಾಡಿಸಿ ಆಯವಾ ಸ್ಥಳದ ರಿವಾಜುಪ್ರಕಾರ ಕಂದಾ ಯದ ಜಾಬಿತ್ತಿಯಿದ್ದರೆ ಕಂದಾಯ ಮೊಕರರು ಮಾಡಬೇಕು. ವಾರಕ್ಕೆ ಕೊಡತಕ್ಕ ಜಾಬಿತ್ತಿ ಯಿದ್ದರೆ ವಾರಕ್ಕೆ ಸಾಗುವಳಿಮಾಡಿ ಕಬ್ಬಿನ ಪೈರಿಗೆ ಆಲೆಕಟ್ಟು ಜಲ್ಲು ಯಾವ ಸಾಲಿಗೆ ತಯಾರು ಆಗ್ಯತ್ತಿಯೊ ಆ ವರು ಷದ ಜಮಾಬಂದಿಗೆ ದಾಖಲು ಮಾಡಬೇಕು. ಇದಲ್ಲದೆ ಕೆರೆಯಲ್ಲಿ ನೀರು

ಯಿಲ್ಲದ ಬಳಿಯಲ್ಲಿ ಒಳಗೆರೆಯಲ್ಲಿಯೂ ಕಟ್ಟೆಯ ಕೆಳಗೆ ರೇಗಡೆ ಭೂಮಿಯಲ್ಲಿಯೂ ಸಹ ಗೋಧಿ ಕಡಲೆ ಜೋಳ ಮಗ್ಗೆರೆ ಪೈರು ಚನ್ನಾಗಿ ಮಾಡಿಸಿ ಆ ಸ್ಥಳದ ರಿವಾಜು ಪ್ರಕಾರಕ್ಕೆ ಕಂದಾಯ ವಿದ್ದರೆ ಕಂಪಾಯ ತೆಗೆದುಕೊಳ್ಳಬೇಕು, ವಾರಮಿನರೆ ವಾರ ತೆಗದುಕೊಳ್ಳ ಬೇಕು. ಈ ಪ್ರಕಾರ ಜವಾಬುಬಂದಿ ದಾಖಲೆಮಾಡಿ ಐವೆಜು ವೆಸೂಲು ಮಾಡಿಕೊಳ್ಳಬೇಕು. ಇದು ಹೊರ್ತು ಕಾಣೀಕ ಫಲಕ್ಕೆ ವಾರದ ಮೊಹಸೂಲು ಎಷ್ಟರವರೆಗೆ ಆಗುತ್ತಾಯಿನೆಯೋ ಆರೋಬಸ್ತು ಹಸುಗೆ ಯನ್ನು ಆವಿವಾಲ ತೀರಸ್ತೇದಾರರು ತಾಲ್ಲೂಕಿಗೆ ಹೋದವೇಳೆಯಲ್ಲಿ ಆ ಯೆರಡುತಿಂಗಳಲ್ಲಿಯೋ ಚನ್ನಾಗಿ ಬಣಗಿಸಿ ಹಸುಗೆ ಮಾಡಿಸುವುದು.

ಬಂಬತ್ತನೇ ಕಲಂ:—ತಾಲ್ಲೂಕಿನ ಮೋಜಕೂರಿನ ಜವಾಬುಬಂದಿ ಮಾಡತಕ್ಕದ್ದು. ಸಾಲುಷರು ಆಷಾಢಮೆವಾಸವಾಗುವದನ್ನು ಬಾಜೇ ಬಾಬು ಜಾಸ್ತಿ ತೋಟಿಸ್ಥಳ ಸಟ್ಟಿಡಿ ಕಾರಕಾ ಕೆಂದಿ ಷರಾಬು ಮುಂತಾದ ಚಿಲ್ಲರೆ ಬಾಬು ಎಷ್ಟುಯಿಧೆಯೋ ಅದು ಯಾವತ್ತೂ ದರಖಾಸ್ತು ಮಾಡಿ ದವರಿಗೆ ಸರಕಾರಕ್ಕೆ ಕಿಫಾಯತು ಕೂಡಿ ಬರುವಹಾಗೆಯೂ ಐವೆಜಿಗೆ ಡೋಕೆಯಿಲ್ಲದಹಾಗೆಯೂ ಮೌಲು ಜಾಮೀನು ತೆಗೆದುಕೊಂಡು ಯಿಜಾರೆ ಮೊಕವರು ಮಾಡಿಕೊಟ್ಟು ಐವೆಜು ತಿಂಗಳುಗಟ್ಟಿನ ವೆಸೂಲಾಗತಕ್ಕ ದ್ದನ್ನು ಖಿಸ್ತುಬಂದಿ ಪ್ರಕಾರ ವೆಸೂಲಾಗತಕ್ಕದ್ದನ್ನು ಸಹ ಅಗಿಂದಾಗ್ಗೆ ವೆಸೂಲು ಮಾಡಿಕೊಂಡು ಆಖೈರು ಸಾಲಿಗೆ ಝಮಾಬೆಯಾಗಿ ಬರಮಾಡಿ ಸದರಿ ಬರೆದಿರುವ ಪ್ರಕಾರ ರಶೀದಿ ಕೊಡುತ್ತಾ ಬರುವದು.

೨. ಗಾವಗಾನೆಪೈಕಿ ಗದ್ದೆ ಮಗ್ಗೆರೆ ಪೈರು ಇಲ್ಲದೆಯಿರುವ ಚಿಕ್ಕ ಗ್ರಾಮಕ್ಕೆ ಆಷಾಢಮಾಸದಲ್ಲೇ ಗುತ್ತಿಗೆ ಮಾಡುತ್ತೇನೆಂದು ದರಖಾಸ್ತು ಮಾಡಿದಲ್ಲಿ ಆ ಜನಗಳಿಗೆ ಗುಂಜಾಯಿಪಿ ನಮ್ಗೆರೆ ಯಿಲ್ಲದಂತೆಯೂ ಸ್ಥಳ ಮೆಂಚನೆ ಕುಳಮೆಂಚನೆ ಯಿಲ್ಲದಂತೆಯೂ ಚನ್ನಾಗಿ ತ್ಯಾನುಭೋಗನ ಜಡೆಯಿಂದ ದರ್ಖಾಸ್ತು ಮಾಡಿ ದರಖಾಸ್ತು ಪ್ರಕಾರ ಯೇನು ಜಾಸ್ತಿ ಮಾಡಬೇಕೋ ಅದನ್ನು ಮಾಡಿ ಐವೆಜಿಗೆ ಡೋಕೆಬಾರದಂತೆ ಮೌಲು ಜಾಮೀನು ತೆಗೆದುಕೊಂಡು ಕಾಲಾವಧಿಯಲ್ಲಿಯೇ ಗುತ್ತಿಗೆ ಮೊಕ ವರು ಮಾಡಿಕೊಟ್ಟು ನಾಲ್ಕುಜನ ಯಿತುಬಾರಿಯವರ ಸಾಕ್ಷಿಯಿಂದ

ಮುಜಕಿಕೆ ಬರಿಸಿಕೊಂಡು ಆನಂದಿಗೆ ನಿತ್ಯಕ್ಕೆ ಸಟ್ಟಿಯನ್ನು ಬರೆದು ಕೊಡಬೇಕು. ಇದಾದಮೇಲೆ ಲಕ್ಷ್ಮೀನಾರಾಯಣ ಜ್ಞೋಪಕ ಬಹಳ ಹಿಂಯೊಳಗೆ ಐದೆಜು ಭೂಮಿಯಾಗಿ ಪಸಂದುಮಾಡಿಕೊಂಡು ಸಂಪ ಐವೆಜೆಗೆ ರೀತಿ ಕೊಡುತ್ತಾ ಬರಬೇಕು.

೫. ಕಾಣಿಯ ಪ್ಯಾರಾ ಗದ್ದೆ ಜಗಲು ಮುಂತಾದ ಪೈರುಯಿರುವ ಗ್ರಾಮಗಳ ಜಮಾಬಂದಿಗೆ ವಿನಿಯೋಗಮಾಡಲ್ಲಿಯೂ ಅವಿಭಾಜ್ಯ ಶಿರಸ್ತಿದಾರು ಪ್ರತಿ ಗ್ರಾಮಕ್ಕೂ ಹೋಗಿ ನಿಜವಾದ ಸುವರ್ಣಾದಾಯವೆನ್ನು ವಿಚಾರಿಸಿ ಪೂರ್ವದಲ್ಲಿ ಸುಬಹಾಬಾಗುಮಿಷ್ಟ ಹೊನಲೈತರು ಹೊಸ ಭೂಮಿ ಶ್ರಯ ಮಾಗುವಳಿ ಪೈರಾದುಲ್ಲಿ ಜಾಸ್ತಿ ಆದಮ್ಮ ಇಷ್ಟು ಎಂಬದಾಗಿ ಕುಳಿವಾರು ಲೆಕ್ಕ ಬರೆಸಿಬೇಕು. ಬದಸ್ತೂರು ಪ್ರಕಾರ ಪೈರಿಸದರಿ ಅರನೇ ಕಲಮಿನಲ್ಲಿ ಬರೆದುಯಿರುವ ಜಾಬಿತ್ತೆ ಪ್ರಕಾರ ವಸೂಲ್ ಮಾಡಿಸಿ ಸರಕಾರಕ್ಕೆ ಬಂದ ದವಸ ಯಿಜಾರದಾರಿಗೆ ಕೊಡತಕ್ಕದ್ದಾಗಿಯಿದ್ದರೆ ನಿರಖು ಕಟ್ಟುವಲ್ಲಿ ಅಜ್ಜಾಬಾಜಾರು ನಿರಖಿಗೆ ಕೃಷ್ಣರಾಜ ಬಂಡಗ ವೊಂದಕ್ಕೆ ಜಸ್ತೆಂರಾಗಿ ಜೋಳ ಈ ಜಿನಸಿಗೆ ಬಂದೊಂದು ಪಣ ಜಾಸ್ತಿ ಪಡಾಯಿಸಿ ಮಿಸ್ಕಾಕ್ಕದ ದವಸಕ್ಕೆ ಆಯಾ ದವಸದ ವಿಧವರಿತು ಕೃಷ್ಣರಾಜ ಖಂಡಿವಂದಕ್ಕೆ ಅಕ್ಕಿ ಮುಪ್ಪಾಗ ಬಂದು ಹಣ ಈ ಪ್ರಕಾರ ಧಾರಣೆಯಲ್ಲಿ ಪಡಾಯಿಸಿ ಜಮಾಬಂದಿಗೆ ದಾಖಲುಮಾಡಿ ವೈಶಾಖ ಫಲಕ್ಕೆ ಆಯಾ ಕೆರೆಯಲ್ಲಿ ನೀರುಯಿರುವ ಮಟ್ಟಿಗೆ ಪೈರು ನೀರು ಕಮ್ಮಿಆಗದಹಾಗೆ ಮೊದಲಿಂದಲೂ ಆಗುವ ಹುಲಸು ಸುವಾರು ನೋಡಿ ಅವ್ವಲು ದುಯ್ಯಂ ಪೀಯ್ಯಂ ಭೂಮಿಗೆ ಕೃಷ್ಣರಾಜ ಬಂಡಗ ಭೂಮಿಗೆ ಯಿಷ್ಟು ಬಂಡಗುವೆಸಾ ಯೆಂಬದಾಗಿ ಪಟ್ಟಲು ಕಟ್ಟಿ ಅದಕ್ಕೆ ಸದರಿನಲ್ಲಿ ಜಾಬಿತ್ತೆ ಪ್ರಕಾರ ನಿಷ್ಕರ್ಷೆಕಟ್ಟಿ ಯಿಮುಹೊರ್ತು ಕಬ್ಬಿನ ಪೈರು ಯಾವ ಸಂವತ್ಸರನಲ್ಲಿ ಬೆಲ್ಲಾ ತಯಾರಾಗುವುದೋ ಆ ಸಂವತ್ಸರದ ಜಮಾಬಂದಿಗೆ ದಾಖಲು ಮಾಡುವುದು ಯೆಂದು ಸದರಿನಲ್ಲಿ ಬರದಿರುವ ಪ್ರಕಾರ ಆಯಾ ಶೀಮೆ ಪದ್ಧತಿಯುಪೇರೆ ಕಂದಾಯದ ಪೈರು ಅದಕ್ಕೆ ಕಂದಾಯಕ್ಕೆ ದಾಖಲುಮಾಡಬೇಕು. ವಾಸದ ಪೈರು ಅವಲ್ಲಿ ವಾರಕ್ಕೆ ಬಂದ ಬೆಲ್ಲಾ ಮಣ ಬೊಂದಕ್ಕೆ ಹಾಗೆದ ಪ್ರಕಾರ ನಿರಖು ಪಡಾಯಿಸಿ

ಜನೊಬಂದಿಗೆ ದಾಖಲುಮೊಡಿ ಗುತ್ತಿಗೆದಾರರಿಗೆ ಸಮಜಾಯಿಷಿಮೊಡಿ ಐವೆಜಿಗೆ ಮೊಲು ಜಾಮಿನು ತೆಗೆದುಕೊಂಡು ಆಬೈರುಸಾಲಿಗೆ ಐವೆಜು ವೆಸೂಲಾಗಿ ಬರುವೆಪಾಗೆ ಬಂದೊಬ್ಬಸ್ತು ಮೊಡಿಕೊಂಡು ಯಿತ ಬಾರಿ ಐವೆಜುದಾರ ಗಾಡ ವೆಗ್ಗೈರೆ ಜನರನ್ನು ನೋಡಿ ಗುತ್ತಿಗೆ ಮುಚ್ಚಳಿಕೆ ಬರೆಸಿಕೊಂಡು ಈ ಬಗ್ಗೆ ಅಮೆಲದಾರನ ದಸಖತ ಮೂಹರು ಬೆರಸ್ತೆದಾರರ ರುಜುವಿನಿಂದಾ ಗುತ್ತಿಗೆ ಪಟ್ಟೆ ಬರಸಿಕೊಡು ವುದು. ಪ್ರಾಕೆನ ಬಾಕೀದಾರ ಜಾಮೀನ್ ಜೀಯಿತಬೂರಿ ಜನಕ್ಕೆ ಸಹ ಯಿಜಾರೆ ಕೊಡಕೆಲಸವಿಲ್ಲ. ಬದಸ್ತೂರು ಗುತ್ತಿಗೆ ಬಾಗುವಳಿ ಆವರೆ ಅಮೊನೀನಿಂತರೆ ಈ ಗ್ರಾಮಗಳಿಗೂ ಅಮುನೀ ಕೆರೆಗಳಿಗೂ ಸಹ ವಾರದ ದವೆಸಕ್ಕೆ ಫಾಸಣೆ ಭತ್ತ ರಾಗಿ ಕೃಷ್ಣರಾಜ ಬಂಗಾಗವೆಂದಕ್ಕೆ ಯಂಟು ಹಣಾ ಮಿಕ್ಕಾಲಿ ದವೆಸಕ್ಕೆ ಅರ್ಜಾಬೂಜಾರಿವಾಜಬಿ ನಿವಳು ಪ್ರಕಾರ ದಾಖಲುಮೊಡಿಸುವದು. ಡವ್ವಲು ಬರಯುವೆಲ್ಲಿಯು ಜಮಾಬಂ ದೀಗೆ ಜಾಸ್ತಿ ಭಡಾಯಿಸಿ ತನ್ನ ಕೈಕಾಗಜಕ್ಕೆ ಕೂಡಿಬರಬೇಕಂಬದಾಗಿ ನಿವಳು ಜಾಸ್ತಿ ಹುಲುಸು ಜಾಸ್ತೀಯೆಲ್ಲಿಸಹ ಭಡಾಯಿಸಿ ಬರದಾಗ್ಯೂ ಗುತ್ತಿಗೆ ಗ್ರಾಮಗಳಿಗೆ ಮೊಗಂ ಜಾಸ್ತಿ ಹಾಕಿದಾಗ್ಯೂ ವಾಜಬಿ ಎಷ್ಟು ಐವೆಜು ಯಿದೆಯೋ ಅದಕ್ಕೆ ಬದಲು ಯಿಷ್ಟು ಜಾಸ್ತಿ ಭಡಾಯಿಸಿ ಬರೆದಿರುವೆ ಐವೆಜು ಆಮಿಲನ ಕಡೆಯಿಂದ ತೆಗೆದುಕೊಳ್ಳಲಾದೀತು. ಇದು ತಿಳಿದು ಸದರಿ ಬರೆದಿರುವೆ ಪ್ರಕಾರಕ್ಕೆ ಮೊಗಂಜಾಸ್ತಿ ವೆಗ್ಗೈರೆ ಹಾಕದಂತೆ ವಾಜಬೀಪ್ರಕಾರ ಜನವಾಬಂದೀ ಮೊಡುವುದು.

೪. ಬದಸ್ತೂರು ಅಣಿಕ ತೆಂಗಿನತೋಟ ಇರುವೆ ಸ್ಥಳಗಳಲ್ಲಿ ಲಾಗಾಯಿತುನಿಂದ ಕಂದಾಯದ ವಿವಾಜು ಯಾವ ಪ್ರಕಾರವಿಧೆಯೋ ಆ ಪ್ರಕಾರ ಬಂದು ಕೊಳಿಗ ತೋಟಕ್ಕೆ ಇಷ್ಟು ಕಂದಾಯ ಯೆಂಬ ವಾಗಿ ದರ ಸಾವಿರ ಮೆರಕ್ಕೆ ಇಷ್ಟು ಕಂದಾಯ ಯೆಂಬದಾಗಿ ಇರುತ್ತಾ ಇದೆಯೋ ಆ ಪ್ರಕಾರ ಎಣಿಕೆಯ ಮೇರೆಯುಂ, ಭೂಮಿಯಲ್ಲಿಯೂ, ಸಹ ಪರ್ಯಾಪ್ತ ಮೊಡಿ ಜಮಾಬಂದೀ ಮೊಡಬೇಕು. ವಾರಕ್ಕೆ ತೆಗೆದು ಕೊಳ್ಳುವ ಜಾಬಿತ್ತಿ ಇದಯೋ ಆ ಸ್ಥಳದಲ್ಲಿರುವ ತೋಟಗಳಿಗೆ ಮೊಲೀಕರಿಂದ ಚನ್ನಾಗಿ ವ್ಯವಸಾಯ ಮೊಡಿಸಿ ಅಣಿಕ ಗೋಟು ಆಗ

ದಂತೆ ಕಾಲಕಾಲವೆರಿತು ಕೊಯಿಸಿ ಅಣಿಕೆ ತಯಾರು ಮಾಡಿಸಿ ಇಜಾರೆ ಗ್ರಾಮಗಳಲ್ಲಾದಲ್ಲಿ ಮಣ ಬಂದಕ್ಕೆ ಅರ್ಜಿಬಾಜಾರಿ ನಿರಖಿಗೆ ಬಂದು ಪಣವನ್ನು ಕಡಾಯಿಸಿ ಕೊಡುವುದು. ಅಮಾನಿ ಗ್ರಾಮಗಳಲ್ಲಿ ಅದಕ್ಕೆ ಅರ್ಜಿ ಬಾಜಾರಿ ನಿರಖಿನ ಪ್ರಕಾರ ಜಮಾಬಂದಿಗೆ ದಾಖಲು ಮಾಡಬೇಕು. ಆಗಿಂದಾಗ್ಗೆ ಗಿರಾಕಿಮಾಡಿ ಖರೀದಿ ಮಾಡಬೇಕು. ತೆಂಗಿನ ತೋಟಕ್ಕೂ ಇದೇ ಜಾಬಿತ್ತೆಮೀರೆಗೆ.

೫೯. ಈ ಪ್ರಕಾರ ಮೊಹಮಾಸ ಮೊದಲುಗೊಂಡು ಚೈತ್ರ ಬಹುಳ ೩೦ ವರೆಗೆ ಮೂರು ತಿಂಗಳಲ್ಲಿ ಜಮಾಬಂದಿ ಫೈಸಲುಮಾಡಿ ಯಿಜಾರೆ ಗ್ರಾನುದಲ್ಲಿರುವ ಬಾಣಕೇಬಾಬು ವಗ್ಗೈರೆ ಯಾವತ್ತು ಸಾಬಕು ಹಾಲಿ ಜಾಸ್ತಿ ಸಹ ನಮೂದು ಮಾಡಿ ತಪ್ತೆ ತಯಾರು ಮಾಡಿಸಿ ಅಮಾನಿ ಕೆರೆಪ್ಯರಿಗೆ ಮಾತ್ರ ಕಟುವಾಗಿ ಹಸುಗೆ ಆಗಬೇಕಾದರೆ ಬಹುತರ ಆಷಾಢ ಬಹುಳ ೩೦ ವೇಳಗೆ ಆಗುವುದು. ಕೆಲವು ಭಾರೀ ಕೆರೆಗಳ ಕೆಳಗೆ ದವಸ ಹಸುಗೆ ಆಗಲು ಇನ್ನೂ ಹದಿನೈದು ಇಪ್ಪತ್ತು ದಿವಸ ಆದರೂ ಎಲ್ಲವನ್ನೂ ಹಸುಗೆ ಮಾಡಿಸಿ ಕ್ರಾವಣ ಬಹುಳ ೩೦ ಯೊಳಗೆ ಬಿಟ್ಟು ಜಮಾಬಂದಿಗೆ ಕುಲ್ಲು ಗ್ರಾಮ ಇಷ್ಟು ಮಜರೆ ಇಷ್ಟು ಕೆರೆ ಕಟ್ಟೆ ಕಾಲುವೆ ಇಷ್ಟು ಕುಳ ಇಷ್ಟು ಜಿರಾಯಿತು ಕುಳವಿಷ್ಟು ಬಗರ ಜಿರಾಯಿತು ಕುಳವಿಷ್ಟು ಚಿಲ್ಲರತೆರಿಗೆ ಕೊಡುವಂಥಾವರು ಇಷ್ಟು ಯೇರು ಇಷ್ಟಕ್ಕೆ ಸಾಬಕು ಸಾಗುವಳಿ ಇಷ್ಟು ಹಾಲಿ ಜಾಸ್ತಿ ಸಾಗು ವಳಿ ಆಗಿರುವುದು ಇಷ್ಟು ಎಂಬುದಾಗಿ ಕುಲ್ಲು ಜಮಾಬಂದಿ ಐವಜಿಗೆ ಐನು ಸುವರ್ಣಾದಾಯಕ್ಕೆ ಹೊಲಗಂದಾಯವಿಷ್ಟು ಮಣಿಬಾಬು ತಪ್ಸೀಲುಪ್ರಕಾರ ಐವಜು ಇಷ್ಟು ಸಾಯರು ಇಷ್ಟು ಪಟ್ಟಡಿ ಇಷ್ಟು ಮಾರ್ಗದ ಸುಂಕವಿಷ್ಟು ಕೆಂದಿ ವಗ್ಗೈರೆ ಇಷ್ಟು ಶಿವಾಯಿ ವಾರದ ಪೈರು ಆ ಪೈರಿನ ಐವಜು ಇಷ್ಟು ಎಂಬದಾಗಿ ಬಿಟ್ಟಿಗೆ ಅಯಾ ಬಾಬಿಗೆ ಸಾಬಕು ಹಾಲಿ ಕಮ್ಮಿ ಜಾಸ್ತಿ ನಮೂದು ಮಾಡಿ ಗೋಷ್ವಾರಿಗೆ ಸುವರ್ಣಾದಾಯದ ಬಾಬಿಗೆ ಬಟಾಯಿಬಾಬಿಗೆ ಸಹಾ ಆಯಾ ಬಾಬಿಗೆ ಅಮಾನೀ ಇಜಾರೆ ಸಹಾ ನಮೂದುಮಾಡಿ ವಿಶಿಷ್ಟಕ್ಕೂ ಗ್ರಾನುವಾರು ತಪ್ಸೀಲುವಾರು ಕುಲ್ಲು ಜಮಾಬಂದೀ ಗೋಷ್ವಾರೆ ತಪ್ಸೀಲುವಾರು ಗ್ರಾಮವಾರು ತಪ್ತೆ ಸಹ

ತಯಾರು ಮಾಡಿಸಿ ಅಮಿನಾಲನ ದಸಖತ್ತು ಮೊಹರು ತಿರಸ್ತೀದಾರನ ರುಜು ವಿನಿಂದ ಕ್ರಮವಾಗಿ ಬಹಳ ಜಿಂ ಬಳಗಾಗಿ ಹಜೂರಿಗೆ ಕಳುಹಿಸಬೇಕು.

ಹತ್ತನೇ ಕಲಂ:—ಸರಕಾರದ ಕಾರ್ತೀಕ ವೈಶಾಖ ಫಲದ ಅಮಾನೀ ದವಸ ಇಡುವದಕ್ಕೆ ಕಸಬಿಯಲ್ಲಿ ಹೋಬಳಿ ಜಾತುಗಳಲ್ಲಿಯೂ ಸಹ ಕಣಜಗಳು ದೇವಸ್ಥಾನಗಳು ಸರಕಾರದ ಮನೆಗಳು ಮುಂತಾದು ಇದ್ದರೆ ಅವುಗಳಲ್ಲಿ ಜತನದಿಂದ ಇರಿಸಿ ಗಿರಾಕಿ ಬಂದಬಂದ ಪ್ರಕಾರ ಸರಕಾರಕ್ಕೆ ನಿರಖು ಜಾಸ್ತಿ ಕೊಡಿಬರುವಹೇರೆ ಪ್ರಯತ್ನ ಮಾಡಬೇಕು. ಏನು ನಿರಖಿಗೆ ಜಾಸ್ತಿ ಬಂದದ್ದು ಕಸರುಕಸರಾತಿ ಸಹ ತಿವಾಯಿ ಜಮೆಗೆ ದಾಖಲೆ ಮಾಡಬೇಕು. ಪ್ರಯತ್ನಿಸಿ ಆದ ದವಸ ಹೋಗಲಾಗಿ ಬಾಕಿ ನಿಂತ ದವಸದ ಪೈಕಿ ಹುಳುವಿಡಿಯುವಂಥಾ ದವಸಕ್ಕೆ ಪಾದರಸ ಮುಂತಾದ್ದನ್ನಿಟ್ಟು ಹುಳುವು ಬೈರೆ ಹಿಡಿಯದಹಾಗೆ ಬಂದೋಬಸ್ತು ಮಾಡಬೇಕು. ದವಸವಿಡುವದಕ್ಕೆ ಕಣಜ ಮುಂತಾದುದಿಲ್ಲದೆ ಇದ್ದರೆ ಕಸಬಿಯಲ್ಲಿಯೂ, ಹೇರಳ ದವಸವಾಗುವ ಹೋಬಳಿಗಳಲ್ಲಿಯೂ, ಎಷ್ಟು ಕಣಜ ಕಟ್ಟಿಸಬೇಕೊ ಜರೂರು ಇದ್ದಷ್ಟಕ್ಕೆ ಅಂದಾಜಿ ಪಟ್ಟಿಯನ್ನು ಬರೆದು ಅರ್ಜಿಯೊಡನೆ ಹಜೂರಿಗೆ ಕಳುಹಿಸಿ ಸಿರೂಪ ಸಾದರಾದಪ್ರಕಾರ ಲಾಗವಾದು ಮುಟ್ಟಿಸಿ ಕಣಜಗಳ ಭದ್ರದಿಂದ ತಯಾರು ಮಾಡಿಸಿ ಆ ಕಣಜದಲ್ಲಿ ಸರಕಾರದ ಅಮಾನೀ ದವಸವನ್ನು ಜೋಪಾನವಾಗಿ ಇಡುವದು. ಈ ಮೇರೆಗೆ ಮಾಡದೆ ಗದ್ದೆ ಬೈರೆ ಸ್ಥಳದಲ್ಲಿ ಪೆಂಟೆ ಮುಂತಾವರ್ದಲ್ಲಿ ದವಸವಿಟ್ಟು ಬೇಫಾಮಿನಿಂದ ನೋಡದೆ ದವಸವನ್ನು ಕೆಡಿಸಿದರೂ ಸದರಿ ಬರೆದಿರುವ ಪ್ರಕಾರ ಗ್ರಾಮಗಳಲ್ಲಿ ಕಸಬಿಯಲ್ಲಿ ಸಹ ಇರುವ ಸರಕಾರದ ಮನೆ ದೇವಸ್ಥಾನ ಬೈರೆ ಸ್ಥಳಗಳಲ್ಲಿಯೂ ಇಟ್ಟಿಯಿದ್ದ ದವಸಕ್ಕೆ ಮೊಳಗಾಲದಲ್ಲಿ ನೆನದು ಕೆಟ್ಟುಹೋಗದ ಹಾಗೆ ಆಗಾಗ್ಗೆ ಛಾವಣಿ ಬೈರೆ ದಾಗದೂಜಿ ಮಾಡಿಸದೆ ನೋಡಿಕೊಳ್ಳದೆ ಹೆಗ್ಗಣ ಬೈರೆ ತಿನ್ನದಹಾಗೆ ಆಗಿಂದಾಗ್ಗೆ ವಿಚಾರಣೆ ಮಾಡಿಸದೆ ದವಸ ಕೆಟ್ಟು ಸರಕಾರಕ್ಕೆ ನಷ್ಟವಾದಲ್ಲಿ ಅದರ ಜವಾಬು ಅಮಿನನು ಕೊಡಬೇಕಾದೀತು. ಇದು ನಿಕಯವೆಂದು ತಿಳಿದು ಸದರಿ ಬರೆದಿರುವ ಪ್ರಕಾರ ಸರಕಾರದ ಅಮಾನಿದವಸ ಹಾಕಿರುವ ಮನೆ ಕಣಜ ದೇವಸ್ಥಾನ ಬೈರೆ

ಸ್ಥಳಗಳನ್ನು ಜನ್ನಾಗಿ ಭದ್ರಮೊಡಿಸಿ ಜುಳುವು ಹತ್ತದಂತೆ ದವಸವನ್ನು ಸ್ವಷ್ಟಿಯಲ್ಲಿ ನೋಡುತ್ತಾ ಬಹು ಜಾಗ್ರತೆಯಿಂದ ಜತನಮೊಡಿಸಿ ಧಾರಣೆಬಂದಬಂದ ಪ್ರಕಾರ ಡವ್ವುಲು ಧಾರಣೆಯಮೀರೆ ಕಮ್ಮಿ ಆಗದಂತೆಯೂ ಸರಕಾರಕ್ಕೆ ಕೂಡಿಬರುವಂತೆಯೂ ಕ್ರಯ ಮಾಡಿಸಿ ಈ ಬಾಬ್ತು ಐವೆಜು ಇರಸಾಲು ಮಾಡುತ್ತಾ ಬರುವುದು.

* * * * *

* * * * *

ಇನ್ನೊಂದನೇ ಕಲಂ:—ತಾಲ್ಲೂಕು ಮೊಹಕೂರಲ್ಲಿ ಪೈರು ಆಗತಕ್ಕ ಸರಕಾರದ ಕೆರೆಗಳಿಗೂ ಕೊಡಿಗೆ ಕೆರೆಗಳಿಗೂ ಮತಹಮ್ಮತ್ತು ಮಾಡಿಸತಕ್ಕದ್ದು.

೧. ಕೊಡಿಗೆಕೆ.—ದೊಡ್ಡದಾಗಿ ಅಥವಾ ಚಿಕ್ಕದಾಗಿ ಇರುವ ಕೆರೆಗಳಿಗೆ ಕೊಡಗೆದಾರರ ಕಡೆಯಿಂದ ತಕಯುೂದ ಇಟ್ಟು ಕಾಮೆಗಾರಿ ಮಾಡಿನಹೀಕು. ಕೊಡಿಗೆದಾರರ ಪೈಕಿ ಬಂದಾನೊಂದು ಕೊಡಿಗೆದಾರನಿಗೆ ಕಾಮೆಗಾರಿ ಮಾಡುವದಕ್ಕೆ ಅಧಾರವಿಲ್ಲದೆ ಇದ್ದರೆ ಅವರಿಗೆ ಮೂಲು ಜಾವಿಾನು ತೆಗೆದುಕೊಂತು ತಕಾವಿ ಎಂಬದಾಗಿ ನಗದು ಕೆಲವ್ರು ಜಿನಸು ಸಹ ಕೊಟ್ಟು ಅವನ ಕಡೆಯಿಂದ ಕಾಮೆಗಾರಿ ಮಾಡಿಸಿ ಸರಕಾರದಿಂದ ತಕಾವಿ ಕೊಟ್ಟ ಐವೆಜನ್ನು ಫಸಲುಮೇಲೆ ವಸೂಲು ಮಾಡಿಕೊಳ್ಳಬೇಕು. ಬಂದುವೇಳೆ ಕೊಡಿಗೆದಾರರು ನಮಿಗೆ ಕಾಮೆಗಾರಿ ಮಾಡಿಸುವದಕ್ಕೆ ಸಿದ್ಧಾಹವಿಲ್ಲವೆಂಬದಾಗಿ ಹೇಳಿಕೊಂತು ಕೊಡಿಗೆಯನ್ನು ಸರಕಾರಕ್ಕೆ ಒಪ್ಪಿಸುವದಾಗಿ ಹೇಳಿದಲ್ಲಿ ಕೊಡಿಗೆದಾರನ ಕಡೆಯಿಂದ ರಾಜೀನಾಮೆಯನ್ನು ಬರಸಿಕೊಂಡು ಕೊಡಿಗೆಯನ್ನು ಜಪ್ತಿಮಾಡಿ ಕಾಮಗಾರಿ ಬಾಬ್ತು ಅಂದಾಜುಕಟ್ಟಿ ಅಜಿಸ್ತು ಸಹ ಬರೆದು ಹಜೂರಿಗೆ ರವಾನೆಮಾಡಿ ಈ ಬಗ್ಗೆಯುದ್ದಿ ನಿರೂಪ ಸುವರಾದ ಪ್ರಕಾರ ಕಾಮೆಗಾರಿ ಮಾಡಿಸುವುದು.

೨. ಏಕ್ಕಾದಸರಕಾರದ ಕೆರೆಗಳ ಪೈಕಿ ಕೆರೆ ಭಂತಿ ಕೊಣಗಳು ಇರುವ ಕೆರೆಗಳಿಗೆ ಬಂದೊ ಕೂಣಿಗಳ ಕಡೆಯವರಿಗೆ ತಕಯುೂದ ಇಟ್ಟು ಕೆರೆಕಟ್ಟಿಗೆ ದಿನ ಬಂದಕ್ಕೆ ಕೊಣಂದೆಂದಕೆರೆ ನಿಗವರಿತು ಇಪ್ಪತ್ತು ಬುಕ್ಕಿಂದ ಎಂಕ್ಕೆ ಬರಕದವರಿಗೂ ಮಣ್ಣು ಹಾಕಿಸಿ ಕೆರೆಕಟ್ಟಿ ಮೆಜಬೂತು

ಮಾಡಿಸುವಹಾಗೆ ಕೇಳಕಡಾರ ಗೌಡ ಶ್ಯಾನುಭೂಗ ಮುಂತಾದ ಜನದಮೀಲೆ ತಕಾಯೂದು ಇಟ್ಟು ದಿನಜರಿಯಲ್ಲೂ ಇಪ್ಪು ಬರಾಕ ಮಣ್ಣು ಹಾಕಿ ದಾರೆಂಬದಾಗಿ ಶ್ಯಾನುಭೂಗ ಲಿಪಾ ಬರವು ಇಪುವೆಂತೆ ತಕಾಯೂದು ಇಪುವೆದು. ಇದು ಯೊರ್ತು ಸದರಹೂ ಕೆರೆಕೂಣದವೆರ ಕಡಯಿಂದಾ ಛಮಿಾಲ ಶಿರಸ್ತೆದಾರರು ಕೇಳಕದಾರರು ಮುಂತಾವನು ತಮ್ಮ ಮನೆ ಕೆಲಸಗಳು ಮಾಡಿಸಿನಲ್ಲಿ ಆಬಗೆ ಮಜೂರಿ ಜಪೆಜು ಗುನ್ನೇಗಾರಿ ತಿಂದ ಸಂಬಳ ಸಹ ಅವೆರ ಕಡಯಿಂದ ವೆಸೂಲು ಮಾಡಿಕೊಳ್ಳುವುದು. ಅಮಿಾಲನೆ ಈ ಪ್ರಕಾರ ತನ್ನ ಮನೆ ಕೆಲಸ ಮುಂತಾದ್ದು ಮಾಡಿಸಿದಲ್ಲಿ ಸದರಿ ಬರೆದಪೀರಿ ಈಬಗೆ ಮಜೂರಿ ಲಾಗಾಯಿತುನಿಂದಲೂ ತಿಂದ ಸಂಬಳ ಗುನ್ನೇಗಾರಿಸಹ ಅಮಿಾಲನಿಂದ ತರಿಸಲಾದೀತು. ಇದು ಮೊ ಕರಸು ತಿಳಿದು ಸದರಿ ಬರೆದುಇರುವೆ ಪ್ರಕಾರ ಕೊಣಗಳವೆರ ಕಡೆ ಯಿಂದ ಕೆರೆ ಕಾಮೆಗಾರಿ ಮಾಡಿಸುವುದು.

೩. ಇದು ಹೊರ್ತು ಕೋಣಗಳು ಇಲ್ಲದೆಕೆರೆಯಿರುವೆಂಥಾದ್ದಕ್ಕೆ ಮೆರಪಮ್ಮತ್ತು ಆಗತಕ್ಕ ಕೆರೆಗಳು ಅಲ್ಪಸ್ವಲ್ಪ ಇದ್ದಲ್ಲಿ ಹಜೂರಿಗೆ ಅರ್ಜಿಯು ಕಾಮೆಗಾರಿ ಅಂಡಾಜು ಲಾಗಮೆಷಟ್ಟು ಸಹ ಬರೆಸಿ ಕಳು ಹಿಸಿ ಲಾಗವೆದು ಬಗ್ಯೆ ಅಪ್ಪಣೆ ತರಿಸಿಕೊಂಡು ಕೆರ ಮೆರಪಮ್ಮತ್ತು ಮಾಡಿಸುವೆನು. ಸದರಿ ಕೆರೆಪೈಕಿ ಕೊಣಗಳು ಇಲ್ಲದ ಕೆರಗಳಿಗೆ ಕೊಣಗಳು ಇರುವ ಕೆರೆಗಳಿಗೆ ಸಹ ಮೆಳಗಾವಲ್ಲಿ ಗೌಡ ರೈತ ತೋಟಿ ತಳವಾರ ಮುಂತಾವ ಜನರು ಕೆರೆ ಬಳಿಯಲ್ಲಿ ರಾತ್ರಿ ಪಗಲು ಹಾಜರಿದು ಕೊಂಡು ಇರಬೇಕು. ಕೆರೆಗೆ ಏಕಾಯೇಕಿ ಬಹಳವಾಗಿ ನೀರು ಬಂದಿ ದ್ದಾದರೆ ಕೆರಿಕಟ್ಟೆ ಜಾಮೂ ಆಗದಂತೆ ಆಗಿಂದಾಗ್ಗೆ ಕೋಡಿಯನ್ನು ಸಾಪ್ಪು ಮಾಡುವುದು. ಈ ಪ್ರಕಾರ ಬಂದೋಬಸ್ತಿನಿಂದ ಅತಿ ಜಾಗ್ರತೆ ಯಾಗಿ ಇದಾಗ್ಯೂನೂ ಅತಿವೃಷ್ಟಿಆಗಿ ಬಂದು ಅರಕೆರಗಳು ಜಾಮು ಆದಲ್ಲಿ ಅಷ್ಟರಲ್ಲಿಯೇ ಮುಂಗಟ್ಟು ಕಟ್ಟಿ ನೀರು ನಿಲ್ಲಿಸಿಕೊಂಡು ಕೂಡ್ಲೆ ಅರ್ಜಿ ಕೆರೆ ಕಾಮಗಾರಿ ಆಗುವೆ ಅಂದಾಜು ಪಟ್ಟಿ ಸಹ ವೆಸೂರಿಗೆ ಕಳುಹಿಸಿಕೊಟ್ಟು ಬುದ್ಧಿ ನಿರೂಪ ತರಿಸಿಕೊಂಡು ಅಪ್ಪಣೆಯಂದ ಪ್ರಕಾರ ಕಾಮೆಗಾರಿ ಸರಕಾರಕ್ಕೆ ಕಿಪಾಯತ್ತವಾಗ್ ಆಗುವೆ ಹಾಗೆ ಮಾಡಿಸು

ವುದು. ಕಲ್ಲುವಡ್ಡರು ಮಣ್ಣುವಡ್ಡರ ಕಡೆಯಿಂದ ಕಲ್ಲುಕೆಲಸ ಮಣು ಕೆಲಸ ಮಾಡಿಸಬೇಕಾದರೆ ನಾಲ್ಕು ಮೊಳ ಕೋಲಿನಲ್ಲಿ ಜಲಪಡಿ ಗುಂಡು ಕೆಲಸ ಸಹಿತವಾದರೆ ಇಷ್ಟು ಕೋಲು ಎಂಬುದಾಗಿಯು ಜಲಪಡಿ ಗುಂಡು ಇಲ್ಲದೆ ಮೊಟ್ಟು ಮಣ್ಣು ಕೆಲಸವಾದರೆ ಈ ಮಣ್ಣು ಕೆಲಸದ್ದಿ ಇಷ್ಟು ಕೋಲು ಎಂಬುದಾಗಿ ಸಹಾ ಮಗಲು ತಾಲ್ಲೂಕು ಮಜಕೂರಲ್ಲು ಕಿಫಾಯತುವಾರ್ ಕಾಮಗಾರೀ ಆಗಿರುವ ಲೆಖ್ಖ ನೋಡಿ ಆ ಪ್ರಕಾರಾ ಕಂದಾಚಾರದ ಇಲಾಖೆಯವರು ಅಂಚೆ ಮುತ್ಸದ್ದಿ ದಾಖಲೆಯಿಂದ ವಡ್ಡರಿಗೆ ಪಟ್ಟೆಯು ಬರೆಸಿಕೊಟ್ಟು ಈ ಬಗ್ಗೆ ವಡ್ಡರ ಕಡೆಯಿಂದ ಮುಚ್ಚಳಿಕೆ ಬರೆಸಿಕೊಂಡು ಶಾಶ್ವತವಾಗಿರುವಹಾಗೆ ಕಾಮಗಾರೀ ಮಾಡಿಸುವದು. ಬದಸ್ತೂರು ಮಣ್ಣು ಕೆಲಸ ಕಡ್ಡಿಮಟ್ಟ ವರಹ ವಂದಕ್ಕೆ ಇಷ್ಟು ಕೋಲು ಎಂಬುದಾಗಿ ಮೊಕರರ ಮಾಡಿಸಿ ಕೆರೆಕಟ್ಟೆಗೆ ಮಣು ಹಾಕಿಸುವುದು. ಸದರಹು ಕಾಮಗಾರಿ ಮಾಡಿದ ವಡ್ಡರಿಗೆ ಕೊಡತಕ್ಕ ಐವಜಿಗೆ ನಗದು ಅರವಾಶಿ ದವಸ ಸರಕಾರದ ನಿರಕಿಗೆ ಡವಲು ಧಾರಣೆ ಮೇರಿಗೆ ಕ್ಯಪ ರಾಜ ಖಂಡಿಗ ೧೯೬ ಬಂದು ಹಣಾ ಹಣವಡ್ಡ ಎರಡು ಹಣಾ ಈ ಮ್ಯಾರಿಗೆ ಮುನಾಸಬು ನೋಡಿ ಧಾರಣೆ ಛಡಾಯಿಸಿ ಅರ್ಧ ದವಸ ಕೊಡಬೇಕು. ಡವಲು ನಿರಕಿಗೆ ಅರ್ಜಬಾಜಾರಿ ನಿರಖು ಚಾಸ್ತಿ ಇದ್ದಲ್ಲಿ ಅರ್ಜ ಬಾಜಾರೀ ನಿರಖಿಗೆ ಸವರೀ ಪ್ರಕಾರಾ ನಿರಖು ಜಾಸ್ತಿ ಛಡಾಯಿಸಿ ಕೊಡಬೇಕು. ಸದರಹೂ ನಗದು ಜಿನಸು ಸಂದದ್ದಕ್ಕೆ ವಡ್ಡರಕಡೆಯಿಂದ ರಶೀತಿ ತೆಗೆದುಕೊಳ್ಳುವುದು. ವಡ್ಡರಿಗೆ ಷಾಜಲು ಕೊಡಕೆಲಸವಿಲ್ಲಾ.

* * * * *

* * * * *

ಹದಿನೂನನೇ ಕಲಂ.—ಸರಕಾರದ ತಸದೀಕು ರಹದಾರ ನಿರೂಪಗಳ ಪ್ರಕಾರ ಖರ್ಚುಮಾಡಬೇಕೇ ಹೊರ್ತು ಜಾಸ್ತಿ ಖರ್ಚುಮಾಡ ಕೆಲಸವಿಲ್ಲ. ಇದರಮೇಲೆ ಸನ್ನದು ಹೊರ್ತು ಬಂದುಕಾಸು ಖರ್ಚು ಆದರೂ ಮಾಡಿದಲ್ಲಿ ಆ ಖಾಬ್ತು ಅಮಿಲನೇ ಸಿಖ್ತಾ ಮಾಡಬೇಕು. ಇದು ಶಿವಾಯಿ ತಾಲ್ಲೂಕು ಮಜಕೂರು ಕಿಲ್ಲೆ ಕಂದಾಚಾರದ ಜನಗಳಿಗೆ ಹಜೂರಿನಿಂದ ಪುಕುಂ ಸಾದರಾಗಿ ಇರುವ ತಸದೀಕು ಪ್ರಕಾರ ಸಂಬಳ

ಸಲ್ಲುವ ಬಗ್ಗೆ ಹೊಲಗಂದಾಯ ಕಳದು ನಿಂತ ಬಾಕಿಗೆ ನಗದು ಸಲ್ಲುವ ಬಕ್ಕೆ ತಿಂಗಳುಗಟ್ಲೆಯಲ್ಲೂ ಬರಾವದ್ರೂ ತರಾಯಿಸಿ ಪರದೋ ಇಲಾಖೆ ಯವರು ಕುಳಿತುಕೊಂಡು ನಗದು ಜಿನಸು ಸಹಾ ದಸ್ತು ಬದಸ್ತು ಬಟವಾಡೆಮೊದಿ ಬರಾವದ್ರೂ ಪ್ರಕಾರ ಬಟವಾಡೆ ಆದ ಐವಜಿಗೆ ಕಿಲ್ಲೇದಾರನ ಕಡೆಯಿಂದ ರಶೀದಿ ತಗೆದುಕೊಳ್ಳಬೇಕು. ಸದರಹು ಜನರಿಗೆ ಬಟವಾಡೆ ಸಲ್ಲುವ ಐವೆಜಿಗೆ ಅಮೊನಿ ದವಸನಿದ್ದಲ್ಲಿ ಬಂದು ಹಿಸ್ಸೆ ದವಸ ಡವಲು ನಿರಖಿಗೆ ಬಾಡಾರಿ ನಿರಖು ಜಾಸ್ತಿ ಇದ್ದಲ್ಲಿ ಬಾಜುರಿ ಧಾರಣೆ ಮೇರೆಗೆ ಕೊಡುವದು. ಬಾಜಾರಿನ ನಿರಖಿಗೆ ಡವಲು ನಿರಖು ಜಾಸ್ತಿ ಇದ್ದಲ್ಲಿ ಡವಲು ನಿರಖಿನ ಪ್ರಕಾರಾಕೊಡುನ್ರದು. ಅಮೊನಿ ದವಸವಿಲ್ಲದೇಇದ್ದರೆ ದರೋಬಸ್ತು ನಗದು ಕೊಡಬೇಕು. ದವಸವಿದ್ದಲ್ಲಿ ಬರದುಇರುವ ಪ್ರಕಾರ ಬಂದು ಹಿಸ್ಸೆ ದವಸ ಎರಡು ಹಿಸ್ಸೆ ನಗದು ಸಹಾ ಕೊಡುವ್ರದು.

ಹದಿನಾಲ್ಕನೇ ಕಲಂ.—ತಿಂಗಳುಗಟ್ಲೆ ಜಮೊಖರ್ಚು ಬಹುಳ ಸಿಂ ಆಗುತ್ತಲೇ ಶುದ್ಧ ಸಿಯೊಳಗ ತಯಾರು ಮಾಡಿಸಿ ಅನ್ನಸತ್ರದ ಜಮೊಖರ್ಚು ನಿರಖುಪಟ್ಟಿ ಬಾಕೀಪಟ್ಟೀ ಸದ ತಯಾರು ಮಾಡಿಸಿ ರಾಲು ಹಾಜರು ದವಸದ ಪಟ್ಟಿ ಸಹಾ ಆಮೀಲನ ದನಪತ್ತು ಮೊಹರು ತಿರಸ್ತೇ ದಾರನ ದಾಯಲೆಯಿಂದ ಅಗಿಂದಾಗ್ಗೆ ಕಳುಹಿಸುತ್ತಾ ಬರುವದು. ಯಾ ತಿನಾಯಿ ಸವರಿ ಮೂರು ಐಸ್ತು ಪ್ರಕಾರ ಸಂವತ್ಸರದ ಐವೆಜು ರೈತಾಡೆ ಯಾಗಿ ವಸೂಲು ಮಾತಿ ಕಳುಹಿಸುವ ಹಾಗೆ ಹುಕ್ಕುಂ ಇರುವ ಮೇರೆಗ ಆಯಾ ಐಸ್ತು ಬಂದೀ ಬಾಬತು ಐವೆಜು ಇರಸಾಲು ಮಾಡು ವೆಲ್ಲೂ ಸದರೀ ಐಸ್ತಿನ ವಸೂಲು ಇಷ್ಟು ಈಪೈಕಿ ಇರಸಾಲು ನಿಜರ್ು ಪರಮೊಯಿಷಿ ಜಿನಸು ಕಟ ಸ್ಥಳಬಿಚ್ಚರ್ು ವೆಗ್ಗೆರೆ ಇಷ್ಟು ಜಾತಾಬಾಕಿ ಇಷ್ಟು ಎಂಬಿದಾಗಿ ಜಾಬಿತ್ತಿ ಪ್ರಕಾರ ಪಟ್ಟಿ ಕಳುಹಿಸುವೆದು.

ಹದಿನೈದನೇ ಕಲಂ.—ತಾಲ್ಲೂಕು ಮಜಕೂರಲ್ಲಿ ರೈತರು ಕೇವಲ ನಾದಾರಾಗಿ ಜೀರಾಯಿತು ಮೊತುವ್ರದಕ್ಕೆ ವೆಸತಿಯಿಲ್ಲದೆ ಇದ್ದಲ್ಲಿ ಪಹಣಿ ರಗ ಅಜಿರ್ ಬರೆದುಕೊಂಡು ಒಬ್ಬಿ ನಿರೂಪವನ್ನು ತರಿಸಿಕೊಂಡು ಸದರಹೂ ರೈತರಿಗೆ ಮೂಲ ಜಾಮೀನು ತೆಗೆದುಕೊಂಡು ಕುಳಿ ವೆಂದಕ್ಕೆ ಒಂದು ವೆದಾ ಲಾಗಾಯ್ತು ನಾಲ್ಕು ವರಯಾದ ವೆರಿಗೂ ಮುನಾ

ಸಬು: ನೋಡಿ ತಾಲ್ಲೂಕು ಒಂದಕ್ಕೆ ನೂರು ವೆರಹಾ ನೂರು ಐವತ್ತು ನೇರಪಾವಲ್ಲಿ ತಕಾವಿ ಕೊಟ್ಟು ಫಸಲುಮೇಲೆ ವಸೂಲು ಮಾಡಿಕೊ ಳ್ಳೋವುದು.

26. ಪರ್ತಿ ಪದ್ಧತಿ.—ಮುಲ್ಕಿ ಅಡಳಿತದ ಆದಾಯ ವಿಚಾರದಲ್ಲಿ ಪರ್ತಿ ಎಂಬ ಪೂರ್ವಪದ್ಧತಿಯೊಂದಿತ್ತು. 'ಪರ್ತಿ' ಎಂದರೆ ತಾಲ್ಲೂ ಕಿನ ವರಮಾನವನ್ನು ಗುತ್ತಿಗೆಗೆ ಕೊಡುವ ವಿಚಾರ. ಈ ಸಂಪ್ರ ದಾಯವನ್ನು ರೊದ್ದಗಳವರ ಪೌಲತ್ತಿನಲ್ಲಿಯೂ ನಡೆಯಿತು. ಗುತ್ತಿಗೆ ಮಾಡಿಕೊಳ್ಳುವ ಅಮಲ್ದಾರರು ಒಟ್ಟು ತಾಲ್ಲೂಕಿಗೆ ಸಾಲಿಯಾನ ಇಷ್ಟು ಪೊಬಿಗಗನ್ನು ಕೊಡಬೇಕು; ಇದಕ್ಕೆ ಕಡಿಮೆಯಾದರೆ ಅದನ್ನು ಅವರೇ ಸೇರಿಸಿ ಕೊಡಬೇಕು; ಹೆಚ್ಚು ಹುಟ್ಟುವಳಿಯಾದುದೆಲ್ಲ ಸರ್ಕಾರಕ್ಕೆ ಸೇರಿಸತಕ್ಕದ್ದು; ಅಮಲ್ದಾರರು ರೈತರಿಗೇನೇನೂ ತೊಂದರೆ ಯುಂಟುಮಾಡಬಾರದು; ಯಾವವಿಧವಾದ ಹೊಸ ತೆರಿಗೆಯನ್ನೂ ಹಾಕಲ್ಹಾಪಕೂಡದು; ಬಟಾಯಿ ಸರ್ಕಾರದ ಪಾಲಿನ ದವಸವನ್ನು ಕೊಂಡುಕೊಳ್ಳುವಂತೆ ರೈತರನ್ನು ನಿರ್ಬಂಧಪಡಿಸಕೂಡದು; ಎಂಬೀ ನಿಯಮಗಳು ಸಿದ್ಧಾಯವಾಗಿದ್ದವು. ಇದಕ್ಕೆಲ್ಲ ಒಪ್ಪಿತ ಮುಚ್ಚಳಿಕೆ ಯಾಗುತ್ತಿತ್ತು. ಇವರಲ್ಲೇನಾದರೂ ವ್ಯತ್ಯಾಸಗಳು ಕಂಡರೆ ವಿಚಾರಣೆ ಮುಂತಾದ ಕ್ರಮ ನಡೆಯಲು ನಿರ್ಧಾರವಿತ್ತು. ಅದರೆ ಎಲ್ಲಾ ಕಡೆಯ ಲ್ಲಿಯೂ ಈ ಪದ್ಧತಿಯೇ ಆಚರಣೆಯಲ್ಲಿತ್ತೆನ್ನುವುದಕ್ಕೆ ತಕ್ಕ ಆಧಾರ ಏನನ್ನೂ ಕಾಣಿಸುವುದಿಲ್ಲ.

27. ರೊದ್ದಗಳವರಿಂದ ಸಾದರಾದ ಫಿರ್ಯಾದಿ ವಿಚಾರಣೆಯ ನಿರೂಪ.—ರೊದ್ದಗಳವರು ಬೇಕದಲ್ಲಿ ಪ್ರಜೆಗಳ ಹಾಲ್ ಅಹವಾಲುಗಳನ್ನು ಚಿತ್ತಕ್ಕೆ ತಂದು ನಡೆಸುತ್ತಿದ್ದ ಕ್ರಮವನ್ನು ಅವರು ಸ್ವ 1827 ನೆ ಇಸವಿಯಲ್ಲಿ ಆಗಿನ ದಿವಾ* ವೆಂಕಟ್ರೀ ಅರಸಿನವರಿಗೆ ಅರ್ಪಣೆ ದರಖಾಲಿಸಿದ ಒಂದು ನಿರೂಪದಿಂದ ತಿಳಿಯಬಹುದು. ಆವೆಂತೆಂದರೆ:—

---

* ಈ ವೆಂಕಟ್ರೀ ಅರಸಿನವರಿಗೆ ಹಜೂರು ಖಾಸಾನ್ಸ್ಥಾನದಿಂದ ಸಾದರಾದ ಸ್ವ 1827 ನೆ ಇಸವಿ ಜೂನ್ ತಿಂಗಳ 10 ನೇ ದಿನಾಂಕದಿನ ನಿರೂಪದ ಪ್ರಕಾರ ದಿವಾನ್ರಾಗಿರಿ ಹೊಣೆಕಾರರಾಯಿತು.

"ಸರ್ವಜಿತು ಸಂವತ್ಸರದ ಶ್ರಾವಣ ಬಹುಳ ೧೪ ಮಂಗಳವಾರ ದಲ್ಲು ಶ್ರೀಮತು ದಿವಾ ವೆಂಕಟರಾಜೈಯ್ಯನವರ್ಗ ಬರಸಿ ಕಳುಹಿಸಿದ ನಿರೂಪ ಏದಾಗಿ, ಮುಳುಬಾಗಿಲು ಕಸಬೆಯಲ್ಲಿ ಇರುವ ಯಾಗಾದಿ ಭೀಮ ರಾಯನೆಂಬುವನು ಭಿನ್ನಾದು ಮಾಡಿದ್ದು ತಾಲ್ಲೂಕು ಮಜಕೂರು ಪೈಕಿ ಕಸವೆಗಟ್ಟ ಯೆಂಬ ದಿನ್ನ ಜಬರಾಯು ಪಾಯುನಾದಿ ಸಾಗುವಳಿ ಆಗುತ್ತ ಇದ್ದದ್ದು ಮೊಜಿ ಅಮಿಾಲು ನೀಲಕಂತರಾಯನು ತನ್ನ ಕರೆಕಳುಹಿಸಿ ನೀನು ಸ್ಥಳದನ, ಜೀಜರಾಯು ಬಿದ್ದು ಇಧ್ದ, ಶ್ರಯುಕ್ಕ ಮಾಡಿಕೊಳ್ಳಹೇಳಿದ್ದಕ್ಕೆ ಕಾಯಂ ಗುತ್ತಿಗ್ಯೆ ಆಪಲ್ಲಿ ಮನವನತ್ತು ಮಾಡಿ ಗಿಡ ಕಡಿಸಿ ಆಬಾದು ಮಾಡುತ್ತೇನೆಂದು ಹೇಳಿದ್ದರಿಂದ ಕಾಯಂ ಗುತ್ತಿಗ್ಯೆ ನಾಡಿಸಿಕೊಂಡು ತ್ತೇನೆಂದು ಭರವಸೆ ಹೇಳಿ ಪಾರ್ಥಿವ ಸಂವತ್ಸರ ೪೯ ವ್ಯಯ ಸಂವತ್ಸರ ೪೫॥೦ ಸರ್ವಜಿತು ಸಂವತ್ಸರ ೩೯೮ ಸರ್ವಧಾರಿ ಸಂವತ್ಸರ ೬೯ ವಿರೋಧಿ ಸಂವತ್ಸರ ೬॥೦ ಈ ಪ್ರಕಾರ ಶ್ರಯ ಮೊಕರರು ಮಾತಿ ವೆಟ್ಟಿ ಬರದು ಕೊಟ್ಟವ್ದರಿಂದ ಆ ಭರವಸೆಯಿಂದ ಕೆಲವ್ರು ಲಾಗವೆತು ಮುಟ್ಟಿಸಿ ಗಿಡ ಕಡಿಸಿ ರಯಿತರ ತಂದುಯಿಟ್ಟು ಸಾಗುವಳಿಮಾಡಿಸಿ ಪಾರ್ಥಿವ, ವ್ಯಯ ಎರಡು ವರ್ಷಗಳ ಐವೆಜು ಸಂದಾಯಮಾಡಿಯಿಸ್ಕೊನ; ಈಚಿಗೆ ಆನನ ಮೊವಲೆ ತಗ್ಯೆರಾಗಿ ವಿಶ್ವನಾಥಯ್ಯ ಬಂದಮೇಲೆ ಮೊಜಿ ಅಮಿಾಲನು ಭರವಸೆ ಕೊಟ್ಟದರಿಂದ ಆ ಪ್ರಕಾರಕ್ಕೆ ಶ್ರಯುಕ್ಕೆ ಮಾಡಿಕೊಂಡಿದ್ದೇನೆ; ಆ ಪ್ರಕಾರ ಅವಲ್ಲಿ ಕಪ್ಪ್ಯಪಟ್ಟು ಗ್ರಾಮ ಆಬಾದು ಮಾಡುತ್ತೇನೆ; ಇಲ್ಲವ ಇದ್ದಲ್ಲಿ ಶ್ರಯುವ ಐವೆಜು ಸಪ ಹುಟ್ಟುವಿ ಆಗೆಂದು ಪ್ರಯಾಸವೆಂದು ಹೇಳಿಕೊಂಡದ್ದಕ್ಕೆ ಅಮಿಾಲನು ಸೆವರಿ ದಿನ್ನೆ ಆಜಮೊವಿಷಿ ಮಾಡಿ ಬರ ದುಕೊಟ್ಟ ಅರ್ಜಿಯು ಹಾಜರು ಮಾಡಿಯಿದ್ದೇನೆ; ಅನೆನು ಬೀದ ಪ್ರಕಾರ ೧೪೫೧ ಕ್ಕೆ ಕಾಯಂ ಜೋಡಿಗ ಅಗ್ಗನೆ ಆಗಬೇಕೆಂದು ಬರೆದ ಅರ್ಜಿ ಫರ್ಮಾ ದು ಈನೇರಿ ಮೊರೀಫತ್ತು ಹಾಲಾರು ಪ್ರತವಾಗಿ ಕಬ್ಬ ವೆಂಚಿಸಿಯಿದ್ದೀತು. ಇವನು ಕಾಯಂ ಜೋಡಿಗೆ ಪರವಾಸ್ತು ಸೊಡುವ ವಿಶ್ಯವೆನಿಷ್ಟ ಅಮಿಾಲನು ಬರದ ಅರ್ಜಿಪಟ್ಟ ಸುದಾ ಪರಾಂಬರಿಸಿ ಸವರಿ ಅರ್ಜಿಪಟ್ಟ ನಕಲು ಮೇಪೂಸಿ ಮಾದಿಸಿದಿನ್ನಯಾಗಿ ಅಮಿಾಲನು ಬರದ ಪ್ರಕಾರ ಜೋಡಿಗೆ ಕೊಡುವುದು ಸರಕಾರ ವಿಹಾಯಿತು ಇದ್ದ ಮುನಾಸಲು ಇದ್ದಲ್ಲಿ

ನೀವು ಚೆನ್ನಾಗಿ ವಿಚಾರಿಸಿ ಬರೆದು ಕಳುಹಿಸಿಕೊಟ್ಟಲ್ಲಿ ಅಪ್ಪನೆ ಕೊಡಿಸಲಾದೀತು. ತಾರೀಖು 21ನೆ ಮೊಹೆ ಆಗಸ್ಟು ಸನ 1827ನೆ ಇಸವಿ."

28. ಜಮಾ ಬಾಬು:—ಈ ಸಂಸ್ಥಾನದ ವರಮಾನಕ್ಕೆ ಜಮಿನಿನ ಪುಟ್ಟುವಳಿಯೇ ಮುಖ್ಯವಾದ ಆಧಾರ. ಈ ಬಾಬಿನಲ್ಲಿ ಹಿಂದಿನ ಪದ್ಧತಿಗಳಿಗೆ ವಿರೋಧವಿಲ್ಲದಂತೆ ಖಾಮೆಂದರವರು ಜಿರಾಯಿತಿದಾರರಿಗೆ ಸೌಲಭ್ಯಗಳನ್ನು ಕಲ್ಪಿಸಿ ಅಲ್ಲಲ್ಲಿ ತಕ್ಕ ಜನರಿಗೆ ಬೇಜರಾಸ್ತ ಜಮಿನನ್ನು ಕ್ರಯಕ್ಕೆ ಕೊಟ್ಟು ಅದನ್ನು ಆಬಾದಿಗೆ ತರುವಂತೆ ಏರ್ಪಾಡಿಸಿ ಚಿತ್ರದುರ್ಗದಕಡೆ ಗನ್ನಾ ಪೈರಾಗುತ್ತಿದ್ದ ಜಮಿನಿನ ಮೇಲೆ ದಾಖಲಾಗಿದ್ದ ತೆರಿಗೆಯ ದರವನ್ನು ಕಡಿಮೆಮಾಡಿದರು.

ಮೈಸೂರು ದೇಶದಲ್ಲಿ ಸುಮಾರು ಚೇಕಡ 85 ಪಾಲು ಭೂಮಿಯು ನೀರಿನ ವಸತಿಯಿಲ್ಲದ ಪ್ರದೇಶ; ಕುಷ್ಕ ಜಮಿನು; ಕೆರೆಗಳೂ ಅಷ್ಟಕ್ಕಷ್ಟೆ ದೊಡ್ಡವಲ್ಲ; ತರಿ ಮತ್ತು ಬಾಗಾಯತು ಪೈರಿಗೆ ಕಾವೇರೀನದಿಯ ನಾಲೆಗಳೇ ಮುಖ್ಯವಾದ ಆಶ್ರಯ. ಋತುಧರ್ಮದಲ್ಲಿ ಕಾಲಕಾಲಕ್ಕೆ ಪ್ರತಿವರ್ಷವೂ ತಪ್ಪದೆ ಮಳೆಯಾಗುವುದೆಂಬ ನೆಚ್ಚಿಕೆಯಿಲ್ಲ. ಆಗಾಗ್ಗೆ ಮಳೆಸಾಲದೆ ಬೆಳೆ ಕುಂದುವುದುಂಟು. 1816–17ರಲ್ಲಿ ಮಳೆ ಬಹಳ ಕಡಿಮೆಯಾದಂತೆ ತಿಳಿಯಬರುತ್ತೆ. 1823–24ರಲ್ಲಿ ಕ್ಷಾಮವೇ ಸಂಭವಿಸಿತು.

ಜಮಿನು ಬಾಬಿನ (Land Revenue) ಜಮಾಬಂದಿಯು ದಿವಾನ್ ಪೂರ್ಣಯ್ಯನವರ ಕಾರಕರ್ದಿಯಲ್ಲಿ ಮೊದಲನೆಯವರ್ಷ 59¾ ಲಕ್ಷರೂಪಾಯಿ ಇದ್ದದ್ದು ವೈದ್ಧಿಯಾಗಿ 1808–9ನೆಯಿಸವಿಯಲ್ಲಿ 71¼ ಲಕ್ಷರೂಪಾಯಿಗಳವರೆಗೆ ಏರಿ 1809–10ನೆಯಿಸವಿಯಲ್ಲಿ 64 ಲಕ್ಷಕ್ಕೂ 1810–11ರಲ್ಲಿ 60¼ ಲಕ್ಷಕ್ಕೂ ಇಳಿಯಿತು. ತರುವಾಯ ದೊರೆಗಳವರ ಆಳಿಕೆಯ 1815–16ನೆಯಿಸವಿಯಲ್ಲಿ 71¼ ಲಕ್ಷಕ್ಕೆ ಏರಿತು. 1823–24ರಲ್ಲಿ ಕ್ಷಾಮದಿಂದ ತಗ್ಗಿತು. ಮತ್ತೆ ಕೆಲವು ವರ್ಷಗಳಲ್ಲಿ ಪಚ್ಚಿ 1830–31ರಲ್ಲಿ 51¼ ಲಕ್ಷವಾಯಿತು. ಖಾಮೆಂದರವರ ದೌಲತ್ತಿನ ಕಾಲ ಮೊದಲನೆಯ ದಸ್ತಾಲಾದಲ್ಲಿ ಜಮಿನಿನ ವರಮಾನ ವರ್ಷಕ್ಕೆ ಸರಾಸರಿ 65¾ ಲಕ್ಷ; ಎರಡನೆಯ ದಸ್ತಾಲಾದಲ್ಲಿ ವರ್ಷಕ್ಕೆ ಸರಾಸರಿ 57¼ ಲಕ್ಷರೂಪಾಯಿಗಳು.

ಸಾಯರು ವರಮಾನವು 10 ಲಕ್ಷದಿಂದ 11½ ಲಕ್ಷ ರೂಪಾಯಿಯವರೆಗೆ ಅಭಿವೃದ್ಧಿಯಾಯಿತು. ಅಡವಿಗಳ (Forests) ಉತ್ಪತ್ತಿ ಕಡಿಮೆಯಾಗಲಿಲ್ಲ. ಶೇಂದಿ ಪರಾಬು ಮುಂತಾದ ಐದು ಬಾಬಿನ ಆದಾಯವು ಹೆಚ್ಚಿ ಸ್ರ 1815 –16 ರಲ್ಲಿ ಅಪೂರ್ವವಾಗಿ 3,60,726 ರೂಪಾಯಿ ಜಮೆಯಾಯಿತು. ಸ್ರ 1828 ರಲ್ಲಿ ದೊರೆಗಳವರು ಸ್ಟ್ಯಾಂಪು (Stamps) ವರಮಾನವನ್ನು ವಿಧಿಸಿದರು.

ಹುಟ್ಟುವಳಿಯ ಎಲ್ಲಾ ಬಾಬುಗಳೂ ಸೇರಿ ಒಟ್ಟು ಸಂಸ್ಥಾನದ ಜಮೆ ಹಿಂದೆ ಸ್ರ 1801 ರಲ್ಲಿ 77 ಲಕ್ಷವಿದ್ದದು ದೊರೆಗಳವರಿಗೆ ಪಟ್ಟವಾದಮೇಲೆ ಸಾಲೀಯಾನ ಮೊದಲನೆಯ ವಸ್ಸಾಲಾವಲ್ಲಿ 86½ ಲಕ್ಷ ರೂಪಾಯಿಯೂ, ಎರಡನೆಯ ವಸ್ಸಾಲಾದಲ್ಲಿ 86½ ಲಕ್ಷ ರೂಪಾಯಿಯೂ ಮೂರನೆಯವರಲ್ಲಿ 76 ಲಕ್ಷವೂ ಕಂಡುಬಂತು.

29. ಖರ್ಚು ಬಾಬು.—ಇಂಗ್ಲೀಷು ಸರ್ಕಾರಕ್ಕೆ ಸಲ್ಲತಕ್ಕ ಪಿಸ್ತು ತಪ್ಪದೆ ಅವರಿಗೆ ಕಾಲಕಾಲಕ್ಕೆ ಪಾವತಿಯಾಯಿತು. ಇವಲ್ಲದೆ ಸವಾರು, ಬಾರು, ಅದಾಲತ್ತು, ಅರಮನೆ, ಅಟ್ಟವಣೆ, ಕಂದಾಚಾರ, ಅಂಕೆ, ಅಮೃತಮಹಲು, ಫೌಜುಕಛೇರಿ, ದಿವಾಣಕಛೇರಿ, ತೋಷೀಖಾನೆ, ಖಜಾನೆ, ತೆರಿಗೆ ವಸೂಲಿ, ಮುತಫರಖಾತ್, ಪಾಳ್ಯಗಾರರ ಮರ್ಯಾದೆತಲಬು, ಮೇಜವಾನಿ, ಮೆರಹಮ್ಮತ್ತು ಇವು ಆ ಕಾಲದಲ್ಲಿ ಖರ್ಚಿನ ಮುಖ್ಯವಾದ ಬಾಬುಗಳು. ಎಲ್ಲಾ ಭಾಗದಲ್ಲಿಯೂ ಕಾಲಾನುಗುಣವಾಗಿ ಅವಶ್ಯಕವಾದ ದ್ರವ್ಯವ್ಯಯವು ಮಿತವಾಗಿ ನಡೆಯಿತು. ಒಟ್ಟು ಖರ್ಚು ಸಾಲೀಯಾನ 70 ಲಕ್ಷದಿಂದ 90 ಲಕ್ಷ ರೂಪಾಯಿಯವರೆಗೂ ದಾಖಲಾಗಿ ಕೆಲವುವರ್ಷ ಮುನಾಸಬು ಕಂಡಂತೆ ಇನ್ನೂ ಸ್ವಲ್ಪ ಹೆಚ್ಚಾಗಿಯೂ ವ್ಯಯವಾಯಿತು.

30. ಮರಹಮ್ಮತು ಕಾಮುಗಾರಿ (Public Works).—ದೊರೆಗಳವರ ಆಜ್ಞಾನುಸಾರವಾಗಿ ಪ್ರಜಾನ್ಯಯೋಜನಕವಾದ ಕಾಮುಗಾರಿಗಳು ಅಯಾಪ್ರಾಂತಗಳಲ್ಲಿ ಅವಶ್ಯಕತೆ ಕಂಡುಬಂದಂತೆ ನಡೆದವು. ಅವುಗಳಲ್ಲಿ ನೀರಾವರಿ ಕೆಲಸಗಳು ಮುಂದಾದುವು. ನರಸಾಂಬುಧಿಕೆರೆ, ದೇವಾಂಬುಧಿಕೆರೆ, ಹುಲ್ಲಹಳ್ಳಿನದಿಯ ಅಣೆ ಮೆತ್ತು ನಾಲೆ, ಚಿಟ್ಟಿನ

ಪುರದ ತಾಲ್ಲೂಕಿನಲ್ಲಿ ನಾಲೆ, ಅಷ್ಟಗ್ರಾಮದ ತಾಲ್ಲೂಕಿನ ನಾಲೆಗಳು, ಹೊಸಕೋಟೆಕೆರೆ, ಪೆರಿಯಪಟ್ಟಣದ ತಾಲ್ಲೂಕು ಲಕ್ಷ್ಮಣತೀರ್ಥನದಿಯ ನಾಲೆ, ಲಕ್ಷ್ಮಣತೀರ್ಥದಕಟ್ಟೆ ಇವು ಮೊದಲಾದವುಗಳ ಕಾಮೆಗಾರಿಗಳಲ್ಲಿ ಪ್ರತಿಯೊಂದಕ್ಕೂ ನಾಲ್ಕು ಸಾವಿರ ರೂಪಾಯಿಗೆ ಕಡಿಮೆಯಿಲ್ಲದೆ ಖರ್ಚಾಗಿ ಅನ್ನು ಆಯಾದಿನಲ್ಲಿಮ್ಮುವು. ಸ್ವ 1824–25 ರಲ್ಲಿ ಮೈಸೂರು ಜನಪದ ತಲಾವು ಕಾಮಗಾರಿಗೆ 5128 ವರಹನವರೆಗೂ ಖರ್ಚಾಯಿತು. ಇಟ್ಟಲ್ಲದೆ ದೇವರದಲ್ಲಿ ಶಿಕಸ್ತಾದ ರಸ್ತೆ, ತಲಾವು, ಛತ್ರ, ದೇವಸ್ಥಾನ, ನರ್ಸ್ಕರುವ ಚಪೇಲಿ, ಉಗ್ರಾಣ, ಬಂಗಲೆ, ಸೇತುವೆ, ಸಬೋವೆರ, ಸಮಾಧಿ, ಸಂವಲಕೋಟಿ, ತಬೇಲೆ, ಷಹರಬಾಗಿಲು, ಕಿಲ್ಲೆಬಾಗಿಲು, ಜಂಗಮಮಠ, ಕೃಷ್ಣರಾಜಕಟ್ಟೆ ಮುಂತಾದವುಗಳ ಅಬಾದು ಬಗ್ಗೆ ಕಾಲಾನುಗುಣವಾಗಿ ಮರಪಮ್ಮತ್ತು ಇಲಾಖೆಯ ಮೂಲಕ ಕಾಮಗಾರಿಗಳು ನಡೆದುವು. ಈ ಬಾಬಿಗೆ 1811–12ನೆ ಯಿಸವಿ ಪ್ರಜೋತ್ಪತ್ತಿ ಸಂವತ್ಸರ ಮೊದಲು 1830–31ನೆಯ ವಿಕೃತಿ ಸಂವತ್ಸರದವರೆಗೆ ಸಂದ ಇಪ್ಪತ್ತು ವರ್ಷಗಳಲ್ಲಿ ಒಟ್ಟು ೪,೫೦,೨೭೨ ಲಕ್ಷ ಕಂಠೀರಾಯಿವರಹ ಎಂದರೆ ನಾಲೀಯೂನ ಸರಾಸರಿ 42,514 ಕಂಠೀರಾಯಿವರಹಗಳ ವ್ಯಯವಾಯಿತು. ಅಯಾ ವರ್ಷಗಳ ಖರ್ಚನ್ನು ನೋಡುವಲ್ಲಿ ವರ್ಷ 1 ಕ್ಕೆ 22½ ಸಾವಿರಕ್ಕೆ ಕಡಿಮೆಯಿಲ್ಲದೆ 68½ ಸಾವಿರ ವರಹಗಳ ವರೆಗೂ ಖರ್ಚಾದಂತೆ ತಿಳಿಯಬರುತ್ತೆ.

ಕೆರೆ ಮುಂತಾದ ಜಲಾಶಯಗಳ ವಿವರ:—

ಜಲಾಶಯ.	ಬುರಸ್ತು.	ಪಾದುರಸ್ತು.	ಒಟ್ಟು.
ಕೆರೆ	14,249	5568	19,817
ಕಟ್ಟೆ	14,480	6869	21,349
ನಾಲೆ	703	205	908
ಬಾವಿ	14,583	1788	16,371
ಅಣೆಕಟ್ಟು	736	301	1037
ಜಂಗ್ಲಿನಾಲೆ	694	230	924

ಮೇಲಿನ ಸಂಖ್ಯೆಗಳಿಂದ ಲೆಕ್ಕಾ ಕೆರೆ 73, ಕಟ್ಟೆ 69, ನಾಲೆ 77, ಬಾವಿ 89, ಅಣೆಕಟ್ಟು 71, ಜಂಗ್ಲಿನಾಲೆ 75 ಒಳ್ಳೆ ಅಬಾದುಸ್ಥಿತಿಯಲ್ಲಿದ್ದಂತೆ ಕಂಡುಬರುತ್ತೆ.

31. ದೊರೆಗಳವರೆಗೆ ಬಿದ್ದ ದೌರ್ಜನ್ಯದ ಕಾಲದ ಬಗ್ಗೆನ್ನು ವಿಚಾರಿಸುವಾಗ ಅವರಿಗೆ ಒದಗಿದ್ದ ಕೆಲವು ಸಂದರ್ಭ ವಿಶೇಷಗಳನ್ನು ಪರಿಗಣಿಸುವುದು ಅವಶ್ಯಕವಾಗಿದೆ. ಬ್ರಿಟಿಷರವರ ದಯಾಪ್ರದವಾದ ಮತ್ತು ನ್ಯಾಯೋಚಿತವಾದ ಆಡಳಿತೆಯಿಂದ ಶಾವಂದರವರಿಗೆ 1791ನೆ ಯಿಸವಿಯಲ್ಲಿ ರಾಜ್ಯವು ಪ್ರಾಪ್ತವಾಗುವುದಕ್ಕೆ ಹಿಂದೆ ನಡೆದ ಬದಲಾವಣೆಗಳ ದೆಸೆಯಿಂದ ಈ ಹೈನೂರು ರಾಜ್ಯದ ಅಂಗಗಳು ವ್ಯತ್ಯಸ್ತವಾಗಿ ಹೈಸಬೀತ್ಯವೆನ್ನು ತಾಳಿದ್ದವು. ಶ್ರೀಮನ್ಮಹಾರಾಜರು ಮುಮ್ಮಡಿ ಕೃಷ್ಣರಾಜ ಒಡೆಯರವರು ಸ್ವಯಂ ರಾಜ್ಯಭಾರವನ್ನು ವಹಿಸಿವ ಬಳಿಕ ಪರ್ಯಾಲೋಚಿಸಿ ಹಿಂದೆ ತಮ್ಮ ಬಾಲ್ಯದಶೆಗನುಗುಣವಾಗಿ ಪೂರ್ಣಾಧ್ಯಯನದ ಕಾರ್ಯದಿಯಲ್ಲಿ ತತ್ಕಾಲಕ್ಕೆ ನೇಮಕವಾಗಿದ್ದ ಹಲವು ಬಾಬುಗಳಲ್ಲಿ ತೆದ್ದುಪಾಡು ಮಾಡಿದರು. ಮುನಾಸಬು ಕಂಡಂತೆ ಕೆಲವು ಬಾಬುಗಳನ್ನು ಕ್ರಮಪಡಿಸಿದರು. ಬೇಕಾದ ಇತರ ಅಂಗಗಳನ್ನು ವಿಸ್ತರಿಸಿಕೊಂಡರು. ಈ ರಾಜವಂಶದಲ್ಲಿ ಪ್ರಖ್ಯಾತಿ ಪಡೆದ ಪ್ರಭುವೆಕ್ಕರ ಕೀರ್ತಿಪ್ರತಿಷ್ಠೆಗಳಿಗನುಗುಣವಾಗಿ ಅರಮನೆ ಮುಂತಾದ ಇಲಾಖೆಗಳ ಅಭಿವೃದ್ಧಿ, ತೋಷೀಖಾನೆಯ ಬಡಾವಣೆ, ಆಸ್ಥಾನದ ಅನುಚಾನ ಮರ್ಯಾದಾನುಸಾರ ಅತಿಥಿ ಸತ್ಕಾರ, ವಿದ್ವೇಷಾಗತ ಪಂಡಿತಮಂಡಲೀ ಬಹುಮಾನ, ನಾನಾಶಾಸ್ತ್ರ ಸಾಹಿತ್ಯಸಂಗೀತ ಕುಶಲವಿದ್ಯಾ ಪ್ರೋತ್ಸಾಹ, ದೈತಪದ್ಧತಿ, ಹಿಂದೆ ಕೆಲವು ಕಾಲದಿಂದ ಹೀನಸ್ಥಿತಿಗೆ ಬಂದಿದ್ದ ಪ್ರಮುಖ ರಾಜಬಂಧು, ಮಂತ್ರಿವರ್ಗ, ನಾದಾರರು ಮುಂತಾದವರ ವಂಶಾಂಕಾರಗಳ ಅಭ್ಯುದಯಕ್ಕೆ ಉಚಿತವಾದ ಅನುಕೂಲ್ಯ ಕಲ್ಪನೆ, ಅನೇಕ ಮಠ ಛತ್ರ ದೇವಾಲಯಾದಿಗಳ ಜೀರ್ಣೋದ್ಧಾರ, ಇತರ ಧರ್ಮಕಾರ್ಯ, ಜತ್ಯಾದಿ ಕರ್ತವ್ಯಗಳಿಗೂಸ್ಕರ ಸಮಯೋಚಿತವಾಗಿ ದ್ರವ್ಯವು ವಿನಿಯೋಕ್ತವಾಯಿತು. ಇದರಿಂದಲೂ ಕೆಲವು ಕಾಲಗಳಲ್ಲಿ ಈ ಸೀಮೆಯಲ್ಲಿ ಬಹಳ ಧಾನ್ಯಕ್ಕೆ ಗಿರಾಕಿ ಕಡಿಮೆಯಾಗಿ ಸರ್ಕಾರದ ವರಮಾನವು ತಗ್ಗಿದಾಗ ರಾಜ್ಯದಲ್ಲಿಂದಲೂ ಸಂಚಿತಧನವು ವ್ಯಯವಾಗಿ ಹಡಗೆ ವರಮಾನಕ್ಕಿಂತಲೂ ಸ್ವಲ್ಪ ಮೆಟ್ಟಿಗೆ ಖರ್ಚಾಗಿಯೂ ಪರ್ಚಾಯಿತು. ರಾಜ್ಯಭಾರದಲ್ಲಿ ಇಂತಹ ಸಂದರ್ಭವು ಸಂಘಟಿಸಿದಾಗ ಅವಲಂಬಿಸಬೇಕಾದ ಕ್ರಮದಂತೆ ಮೊದಲೆ

ಗಳವರು ಬರ್ಚಿನ ಬಾಬುಗಳನ್ನು ಮುನಾಸಬು ತಗ್ಗಿಸಲು ಕಾಲೋಚಿತವಾದ ಏರ್ಪಾಡನ್ನು ಅಪ್ಪಣೆ ದಯಪಾಲಿಸಿದರು.

32. ಶಿವನಸಮುದ್ರದ ಬಳಿ ಜಹಗೀರು ಕೊಟ್ಟದ್ದು.—ಈ ಸಂಸ್ಥಾನದಲ್ಲಿ 1805ನೇ ಯಿಸವಿಯಿಂದ ಕೆಲವುಕಾಲ ರೆಸಿಡೆಂಟರಾಗಿದ್ದ ಮೇಜರ್ ವಿಲ್ಕ್ಸ್ (Major Wilks) ರವರ ಪೋಷ್ಯವರ್ಗಕ್ಕೆ ಸೇರಿ ಗಣ್ಯತೆ ಪಡೆದ ಮದ್ರಾಸು ತಿರುವೆಳಕ್ಕೇಣಿ ರಾಮಸ್ವಾಮಿಮೊದಲಿಯಾರೆಂಬವರು ಶಿವನಸಮುದ್ರದಲ್ಲಿ ಕಾವೇರೀನದಿಗೆ ಕಟ್ಟಿಸಿದ ಸೇತುಗಳೂ ಅಲ್ಲಿ ಅವರು ನಿರ್ಮಿಸಿದ ದೇವಾಲಯ ಮೊದಲಾದ ಧರ್ಮಗಳೂ, ಶಾಶ್ವತವಾಗಿ ನಡೆದುಬರುವುದಕ್ಕೋಸ್ಕರ 1829ನೆ ಯಿಸವಿ ಡಿಸೆಂಬರು ಮಾಹೆಯಲ್ಲಿ 1545 ವರಹ ವರಮಾನ ಅಂಪಾಪುಳ್ಳ ಜಿಳಕವಾಡಿ ಮುಂತಾದ ಆರು ಅಸಲಿ ಗ್ರಾಮಗಳು ಮತ್ತು 11 ಪಾಪಲೆ ಗ್ರಾಮಗಳು ಇವುಗಳನ್ನು ನಾಲ್ಕು ಕೆರೆಯೊಡನೆ ಆ ರಾಮಸ್ವಾಮಿ ಮೊದಲಿಯಾರಿಗೂ ಮತ್ತು 1524 ವರಹ ಅಂದಾಜು ಬಾಳುವ ಪೂರಿಗಾಲ ಕಣ್ಣೀಪುರ ಎಂಬ ಎರಡು ಗ್ರಾಮಗಳನ್ನು ಆರು ದಾಖಲೆ ಗ್ರಾಮಗಳ ಸಹಿತ ಅವರ ಮಕ್ಕಳು ವೇಪಾಚಲ ಮೊದಲಿಯಾರಿಗೂ ಬಾವೆಂದರವರು ಇನಾಮಾಗಿ ಅಪ್ಪಣೆ ದಯಪಾಲಿಸಿದರು. ಇದೇ ಧರ್ಮಕ್ಕೋಸ್ಕರವಾಗಿ ಆ ರಾಮಸ್ವಾಮಿ ಮೊದಲಿಯಾರಿಗೆ ಮದ್ರಾಸು ಗವರ್ನ್ಮೆಂಟಿನವರೂ ತಮಗೆ ಸೇರಿದ ಸೀಮೆಯಲ್ಲಿ ಯಥೋಚಿತವಾಗಿ ಜಹಗೀರನ್ನು ಕೊಟ್ಟಿರುತ್ತಾರೆ. ತರುವಾಯ 1834ನೆ ಯಿಸವಿಯಲ್ಲಿ ರಾಮಸ್ವಾಮಿ ಮೊದಲಿಯಾರಿಗೆ ಬಂಗಾಳಾ ಗವರ್ನರ್ ಜನರಲ್‌ರವರು 'ಜನೋಪಕಾರಕರ್ತ' ಎಂಬ ಬಿರುದನ್ನು ಸರಫರಾಜುಮಾಡಿದರು. ಅವರನಂತರ ಇವರು ಈಗಲೂ ಈ ಜಹಗೀರನ್ನು ಅನುಭವಿಸಿಕೊಂಡು ಬರುತ್ತಲಿರುವರು.

33. ಸರ್ ಥಾಮಸ್ ಮನ್‌ರೋ ಸಾಹೇಬರ ಆಗಮನ.—ಸನ್ 1825ನೆ ಇಸವಿಯಲ್ಲಿ ಮದ್ರಾಸು ಗವರ್ನರ್ ಸರ್ ಥಾಮಸ್ ಮನ್‌ರೋ ಸಾಹೇಬರು ಮೈಸೂರಿಗೆ ದಯಮಾಡಿಸಿ ದೊರಗಳಿಂದ ಸತ್ಕೃತರಾಗಿ ದೇಶದ ಜಮಾಖರ್ಚು ಮುಂತಾದ ವಿಷಯಗಳನ್ನು ಕುರಿತು ಪ್ರಸ್ತಾಪಿಸಿದರು. ಆಗ ಅವರಿಗೆ ಬಾವೆಂದರವರು ಕಾಲಸ್ಥಿತಿ ವಿವ್ಯಮಾನಗಳನ್ನೆಲ್ಲ ವಿವರಿಸಿ ತಕ್ಕ ಪ್ರತ್ಯುತ್ತರವನ್ನು ಅಪ್ಪಣೆ ದಯಪಾಲಿಸಿದರು.

34. ಆ ಕಾಲದಲ್ಲಿ ಈ ಸೀಮೆಯಲ್ಲಿದ್ದ ಪ್ರಜಾಸಂಖ್ಯೆಯು ಅಂದಾಜು 45 ಲಕ್ಷ. ಆಬಾದು ಗ್ರಾಮಗಳು 32,425. ಕಂದಾಯು ದಾರರು 3,83,702 ಮಂದಿ. ಭೂಮಿಯನ್ನಳುವವರು 3 ಲಕ್ಷ. ಕೋಟೆಗಳು 92. ಬೆಟ್ಟದ ಮೇಲಿನ ಕೋಟೆಗಳು 31.

35. ಮೈಸೂರು ರಾಜಧಾನಿ.—ಚಿರಾತ್ಕಾಲದಿಂದಲೂ ಮೈಸೂರೆಂಬ ಹೆಸರು ರೂಢಿಯಲ್ಲಿದ್ದಂತೆ ವ್ಯಕ್ತಪಡುತ್ತೆ. ಯಾವಾಗ ಈ ಹೆಸರು ವಾಡಿಕೆಗೆ ಬಂತೆಂದು ಹೇಳಲು ಸಾಧ್ಯವಿಲ್ಲ. ಇದೇ ಪಾಂಡವರ ಯುಗದ ಮಾಹಿಷ್ಮತಿಯೆಂದು ಹಿಂದೆ ಈ ದೇಶದಲ್ಲಿ ಶಾಸನದ ಇಲಾಖೆಯ ಅಧ್ಯಕ್ಷರಾಗಿದ್ದ (Director of Archæology) ಮೆ॥ ರೈಸ್ ಸಿ. ಐ. ಇ. ಯವರು ಬರೆದಿರುವುದು ಈಚೆಗೆ ತಿಳಿದುಬಂದಿರುವ ರಾಖಲೆಗಳಿಂದ ವ್ಯತ್ಯಸ್ತವಾಗಿದೆ. "ಮೈಸು ನಾಡು ಎನ್ನುವ ಹೆಸರೂ ಮೈಸೂರು ನಾಡು ಎನ್ನುವ ಹೆಸರೂ ಕ್ರಿ. ಶ. 11 ನೆಯ ಶತಮಾನಗಳ ಕೆಲವು ಶಾಸನಗಳಲ್ಲಿ ಕಂಡುಬರುತ್ತೆ. ಮತ್ತೆ ಕೆಲವು ಶಾಸನಗಳಲ್ಲಿ ಮಹಿಸುರಪುರಿ, ಮೆಯಿಸೂರು, ಮೈಸೂರು ಎಂದು ಬರೆದಿದೆ. ಶ್ರೀಮನ್ಮಹಾರಾಜರವರ ವಂಶದ ಮೂಲಪುರುಷರು ವಿಜಯರಾಯರೆಂಬ ನಾಮಾಂತರವುಳ್ಳ ಯದುರಾಯರು ಅವರ ತಮ್ಮಂದಿರು ಕೃಷ್ಣರಾಯರೊಂದಿಗೆ ಈ ಪ್ರಾಂತಕ್ಕೆ ಬಿಜಯಮಾಡಿಸಿದಾಗ ಅವರು ಮೊಟ್ಟಮೊದಲು ನೆಲೆಸಿದ ಸ್ಥಳವು ಇದರ ಸಮೀಪವಲ್ಲಿರುವುದು. ಹದಿನಾರು ಎಂಬ ಆ ಊರಿನಲ್ಲಿ ಅವರು ಬಂದಿಳಿದರು" ಎಂದು ಮೆ॥ ರೈಸ್ ಸಿ. ಐ. ಇ. ಯವರು ಬರೆದಿರುವುದಕ್ಕೆ ಸಾಕಾದ ಕಾರಣವು ಕಾಣುವುದಿಲ್ಲ. ಹಿಂದೆ ಬಂದು ಶತಾಬ್ದದ ಕೆಳಗೆ ತಮಗೆ ದೊರೆತ ಆಧಾರವಮೇಲೆ ಆ ಯದುಕುಲದ ರಾಜಪುತ್ರರು ಈಸೀಮೆಗೆ ಬಂದು ಮೊದಲು ನಿಂತಸ್ಥಾನವು ಹಡಣ (Hadana) ಎಂದು ಮೈಸೂರು ದೇಶದ ಚರಿತ್ರ ಲೇಖಕರು ಕರ್ನಲ್ ವಿಲ್ಕ್ಸ್ ಸಾಹೇಬರು ಬರೆದರು. ಇಂಗ್ಲಿಷ್ ಭಾಷೆಯಲ್ಲಿ ಇದನ್ನು ಬರೆಯುವಾಗ ಪ್ರಯೋಗಿಸುವ ಪದದಲ್ಲಿ 'ಡ' (d) ಎಂಬ ಅಕ್ಷರವು ಸಂದರ್ಭಾನುಸಾರ ಕನ್ನಡದಲ್ಲಿ 'ಡ' ಕಾರಕ್ಕೂ ಮತ್ತು 'ದ' ಕಾರಕ್ಕೂ ಸಹ ಅನ್ವಯಿಸುವುದು. ಇದರಲ್ಲಿನ 'ಡ' ಕಾರವನ್ನು 'ದ' ಕಾರವೆಂದು

ತ್ತೀದು ಆ ಹೆಸರನ್ನು 'ಹದನ' ವೆಂದು ಭಾವಿಸಿ, ಬಹುಶಃ ಹದನವೆಂಬ ಸ್ಥಳವಾವುದೂ ಇಲ್ಲಿ ಸಿಕ್ಕದಿರಲು ನಂಜನಗೂಡಿಗೆ ಸುಮಾರು 6 ಮೈಲಿ ಪಶ್ಚಿಮ, ಮೈಸೂರಿಗೆ 9 ಮೈಲಿ ಆಗ್ನೇಯ ದಿಕ್ಕಿನಲ್ಲಿರುವ ''ಹದಿನಾರು'' ಎಂಬ ಗ್ರಾಮವು ಇದೇ ಇರಬಹುದೆಂದು ಊಹಿಸಿ ಆ ರಾಜಕುಮಾರರ ಮೊದಲು ಬಂದು ನಿಂತುದು ''ಹದಿನಾರು'' ಎಂದು ಮೈ॥ ರೈಸೆರವರು ನಿಶ್ಚಯಿಸಿದಹಾಗೆ ತೋರುತ್ತೆ. 'ಹಡಣ' ಅಥವಾ 'ಪ' ಕಾರಕ್ಕೆ 'ದ' ಕಾರವಿಪ್ಪರ್ಯಯ 'ಹದನ' ಎಂಬ ಪದವನ್ನು ಹದಿನಾರೆಂದು ಭಾವಿಸುವುದಕ್ಕೆ ಸಾಕಾದ ಕಾರಣವು ಗೋಚರಿಸುವುದಿಲ್ಲ.

36. ಪ್ರಾಕ್ತನವಿಮರ್ಶ ವಿಚಕ್ಷಣ, ರಾವ್ ಬಹದೂರ್ ಮೈ॥ ಆರ್. ನರಸಿಂಹಾಚಾರ್ಯ ಎಮ್. ಎ ಯವರು ಅದೇ ಇಲಾಖೆಗೆ ಸೇರಿದ 1918ನೆಯಿಸವಿಯ ತಮ್ಮ ರಿಪೋರ್ಟಿನಲ್ಲಿ ನಂಜನಗೂಡು ತಾಲ್ಲೂಕಿನಲ್ಲಿರುವ ಹದಿನಾರು ಎಂಬ ಗ್ರಾಮವು ಪುರಾತನವಾದುದೆಂದೂ, ನಂಜನಗೂಡಿನ ಕೆಲವು ಶಾಸನಗಳಿಂದ ಈ ಗ್ರಾಮದ ಹೆಸರು ಅದಿರಾರು ಎಂಬುದಾಗಿ ತಿಳಿದುಬರುವುದೆಂದೂ, ಇದು 12 ಗ್ರಾಮಗಳ ಒಂದು ಗುಂಪಿಗೆ ಮುಖ್ಯ ಸ್ಥಳವೆನಿಸಿಕ್ಕಿತ್ತೆಂದೂ, ಈ ಅದಿರಾರು ಎನ್ನುವ ಹೆಸರು ವಿಕಲ್ಪದಿಂದ ಹದಿನಾರು ಎಂದೆನಿಸಿಕೊಂಡಿರುವುದೆಂದೂ, ಇದನ್ನು 'ಹದಿನಾಡು' ಎನಲು ಯಾವ ಆಧಾರವೂ ಇರುವುದಿಲ್ಲವೆಂದೂ ಬರೆದಿರುತ್ತಾರೆ.

37. ಈಚೆಗೆ ಈ ಮೈಸೂರು ರಾಜಧಾನಿಯಲ್ಲಿ ಒಂದು ಹಳೇ ದಾಖಲೆಯು ಲಭ್ಯವಾಗಿರುವುದು. *ಇದು ಶಾ. ಶ. 1707 ಎಂದರೆ ಕ್ರಿ. ಶ. 1785ನೆಯ ಕ್ರೋಧಿ ಸಂವತ್ಸರದಲ್ಲಿ ಬರೆದುದು. ಅದರಲ್ಲಿ ''ಮೈಸೂರ ನಗರದ ದೊರೆತನದ ಪೂರ್ವಾತ್ರದ ಸಂಗತಿ ಶೀಮೆಲಿಪ ಸುಂತಾವನ್ನು ಪೂರ್ವದ ಕಡಿತ ನೋಡಿ ನಖಿಲ ಬರೆವಬಕ್ಕೆ ನಿರ್ವಿಘ್ನವಿಸ್ತು'' ಎಂದೂ, ಮತ್ತು ವಿಜಯರಾಯರೆಂಬ ಪ್ರತಿನಾಮವನ್ನು ಪಡೆದ ಯದುರಾಯರು ಅವರ ತಮ್ಮಂದಿರು ಕೃಷ್ಣರಾಯರೊಂದಿಗೆ ''ಶ್ರೀರಂಗಪಟ್ಟಣಕ್ಕೆ ಬಂದು ಅಲ್ಲಿ ನೋಡಿಕೊಂಡು ಕಾವೇರಿಗೆ ದಕ್ಷಿಣ

* Favoured by M. Mudda Raja Urs, Bakshi, Khas Samukha Department in the Palace, Mysore.

ದಿಕ್ಕಿನಲ್ಲಿ ಚಾಮುಂಡೇಶ್ವರಿ ಅಮ್ಮನವರ ಬಿಟ್ಟದ ಸತ್ತಿನಲ್ಲು ದಕ್ಷಿಣ ಪಾರ್ಶ್ವದಲ್ಲಿ ಹಡಪಣ ಎಂಬ ಕೋಟೆಗೆ ಬಂದು ಚಾಮುಂಡೇಶ್ವರಿ ಅಮ್ಮನವರ ಸೇವೆಯನ್ನು ಮಾಡಿಕೊಂಡು ಈ ಪ್ರಕಾರಕ್ಕೆ ದಿರುತ್ತಾಯಿವ್ವಲ್ಲಿ" ಎಂದೂ ಬರೆಸಿರುತ್ತೆ. ಇನ್ನಲ್ಲದೆ ಅದೇ ಪುಸ್ತಕದಲ್ಲಿ ಕಾರುಗಳ್ಳಿಯ ಗ್ರಾಮವನ್ನ ಉಪಗ್ರಾಮಗಳನ್ನು ವಿವರಿಸುವಾಗ ಸಕ್ಕಳ್ಳಿ ಗ್ರಾಮವಾಗುತಲೆ ಅದರ ಬಳಿ "ಹಡಪಣ" ಗ್ರಾಮವನ್ನೆ ಕಾಣಿಸಿದೆ. ಈ ಗ್ರಾಮವೀಗಲೂ ಆ ಸಕ್ಕಳ್ಳಿಯ ಸಮೀಪದಲ್ಲಿಯೇ ಇರುತ್ತೆ. ಇದನ್ನು ಈಗ "ಹಡವನ" ಎನ್ನುತ್ತಾರೆ. ಇದು "ಹಡಪಣ" ಶಬ್ದದ ಗ್ರಾಮ್ಯೋಚ್ಚಾರಣೆ ಯೆನಬಹುದಾಗಿದೆ. ಇದೇನೂ ವಿಶೇಷವಾದ ನಾಮವಿಕಲ್ಪವಲ್ಲ. ಈ ಗ್ರಾಮವು ಚಾಮುಂಡಿ ಬೆಟ್ಟದ ದಕ್ಷಿಣದ ಬುಡದಲ್ಲಿಯೇ ಇರುತ್ತೆ. ಇತ್ಯಾದಿಕಾರಣ ಬಲದಿಂದ ಶ್ರೀ ಚಾಮುಂಡೇಶ್ವರೀ ಭಕ್ತೋತ್ತಮರಾಗಿದ್ದ ಆ ರಾಜ ಪುತ್ರರಿಬ್ಬರೂ ಈ ಪ್ರಾಂತಕ್ಕೆ ಬಂದಾಗ ಆದಿಯಲ್ಲಿ ಅವರು ನೆಲೆಸಿದಮತು ಇದೇ ಸ್ಥಳವಲ್ಲದೆ ಇನ್ನೂ ದೂರದಲ್ಲಿರುವ ನಂಜನಗೂಡು ತಾಲ್ಲೂಕಿಗೆ ಸೇರಿರುವ ಹದಿನಾರು ಎಂಬ ಗ್ರಾಮವಲ್ಲವೆಂದು ವ್ಯಕ್ತಪಡುತ್ತೆ.

38. ಅದೇ ಗ್ರಂಥದಲ್ಲಿ "ಮಹಿಶೂರು ವೆಂದು ಹೂಡೆದುವಾಗಿ ಜೋಳಿ ಪ್ರತಿಷ್ಠೆಯಾಗಿ ಲಕ್ಷ್ಮೀರಮಣಸ್ವಾಮಿಯವರು ಸುಪ್ರಸನ್ನತೆಯಾಗಿ ಯಿರುವುದನ್ನು ಈ ವಿಜಯರಾಜವೆಡೆಯರು ಇವರ ತಂದೆಯಂದಿರು ಸಹ ಸ್ವಾರಿ ಮಾರ್ಗವಾಗಿ ಬಂದು ಈ ಹೂಡೆಯವಲ್ಲಿರುವ ನೆಂದಿಯುನ್ನು ರಾಜಮನೆಯಿಂದ ವಶವೃತ್ತಿಯುನ್ನು ಮಾಡಿಕೊಂಡು ..... ಇವರು ಹೂಡೆಯವಾಗಿರುವಂಥಾ ಮಹಿಶೂರನ್ನು ಲಕ್ಷ್ಮೀರಮಣಸ್ವಾಮಿಯವರನ್ನೂ ಪರಾಂಬರಿಸಿ ಕೋಟೆಯನ್ನು ಪಾಕಿಸಿ ಈ ಕೋಟೆಯನ್ನು ಬಲಿಯವಾಗಿಕೊಂಡು ಅಂದಿನವರೆಗೆ ನಡೆದ ಕಲಿವಾದನ ಶಕ ೧೫೪೦ ನೆಂದ ಕಾರಣ ನೆಂದತ್ತನದ ಆಶ್ವೀಜ ಶುದ್ಧ ೧೦ ಆರಭ್ಯ ಮೆಳಸುತ್ತಿನ ಕೋಟೆಯನ್ನು ಬಲಿಯವಾಗಿ ಪಾಕಿಸಿ ಮಹಿಶೂರ ನಗರವೆಂಬ ನಾಮಾಂಕಿತವನ್ನು ಮಾಡಿಸ್ದರು. ಈ ಕೋಟೆಗೆ ಮೊದಲಾಗಿ ಪುರಗೆರೆಯೆಂಬ ಹೆಸರು. ತಮ್ಮ ಪಗರಿಗೆ ಯಿಂದಕ್ಕೆ ಈ ರಾನ್ಯೆ ಭಾಗ

ದಲ್ಲು ಚೋಳಪ್ರತಿಷ್ಠೆ ಸೋಮೇಶ್ವರಸ್ವಾಮಿಯ ಗುಡಿ. ಈ ಗುಡಿಯ ಮುಂದೆ ತಳಗೆರೆಯೆಂಬ ಕೆರೆ ೧ ಈ ಕೆರೆ ಕೋಡಿಯಲ್ಲಿ ಯಿದ್ದ ವಕ್ಕಿನಲ್ಲಿ ಭೈರವನ ವೇವರನುತಿ ೧ ಈ ತಳಗೆರೆಯಲ್ಲಿ ತ್ರಿಣಬಿಂದು ಮುನೀಶ್ವರನ ಪ್ರತಿಷ್ಠೆಯಾದ ತ್ರಿಣೇತ್ರೇಶ್ವರಸ್ವಾಮಿಯ ಗುಡಿ. ಯೀಗುಡಿಯ ಸ್ವಾಮಿಯನ್ನು ಚೋಳಚಾಮರನ ವೆಡೆಯರು ಪರಾಂಬರಿಸಿದಲ್ಲಿ ಸುಪ್ರಸಂನತೆಯಾಗಿದ್ದರಿಂದ ತಳಗೆರೆಯಲ್ಲಿ ನೀರಿನಲ್ಲಿ ಯಿರುತ್ತಾ ಯಿದ್ದಲ್ಲಿ ಈ ನೀರನಲ್ಲಾ ಹೊರಚ್ಚು ಮಾಡಿಸಿ ಹೊರಯಿಪಾನ್ನು ಕಟ್ಟಿಶಿ ಪೂಜೆ ನೈವೇದ್ಯ ಸದನಡೆಯಬಹುದಾಗಿ ನೇಮಕಮಾಡಿಸ್ದರು" ಎಂದೂ ಬರೆದಿದೆ. ಇವು ಮುಂತಾದ ಶಾಸನಗಳನ್ನು ಪರಿಶೀಲಿಸುವುದರಲ್ಲಿ ಕ್ರಿ. ಶ. 1513-14ನೆ ಯಿಸವಿಯ ಸಮಯದಲ್ಲಿ ವಿಜಯನಗರದ ಚಕ್ರವರ್ತಿಗಳು ಸುಕ್ರಸಿದ್ಧರಾದ ಕೃಷ್ಣದೇವರಾಯರು ಉಮ್ಮತ್ತೂರು ವಿವೆಸಮುದ್ರದ ಪ್ರಾಂತಕ್ಕೆ ಬಂದು ಆ ಕೋಟೆಗಳನ್ನು ಸ್ವಾಧೀನ ಪಡಿಸಿಕೊಂಡು ದಕ್ಷಿಣ ದೇಶದಲ್ಲೆಲ್ಲಾ ತಮ್ಮ ಅಧಿಕಾರವನ್ನು ಸ್ಥಿರಪಡಿಸಿದಾಗ ಅವರಿಂದ ಮಾನ್ಯರೆಸಿಸಿದ ಮೈಸೂರು ದೊರೆಗಳು ತಮ್ಮ ನೆಲೆಯನ್ನು ವೃದ್ಧಿಪಡಿಸಿಕೊಳ್ಳುತ ಬಂದರೆಂದು ಕಾಣುವುದು. ಮೇಲೆ ಹೇಳಿದ ತಾರಣ ಸಂವತ್ಸರಕ್ಕೆ ಸರಿಯಾದ ಶಾಲಿವಾಹನ ಶಕದ ಸಂಖ್ಯೆಯು ೧೪೪೭. ಇದಕ್ಕೆ ಬದಲಾಗಿ ಮೇಲೆ ಉದಾಹರಿಸಿದ ಹಳೆಯ ಶಾಸನೆಯ ನಕಲಿನಲ್ಲಿ ೧೪೬೦ ಎಂದಿರುವುದು ಅದನ್ನು ಬರೆದವರ ಹಸ್ತ ದೋಷವಾಗಿರಬಹುದು. ಈ ತಾರಣ ಸಂವತ್ಸರವು ಕ್ರಿ. ಶ. 1524ಕ್ಕೆ ಸರಿಯಾಗಿರುತ್ತೆ. ಆದು ದರಿಂದ ಈ ಆಧಾರವು ಕ್ರಿ. ಶ. 1524 ರಲ್ಲಿ ಮೈಸೂರು ಕೋಟೆಯನ್ನು ಕಟ್ಟಿಸಿದರು ಅಥವಾ ಬಲಪಡಿಸಿದರು ಎಂದು ಕರ್ನಲ್ ವಿಲ್ಕ್ಸ್ ರವರು ಹೇಳುವುದನ್ನು ಪೋಷಿಸುವುದು.

ಮೈಸೂರು ಕೋಟೆಯ ಕೊತ್ತಳಗಳ ಮೇಲೆ ಆ ಕಾಲದಲ್ಲಿದ್ದ ಫಿರಂಗಿಗಳು, ಕೋಟೆಯ ಒಳಗಿದ್ದ ಮುಖ್ಯವಾದ ಮನೆ, ಬೀದಿ, ದೇವಾಲಯ ಮುಂತಾದುವುಗಳು ಇವುಗಳ ವಿಷಯದಲ್ಲಿ ಶಾಸನೆಯನ್ನು ಮೇಲೆ ಹೇಳಿದ ಗ್ರಂಥದಿಂದ ತೆಗೆದು ಇದರಮುಂದೆ ಕೊಟ್ಟಿದೆ :—

ಬಡಗಣ ನಿಟ್ಟನೆಲ್ಲು ವಾಯವ್ಯ ಮೂಲೆಯಲ್ಲೂ ಚಾಮುಂಡೆಶ್ವರಿ ಯೆಂಬ ಪಿರಂಗಿಕೊತ್ತಳ ೧ಕ್ಕೆ ಪಿರಂಗಿ ೧ಕ್ಕೆ ನೀಳ ಮೊಳ ೧೦, ಅಗಲ ಮೊಳ ೪, ಗುಂಡು ಅಂಗುಲ ೬ ಕಲ್ಲುಗುಂಡು ಹಾಕುವ ಬಿರಾಣಿ ॥೩ ಈ ಕೊತ್ತಳದ ಮೇಲೆ ಹಾಕಿಯಿರುವ ಉಗ್ರಾಣದಲ್ಲಿ ಯಿದ್ದ ಕಂಚಿನ ಚಿಕ್ಕ ಪಿರಂಗಿ ೧.

ಹುಲಿ ಮೊಕದ ಕೊತ್ತಳದ ಮೇಲೆ ಯಿರುವ ನಾಗರಮುಖ ಯೆಂಬ ಕೊತ್ತಳ ೧ಕ್ಕೆ ಪಿರಂಗಿ ೧ಕ್ಕೆ ನೀಳ ಮೊಳ ೫ ಸುತ್ತು ಮೊಳ ೧ ಗುಂಡು ಅಂಗುಲ ೨ ಹಾಕುವ ಬಿರಾಣಿ ಪಡಿ ೨ ಕಲ್ಲುಗುಂಡು.

ಇದಕ್ಕೆ ಮೂಡಲ ಬೆಳೆಗ್ಯನಪಟ್ಟ ವತ್ತಿನ ಕೊತ್ತಳ ೧ಕ್ಕೆ ರಂಗನಾಥ ನೆಂಬ ಪಿರಂಗಿ ೧ಕ್ಕೆ ನೀಳ ಮೊಳ ೧೪ ಅಗಲ ಮೊಳ ೨॥॥ ಗುಂಡು ಅಂಗುಲ ೫ ಹಾಕುವ ಬಿರಾಣಿ ೧ ಕಲ್ಲುಗುಂಡು.

ಇದಕ್ಕೆ ಮೂಡಲು ಆಂಟು ಕೋಟೆಬಿಳಿಯಲ್ಲೂ ಕೊತ್ತಳ ೧ಕ್ಕೆ ಭೈರವ ನೆಂಬ ಪಿರಂಗಿ ೧ಕ್ಕೆ ನೀಳ ಮೊಳ ೧೪ ಸುತ್ತು ಮೊಳ ೪ ಅಂಗುಲ ಗುಂಡು ೪॥ ಹಾಕುವ ಬಿರಾಣಿ ॥೧ ಕಲ್ಲುಗುಂಡು ಉಗ್ರಾಣದ ಚಿಕ್ಕ ಪಿರಂಗಿ ೧.

ಈಕಾನ್ಯ ಮೂಲೆಯಲ್ಲು ಕೊತ್ತಳ ೧ಕ್ಕೆ ರಾಮಬಾಣ ಯೆಂಬ ಪಿರಂಗಿ ೧ಕ್ಕೆ ನೀಳ ಮೊಳ ೧೪ ಸುತ್ತುಮೊಳ ೪ ಗುಂಡು ಅಂಗುಲ ೬॥೦ ಬಿರಾಣಿ ಹಾಕು ವುದು ॥೦ ಕಲ್ಲುಗುಂಡು.

ಮೂಡಣ ನಿಟ್ಟು ೧ಕ್ಕೆ ಇಂದ್ರದಿಕ್ಕಿನಲ್ಲು ಕೋಟೆ ಮಧ್ಯದಲ್ಲಿರುವ ಕೊತ್ತಳ ೧ಕ್ಕೆ ಉಗ್ರನರಸಿಂಹ ಯೆಂಬ ಪಿರಂಗಿ ೧ಕ್ಕೆ ನೀಳ ಮೊಳ ೧೪॥ ಸುತ್ತು ಮೂಳ ೪॥ ಗುಂಡು ಅಂಗುಲ ೬॥ ಹಾಕುವ ಬಿರಾಣಿ ॥೦ ಕಲ್ಲುಗುಂಡು.

ಇವಕ್ಕೆ ತೆಂಕಲು ಅಗ್ನಿಭಾಗದಲ್ಲಿ ಕೊತ್ತಲ ೧ಕ್ಕೆ ತ್ರಿಣಯನ ಯೆಂಬ ಪಿರಂಗಿ ೧ಕ್ಕೆ ನೀಳ ಮೊಳ ೧೦॥ ಅಗಲ ಮೊಳ ೨॥॥ ಗುಂಡು ಅಂಗುಲ ೫ ಹಾಕುವ ಬಿರಾಣಿ ॥೦ ಕಲ್ಲುಗುಂಡು.

ತೆಂಕಣ ನಿಟ್ಟು ೧ಕ್ಕೆ ಪಳಕೋಟೆ ಆಂಟಿನಬಿಳಿಯಲ್ಲು ಸೊಬಗೈನ ಬಾಗಿಲು ತೆಂಕಲು ಕೊತ್ತಳ ೧ಕ್ಕೆ ರಾವುಗವ್ಯ ನೆಂಬ ಪಿರಂಗಿ ೧ಕ್ಕೆ ನೀಳ ಮೊಳ ೧೦ ಸುತ್ತು ಮೊಳ ೨॥॥ ಗುಂಡು ಅಂಗುಲ ೬ ಹಾಕುವ ಬಿರಾಣಿ ॥೩ ಕಲ್ಲುಗುಂಡು.

ಲಕ್ಷ್ಮೀರಮಣಸ್ವಾಮಿ ಗುಡಿಗೆ ತೆಂಕಲು ಚಲುವಪಟ್ಟ ಮನೆಯನುಮಂಟಿಯಿ ರುವ ಕೊತ್ತಳ ೧ಕ್ಕೆ ಕೋವಿಂಡವಾಮ ನೆಂಬ ಪಿರಂಗಿ ೧ಕ್ಕೆ ನೀಳ ಮೊಳ ೧೦॥ ಸುತ್ತು ಮೊಳ ೨॥॥ ಗುಂಡು ಅಂಗುಲ ೫॥ ಹಾಕುವ ಬಿರಾಣಿ ॥ ಕಲ್ಲು ಗುಂಡು. ಇದಕ್ಕೆ ಹನುಮಂತು ಯೆಂಬ ಪ್ರತಿ ನಾಮ.

ಈ ಗುಡಿಗೆ ಬಡಗಲು ಮಧ್ವಾದಕೋಟಿ ಬಳಿಯಲ್ಲಿ ದೀಕ್ಷಿತರ ಸಣ್ಣವತ್ತಿನ ಕೊತ್ತಳ ೧ಕ್ಕೆ ಮುಮ್ಮುಳ್ಳಣ್ಣ ನೆಂಬ ಪಿರಂಗಿ ೧ಕ್ಕೆ ನೀಳ ಮೊಳ VIII ಸುತ್ತು ಮೊಳ ೨॥ ಗುಂಡು ಅಂಗುಲ ೬ ಪಿರಾಣಿ ।ಂ ಕಲ್ಲುಗುಂಡು.

ಕಂದಾಚಾರವ ಬಾವಲಿ ಹಿಂದೆ ನಳಕೋಟೆಯಲ್ಲಿ ದಿಲ್ಲಿಬಾಗಿಲಿಗ ಯುದು ರಾಗಿಯೆಮುನ ಹೊಸ್ತ ಕೊತ್ತಳ ೧ಕ್ಕೆ ಪಿರಂಗಿ ಲಕ್ಷ್ಮೀರಮಣ ಯೆಂಬುದು ೧ಕ್ಕೆ ನೀಳ ಮೊಳ ೨೦ ಸುತ್ತುಮೊಳ ೫॥ ಗುಂಡು ಅಂಗುಲ ೯ ಹಾಕುವ ಪಿರಾಣಿ ೧।ಂ ಕಲ್ಲುಗುಂಡು.

ಅಂತು ಕೊತ್ತಳದ ಮೇಲೆ ಯೇರಿಯಿರುವ ಪಿರಂಗಿ ೧೦ ಉಗ್ರಾಣದಲ್ಲಿ ಯಿರುವ ಬಗ ಚಿಕ್ಕ ಪಿರಂಗಿ ೪ ಆವವನೆಯಲ್ಲಿರುವ ಪಿರಂಗಿ ೧ ಅಂತು ಪಿರಂಗಿ ೧೫ ಗುಂಡು ದೊಡ್ಡ ಗುಂಡು ೯೯೯ ಚಿಕ್ಕ ಗುಂಡು ೭೧೦ ಬಳಸುವ ಗುಂಡು ೪೭೫೦ ಈ ಚಿಕ್ಕ ಗುಂಡು ೭೧೦ ಕಪಿಣವಗುಂಡು ೨೭೦ ಅಂತು ಗುಂಡು ೪೦೪೦.

ನಳಕೋಟೆ ೧ ಹೊರಕೋಟೆ ೪ ಶೃಂಗಾರ ತೋಟದ ಅಂಟಿನ ಕೊಂಟೆ ೧ ಬಳಕೊಯಿಯಲ್ಲಿ ಬಸ್ತಿಕೇರಿ ೧ ಅರಮನೆ ಹಿಂದಣ ತಿಗಳರಕೇರಿ ೧ ಹೂಡ್ಲದ ನಾರಸಿಂಹನ ಗುಡಿಬಳಿಯಲ್ಲಿ ಉಗ್ರಾಣದ ಹಿಂದೆ ಕೇರಿ ೧ ಉಗ್ರಾಣದ ಕೇರಿ ೧.

ಹೊರಕೋಟೆಯಲ್ಲೂ ಸೆಜ್ಜೆಮುಂದಣರಾಜವೀದಿ ೧ ನಳವಾಯಿಕೇರಿ ೧ ತಮ್ಮಕ್ಕಗೇರಿ ೧ ಕಂದಾಚಾರದ ಚಾವಡಿ ಮುಂದಣ ಕೇರಿ ೧ ಚಿಕ್ಕಹಾರುವಗೇರಿ ೧ ದೊಡ್ಡಹಾರುವಗೇರಿ ೧ ಕಪ್ಪಕೇರಿ ೧ ಹುವಾಯಿಗಕೇರಿ ೧ ತ್ರಿಣಯಿನಸಗುಡಿ ನತ್ತಿನ ಕೇರಿ ೧ ಲಾವುವ ಹಿಂದಣ ಕೇರಿ ೧ ಗೊಲ್ಲಗೇರಿ ೧ ಅಗಸರಕೇರಿ ೧ ನಾಯಿಂದರಕೇರಿ ೧ ಕುಂಬಾರಗೇರಿ ೧ ಛಾಗಿಯಕೇರಿ ೧ ಶೃಂಗಾರತೋಟದ ಪಳಗಣಕೇರಿ ೧ ಕೂಳಿಕೇರಿ ೧ ಜಾನಪಾಲಿ ೧ ಕೆಂಟುಗೆಕಟ್ಟೆ ಗಾರಪಟ್ಟಿ ಪುಲಿಯು ಮನೆ ೨ ಅಂತು ಅಂಚುಕೋಟೆ ೩ ಕೇರಿ ಬೀದಿ ಸಹ ೨೯ಕ್ಕೆ ಇರುವ ಮಬಾರ ೫೦೦ ಕ್ಕ ಮನೆ ೧೦೨೮ ಅಂಗಡಿ ೧೪ ಬಾವಿ ೧೦೦ ಮಂಟಪ ೧೩ ಪಜಾರ ೪ ಬಿಡುಜಾವಡಿ ೨ ಚಿಟ್ಟವಾರಿ ಕಂದಾಚಾರದ ವಾಲಗದ ಬಾವುತಿ ೨.

ಮರಗಳು—ಮಣಿಕೇನುರ ೨೧ ಬೇವಿನ ಮರ ೪೦ ತುರಕ ಬೇವಿನಮರ ೭ ಕಿಬೇವಿನ ಮರ ೧೦ ನುಗ್ಗೆಮರ ೪೫ ದಾಳಿಂಬೆಮರ ೯೪ ಅತ್ತಿಮರ ೫೫ ಕೂಸಪ್ಪಾಣವಿನಮರ ೪ . . . . ಅಂತುನಾನಾಬಗೆದು ಮರಗಳು ೨೧೫.

ಪೊಸಕಳ್ಳಿಗಿ ೧ ಸಂಣಕಳ್ಳುಕಟ್ಟನ ಕೊಳ ಶೀರ್ಧವುಂಟಪ ೨ ಜಕ್ಕಿ ಸೌದೆ ನಟ್ಟಲು ೧.

ದೇವಸ್ಥಾನಗಳು:—ಲಕ್ಷ್ಮೀರಮಣಸ್ವಾಮಿ ದೇವಸ್ಥಾನ ೧ ಹೊಳೆದ ನಾರಸಿಂ ದೇವರಗುಡಿ ೧ ಬಸ್ತಿಗುಡಿ ೧ ಉಗ್ರಾಣದ ವಿನಾಯಕ ೧ ತ್ರಿಕೋಟೇಶ್ವರಸ್ವಾಮಿಯವರ ಗುಡಿ ೧ ಸೋಮಪುರೇಶ್ವರನ ಗುಡಿ ೧ ಭೈರವನಗುಡಿ ೧ ಹನುಮಂತರಾಯಸ್ವಾಮಿ ೧ ತಿರುಮಲ ದೇವರಗುಡಿ ೧ ಉಭಯ ಪಾರ್ಶ್ವದ ಪಡಾವಿಯಲ್ಲಿ ವಿನಾಯಕನ ದೇವಸ್ಥಾನ ೨ ವಳಕೋಟೆಯಲ್ಲಿ ಹುಲಿಮುಖದ ವಿನಾಯಕ ದೇವರಗುಡಿ ೧ ಬಿಸಲು ಹನುಮಪ್ಪ ೧ ದೊಳಿಕಟ್ಟೆ ಮಾರಿಗುಡಿ ೧ ಉಗ್ರಾಣದ ಮಲ್ಲಾರಸ್ವಾಮಿಗುಡಿ ೧ ಅರಮನೆ ವಿನಾಯಕ ೧ ಮುದ್ದೆನ ಪುಂಟಿಯದ ವಿನಾಯಕ ೧ ಜ್ಯೋಸಪಾಲೆ ವಿನಾಯಕನ ಗುಡಿ ೧ ಕಂದಾಚಾರದ ವಿನಾಯಕ ೧ ಗಾರಹಟ್ಟಿ ವಿನಾಯಕ ಅಂತು ದೇವಸ್ಥಾನ ೩೦.

ಅರಮನೆ ಒಕ್ಕೆ—ಮೊದ್ದ ಹಜಾರದ ತೊಟ್ಟಿ ೧ ಕರವಹಟ್ಟಿ ಮುಂದಣ ತೊಟ್ಟಿ ೧ ಚಿಕ್ಕ ಹಜಾರದ ತೊಟ್ಟಿ ೧ ರಂಗಮಂಟಪದ ಮುಂದಣ ತೊಟ್ಟಿ ೧ ಬೊಕ್ಕಸದ ತೊಟ್ಟಿ ೧ ನಾಮತೀರ್ಥದ ತೊಟ್ಟಿ ೧ ರಂಗಮಂಟಪದ ತೊಟ್ಟಿ ೧ ಅಂತರ ತೊಟ್ಟಿ ೧ ಅಮ್ಮನವರ ತೊಟ್ಟಿ ೧ ಹೊಸ ತೊಟ್ಟಿ ೧ ಮಾಣಿಮುರು ತೊಟ್ಟಿ ೧ ಪಿಳಹಣದ ತೊಟ್ಟಿ ೧ ನಾಮತೀರ್ಥದ ತೊಟ್ಟಿ ಮುಂದೆ ಪಿಳಕಣದ ತೊಟ್ಟಿ ೧ ಬಂಗಾರದ ಅಮ್ಮನವರ ಸಾಲಗರಿ ತೊಟ್ಟಿ ೧ ರಂಗಮಂಟಪದ ಪತ್ತಿನಲ್ಲಿ ದೊಡ್ಡ ಪೈಸಾಲೆ ೧ ಅಡಿಗೆ ತೊಟ್ಟಿ ೧ ಅಪ್ಪೇರ ಸಾಲಗರಿ ೧ ನಾಟಿಕಸಾಲೆ ತೊಟ್ಟಿ ೧ ಪಳಯಗ್ರಾಣದತೊಟ್ಟಿ ೧ ಮಿದುಹಟ್ಟಿ ತೊಟ್ಟಿ ೧ ಕರವಹಟ್ಟಿ ಪಂಚಿನ ತೊಟ್ಟಿ ೧ ಸೊತ್ತಕಡತೊಟ್ಟಿ ೧ ಪಳೆ ಬೊಕ್ಕಸದ ತೊಟ್ಟಿ ೧ ವಳಕಜ್ಜೆ ೧ ಹೊರಾಜ್ಜೆ ೧ ಶೃಂಗಾರರತೋಟ ೧.

ಬೆಟ್ಟದ ಮೇಲಿನ ವೊಸ್ತರಮನೆಯಲ್ಲಿ ನಾಮತೀರ್ಥದತೊಟ್ಟಿ ೧ ಅಡಿಗೆ ತೊಟ್ಟಿ ೧ ಹೊರಸಜ್ಜೆ ೧ ಹಿತ್ತಲಹಟ್ಟಿ ೧ ನಡವೆವಳಿಗೆ ೧

ಚಿಕ್ಕರಮನೆಯಲ್ಲಿ ಅಡಿಗೆತೊಟ್ಟಿ ೧ ಪಳತೊಟ್ಟಿ ೧ ನಾಲುಗರಿಮುವ ೨ ಹಿತ್ತಲಹಟ್ಟಿ ೨.

ನೆಲಗಾಡಿಂದ ಬೆಟ್ಟದಮೇಲಕ್ಕೆ ಚಾಮುಂಡೇಶ್ವರಿ ಅಮ್ಮನವರ ಗುಡಿಬಳಿಗೆ ಸಹ ಹಂತ ೧೯೦೩.

ಕೋಟೆಯ ವಳಗೆ ತ್ರಿಕೋಟೇಶ್ವರಸ್ವಾಮಿ ಗುಡಿಮುಂದೆ ಪ್ರಾಕು ದೊಡ್ಡ ವೀರ ರಾಜಪದೆಯರೈಯನವರು ಕಟ್ಟಿಸ್ತ ಗೋಪುರದ ಕೆಲ್ಸಸ್ತ ಕಾಲುಗೆಲಸನಪೆದು ಪೂಕೆಲಸನ್ನು ನಿಂತುಯಿವ್ವದ್ದರಿಂದ, ಮಸಾವಾಜಿ ಕ್ರೀ ವಳವಾಯಿ ದೊಡ್ಡೇವ್ವನವರ ಕೊಮಾರರು ವಿರರಾಜ್ಜೆ ಅರಸಿನವರ ಕೊಮಾರ್ರು ವಳವಾಯಿ ದೇವರಾಜ್ಜೆ ಅರಸಿನ

ನರ ತಮ್ಮಂದಿರು ಚಿಕ್ಕನಂಜರಾಜ್ಯ ಅರಸಿನವರು ಈ ಗೋಪುರವನ್ನು ಜೀರ್ಣೋದ್ಧಾರಮಾಡಿ *ಪ್ಲವಂಗಸಂವತ್ಸರದ ಮಾಘ ಶುಕ್ಲ ಪಕ್ಷದಲ್ಲು ಪ್ರಾರಂಭಿಸಿ ಕಟ್ಟಿಸ್ದರು.

39. ಮೇಲೆ ತಿಳಿಸಿರುವ ದಾಖಲೆಯಿಂದ ಮೈಸೂರಿನಲ್ಲಿ ಹಿಂದಿನ ಕಾಲದಿಂದಲೂ ಒಂದು ಸಣ್ಣ ಕೋಟೆ ಯಿದ್ದಂತೆಯೂ ಅದನ್ನು ಯದು ರಾಯರು ಸ್ವಾಧೀನಪಡಿಸಿಕೊಂಡಮೇಲೆ ಅವರ ಸಂತತಿಯು ರಾಜರುಗಳು ತಮಗೆ ಬೇಕಾದಂತೆ ಆಗಾಗ್ಗೆ ಬಲಪಡಿಸುತ ಬಂದಂತೆಯೂ ಗೊತ್ತಾಗುವುದು. ಕ್ರಿಸ್ತ ಶಕ 1578 ರಿಂದ 1617ರ ವರೆಗೆ ಆಳಿದ ರೊದ್ದರಾಜ ಒಡೆಯರವರ ಶಕ್ತಿ, ಯುಕ್ತಿ, ಧೈರ್ಯ, ಸಾಹಸಗಳಿಂದಲೂ ಅವರು ಆಗಿನ ವಿಜಯನಗರದ ಚಕ್ರಾಧಿಪರ ವಿಶ್ವಾಸಕ್ಕೆ ಪಾತ್ರರಾಗಿ ಐಜುಮೊಗ್ಗ ಪ್ರವರ್ತಕರಾದುದರಿಂದಲೂ ಶ್ರೀರಂಗಪಟ್ಟಣವು ಅವರ ಸ್ವಾಧೀನವಾಯಿತು. ಆಗ ಆ ಪ್ರಭುಗಳು ಶ್ರೀರಂಗಪಟ್ಟಣವನ್ನು ಮುಖ್ಯ ರಾಜಧಾನಿಯಾಗಿ ಏರ್ಪಡಿಸಿ ತಾವು ಅಲ್ಲಿ ನೆಲಸಿ ರಾಷ್ಟ್ರದ ಮೇರೆಗಳನ್ನು ವಿಸ್ತರಿಸುತ ಬಂದರು. ತದಾದಿಯಾಗಿ ಬಹು ಕಾಲ ಅವರನ್ನು ಹಿಂಬಾಲಿಸಿದ ನೃಪಶೇಖರರ ಪ್ರಭಾವದಿಂದ ಮೈಸೂರು ರಾಷ್ಟ್ರವು ನಾನಾಮುಖವಾಗಿ ವೃದ್ಧಿಗೊಂಡು ಪ್ರಖ್ಯಾತವಾಯಿತು. ಅನಂತರ ಕಾಲಕ್ರಮದಲ್ಲಿ ನಡೆದ ರಾಜಕೀಯವಾದ ಬದಲಾವಣೆಗಳ ದೆಸೆಯಿಂದ ಸ್ಸ 1799ನೆ ಯಿಸವಿ ಸಿದ್ಧಾರ್ಥಿ ಸಂವತ್ಸರದಲ್ಲಿ ಬಾಲ್ಯವಯಸ್ಕರಾಗಿದ್ದ ಶ್ರೀಮನ್ಮಹಾರಾಜರು ಮುಮ್ಮುಡಿ ಕೃಷ್ಣರಾಜ ಒಡೆಯರವರ ಸವಾರಿಯು ಮೈಸೂರಿಗೆ ಚಿತ್ತೈಸಿ ಇಲ್ಲಿ ಅವರು ರಾಜ್ಯಾಭಿಷಿಕ್ತರಾದ ಅಂಕವನ್ನು ಹೊಡಲೇ ತಿಳಿಸಿದೆ. ಅದು ಹೊದಲು ಹಿಂದಿನಂತೆ ಮತ್ತೆ ರಾಜಧಾನಿಯ ಪದವಿಯನ್ನು ವಹಿಸಿದ ಮೈಸೂರು ನಗರವು ದಿನೇದಿನೇ ಬೆಳೆಯುತಬಂತು. ಈ ಪ್ರಭುಗಳವರು ಪ್ರಾಸ್ತವೆಯಸ್ಥರಾಗಿ ರಾಜ್ಯ ಭಾರವನ್ನು ಸ್ವಯಂ ವಹಿಸಿದ ಮೇಲೆ ಜನರಿಗೆ ಅಪ್ಪಣೆ ದಯಪಾಲಿಸಿದ ಪ್ರೋತ್ಸಾಹ ಸೌಕರ್ಯಗಳಿಂದ ಬಹುಮಂದಿ ಮೈಸೂರಿಗೆ ಬಂದು ಸೇರಿದರು. ಶ್ರೀರಂಗಪಟ್ಟಣವು ಅದುವರೆಗೆ ಕಾಯಲೆ ಸ್ಥಳವೆನಿಸುತ ಬರಲು ಅಲ್ಲಿ ಉಳಿದಿದ್ದ ಪ್ರಜಾ ನಿವೇಹವು ಬಹಳಮಟ್ಟಿಗೆ ಮೈಸೂರು ನಗರಕ್ಕೆ

* ಈ ಪ್ಲವಂಗ ಸಂವತ್ಸರವು ಸ್ಸ 1737-38ಕ್ಕೆ ಸರಿಯಾಗಿರುವುದು.

ಬಂದಿತು. ಇಲ್ಲಿ ಖಾವೆಂದರವರ ಔದಾರ್ಯ ವೈಪಿಟ್ಟಯಿಂದ ಹಲವುಮಂದಿ ಬ್ರಾಹ್ಮಣರಿಗೆ ಅಗ್ರಹಾರಾದಿಗಳೂ, ವ್ಯಾಪಾರ ವಾಣಿಜ್ಯ ನಿರತವಾದವರೇ ಮೊದಲಾದ ನಾನಾಜಾತಿ ಮತಸ್ಥರಿಗೂ ಅವರವರಿಗೆ ಬೇಕಾದ ಸೌಲಭ್ಯಗಳೂ ದೊರೆತು ರಮ್ಯವಾದ ಬೀದಿಗಳು ಅಂಗಡಿಗಳು ಮಳಿಗೆಗಳು ಛತ್ರಗಳು ಧರ್ಮಶಾಲೆಗಳು ಮುಂತಾದ ಪ್ರಜಾನಿವಾಸಸ್ಥಾನಗಳೂ ರಮ್ಯವಾದ ವಾಪೀಕೂಪತಟಾಕಾರಾಮೆಗಳೂ ನಾಲ್ಕು ದಿಕ್ಕುಗಳಲ್ಲಿಯೂ ಸಾಲುಸಾಲಾಗಿ ನೆರೆಯುವು. ಆದಿಯಲ್ಲಿ ಜನರು ಹೊಗಿನ ಪಳಯ ಅಗ್ರಹಾರ ಮತ್ತು ಕೋಟೆ ಈ ಪ್ರಾಂತಗಳಲ್ಲಿ ವಾಸಿಸುತ್ತಿದ್ದರು. ಪ್ರಕಾಸ್ತೋಮವು ಹೆಚ್ಚುತ್ತ ಬಂದಮಾಗೆಲ್ಲ ಪಶ್ಚಿಮ, ಉತ್ತರ, ಪೂರ್ವದಿಕ್ಕುಗಳ ಕಡೆ ಜನರ ನಿವಾಸ ಯೋಗ್ಯವಾದ ಮನೆಗಳು ಅಭಿವೃದ್ಧವಾದುವು. ದೊರೆಗಳವರ ವಿಶ್ವಾಸಾಶ್ರಯದಿಂದ ಪ್ರಜಾಸಂಖ್ಯೆಯು ಹೆಚ್ಚುತ ಜನರಿಗೆ ನಾನಾಮುಖವಾಗಿ ಸುಖಸಂಪದಭಿವೃದ್ಧಿಯಾಯಿತು.

ಈ ರೀತಿಯಾಗಿ ಪ್ರಭುಕೃಪಾವಿನಿರ್ಮಿತವಾದ ಈ ರಾಜಧಾನಿಯು ದಿನೇದಿನೇ ವಿಜಹ್ಷಣ ಪ್ರಭು ಕಟಾಕ್ಷ ವೀಕ್ಷಣಪ್ರಭಾವದಿಂದ ವಿಭವೋನ್ನತಿಯನ್ನೈದುತಲಿರುವುದು.

40. ದೊರೆಗಳವರು ರಾಜ್ಯದ ಆಡಳಿತವನ್ನು ಕೆಲವು ಕಾಲವರೆಗೆ ಬ್ರಿಟಿಷಿನವರಿಗೆ ವಹಿಸಿದ್ದು.—ಮೈಸೂರು ರಾಜ್ಯಕ್ಕೊಳಪಟ್ಟು ಮೈಸೂರು ರಾಜಧಾನಿಗೆ ದೂರದಲ್ಲಿರುವ ನಗರದ ಸೀಮೆಯಲ್ಲಿ ಸ್ವ 1830–31ನೆಯಿಸವಿಯ ಸಮಯದಲ್ಲಿ ಕೆಲವು ತೊಂದರೆಗಳು ಸಂಭವಿಸಿದುವು. ಇದಕ್ಕೆ ಕಾರಣಗಳನ್ನು ಅನೇಕರು ಅನೇಕವಿಧವಾಗಿ ನುಡಿಯುವರು. ಅವುಗಳನ್ನು ಚಾರಿತ್ರಿಕವಾಗಿ ವಿಮರ್ಶೆಮಾಡಲು ಸಾಕಾದ ಆಧಾರವು ದೊರೆಯುವುದಿನ್ನೂ ಸುಲಭವಲ್ಲ. ಆಗ ರಾಜನೀತಿ ವಿರುದ್ಧವಾದ ಕಟ್ಟಳೆಗಳೇನೂ ಏರ್ಪಟ್ಟಿದ್ದಾಗೆ ತೋರುವುದಿಲ್ಲ. ಪ್ರಭುಗಳವರಿಗಿದ್ದ ಪ್ರಜಾನುರಾಗವು ಸರ್ವತ್ರ ವಿದಿತವಾದ ಅಂಶವಾಗಿಯೇ ಇರುತ್ತ್ತ. ಸಾಮಾನ್ಯಸಂದರ್ಭಗಳೇ ಕೆಲವು ಸಮಯಗಳಲ್ಲಿ ಕುತ್ಸಿತರ ತಂತ್ರಗಳಿಂದ ಪ್ರಬಲಕಂಟಕಗಳಾಗುವುದು ಅನುಭವನಿವನ್ನು ವಿವಾದವಿಷಯವಲ್ಲ. ಸರ್ಕಾರಕ್ಕೆ ಸಲ್ಲತಕ್ಕ ಪಣದ ವಸೂಲಿಯಲ್ಲಿ ಅಕ್ರಮ, ವಂಚನೆ,

ಮುಂತಾದ ಅಪರಾಧಗಳಿಗೆ ಭಾಜನರಾದವರು ಖಾವಂದರವರ ಆಜ್ಞೆಯಿಂದ ನಡೆದ ವಿಚಾರಣೆಯ ಕ್ರಮವಲ್ಲಿ ತಾವು ತಪ್ಪಿಸಿಕೊಳ್ಳುವುದಕ್ಕಾಗಿ ಇತರರನ್ನು ದುರ್ಮಾರ್ಗ ಪ್ರವರ್ತನೆಗೆ ಪ್ರೇರಿಸಿದಂತೆಯೂ, ಸ್ವಪ್ರಾಣರಕ್ಷಣೆಯಿಂದ ಜವಾಬ್ದಾರಿಯ ಅಧಿಕಾರಗಳನ್ನು ಪಡೆದ ಕೆಲವರು ಸಂತೆಬೆನ್ನೂರನ್ನು ಅಂತರಂಗವಾಗಿ ದ್ರೋಹ ಚಿಂತಕರಾದಂತೆಯೂ, ಕಡೆಯವಾಗಿ ದೇವರು ಸಮಾಧಾನ ಸ್ಥಿತಿಗೆ ಬಂದಮೇಲೆಲ್ಲ ಕಾಲಕ್ರಮದಲ್ಲಿ ಬಗ್ಗಿನಿಖ್ಖಿಜೆದ್ದ ಶಾಸ್ತ್ರಗಳ ಸಂಖ್ಯೆಯು ತಗ್ಗಿಮನರಮೇಲೆ ನಿರ್ಭಯವಾದ ದಾರಿ ದೊರಕಿದಮೆ ತಮಗೆ ಬೇಕಾದಂತೆ ಅದಕ್ಕೆ ಅಥಾರ್ಂತರವನ್ನು ಕಲ್ಪಿಸಿ ಜನರಿಗೆ ತಪ್ಪು ಅಭಿಪ್ರಾಯಗಳನ್ನುಂಟುಮಾಡುತ್ತ ಬಂದಂತೆಯೂ, ಕೃತಾಪಿ ಜನರನೇಕರು ದುರಾಶಾಪರವೇರಾಗಿ ತಾವು ಹಿಂದಿನಂಬಲೂ ಸರ್ಕಾರಕ್ಕೆ ಸಲ್ಲಿಸುತ್ತಿದ್ದ ತೆರಿಗೆಯು ಬೆಜ್ಜೆಂದು ಹೇಳಿಕೊಳ್ಳುತ್ತ ಕೂಟಗಳನು ಸೇರುತ ಬಂದಂತೆಯೂ ಕಾಣುತ್ತೆ. ಮೊಳ್ಳಿವಾಗಿ ಮಂಚಾಲಿ, ಸ್ವಾರ್ಥಪರತೆ, ಅಪಂಕಾರ ಇತ್ಯಾದಿಗಳು ಪ್ರಬಲಿಸಿ ಪ್ರಜಾ ಪ್ರಭ್ವರಕ್ಕೆ ಕಾರಣಗಳಾಗಿ ಪರಿಣಮಿಸಿರಬಹುದು. ಇದರಿಂದ ತತ್ಕಾಲವಕ್ಕೆ ಆ ಪ್ರಾಂತವಲ್ಲಿ ಸ್ವಾವಿಭೃತ್ಯನ್ಯಾಯವು ವೈಪರೀತ್ಯವನ್ನು ತಾಳಿ ಸ್ವೇಚ್ಛಾಪ್ರವೃತ್ತರಾದವರ ಮೂಲಕ ಹಲವರು ಸಲ್ಕರ ನೌಕರರಿಗೆ ಹಿಂಸೆಯುಂಟಾಗಿ ಪ್ರಭುಗಳಿಗೆರಿಗೂ ಪ್ರಜೆಗಳಿಗೂ ಕಾಲಾಂತರದಿಂದಲೂ ನಡೆದು ಬಂದ ಸಹಯೋಗಕ್ಷೇಮಸಾಧಕ ನಿಯಮಗಳು ಸ್ಥೈರ್ಯಸ್ಥಗಳಾದುವು.

41. ಇಂತಹ ವಿಷಮ ಸಮಯದಲ್ಲಿ ಕುಂಸಿ ತಾಲ್ಲೂಕಿನಲ್ಲಿದ್ದ ಒಬ್ಬ ಸಾಮಾನ್ಯ ರೈತನ ಮಗ ಸಾದರಮಲ್ಲನೆಂಬವನು ದುಷ್ಟರಲ್ಲಿ ಮುಂದಾದನು. ಅವನು ತನಗೆ 20 ವರ್ಷದ ವಯಸ್ಸಾಗುವುದಕ್ಕೆ ಮುಂಚಯೇ ಅಲ್ಲಲ್ಲಿ ಕಳವು ಮೊತಿ ಎರಡು ವರ್ಷ ಕಾಲ ಜೈಲಿನಲ್ಲಿದ್ದವನು. ಹಿಂದೆ ಬಿದನೂರು ರಾಜ್ಯವು ಅಸ್ತಮಯಿಸಿದಾಗ ಈ ಮಲ್ಲನು ಅಲ್ಲಿನ ಪಾಳ್ಯಗಾರರಿಗೆ ಗುರುವೆನಿಸಿದ್ದ ಒಬ್ಬ ಜಂಗಮಯ್ಯನ ನೌಕರನಾಗಿದ್ದು ಆತನ ಬಳಿಯಿದ್ದ ಆದೇಶದ ರಾಜಮುದ್ರಿಕೆಗಳನ್ನು ಆತನ ಮರಣಾನಂತರ ಅಪಹರಿಸಿ ಬೂದಿಬಸವಪ್ಪನೆಂಬ ಹೆಸರಿನಿಂದ ತಾನು ನಗರದ

ರಾಜರ ವಂಶಸ್ಥನೆಂದು ಗುಪ್ತವಾಗಿ ಹೇಳಿಕೊಂಡು ತಿರುಗುತಲಿನ್ದ್ದ ಸ್ 1812ನೆ ಯಿಸವಿಯಲ್ಲಿ ಕನ್ನಡ ಜಿಲ್ಲೆಯಲ್ಲಿ ಬಂದು ಕಳವು ಮೊಕದ್ದಮೆಯಲ್ಲಿ ಸಿಕ್ಕಿ ಅಲ್ಲಿ ಕೆಲವುಕಾಲ ಸಜಾ ಅನುಭವಿಸಿ ಅಲ್ಲಿಂದ ಬಿಡುಗಡೆಯಾದಾಗ ಗುರುತಿಗಾಗಿ ತನಗೆ ಲಭಿಸಿದ ಆ ಜಿಲ್ಲೆಯ ಕೋರ್ಟು ನೊಹರಿನ ಅಪ್ಪಣೆಚೀಟಿಯಲ್ಲಿ (Passport) ತನ್ನ ಹೆಸರು ನಗರದ ಖಾನೆಂದ ಬೂದಿ ಬಸವಪ್ಪನೆಂಬದಾಗಿ ಹೇಳಿ ಬರೆಯಿಸಿಕೊಂಡು ಆದು ಇಂಗ್ಲಿಷ್ ಸರ್ಕಾರದವರು ನಗರದಸೀಮೆಗೆ ತನ್ನ ಹಕ್ಕನ್ನು ಅಂಗೀಕರಿಸಿರುವ ಸನ್ನದು ಎಂದು ಪ್ರಚಾರಗೊಳಿಸುತ ಜನರಿಗೆ ಮೋಸಮಾಡಿ ಮೆಂದಿಯನ್ನು ಕಟ್ಟಿ ಹಂಗಾಮು ನಡೆಸುತ್ತ ತನ್ನ ಕಡೆಯವರನ್ನು ತರಿಕೆರೆಯ ಪ್ರಾಂತಕ್ಕೂ ಕಳುಹಿಸಿದನು.

42. ತರಿಕೆರೆ ಪಾಳ್ಯಪಟ್ಟಿನ ಸೂರ್ಯವೃತ್ತಾಂತ.—ತರಿಕೆರೆ ಪಾಳ್ಯಪಟ್ಟು ಹಿಂದಕ್ಕೆ ದಕ್ಷಿಣ ದೇಶದಲ್ಲಿ ಅನಗೊಂದಿ ಎಂಬ ನಾಮಾಂತರದಿಂದ ಪ್ರಸಿದ್ಧಿಪಡೆದ ವಿಜಯನಗರದ ಚಕ್ರಾಧಿಪತ್ಯಕ್ಕೊಳಪಟ್ಟಿದ್ದ 72 ಪಾಳಯಗಳಲ್ಲಿ ಒಂದಾಗಿ ಸೇರಿತ್ತು. ಸ್ 1545ನೆ ಯಿಸವಿಯಲ್ಲಿ ವಿಜಯನಗರದ ಸೇನೆಯು ದಖ್ಖಣ ರಾಷ್ಟ್ರದ ಮುಸಲ್ಮಾನರ ಮೇಲೆ ಕಾಳಗಕ್ಕೆ ನಡೆದಾಗ ಅದರಲ್ಲೊಬ್ಬ ದಳಪತಿಯಾಗಿದ್ದ ಹನುಮಪ್ಪ ನಾಯಕನೆಂಬವನು ತುಂಬಾ ಸಾಹಸವನ್ನು ವ್ಯಕ್ತಪಡಿಸಿದನು. ಅವಕ್ಕೋಸ್ಕರ ಅವನಿಗ ಅವನ ಕಡೆಯ ದಂಡಿನ ಪೋಷಣಾರ್ಥವಾಗಿ ಆಗಿನ ಚಕ್ರವರ್ತಿಗಳು ಸಂತೆಬಿದನೂರಿನ ಬಳಿ ಕೆಲವು ಗ್ರಾಮಗಳನ್ನು ಕೊಟ್ಟರು. ತರುವಾಯ ಅವನೂ ಅವನ ಸಂತತಿಯವರೂ ತಮ್ಮ ಭುಜಬಲದಿಂದ ತಿವಮೊಗ್ಗೆಯ ಪ್ರಾಂತಕ್ಕೆ ಸೇರಿದ್ದ ಕೆಲವು ಪ್ರದೇಶಗಳನ್ನಾಕ್ರಮಿಸಿ ವಿಜಯನಗರದ ಸಾಮ್ರಾಜ್ಯವು ಕ್ಷೀಣತೆಯನ್ನು ಪಡೆದ ಹಾಗೆಲ್ಲ ದಿನೇ ದಿನೇ ಪ್ರಬಲಿಸಿ ಸುಮಾರು 30 ಲಕ್ಷ ರೂಪಾಯಿಯ ಸೀಮೆಯನ್ನು ಸ್ವಾಧೀನಮಾಡಿಕೊಂಡು ತರಿಕೆರೆಯಲ್ಲಿ ನೆಲೆಸಿದರು. ಬಳಿಕ ಅವರ ಮನೆತನದಲ್ಲಿ ಅಂತಃಕಲಹಗಳು ಹೆಚ್ಚಿದಕಾರಣ ಅವರ ಪ್ರಾಬಲ್ಯವು ಕಾಲಿಯಾಗಿ ಸ್ 1733ರಲ್ಲಿ ಅವರಿಗೆ ಸುಮಾರು ಒಂದು ಲಕ್ಷರೂಪಾಯಿ ಅಂದಾಜಿನ ತರಿಕೆರೆ ಯೆಗಚಿ ಮೂ ಯಿರಡು ತಾಲ್ಲೂಕುಗಳು ಮಾತ್ರ

ಉಳಿದಿದ್ದುವು. ಆಗ ಅವರು ಮೊಗಲಾಯಿಯವರಿಗೆ 1500 ವರಹಗಳನ್ನೂ ಮಹಾರಾಷ್ಟ್ರದವರಿಗೆ 700 ವರಹಗಳನ್ನು ಪೊಗದಿಯಾಗಿ ಕೊಡುತ್ತಿದ್ದರು. ಅನಂತರ ಸನ್ 1763ರಲ್ಲಿ ಆ ಪೊಗದಿಗಳಿಗೆ ಬದಲಾಗಿ ನಗರವ ಸಂಸ್ಥಾನವನ್ನು ಜಯಿಸಿ ಅದನ್ನು ಮೈಸೂರು ಪ್ರಭುಗಳವರ ಆಳಿಕೆಗೊಳಪಡಿಸಿದ ಸರ್ವಾಧಿಕಾರಿ ನವಾಬ ಹೈದರಲ್ಲಿಖಾನರು ಆ ಪಾಳ್ಯಗಾರರ ಮೇಲೆ ಮೈಸೂರು ಸರ್ಕಾರದಿಂದ 5000 ವರಹಗಳ ಪೊಗದಿಯನ್ನು ದಾಖಲಾಗಿಸಿದರು. ಅದು ಸನ್ 1781ನೆ ಯಿಸವಿಯಲ್ಲಿ 18 ಲಕ್ಷಕ್ಕೆ ಹೆಚ್ಚಿದಾಗ ಅಷ್ಟು ಪೊಬಲಗು ವೆಸೂಲಾಗದಿರಲು ನವಾಬರು ಆ ಪಾಳ್ಯಪಟ್ಟನ್ನೆಲ್ಲ ಸರ್ಕಾರಕ್ಕೆ ಸೇರಿಸಿಕೊಂಡು ಪಾಳ್ಯಗಾರರಿಗೆ ಅವರ ಸ್ವಂತ ಜಮೀನುಗಳನ್ನು ಮಾತ್ರ ಬಿಟ್ಟುಕೊಟ್ಟರು. ಅವುಗಳನ್ನು 1783ನೆ ಯಿಸವಿಯಲ್ಲಿ ಟೀಪು ಸುಲ್ತಾನರು ಖಾಯಂಮಾಡಿ ಆಗಿನ ಪಾಳ್ಯಗಾರ ಸರ್ಜಾ ಹನುಮಪ್ಪನಾಯಕನೆಂಬಾತನಿಗೆ ಸಾಲೀಯಾನ 1080 ವರಹ ತಲಬು (Stipend) ಸಾದರ್ಮಾಡಿದರು. ಆತನು ಅವರ ದಂಡಯಾತ್ರೆಗಳಲ್ಲಿ ತುಂಬಾ ಸಾಮರ್ಥ್ಯವಂತನೆನಿಸಿದ್ದು 1797ನೆ ಯಿಸವಿಯಲ್ಲಿ ಕೊಯಿಮುತ್ತೂರಿನಲ್ಲಿ ಸತ್ತನು. ಬಳಿಕ ಆತನ ತಲಬೂ ಆತನ ಸೈನ್ಯಾಧಿಕಾರವೂ ಆತನ ಎರಡನೆಯ ಮಗ ಕೃಷ್ಣಪ್ಪನಾಯಕನಿಗೆ ಮೊಕರರಾಯಿತು. ಅವನು ಶ್ರೀರಂಗಪಟ್ಟಣವು ಇಂಗ್ಲಿಷ್ ಜನರ ಸ್ವಾಧೀನವಾದ ಮೇಲೆ ಕಲಹಮಾಡಿದ ಮಹಾರಾಷ್ಟ್ರ ದೇಶಸ್ಥನಾದ ಧೊಂಡಿಯಾವಾಗ್ ಎಂಬವನ ಕಡೆಗೆ ಸೇರಿ ಬಹಳ ನಷ್ಟಕಷ್ಟಗಳಿಗೆ ಗುರಿಯಾಗಿ ಕೊನೆಗೆ ಮೈಸೂರು ಸೇನಾಪತಿಗಳಿಗೆ ಸಿಕ್ಕಿದನು. ಆಗ ಅವನನ್ನು ಅವನ ಸಂಸಾರ ಸಹೀತವಾಗಿ ದಿವಾನ್ ಪೂರ್ಣಯ್ಯನವರು ಶ್ರೀರಂಗಪಟ್ಟಣದಲ್ಲಿ ಸೆರೆಯಲ್ಲಿಟ್ಟರು. ಸನ್ 1802ನೆ ಯಿಸವಿಯಲ್ಲಿ ಅವನು ತುಂಬಾ ದಿನನಾಗಿ ಬೇಡಿಕೊಂಡದರಮೇಲೆ ಅವನಿಗೆ ಆ ದಿವಾನರು ಬೈದಿನಿಂದ ಬಿಡುಗಡೆಮಾಡಿದ್ದಲ್ಲದೆ ಮೊದಲು 50 ವರಹ ಪಿಂಚಣಿ ಕೊಟ್ಟು ಕೆಲವು ಕಾಲದ ಮೇಲೆ ಅವನ್ನು 90 ವರಹಕ್ಕೆ ಹೆಚ್ಚಿಸಿದರು. ತರಿಕೆರೆಯಬಳಿ ಅವನ ಸ್ವಂತ ಜಮೀನುಗಳಿದ್ದುವು. ಅವನ ಬಂಧುವರ್ಗದವರು ಅಲ್ಲಿಯೂ, ಕೋಲೆ ದುರ್ಗ ಕಾಮನದುರ್ಗ

ಅಜ್ಜಂಪುರ ಈ ಪ್ರಾಂತಗಳಲ್ಲಿಯೂ ಭೂಸ್ಥಿತಿಯನ್ನು ಸಂಪಾದಿಸಿಕೊಂಡಿದ್ದರು.

43. ಹೀಗಿರಲು 1880–81ನೆ ಯಿಸವಿಯಲ್ಲಿ ನಗರದ ಈಡಿಕಲಯವೆಮೊಡಿದವೆರು ಗುಂಪುಗಿ ಬಂದು ತರೀಕೆರೆ ಪಾಳ್ಯಗಾರನ ಕುಟುಂಬದವರನ್ನು ದಾಷ್ಟ್ಯಕ್ಕೆ ಪ್ರೇರಿಸಿದರು. ಆಗ ಆ ಪಾಳ್ಯಪಟ್ಟಿನ ಜನರಲ್ಲಿ ಮುಖಂಡನೆನಿಸಿ ಸರ್ಕಾರದಿಂದ ಮರ್ಯಾದೆಯುತಲಬಿನ್ನು ಪಡೆಯುತ್ತಿದ್ದ ರಂಗಪ್ಪನಾಯಕನು ತನ್ನ ಮಗ ಹನುಮೆಪ್ಪನಾಯಕ ಮತ್ತು ತನ್ನ ಸಹೋದರನ ಮಗ ಸಿರ್ಜಪ್ಪನಾಯಕ ಇವರುಗಳ ನಿರ್ಬಂಧದಿಂದ ಪಿತೂರಿಜನರೊಂದಿಗೆ ಸೇರಿ ತಮ್ಮ ಪಾಳ್ಯಪಟ್ಟನ್ನು ಮತ್ತೆ ಸಾಧಿಸಿಕೊಳ್ಳಬೇಕೆಂದು ಹಾವಳಿಮಾಡುತ ಬಂದನು.

ಈ ರೀತಿ ಅನಿವಾರ್ಯವಾಗಿ ನಡೆದ ವಿದ್ಯಮಾನವೆಲ್ಲವೂ ಕ್ರುತವಾಗುತಲೇ ದೊರೆಗಳವೆರು ಪರ್ಯಾಲೋಚಿಸಿ ದುಷ್ಟನಿಗ್ರಹಾರ್ಥವಾಗಿ ಅವಶ್ಯಕವಾದ ವಿಚಾರಣೆಯನ್ನು ಅಪ್ಪಣೆ ದಯಪಾಲಿಸಿದುದಲ್ಲದೆ ರೆಸಿಡೆಂಟರವರೊಂದಿಗೆ ಖಾಸೆ ಸವಾರಿ ಬೆಳಯಿಸಿ ಜನರ ಹಾಲ್ ಅವವಾಲುಗಳನ್ನು ವಿಚಾರಿಸುತ ಬರಲು ಅಲ್ಲಲ್ಲಿ ಸಿಕ್ಕಿದ ಅಪರಾಧಿಗಳನೇಕರು ದಂಡಿಸಲ್ಪಟ್ಟರು. ಮಹಾಪ್ರಭುಗಳವರ ಅಭಯ ಪ್ರದಾನದಿಂದ ಪ್ರಜೆಗಳು ಧೈರ್ಯಗೊಂಡರು. ಈ ದೇಶದ ಸೀಮೆಗೆ ಬ್ರಿಟಿಷನವರ ಫೌಜಿನ ಬತ್ತಾಸೆಯು ಸುಕಾಲಕ್ಕೆ ಬಂದೊದಗಿತು. ಆಗ ಗುಂಪು ಚದರಿತು. ವಿರೋಧಿಗಳು ಭಗ್ನಮನೋರಥರಾದರು. ಅವರು ಆಕ್ರಮಿಸಿದ್ದ ಕೋಲಿದುರ್ಗ, ಕಾವಲಿನ ದುರ್ಗ ಮುಂತಾದ ಸ್ಥಳಗಳು ಮತ್ತೆ ಸರ್ಕಾರಕ್ಕೆ ವಶವಾದುವು. ಜನರು ಸ್ವಾಸ್ಥ್ಯವನ್ನು ವಹಿಸುತ ತಂತಮ್ಮ ಕಸಬುಗಳಿಗೆ ಹಿಂದಿರುಗಿದರು. ತಾನು ನಗರದ ಖಾವಂದನೆಂದು ಹೇಳಿಕೊಳ್ಳುವ ಕಲಹಮಾಡಿದ ಬೂವಿ ಬಸವಪ್ಪನೂ, ಮಿತಿಮೀರಿ ದೌರ್ಜನ್ಯಪ್ರವೃತ್ತನಾದ ತರೀಕೆರೆ ಪಾಳ್ಯಗಾರನೂ ತಪ್ಪಿಸಿಕೊಂಡು ತಿರುಗುತ ಅಲ್ಲಲ್ಲಿ ಒಂಪ ಮಾಡುತಲಿದ್ದರು. ಅವರನ್ನು ಹಿಡಿಯುವುದಕ್ಕೆ ತಕ್ಕ ಪ್ರಯತ್ನ ನಡೆಯಿತು.

ಈ ಸಂದರ್ಭವನ್ನು ಕಂಡು ಆಗ ಗವರ್ನರ್ ಜನರಲ್ ಪದವಿಯನ್ನು ವಹಿಸಿದ್ದ ಲಾರ್ಡ್ ವಿಲಿಯಂ ಬೆಂಟಿಂಕ್ (Lord William Bentinck)

ಸಾಹೇಬರವರು ಅಪೇಕ್ಷೆ ಪಟ್ಟಂತೆ ಖಾನಂದರವರು ಕೆಲವು ಕಾಲದ ಪರ್ಯಂತ ತಮ್ಮ ರಾಜ್ಯದ ಆಡಳಿತವನ್ನು ಅವರ ವಿಚಾರಣೆಗೆ ಒಳಪಡಿಸಿದರು. ಆಗ ಆಗವರ್ನರ್ ಜನರಲ್‌ರವರು ಮೈಸೂರು ದೊರೆಗಳ ಸೀಮೆಯ ರಾಜ್ಯಭಾರದ ನಿರ್ವಾಹಾರ್ಥವಾಗಿ ಕಮಿಷನ್ ಎಂಬ ಹೆಸರಿನಿಂದ ಬೆಂಗಳೂರಿನಲ್ಲಿ ಒಂದು ಅಧಿಕಾರ ಸ್ಥಾನವನ್ನೇರ್ಪಡಿಸಿ ಅದಕ್ಕೆ ಕರ್ನಲ್ ಜಾನ್‌ಬ್ರಿಗ್ಸ್ (Col. John Briggs) ಎಂಬ ಸರದಾರರನ್ನು ಸೀನಿಯರ್ (Senior) ಎಂದರೆ ಅವ್ವಲ್ ಕಮಿಷನರೆಂದೂ, ಮತ್ತು ಮಿ॥ ಸಿ. ಎಂ. ಲಷಿಂಗ್‌ಟರ್ (Mr. C. M. Lushington) ಎಂಬುವರನ್ನು ಜೂನಿಯರ್ (Junior) ಎಂದರೆ ದುಯ್ಯಂ ಕಮಿಷನರೆಂದೂ ಹೀಗೆ ಇಬ್ಬರು ಕಮಿಷನರನ್ನು 1831ನೆ ಯಿಸವಿ ಅಕ್ಟೋಬರು ಮಾಹೆಯಲ್ಲಿ ನೇಮಿಸಿದರು. ಖಾವೆಂದರವರು ಆದಮನೆಯ ಜಿಲ್ಲಾ ಕಛೇರಿ, ಷಾಗಿರ್ದ ಪೇಷ್ ಇಲಾಖೆ, ಜೆನಸಿ, ತೋಷೀಖಾನೆ, ಮೋತೀಖಾನೆ, ಅಮೃತಮಹಲ್ ಕಿಲ್ಲೆ ಕಛೇರಿ ಇವುಗಳನ್ನು ಉಳಿಸಿಕೊಂಡು ಮಿಕ್ಕ ಇಲಾಖೆಗಳನ್ನೆಲ್ಲ ಕಮಿಷನ್ನಿಗೆ ವರ್ಗಮಾಡಿ ಹಿಂದೆ ಅಪ್ಪಗ್ರಾಮದ ತುಕಡಿ ಫೌಜ್ ದಾರಿ ಮಾಡಿದ ವೆಂಕಟರಮಣಯ್ಯ ಎಂಬವರನ್ನು ಸಮಸ್ತ ದಫ್ತರ್ ದಾಖಲೆಗಳ ಸಮೇತವಾಗಿ ಕಮಿಷನರ ಬಳಿಗೆ ಕಳುಹಿಸಿಕೊಟ್ಟರು.

44. ದೊರೆಗಳವರ ವರಮಾನ.—ಇಂಗ್ಲಿಷ್ ಕಮಿಷನ್ನಿನ ಮೂಲಕ ರಾಜ್ಯತಂತ್ರವು ನಡೆಯುವ ಕಾಲದಲ್ಲಿ ದೊರೆಗಳವರಿಗೆ ಖಾಸ ಖರ್ಚಿಗೋಸ್ಕರ ಮೈಸೂರು ಸೀಮೆಯ ಒಟ್ಟು ಹುಟ್ಟುವಳಿಯಲ್ಲಿ ಬ್ರಿಟಿಷ್ ಸರ್ಕಾರಕ್ಕೆ ಸಲ್ಲುವ ಪ್ರೊಗದಿ, ಕ್ಯಾನೆಲ್ರಿ ಎಂದರೆ ಸವಾರಿಲಾಖೆ ಈ ಬಾಬುಗಳ ಖರ್ಚು ಹೊರತು ಮಿಕ್ಕ ಸಂಸ್ಥಾನದ ಸಿಬ್ಬಂದಿ ಮೊದಲಾದ ಬಾಬುಗಳ ಖರ್ಚು ಕಳೆದು ಉಳಿದ ಮೊಬಲಿಗಿನಲ್ಲಿ ಪಂಜಂ ಹಿಸ್ಸೆಯೂ ಇದಲ್ಲದೆ, 3½ ಲಕ್ಷ ರೂಪಾಯಿ ಸಪ ಸಂದಾಯವಾಗಬೇಕೆಂದು ತೀರ್ಮಾನವಾಯಿತು. ಇದು ಖಾವೆಂದರವರ ಸ್ವಂತ ಖರ್ಚಿಗೂ ಅರಮನೆಯ ಖರ್ಚಿಗೂ ಸಾಲದೆ ಹೋಗಿ ಸಂಭವಿಸಿದ ದೇಣಿಯೆಲ್ಲವೂ ಆಗಾಗ್ಗೆ ಮೈಸೂರು ಸರ್ಕಾರದಿಂದ ವ್ಯವಸ್ಥೆಯಾಯಿತು. ದರ್ಬಾರಿನ ರೆಸಿಡೆಂಟರ ಮೂಲಕವೇ ಮೊಕಗಳ ವಿಲೆಯಂದಿಗೆ ಕಮಿಷನ್ನಿನ ಕಾಗದಪತ್ರಗಳು ಬಿಳಿಯಂತೆ ಬಂದುವು.

MAY 25 1937

45. ಬ್ರಿಟಿಷ್ ರೆಸಿಡೆಂಟರು.—ಈ ರೆಸಿಡೆಂಟ್ಸಿ ಹುದ್ದೆಯು 1842ನೇ ಮಿಸವಿ ಡಿಸೆಂಬರು ಕೊನೆಯವರೆಗೂ ನಡೆದು 1843 ರಿಂದ ಮೈಸೂರು ದೊರೆಗಳ ಸೀಮೆಯ ರಾಜ್ಯಭಾರದ ಕಮಿಷನರಮತ ಅಧಿಕಾರದಲ್ಲಿಯೇ ವಿಲೀನವಾಯಿತು. ಅದುವರೆಗೂ ರೆಸಿಡೆಂಟರಾಗಿದ್ದವರ ವಿವರ :—

ಹೆಸರು.	Name.	ಕಾಲ.
1. ಕರ್ನಲ್ ಕ್ಲೋಸ್	Colonel Close	1799ನೇ ಜುಲೈ 22.
2. ಮೇ॥ ಜೆ. ವೆಬ್ (ತಂಗಾವಿ)	Mr. J. Webb (Temporary)	1802ನೇ ಮಾರ್ಚ್ 31.
3. ಸರ್ ಜಾನ್ ಮಾಲ್ಕಂ	Sir John Malcolm	1803ನೇ ಮಾರ್ಚ್.
4. ಮೇಜರ್ ವಿಲ್ಕ್ಸ್ (ತಂಗಾವಿ)	Major Wilks (Acting)	1804ನೇ ಫೆಬ್ರುವರಿ.
5. ಸರ್ ಜಾನ್ ಮಾಲ್ಕಂ	Sir John Malcolm	1804ನೇ ಡಿಸೆಂಬರು.
6. ಮೇಜರ್ ಯಂ. ವಿಲ್ಕ್ಸ್ (ತಂಗಾವಿ)	Major M. Wilks (Acting)	1805ನೇ ಮೇ.
7. ಆನರಬಲ್ ಮೇ॥ ಎ. ಹೆಚ್. ಕೋಲ್ (ತಂಗಾವಿ)	Honorable Mr. A. F. Cole (Acting)	1809ನೇ ಅಕ್ಟೋಬರ್ 1.
8. ಆನರಬಲ್ ಮೇ॥ ಎ. ಹೆಚ್. ಕೋಲ್ (ಖಾಯಂ)	Honorable Mr. A. H. Cole (Permanent)	1811ನೇ ಜನವರಿ 20.
9. ಮೇ॥ ಕಾಸಾ ಮೇಜರ್ (ತಂಗಾವಿ)	Mr. Casamaijor (Acting)	1825ನೇ ಅಕ್ಟೋಬರ್ 18
10. ಮೇ॥ ಕಾಸಾಮೇಜರ್ (ಖಾಯಂ)	Mr. Casamaijor (Permanent)	1827ನೇ ಮಾರ್ಚ್ 23.
11. ಕರ್ನಲ್ ಕಬ್ಬನ್ (ತಂಗಾವಿ)	Colonel Cubbon (Temporary)	1834ನೇ ಮೇ 30.
12. ಕರ್ನಲ್ ಫ್ರೇಜರ್	Colonel Frazer	1834ನೇ ಅಕ್ಟೋಬರ್.
13. ಕ್ಯಾಪ್ಟನ್ ಸ್ಟೋಕ್ಸ್	Captain Stokes	1836ನೇ ಜನವರಿ 19ರಿಂದ 1842ನೇ ಡಿಸೆಂಬರುವರೆಗೆ.

46. ದೊರೆಗಳವರ ಆಳಿಕೆಯಲ್ಲಿ ದಿವಾಣಗಿರಿ ಮಾಡಿದವರುಗಳ ವಿವರ :—

	ಹೆಸರು.	ಕಾಲ.
1.	ಪೂರ್ಣಯ್ಯನವರು	1799ನೆ ಯಿಸವಿ ಜುಲೈ 1ರಿಂದ 1810ನೇ ಯಿಸವಿ ನವಂಬರು ವರೆಗೆ ಸರ್ ಮೊಖ್ತ್ಯಾರಿ 1810ರಿಂದ 1811ನೆಯ ಮಾರ್ಚಿ ವರೆಗೆ ಇವ ದಿವಾಣಗಿರಿ
2.	ಬಾಲ್ಕಿಷ್ ಬಕ್ಷಿ ಬಾಳಾ ಜೀರಾಯರು	1811ನೆ ಯಿಸವಿ ಏಪ್ರೀಲಿಂದ 1812ನೆ ಯಿಸವಿ ಜನವರಿ ವರೆಗೆ
3.	ಸಾರ್ ಬಕ್ಷಿ ರಾಮರಾಯರು	1812ನೆ ಯಿಸವಿ ಫೆಬ್ರವರಿಯಿಂದ 1812ನೇ ಅಕ್ಟೋಬರ್ ವರೆಗೆ
4.	ಬಾಬೂರಾಯರು	1817ನೆ ಯಿಸವಿ ನವಂಬರಿಂದ 1818ನೇ ಏಪ್ರೆಲ್ ವರೆಗೆ
5.	ಸಿದ್ದರಾಜೇ ಅರಸಿನವರು	1818ನೆ ಯಿಸವಿ ಮೇ ಯಿಂದ 1820ನೇ ಫೆಬ್ರವರಿ ವರೆಗೆ
6.	ಬಾಬೂರಾಯರು	1820ನೆ ಯಿಸವಿ ಮಾರ್ಚಿ ಯಿಂದ 1821ನೇ ಆಗಸ್ಟ್ ವರೆಗೆ
7.	ಲಿಂಗರಾಜೇ ಅರಸಿನವರು	1821ನೆ ಯಿಸವಿ ಸೆಪ್ಟೆಂಬರಿಂದ 1822ನೇ ನವಂಬರ ವರೆಗೆ
8.	ಬಾಬೂರಾಯರು	1822ನೆ ಯಿಸವಿ ಡಿಸೆಂಬರಿಂದ 1825ನೇ ನವಂಬರ್ ವರೆಗೆ
9.	ವೆಂಕಟೇ ಅರಸಿನವರು	1827ನೆ ಯಿಸವಿ ಮೇ ಯಿಂದ 1831ನೇ ಅಕ್ಟೋಬರ್ ವರೆಗೆ

ನಾಲ್ಕನೆಯ ಅಧ್ಯಾಯ.

ದೊರೆಗಳವರ ಆಳಿಕೆಯಲ್ಲಿ ಬ್ರಿಟಿಷ್ ಕಮಿಷನ್ನಿನ ಕಾರ್ಯಾರು.

ಸಾ॥ 1831 ನ ಯಿಸವಿಯಿಂದ 1868 ರ ವರೆಗೆ.

ಇಬ್ಬರು ಕಮಿಷನರುಗಳು.—ಮೈಸೂರು ದೊರೆಗಳ ಸೀಮೆಯ ರಾಜ್ಯಭಾರಕ್ಕೋಸ್ಕರವಾಗಿ ನಿಯಮಿತರಾದ ಇಬ್ಬರು ಕಮಿಷನರು

ಗಳಲ್ಲಿ ನೊದಲು ಜೂನಿಯರ್ ಕವಿಷನರಾದ ಪಿ॥ಸಿ.ಯುಸ್. ಲಷಿಂಗ್ಟ್ಟನ್ (Mr. C. M. Lushington) ರವರು 1831ನೆಯಿಸವಿ ಅಕ್ಟೋಬರ್ ಮಾಹೆಯಲ್ಲಿ ಬೆಂಗಳೂರಿಗೆ ಬಂದು ಅಲ್ಲಿ ಅಧಿಕಾರವನ್ನು ವಹಿಸಿದರು. ಅವರು ಮೈಸೂರಿಂದ ಖಾವೆಂದರವರ ಆಜ್ಞಾನುಸಾರವಾಗಿ ವಶ್ಕರ್ ವಾಖಲೆಗಳನ್ನು ತೆಗೆದುಕೊಂಡು ಬಂದ ವೆಂಕಟರಮಣಯ್ಯ ಎಂಬವನನ್ನು ಕವಿಷನ್ನಿನ ದಿವಾನಗಿರಿ ಕೆಲಸಕ್ಕೆ ಮೊಕರರ್ರಾಡಿ ಸೀಮೆಯ ಖರ್ಚನ್ನು ತಗ್ಗಿಸಬೇಕೆಂಬ ಉದ್ದೇಶದಿಂದ ಪೂರ್ವದ ತಹನಾಮಿಯಂತೆ ಸೀಮೆಕವಾಗಿದ್ದ 500 ಬಾರ್ಗೀರ್ ಸವಾರ್ ಕುದುರೆ ದಿಜಿಮೆಂಟನ್ನು ಬೋಖಿಷ್ಕ್ ಮಾಡಿ ಸಂಸ್ಥಾನದಲ್ಲಿದ್ದ ನ್ಯಾಯಶಾಸ್ತ್ರಿಕಾಂಶ್ಥಾನವನ್ನು ತಪ್ಪಿಸಿ ಅನೇಕ ದೇವಾದಾಯ ಧರ್ಮಾದಾಯದ ಇನಾಂಗಳನ್ನೂ ಅನೇಕರ ಜಹಗೀರುಗಳನ್ನೂ ಇನಾಂ ಭೂಮಿಗಳನ್ನೂ ಅವುಗಳಿಗೆ ಆಧಾರವಾದ ಸನ್ನದುಮುಂತಾದ ದಾಖಲೆಗಳನ್ನು ನೋಡಬೇಕೆಂಬ ಅಭಿಪ್ರಾಯದಿಂದ ಜಪ್ತಿಮಾಡಿದರು.

ಬಳಿಕ ಸೀನಿಯರ್ ಕವಿಷನರಾದ ಕರ್ನಲ್ ಜಾನ್ ಬ್ರಿಗ್ಸ್ (Col. John Briggs) ರವರು 1831 ನೆ ಯಿಸವಿ ಡಿಸೆಂಬರು ಮಾಹೆಯಲ್ಲಿ ಬೆಂಗಳೂರಿಗೆ ತಲಪಿ ಕೆಲಸಕ್ಕೆ ಆರಂಭಿಸಿ ತಾವು ಬರುವುದಕ್ಕೆ ಮುಂಚೆ ಜೂನಿಯರ್ ಕವಿಷನರವರು ಮಾಡಿದ ಕೆಲವು ವಿಷಯಗಳನ್ನು ನೋಡಿ ಅವುಗಳಲ್ಲಿ ತಮಗೆ ಅಸಮಾಧಕವಾದವುಗಳನ್ನು ಮೇಲ್ಪಟ್ಟ ಅಧಿಕಾರಿಗಳಿಗೆ ತಿಳಿಸಿ ಅವರ ಅನುಮತಿಯನ್ನು ಪಡೆದು ತಿದ್ದುಪಾಡು ಮಾಡಿದರು. ಇದರಿಂದ ಜಪ್ತಿಯಾಗಿದ್ದ ಇನಾಮುಗಳಿಗೆಲ್ಲಾ ಖುಲಾಸಾವಾದಲ್ಲದೆ ವೆಂಕಟರಮಣಯ್ಯನವರಿಗೆ ದಿವಾನಗಿರಿಯು ತಪ್ಪಿತ್ತು. ಹಿಂದೆ ಖಾವೆಂದರವರ ಸನ್ನಿಧಾನದಲ್ಲಿ ಕೆಲವುಕಾಲ ದಿವಾನರಾಗಿದ್ದ ಬಾಬೂರಾಯರಿಗೆ ಸರ್ 1832 ನೆ ಯಿಸವಿ ಮೇ ಮಾಹೆಯಲ್ಲಿ ಕವಿಷನ್ನಿನಲ್ಲಿ ದಿವಾನ ಕೆಲಸ ಮೊಕರರಾಯಿತು. ಮತ್ತು ಕ್ರಮವಾಗಿ ನ್ಯಾಯಸ್ಥಾನವು ಪುನಃ ಸ್ಥಾಪಿತವಾಯಿತು. ತರುವಾಯ ಇವರು ನಗರದ ಸೀಮೆಗೆ ಹೋಗಿನೋಡಿ ಅಲ್ಲಿ ಇನ್ನೂ ಜಂಗಾಮು ನಡೆಸುತ್ತಿದ್ದ ಹೆರನೇಕರನ್ನು ನಯಭಯಗಳಿಂದ ಸಮಾಧಾನಗೊಳಿಸಿದರು.

2. ಒಬ್ಬರೇ ಕಮಿಷನರಿರುವಂತೆ ನೇಮಕವಾದ್ದು.—ಇಷ್ಟರಲ್ಲಿ ಜನರಲ್ ಕಮಿಷನರ್ ಮೆ॥ ಲಷಿಂಗ್ಟರ್ಟರವರು ಕೆಲಸಕ್ಕೆ ರಾಜೀನಾಮೆ ಕೊಡಲು ಅವರಿಗೆ ಬದಲಾಗಿ ಮೆ॥ ಸಿ. ಡಿ. ಡ್ಯೂರಿ (Mr. C. D. Drury) ಎಂಬವರು ಪೂಕರವಾಗಿ ನಾಲ್ಕು ತಿಂಗಳವರೆಗೆ ಮಾತ್ರ ಕೆಲಸ ನಾಡಿದರು. ಆಮೇಲೆ ಅವರ ಸ್ಥಾನಕ್ಕೆ ಮೆ॥ ಜೆ. ಯಮ್. ಮೆಕ್ಲಾಡ್ (Mr. J. M. McLeod) ರವರು ಬಂದು 1834 ನೆ ಯಿಸವಿ ಫಬ್ರವರಿ 17ನೇ ತಾರೀಖಿನ ವರೆಗೆ ಇದ್ದು ಬಳಿಕ ತಮ್ಮ ಕೆಲಸವನ್ನು ಲೆಫ್ಟನಂಟ್ ಜನರಲ್ ಕಬ್ಬರ್ ಸಾಹೇಬರವರಿಗೆ ವಹಿಸಿಕೊಟ್ಟರು. ಈ ಮಧ್ಯದಲ್ಲಿ ಸೀನಿಯರ್ ಕಮಿಷನರಾಗಿದ್ದ ಕರ್ನಲ್ ಬ್ರಿಗ್ಸ್ ಸಾಹೇಬರವರು ಕೆಲಸದಿಂದ ನಿವೃತ್ತರಾಗಲು ಅವರ ಸ್ಥಾನಕ್ಕೆ ಕರ್ನಲ್ ಮಾರಿಸನ್ (Col. Morrison) ರವರು ನೀತುನಿತರಾದರು. ಈ 1834ನೆ ಯಿಸವಿಯಲ್ಲಿ ಇಬ್ಬರು ಕಮಿಷನರುಗಳಿಗೆ ಬದಲಾಗಿ ಒಬ್ಬರೇ ಕಮಿಷನರಿರಬೇಕೆಂದು ನೇಪ್ಪಟ್ಟ ಅಧಿಕಾರಸ್ಥಾನದಿಂದ ತೀರ್ಮಾನವಾಯಿತು. ಅದಕ್ಕನುಗುಣವಾಗಿ ಅದೇ ಇಸವಿ ಜೂನ್ ಮಾಹೆ 6 ನೆಯ ತಾರೀಖಿನಲ್ಲಿ ಜನರಲ್ ಕಬ್ಬರ್ ಸಾಹೇಬರು ಕಮಿಷನ್ನಿನ ಸಂಪೂರ್ಣಾಧಿಕಾರವನ್ನು ವಹಿಸಿದರು. ಅದುವರೆಗೆ ಮೆಲೆನಾಡಿನ ಪಂಗಾಮಿಗ ಸೇರಿದ ಪರೆಲ್ಲರೂ ಹೋಗಿ ಉಳಿದಿದ್ದ ಸರ್ದಾಪ್ಪ ನಾಯಕನನ್ನು ಹಿಡಿದುತಂದು ವಿಚಾರಣೆಯಿಂದ ರಾಜದ್ರೋಹಿಯೆನಿಸಿದ ಅಪರಾಧಕ್ಕೋಸ್ಕರ ಅವನನ್ನು ಬೆಂಗಳೂರಿನಲ್ಲಿ ಗಲ್ಲಿಗೆ ಪತಾಯಿಸಿದರು. ಆಗ ಸೀಮೆಯು ಸಂಪೂರ್ಣವಾಗಿ ತಪಬಂದಿಗೆ ಬರಲು ಅವಕಾಶವಾಯಿತು.

3. ಮೈಸೂರಿಗೆ ಗವರ್ನರ್ ಜನರಲ್ ಲಾರ್ಡ್ ವಿಲಿಯಂ ಬೆಂಟಿಂಕ್‌ರವರ ಆಗಮನ.—ಮೈಸೂರಿನಲ್ಲಿ ಬ್ರಿಟಿಷ್ ಕಮಿಷರ್ ಸ್ಥಾಪಿತವಾಗಿ ಗವರ್ನರ್ ಜನರಲ್ ಲಾರ್ಡ್ ವಿಲಿಯಮ್ ಬೆಂಟಿಂಕ್ ಸಾಹೇಬರವರು ಆ ಕಾಲದಲ್ಲಿ ಈ ದೇಶದಲ್ಲಿ ನಡೆದ ಪಂಗಾಮಿಗೆ ಉಂಟಾದ ಕಾರಣ ಮತ್ತು ಅವನ್ನು ಶಮನಪಡಿಸಲು ನಡೆಯಿಸಿದ ಕ್ರಮ ಇವು ಮೊದಲಾದ ಅಂಶಗಳನ್ನು ವಿಚಾರಮಾಡಲು ಮುಂದು ಕಮಿಟಿಯನ್ನು ನೇಮಿಸಿದರು. ಆ ಕಮಿಟಿಯವರು ಅದರ ಸಂದರ್ಭಗಳನ್ನೆಲ್ಲ ಆಮೂಲಾಗ್ರವಾಗಿ

ಪರಿಶೀಲಿಸಿ ನೋಡಿದ ರಿಪೋರ್ಟು ತಮಗೆ ತಲಸಿದ ಬಳಿಕ ಅಗಸ್ಟ್ರ್ ಜನರಲ್ ರವರು ನೀಲಗಿರಿ ಬೆಟ್ಟಕ್ಕೆ ಸವಾರಿ ಹಿತ್ತೈಸಿದಾಗ ಸನ್ 1834 ನೆಯಿಸವಿ ಮಾರ್ಚಿ ಮಾಹೆ ತಾರೀಖು 16 ರಲ್ಲಿ ಮೈಸೂರಿಗೆ ದಯಮಾಡಿಸಿ ಶ್ರೀ ಚಾಮುಂಡೇಶ್ವರಿ ಬೆಟ್ಟದಮೇಲಿರುವ ಬಂಗಲೆಯಲ್ಲಿ ಮೊಕ್ಕಾಂ ಮಾಡಿದರು. ಅವರ ಮೊರನೆಯ ದಿನ ಅವರಿಗೂ ಬಾವೆಂದರವರಿಗೂ ಅಲ್ಲಿ ಪರಸ್ಪರ ಸಂದರ್ಶನವಾಯಿತು. ಆಗ ಅವರು ಸದಯಹೃದಯರಾಗಿ ಬಾವೆಂದರವರೊಂದಿಗೆ ಸೂಕ್ಷ್ಮಾತಾತ್ಪರ್ಯವಾಗಿ ರಾಜಕೀಯ ವಿಷಯಗಳನ್ನು ಕುರಿತು ಮಾತನಾಡಿ, ದೊರಗಳವರ ಪ್ರಜ್ಞಾಸ್ಫೂರ್ತಿ, ಬುದ್ಧಿಕುಶಲತೆ, ಹೃದಯಸ್ವಭಾವ, ಪ್ರಜಾನುರಾಗ, ಅವರಿಗೆ ಇಂಗ್ಲಿಷ್ ಸರ್ಕಾರದವರಲ್ಲಿರುವ ಉಪಕಾರಸ್ಮರಣಾಪೂರ್ವಕವಾದ ದೃಢವಿಶ್ವಾಸ ಇವ್ರು ಮೊದಲಾದ ಗುಣಗಳನ್ನು ಪರಿಗಣಿಸಿ, ಮೈಸೂರು ಸರ್ಕಾರದಿಂದ ಬ್ರಿಟಿಷ್ ಗವರ್ನ್‌ಮೆಂಟಿಗೆ ಪ್ರತಿವರ್ಷವೂ ಸಲ್ಲಬೇಕಾದ ಹೊಗದಿ ಹಣಕ್ಕೆ ತಕ್ಕಷ್ಟು ರಾಷ್ಟ್ರವನ್ನು ಮಾತ್ರ ಪ್ರತ್ಯೇಕಿಸಿ ತತ್ಕಾಲಕ್ಕೆ ಉಳಿಸಿಕೊಂಡು ನಿಂತ ಸೀಮೆಯನ್ನೆಲ್ಲ ಮಹಾರಾಜರವರ ಆಳಿಕೆಗೆ ಬಿಟ್ಟುಕೊಡಬೇಕೆಂದು ಇಂಗ್ಲಾಂಡ್ ದೇಶದಲ್ಲಿರುವ ಮೇಲ್ಪಟ್ಟ ಅಧಿಕಾರಿಗಳು ಕೋರ್ಟ್ ಆಫ್ ಡೈರೆಕ್ಟರ್ಸ್ (Court of Directors) ರವರಿಗೆ ಸಿಫಾರಸು ಮಾಡಿದರು. ಮತ್ತು ಮೈಸೂರು ದೇಶದ ರಾಜ್ಯಭಾರವನ್ನು ಪ್ರಭುಗಳವರ ಪರವಾಗಿ ನಡೆಯಿಸುವುದಕ್ಕೋಸ್ಕರ ತಾವು ನೇಮಿಸಿದ ಕಮಿಷನರವರ ಕೈಕೆಳಗೆ ಇದ್ದುಕೊಂಡು ಆಯಾ ತುಕಡಿಗಳ ಮೇಲ್ವಿಚಾರಣೆ ಮಾಡಲು ನಾಲ್ಕು ಮಂದಿಗಿಂತಲೂ ಹೆಚ್ಚು ಇಂಗ್ಲಿಷ್ ಸರದಾರರು ಅವಶ್ಯಕವಿಲ್ಲವೆಂದೂ ಸಾಧ್ಯವಾದಮಟ್ಟಿಗೂ ಈ ದೇಶದ ಪದ್ಧತಿಗಳನ್ನು ಅನುಸರಿಸಬೇಕೆಂದೂ ಮುಂದೆ ದೊರೆಗಳವರ ಪ್ರಭುತ್ವದಲ್ಲಿ ಅಚರಿಸುವುದಕ್ಕೆ ಸೌಕರ್ಯವಿಲ್ಲದ ಏರ್ಪಾಡು ಆಚರಣೆಗೆ ತರತಕ್ಕದ್ದಲ್ಲವೆಂದೂ ತೀರ್ಮಾನಿಸಿದರು. ಇದಲ್ಲದೆ ಈ ದೇಶದ ಆಡಳಿತವನ್ನು ಬ್ರಿಟಿಷ್ ಗವರ್ನ್‌ಮೆಂಟಿನವರಿಗೆ ತತ್ಕಾಲದಲ್ಲಿ ವಹಿಸಿದ್ದು ದೊರೆಗಳವರ ಸ್ವಯಂಕೃತವಾದ ಯಾವ ಲೋಪದಿಂದಲೂ ನಡೆದುದಲ್ಲವೆಂಬಂಶವು ಪೂರ್ವಭಾವಿಯಾಗಿ ಆ ಲಾರ್ಡ್ ಸಾಹೇಬ

ರವೆರು ಖಾವೆಂದುವೆರಿಗೆ ಕೊಟ್ಟ ಭರವಸೆಯಿಂದ ವೈಕ್ಷಪಟ್ಟು ಆದು ಪ್ರಭುಗಳವರ ಮನಸ್ಸಮಾಧಾನಕ್ಕೆ ಕಾರಣವಾಯಿತು.

ಮೇಲೆ ಹೇಳಿದಂತೆ ಈ ಸೀಮೆಯಿಂದ ಸಲ್ಲಬೇಕಾದ ಪ್ರೊಗದಿಗೋಸ್ಕರವಾಗಿ ಈ ದೇಶವನ್ನು ವಿಭಾಗಮಾಡಬೇಕೆಂದು ಗವರ್ನರ್ ಜನರಲ್ ಖಾರ್ಡ್ ವಿಲಿಯಂ ಬೆಂಟಿಂಕ್ ರವರು ಕೊಟ್ಟ ಸಲಹೆಯನ್ನು ಅಂಗೀಕರಿಸದೆ ಇಂಗ್ಲೆಂಡ್ ದ್ವೀಪದಲ್ಲಿದ್ದ ಕೋರ್ಟ್ ಆಫ್ ಡೈರೆಕ್ಟರ್ಸ್ (Court of Directors) ಅಧಿಕಾರಸ್ಥರವರು ಮೈಸೂರು ರಾಜ್ಯವು ಭಿನ್ನವಾಗಕೂಡದೆಂತಲೂ, ಈ ರಾಜ್ಯದ ಆಡಳಿತವನ್ನೆಲ್ಲಾ ಕ್ರಮಪಡಿಸಿ ಅವಶ್ಯಕವಾದ ಕಟ್ಟಳೆ ಕಾನೂನುಗಳನ್ನು ವಿಧಿಸಿ ದೇಶವನ್ನು ತಹಬಂದಿಗೆ ತಂದು ಮುಂದೆ ತೊಂದರೆಗಪಕಾಶವಿಲ್ಲದಂತೆ ಮಾಡುವ ಪರ್ಯಂತ ಬ್ರಿಟಿಷ್ ಕಮಿಷನ್ನಿನ ಆಡಳಿತವು ಸಮಗ್ರವಾಗಿ ಆಚರಣೆಯಲ್ಲಿರುವ್ರದು ಬಿಳ್ಕೆಯದೆಂತಲೂ ತೀರ್ಮಾನಿಸಿದರು.

4. ಜನರಲ್ ಕಬ್ಬ್ ಸಾಹೇಬರವರ ಆಡಳಿತದ ಮುಖ್ಯಾಂಶಗಳು.— ಸ್ 1834 ನೆ ಯಿಸವಿಯಲ್ಲಿ ಏಕಮುಖವಾಗಿ ಕಮಿಷನರ್ ಹುದ್ದೆಯನ್ನು ವಹಿಸಿದ ಮೇಜರ್ ಜನರಲ್ ಕಬ್ಬ್ ಸಾಹೇಬರು ಅವಿಚ್ಛಿನ್ನವಾಗಿ ಇಪ್ಪತ್ತೈದು 27 ವರ್ಷಗಳು ಅಧಿಕಾರ ಮಾಡಿದರು. ಅವರ ಕಾರ್ಯದರ್ಶಿಯಲ್ಲಿ ಅನೇಕ ಮುಖವಾಗಿ ಅವ್ಯಕ್ತತೆ ಕಂಡುಬಂದಂತೆ ತಿದ್ದುಪಾಡುಗಳು ನಡೆದು ದೇಶವು ಕ್ರಮಕ್ರಮವಾಗಿ ಅಭಿವೃದ್ಧಿಗೆ ಬಂದಿತು. ಅವರು ಮೊದಲು ಸ್ 1831 ನೆ ಯಿಸವಿ ಖರಸಂವತ್ಸರದವರೆಗೂ ಸರ್ಕಾರಕ್ಕೆ ಸಂಸ್ಥಾನದಲ್ಲಿ ರೈತರು ಮುಂತಾದವರು ಸಲ್ಲಿಸಬೇಕಾಗಿದ್ದ ಶಿಲಕಿಲಾ ಬಾಕಿ ಮೊಬಲಗನ್ನೆಲ್ಲ ಗವರ್ನರ್ ಜನರಲ್‌ರವರ ಅಪ್ಪಣೆ ಪಡೆದು ಸ್ 1838ರಲ್ಲಿ ಮುಜರೆ ಮಾಡಿದರು. ಮತ್ತು ಪಾಳ್ಯಗಾರರಿಗೆ ಪಾಮತಿಯಾಗುವ ಮರ್ಯಾದಿ ತಲಬನ್ನು (Stipend) ಅವರುಗಳು ಮಾಡಿಕೊಳ್ಳುವ ಸಾಲಗಳಿಗೆ ಜಪ್ತಿ ಮಾಡಕೂಡದೆಂದು 1839ನೆ ಯಿಸವಿಯಲ್ಲಿ ಅಪ್ಪಣೆ ಮಾಡಿದರು. ಕಬ್ಬ್ ಸಾಹೇಬರು ಈ ಸೀಮೆಯಲ್ಲಿ ಹಿಂದೆ ಇದ್ದ ಆಯ ತುಕಡಿಗಳಿಗೆ ಬದಲಾಗಿ ಬೆಂಗಳೂರು, ಚಿತ್ರದುರ್ಗ, ಅಷ್ಟಗ್ರಾಮ, ನಗರ ಎಂಬ ನಾಲ್ಕು ಡಿವೀಜ್ಞಿಗಳನ್ನೇರ್ಪಡಿಸಿ ಪ್ರತಿಯೊಂದಕ್ಕೂ

ಮೇಲ್ವಿಚಾರಣೆಗೆ ಒಬ್ಬೊಬ್ಬರು ಇಂಗ್ಲಿಷ್ ಸರದಾರರನ್ನು ಸೂಪರ್‌ಇಂಟೆಂಡೆಂಟರನ್ನಾಗಿ ನೇಮಿಸಿದರು. ಬೆಂಗಳೂರು ಡಿವೀಜ್ಞ ಆಫೀಸು ಎಂದರೆ ಅಧಿಕಾರಸ್ಥಾನವು ಬೆಂಗಳೂರಿನಲ್ಲಿಯೂ ಚಿತ್ರದುರ್ಗ ಡಿವೀಜನ್ನಿನ ಆಫೀಸು ತುಮಕೂರಲ್ಲಿಯೂ ಅಸ್ಟಗ್ರಾಮದ ಆಫೀಸು ಮೈಸೂರಿನಲ್ಲಿಯೂ ನಗರದ ಡಿವೀಜನ್ನಿನ ಆಫೀಸು ಶಿವಮೊಗ್ಗೆಯಲ್ಲಿಯೂ ಸ್ಥಾಪಿತವಾದುವು.

೮. ಮುಲ್ಕಿ ಬಾಬು.—ಬಾಮಂದರವೆರೆ ಆಳಿಕೆಯಲ್ಲಿ ನೆಪಿಂತೆಯೋ ಕಮಿಷನರ್ ಕಬ್ಬರವರು ಧೃತ ಪರ್ಮನೆಂಟು ಮೇಲೆ ಗವರ್ನಮೆಂಟಿಟ್ಟು, ತರಿ, ಕುಷ್ಕಿ, ಬಾಗಾಯಿತು, ಷಾತೂದು, ಕಾಫಿ ಇತ್ಯಾದಿ ವ್ಯವಸಾಯಕ್ಕೆ ವಿಶೇಷ ಪ್ರೋತ್ಸಾಹವನ್ನಿತ್ತರು. ಮತ್ತು ನಗದಿ ಕಂದಾಯವು ತುಂಬಾ ಅಧಿಕವಾಗಿ ಕಂಡುಬಂದೆಡೆಯಲ್ಲಿ ಅವನ್ನು ಯಥೋಚಿತವಾಗಿ ಕಡಿಮೆಮಾಡಿ ಸುಮಾರು 769 ಚಿಲ್ಲರೆ ತೆರಿಗೆಗಳನ್ನು ತಪ್ಪಿಸಿ ಬಟಾಯಿ ಪೋಟಾಪೋಟಿಯಲ್ಲಿ ವ್ಯತ್ಯಾಸಗಳು ನಡೆಯುವಂತೆ ಸಾಧ್ಯವಾದ ಮಟ್ಟಿಗೂ ಮೇಲ್ವಿಚಾರಣೆ ನಡೆಸುವುದಕ್ಕೆ ತಕ್ಕ ಏರ್ಪಾಟನ್ನು ಮಾಡಿದರು. ಸಾಯರು, ಸಂಬಳ, ಸಾಗವಾನಿ, ಆಬ್ಕಾರಿಯ ಐದುಬಾಬುಗಳು ಮೊಘತರ್ಫ್ ಮತ್ತು 1828ನೆ ಯಿಸವಿಯಲ್ಲಿ ಜೋಡೆಗಳವರು ಏರ್ಪಡಿಸಿದ ಸ್ಟ್ಯಾಂಪು ಇವು ಮುಂತಾದ ವರಮಾನಗಳ ಪುಟ್ಟವೇಯನ್ನೆಲ್ಲ ಕಾಲಾನುಗುಣವಾಗಿ ಕ್ರಮಪಡಿಸಿದರು.

ಮೊಘತರ್ಫ್ ಬಾಬಿನಲ್ಲಿ ಮನೆ, ಅಂಗಡಿ, ಗಾಣ, ಏರು, ಇವು ಮೊದಲಾದವುಗಳಿಗಲ್ಲದೆ ಕೆಲವರು ಹೊತ್ತು ಇತರರಿಗೆ ಆಯಾ ಜಾತಿಯ ಕಸಬುಗಳ ಮೇಲೂ ಪೂರ್ವದಲ್ಲಿ ತೆರಿಗೆ ದಾಖಲಾಗಿತ್ತು. ಸ್ವ 1860 ನೆ ಯಿಸವಿಯಲ್ಲಿ ಮನೆ, ಮಗ್ಗ, ಅಂಗಡಿ, ಗಾಣ, ಏರು ಇವುಗಳ ಮೇಲೆ ಮಾತ್ರ ಮೊಘತರ್ಫ್ ಕಂದಾಯವನ್ನು ಉಳಿಸಿ ಸಂತ ಬಾಬುಗಳ ಮೇಲೆ ಅದನ್ನು ವಜಾಮಾಡಿದರು. ಈಚೆಗೆ 1871ನೆ ಯಿಸವಿಯಲ್ಲಿ ಏರು ತೆರಿಗೆಗೆ ಬದಲಾಗಿ ಆಕಾರ ಕಂಡ ಪಮಾನಿನಮೇಲೆ ರೂಪಾಯಿ ಒಂದಕ್ಕೆ ಒಂದಾಣೆಯಂತೆ ಲೋಕಲ್ ಸೆಸ್ ಎಂಬ ತೆರಿಗೆ ದಾಖಲಾಯಿತು.

ಜಮಾಸು ಬಾಬಿನಲ್ಲಿ ಸುಗ್ಗಿಯಲ್ಲಿ ಕಂದಾಯ ವಸೂಲ್ಮಾಡಲು ತಿಂಗಳಿಗೊಂದಂತೆ ಐದು ಪಿಸ್ತು ನೇಮಕವಾಯಿತು. ಕ್ರಮಕ್ರಮವಾಗಿ ಬರುಬಾಕಿ ಪದ್ಧತಿಯು ತಪ್ಪಿ ಅವಕ್ಕೆ ಬದಲಾಗಿ ನಗದಿ ತೆರಿಗೆ ಮುನಾಸಬು ದಾಖಲಾಗುತ್ತ ಬಂತು. ಕಮಿಷ್ಷರ್ ವಿಲ್ಕಿಟ್ಸ್ ಮೊದಲನೆಯ ವರ್ಷದಲ್ಲಿ ಜಮಿನ್ ಕಂದಾಯದಿಂದ ಹುಟ್ಟುವಳಿ 47 ಲಕ್ಷರೂಪಾಯಿಮಾತ್ರ ಜಮೆಯಾಗಿ ಮೂರನೆಯವರ್ಷ 41 ಲಕ್ಷಕ್ಕೆ ತಗ್ಗಿ, ತರುವಾಯ ಕ್ರಮಕ್ರಮವಾಗಿ ಹೆಚ್ಚುತ್ತ ಬಂದು 1855-56 ರಲ್ಲಿ 57½ ಲಕ್ಷಕ್ಕೆ ಏರಿತು. ಶ್ರೀಮನ್ಮಹಾರಾಜರವರ ಆಳಿಕೆಯ ಮೊದಲನೆಯ ಹತ್ತುವರ್ಷಗಳಲ್ಲಿ ಸರಾಸರಿ ವರ್ಷಕ್ಕೆ 65½ ಲಕ್ಷರೂಪಾಯಿಯೂ, ಎರಡನೆಯ ಹತ್ತು ವರ್ಷಗಳಲ್ಲಿ 57½ ಲಕ್ಷವೂ ಜಮಾ ಆಗಿತ್ತು. ಕಮಿಷನ್ನಿನ ಕಾಲದ ಮೂರು ದಸ್ಸಾಲಾಗಳಲ್ಲಿ, ನಾಸರು ಮೊದಲನೆಯ ದಕಕದಲ್ಲಿ ವರ್ಷ ವೊಂದಕ್ಕೆ 47½ ಲಕ್ಷವೂ, ಎರಡನೆಯದರಲ್ಲಿ 50¾ ಲಕ್ಷವೂ, ಮೂರನೆಯದರಲ್ಲಿ 57¾ ಲಕ್ಷವೂ ಉತ್ಪತ್ತಿಯಾಯಿತು. ಅನಂತರ ಧಾನ್ಯದ ಗಿರಾಕಿಯು ಅನುಕೂಲಿಸುತ ಬಂದಹಾಗೆಲ್ಲ ವರಮಾನವು ಇನ್ನೂ ಅಭಿವೃದ್ಧಿಗೊಂಡಿತು.

ಎಲ್ಲಾ ಬಾಬುಗಳೂ ಸೇರಿ ಕಮಿಷನ್ನಿನ ಕಾಲದಲ್ಲಿ ಮೊದಲನೆಯ ದಸ್ಸಾಲಾ ವರ್ಷವೊಂದಕ್ಕೆ 70½ ಲಕ್ಷರೂಪಾಯಿಗಳೂ, ಎರಡನೆಯ ದಸ್ಸಾಲಾ ವರ್ಷವೊಂದಕ್ಕೆ 76 ಲಕ್ಷವೂ ಹುಟ್ಟುವಳಿಯಾಗಿ ತರುವಾಯ ಇನ್ನೂ ಹೆಚ್ಚಿತು.

6. ಕಮಿಷರ್ ಮೊಕರರಾದ 1831ನೆ ಯಿಸವಿ ಪರಸಂವತ್ಸರ ಮೊದಲುಗೊಂಡು 1861ನೆ ಯಿಸವಿಯವರೆಗೆ ಸಂದ ಮೂವತ್ತು ವರ್ಷಗಳಲ್ಲಿ ರಾಜ್ಯಭಾರಕ್ಕೆ ಅವಶ್ಯಕವಾಗಿ ಕಂಡುಬಂದು ಕೆಲವು ಇಲಾಖೆಯ ಬದಲಾವಣೆಗಳು ನಡೆದುವು. ಹಿಂದೆ ಸೂಚಿಸಿದಂತೆ 1843 ನೆ ಯಿಸವಿಯಲ್ಲಿ ಮೈಸೂರುಬಳಿ ಯಿಲವಾಲದಲ್ಲಿದ್ದ ರೆಸಿಡೆಂಟ್ ಹುದ್ದೆಯು ಮೋಜೂಫಾಗಿ ಆ ಅಧಿಕಾರವೂ ಕಮಿಷನರ್ ಕಬ್ಬರವರಿಗೇ ಸೇರಿತು. ಅದೇ ಕಾಲದಲ್ಲಿ ಹಿಂದೆ ಮಹಾರಾಜರು ಕಂಠೀರವನರಸರಾಜಒಡೆಯರವರ ಪ್ರಭುತ್ವದಲ್ಲಿ ಸ್ಥಾಪಿತವಾಗಿ ತಪ್ಪಿಯಿಲ್ಲದೆ ನಡೆದುಬಂದ ಟಂಕಸಾಲೆಯು ಮುಚ್ಚಿ ಆಯಿತು.

7. ಮರಮ್ಮತ್ತು ಖಾತೆ.—ದೊರೆಗಳವರ ದೌಲತ್ತಿನ ವಿಸ್ತಾರದಿನಂತೆಯೇ ಕಮಿಷನ್ನಿನ ಆದಿಭಾಗದಲ್ಲಿ ಕೆಲವು ವರ್ಷಗಳವರೆಗೂ ರೆವಿನ್ಯೂ ಇಲಾಖೆಯವರ ಮೂಲಕವಾಗಿಯೇ ಮರಮ್ಮತ್ತು ಕಾಮಗಾರಿಗಳು ನಡೆದುವು. ಸ್ 1836-37 ರಲ್ಲಿ ಪ್ರತ್ಯೇಕವಾಗಿ ಒಬ್ಬ ಮೇಜರ್ ಸೂಪರಿಂಟೆಂಡೆಂಟರು ಮೊಕದರರಾಗಿ ಬಳಿಕ ಕ್ರಮಕ್ರಮವಾಗಿ ಅನೇಕ ಕಾಮುಗಾರಿಗಳು ನಡೆಯಬೇಕಾದ ಆವಶ್ಯಕತೆ ಕಂಡುಬಂದ ಕಾರಣ ಸ್ 1855-56 ರಲ್ಲಿ ಇಂಜನೀಯರ್ ಇಲಾಖೆಯು (Public Works Department) ಪ್ರತ್ಯೇಕವಾಗಿ ಏರ್ಪಟ್ಟು ಅದರ ಮೂಲಕವಾಗಿ ಸಂಸ್ಥಾನದಲ್ಲಿ ಸಾಧ್ಯವಾದಮಟ್ಟಿಗೂ ರಸ್ತೆ, ಕೆರೆ, ಕಾಲುವೆ, ಕಟ್ಟಡ, ಮುಂತಾದವುಗಳು ದುರಸ್ತಿಯಲ್ಲದೆ ಅನೇಕ ಹೊಸ ಕಾಮುಗಾರಿಗಳೂ ನಡೆದುವು. ಕೆಲವು ನದಿ, ಹಳ್ಳ, ಕಾಲುವೆಗಳಮೇಲೆ ಅವಶ್ಯಕತೆ ಬಂದಗಿದಷ್ಟಾಗೆಲ್ಲ ಸೇತುವೆಗಳು ತಯಾರಾದುವು. ಹೀಗೆ ನಡೆದ ಕಾಮಗಾರಿಗಳಲ್ಲಿ ನೀರಾವರಿ ಕಾಮಗಾರಿಗಳಿಗೆ 25 ವರ್ಷಗಳಲ್ಲಿ ಒಟ್ಟು 30 ಲಕ್ಷರೂಪಾಯಿ, ರಸ್ತೆ ಸೇತುವೆಗಳಿಗೆ 28½ ಲಕ್ಷರೂಪಾಯಿ, ಕಟ್ಟಡಗಳಿಗೆ 6 ಲಕ್ಷರೂಪಾಯಿ, ಶಿಬ್ಬಂದಿಗೆ 5½ ಲಕ್ಷರೂಪಾಯಿ ಈ ಮೇರೆ ಒಟ್ಟು 70 ಲಕ್ಷರೂಪಾಯಿಗಳು ಎಂದರೆ ಸರಾಸರಿ ವಾರ್ಷಿಕ ಉತ್ಪತ್ತಿಯಾದ ಒಟ್ಟು ಮೊಬಲಗಿನಲ್ಲಿ 3.9 ವರೆಗೂ ಮರಮ್ಮತ್ತು ಖಾತೆಗೆ ವ್ಯಯವಾಯಿತು. ಇದರಿಂದ ಜನರಿಗೆ ನಾನಾಮುಖವಾಗಿ ಅನುಕೂಲ್ಯಗಳು ಹೆಚ್ಚಿದುವು.

8. ಜುಡಿಷಿಯಲ್ ಕಮಿಷನ್ ಕೋರ್ಟು.—ಸ್ 1856-7 ನೆಯಿಸವಿಯವರೆಗೆ ಕಮಿಷನರವರ ಕೈಕೆಳಗಿದ್ದ ಅಪೀಲ್ ಕೋರ್ಟಿನ ಕೆಲಸವು ತುಂಬಾ ಹೆಚ್ಚಿತು. ಅವಕ್ಕೆ ಅಧೀನವಾಗಿದ್ದ ನ್ಯಾಯ ವಿಮರ್ಶೆಯ ಸ್ಥಾನಗಳು ಎಂದರೆ ಅಮಲ್ದಾರರ ಕೋರ್ಟು, ಪ್ರಿನ್ಸಿಪಲ್ ಮುನಿಸಿಫ್ ಕೋರ್ಟು, ಸದರ್ ಮುನಸಿಫ್ ಕೋರ್ಟು, ಡಿವಿಜನ್ ಸೂಪರಿಂಟೆಂಡೆಂಟರವರ ಕೋರ್ಟು ಇವುಗಳಲ್ಲಿ ದಾಖಲಾಗುತಲಿರುವ ಮೊಕದ್ದಮೆಗಳ ಸಂಖ್ಯೆಯು ಬಹಳವಾಗಿ ಹೆಚ್ಚಿತು. ಆದುದರಿಂದ ಕಮಿಷನರವರಿಗೆ ಸಹಾಯಕಲ್ಪನೆಗೋಸ್ಕರ ಪ್ರತ್ಯೇಕವಾಗಿ ಜುಡಿಷಿಯಲ್

S. S. Khandekar.
Bangalore - 2

ಕಮಿಷನರ ಕೋರ್ಟು ಎಂಬ ಹೆಸರಿನಲ್ಲಿ ನ್ಯಾಯವಿಮರ್ಶೆಯಬಗ್ಗೆ ಆಪೀಲು ಮುಖ್ಯಸ್ಥಾನವು ಏರ್ಪಟ್ಟಿತು. ಇದಕ್ಕೆ ಪ್ರಥಮತಃ ಹಂಗಾಮಿಯಾಗಿ ಆಗ ಬೆಂಗಳೂರು ಡಿವಿಜನ್ ಸೂಪರಿಂಟೆಂಡೆಂಟರಾಗಿದ್ದ ಮೇಜರ್ ಫ್ರೈಸರ್ ರವರು 1856ನೆ ಯಿಸವಿಯಲ್ಲಿ ನೇಮಕವಾದರು. ಈ ಸ್ಥಾನಕ್ಕೆ ಖಾಯಮ್ ಆಗಿ ಪೊಕರರಾದ ಬಂಗಾಳಾ ಗವರ್ನ್‌ಮೆಂಟಿನ ಸಿವಿಲ್ ಸರ್ವಿಸ್ಸಿಗೆ ಸೇರಿದ್ದ ಆನರಬಲ್ ಮಿ॥ ಡೆವಿಸೂ ಎಂಬವರು ಅದೇ ಇಸವಿ ಸೆಪ್ಟೆಂಬರು 8 ರಲ್ಲಿ ಬಂದು ಈ ಹುದ್ದೆಯನ್ನು ವಹಿಸಿದರು.

೨. ವಿದ್ಯಾಭ್ಯಾಸದ ಏರ್ಪಾಡು.—ಸರಿಸುಮಾರು ಆ ಕಾಲದಲ್ಲಿಯೇ ಮೈಸೂರು ಸಂಸ್ಥಾನವಲ್ಲಿ ವಿದ್ಯಾಭಿವೃದ್ಧಿಗೋಸ್ಕರ ಆವಶ್ಯಕವಾದ ಏರ್ಪಾಡಿನ ವಿಷಯವಾಗಿ ಕಮಿಷನರ್ ಕಬ್ಬನ್‌ಸಾಹೇಬರವರಿಗೂ ಇಂಡಿಯಾ ಗವರ್ನ್‌ಮೆಂಟಿನವರಿಗೂ ಕಾಗದಪತ್ರಗಳು ನಡೆದು ಈ ಅಂಚಿನಲ್ಲಿ ಕಮಿಷನರವರಿಂದ ಪ್ರೇರಿತರಾಗಿ ಜುಡಿಷಿಯಲ್ ಕಮಿಷನರ್ ಆನರಬಲ್ ಡೆವಿಸ್‌ಸಾಹೇಬರು ವಿದ್ಯಾಭ್ಯಾಸಕ್ರಮವನ್ನು ಕುರಿತು ಸವಿಸ್ತರವಾದ ನಲಕೆಗಳನ್ನು ಬರೆದೊಪ್ಪಿಸಿದರು. ಅದನ್ನು ಅನು ಮೋದಿಸಿ ಕಮಿಷನರವರು ಅದರಮೇಲೆ ತಮ್ಮ ಅಭಿಪ್ರಾಯವನ್ನು ಇಂಡಿಯಾ ಗವರ್ನ್‌ಮೆಂಟಿಗೆ ತಿಳಿಯಪಡಿಸಿದರು. ಇದನ್ನೆಲ್ಲಾ ಪರಿಶೀಲಿಸಿ ಗವರ್ನರ್ ಜನರಲ್‌ರವರು ಮಾಡಿದ ತೀರ್ಮಾನಕ್ಕನುಸಾರವಾಗಿ ಸ॥ 1857 ನೆ ಯಿಸವಿ ನೇ ಮಾಹೆಯಲ್ಲಿ ಪ್ರತ್ಯೇಕವಾಗಿ ಸರ್ಕಾರ ದಿಂದ ವಿದ್ಯಾಭ್ಯಾಸದ ಇಲಾಖೆಯು ಸ್ಥಾಪಿತವಾಯಿತು. ಅದರ ಮೂರ ನೆಯ ವರ್ಷ ಬೆಂಗಳೂರಿನಲ್ಲಿ ಗವರ್ನ್‌ಮೆಂಟಿನಿಂದ ಒಂದು ಪ್ರಮುಖವಾದ ವಿದ್ಯಾಶಾಲೆಯು (High School) ನಿರ್ಮಿತವಾಗಿ ಅದರಲ್ಲಿ ಇಂಗ್ಲಿಷ್ ಭಾಷೆಯೊಂದಿಗೆ ಸಂಸ್ಕೃತ ಮತ್ತು ಕನ್ನಡ ಭಾಷೆಗಳನ್ನು ಕಲಿಸುವು ದಕ್ಕೆ ಏರ್ಪಾಡಾಯಿತು. ಬೆಂಗಳೂರಿನ ಪಲಸೂರು ಬಾಗಿಲಲ್ಲಿ 1851ನೆ ಯಿಸವಿ ಯಿಂದಲೂ ಕ್ರೈಸ್ತ ಮತಸ್ಥರಾದ ವೆಸ್ಲಿಯನ್ ಮಿಷನ್ನಿನವರ ಇಂಗ್ಲಿಷ್ ಪಾಠಶಾಲೆಯನ್ನು ನಡೆಸುತ್ತಿದ್ದ ರೆವರೆಂಡ್ ಗ್ಯಾರೆಟ್ ಎಂಬ ವರು ಇದಕ್ಕೆ ಅಧ್ಯಕ್ಷರಾಗಿ ನಿಯಮಿತರಾದರು. ಆಗ ಆ ಮಿಷನ್ ಸ್ಕೂಲಿಗೆ ಸರ್ಕಾರದಿಂದ ಮಾಹೆಯಾನ ಸಲ್ಲುತ್ತಿದ್ದ 80೦ ರೂಪಾಯಿ

ಕಡಿಮೆಯಾಗಿ ಅವಕ್ಕೆ ಬದಲು ಮುನಾಸಬು ಸಹಾಯ ದ್ರವ್ಯವು (Grant-in-aid) ಮಂಜೂರಾಯಿತು. ಬಳಿಕ ಅದೇ ಮಿಷನ್ನಿನವರು ತುಮಕೂರು, ಶಿವಮೊಗ್ಗ, ಹಾಸನ, ಈ ಸ್ಥಳಗಳಲ್ಲಿ ನಿಧಾನದಿಂದ ಆಪ್ಪಣೆಯಾದ ಕಟ್ಟಡಗಳಲ್ಲಿ ಇಟ್ಟಿದ್ದ ಪಾಠಕಾಲೆಗಳು ಗವರ್ನ್‌ಮೆಂಟಿಗೆ ಸೇರಿದುವು. ತಾಲ್ಲೂಕಿನ ಸ್ಥಳಗಳಲ್ಲಿ ಕನ್ನಡದ ಪಾಠಕಾಲೆಗಳನ್ನು ಸ್ಥಾಪಿಸುವುದಕ್ಕು ಅವುಗಳಲ್ಲಿ ಪಾಠಕ್ರಮವನ್ನು ನಡೆಸುವುದಕ್ಕೂ ಮಂಜೂರಾಯಿತು. ಈ ವಿದ್ಯಾಭ್ಯಾಸದ ಇಲಾಖೆಯು ಮೇಲ್ವಿಚಾರಣೆಗೆ ಒಬ್ಬ ಡೈರೆಕ್ಟರವರೂ, ಇಬ್ಬರು ಇನ್‌ಸ್ಪೆಕ್ಟರುಗಳೂ ಇವತ್ತೈದುಮಂದಿ ಸಬ್‌ಡೆಪ್ಯೂಟಿಯಿನ್ಸ್‌ಪೆಕ್ಟರುಗಳೂ ನೇಮಕವಾದರು.

ಮೇಲಣದೇಶದ ವಿಚಾರಣೆಗೆ ಪೂರ್ವ ಭಾವಿಯಾಗಿ ಇಂಗ್ಲಿಷ್ ಕಮಿಷನ್ ಉಚಿತಕ್ರಮವಾದ ಆದಿ ಭಾಗದಲ್ಲಿಯೇ ಹಾಸಿಂಗರಹಿತ ಆಗ ತಮ್ಮ ವರಮಾನವು ತುಂಬಾ ಕಡಿಮೆಯಾಗಿದ್ದರೂ ಈ ದೇಶದಲ್ಲಿ ತಮ್ಮ ಪ್ರಜೆಗಳ ವಿಳಿಗೆಗೆ ಸ್ವಭಾಷೆಗಳ ಜ್ಞಾನಮಾತ್ರವಲ್ಲದೆ ಇಂಗ್ಲಿಷ್ ಭಾಷೆಯ ಮೂಲಕವಾಗಿ ತಿಳಿಯಬೇಕಾದ ಶಾಸ್ತ್ರ ತತ್ವ ವಿಜ್ಞಾನವೂ ಅವಶ್ಯಕವೆಂದು ದೂರದೃಷ್ಟಿಯಿಂದ ಪರ್ಯಾಲೋಚಿಸಿ ಅಗಿನ ರೆಸಿಡೆಂಟರು ಕರ್ನಲ್ ಫ್ರೇಜರವರು ಕೊಟ್ಟ ಸಲಹೆಯಂತೆ ಮೈಸೂರು ರಾಜಧಾನಿಯಲ್ಲಿ ಒಂದು ವಿದ್ಯಾನಿಲಯವನ್ನು 1833 ನೆಯಿಸವಿಯಲ್ಲಿ ಸ್ಥಾಪಿಸಿ ಅದಕ್ಕೆ ಜೀಕಾರ ಸಿಬ್ಬಂದಿಯನ್ನು ನೇಮಕಮಾಡಿ ವಿದ್ಯಾರ್ಥಿಗಳಿಗೆ ಉಚಿತವಾಗಿ ಪುಸ್ತಕ ಮೊದಲಾದ ವಿದ್ಯಾಭ್ಯಾಸಸಾಧನೆಗಳನ್ನು ನಿಯಮಪಾಲಿಸಿ ಈ ಬಾಬಿನ ಪೂರ್ವ ನ್ನೆಲ್ಲಾ ಖಾನ್ ಜಮೊಖರ್ಚು ಲೆಕ್ಕಕ್ಕೇ ದಾಖಲ್ಮಾಡಿಸಿದರು. ಇದೇ ಈ ಸಂಸ್ಥಾನದಲ್ಲಿ ಅಂಕುರಿಸಿದ ಪ್ರಾಥಮಿಕವಾದ ಇಂಗ್ಲಿಷ್ ವಿದ್ಯಾನಿಲಯವು. ಈ ಧರ್ಮವು ಈ ಪ್ರಭುವರ್ಯರ ಕೀರ್ತಿ ವಿಗ್ರಹಕ್ಕೆ ಕಿರೀಟವಿಟ್ಟಿರುವುದು.

10. ವೈದ್ಯ ಶಾಲೆಗಳು.—ಇದೇ ರೀತಿ ಸುಮಾರು ಅದೇ ಕಾಲದಲ್ಲಿ ಮೂರೆಗಳವರು ಮೈಸೂರು ರಾಜಧಾನಿಯಲ್ಲಿ ಜನೋಪಕಾರಾರ್ಥವಾಗಿ ಇಂಗ್ಲಿಸ್ ಸನ್ನತಿಗನುಸಾರವಾದ ಒಂದು ವೈದ್ಯ ಶಾಲೆಯನ್ನು ಸಹ ನಿರ್ಮಿಸಿದರು. ಖಾವೆಂದರವರೆ ದೀರ್ಘಾರ್ ಸರ್ಜ್‌ರವರು ಇವರ ಮೇಲ್ವಿಚಾರಣೆಯನ್ನು ನಡೆಸಿದರು.

ಸ್ 1833ನೆ ಯಿಸವಿಯಲ್ಲಿ ಬೆಂಗಳೂರು ಕೋಟೆಯಲ್ಲಿ ಕಮಿಷನರವರ ಕಛೇರಿಯಲ್ಲಿಯೂ ಮೋರನೆಯ ಪೇಪ್ ಬೆಂಗಳೂರು ಲಷ್ಕರಿನಲ್ಲಿಯೂ ಸರ್ಕಾರದಿಂದ ಔಷಧಶಾಲೆಗಳು ಸ್ಥಾಪಿತಗಳಾದುವು. ಅನಂತರ ಕ್ರಮೇಕ್ರಮವಾಗಿ ಇತರ ಡಿವೀಜ್ಞ ಸೂಪರ್‌ಟೆಂಡೆಂಟರವರ ಕಸಬುಗಳಲ್ಲಿಯೂ ಇಂಗ್ಲಿಷ್ ಪದ್ಧತಿಯಪ್ರಕಾರ ರೋಗಗಳಿಗೆ ಚಿಕಿತ್ಸೆ ಮಾಡತಕ್ಕ ಜನರು ಎಂದರೆ ಮೆಡಿಕಲ್ ಆಫೀಸರುಗಳು ನೇಮಕ ವಾದರು. ಬೆಂಗಳೂರು ಪೇಟೆಯಲ್ಲಿ 1845ನೆ ಯಿಸವಿಯಲ್ಲಿ ಕುಷ್ಠ ರೋಗವರಿಗೆ ಒಂದು ಚಿಕಿತ್ಸಾಸ್ಥಾನವೂ 1850ನೆ ಯಿಸವಿಯಲ್ಲಿ ಹುಚ್ಚರಿಗೊಂದು ಚಿಕಿತ್ಸಾ ಶಾಲೆಯೂ ಏರ್ಪಟ್ಟವು.

11. ಲಚ್ಚು ಕಾರ್ಖಾನೆ.—ಸ್ 1841-42 ನೆ ಯಿಸವಿಯಲ್ಲಿ ಸರ್ಕಾರಿ ಕೆಲಸಗಳಿಗೆ ಸಾಕಾರ್ಯವುಂಟಾಗುವಂತೆ ಬೆಂಗಳೂರಿನಲ್ಲಿ ಒಂದು ಅಚ್ಚು ಕಾರ್ಖಾನೆಯು ಸ್ಥಾಪಿತವಾಯಿತು.

12. ಮುದ್ರಾಯಿ ಮುಂತಾದ ಇತರ ವಿಷಯಗಳು.—ಸ್ 1852ನೆ ಯಿಸವಿಯಲ್ಲಿ ಡಿವೀಜ್ಞಗಳಲ್ಲಿಯೂ ಕಮಿಷನರವರ ದಫ್ತರ ಕಛೇರಿ ಯಲ್ಲಿಯೂ ಮುದ್ರಾಯಿ ಬಾಬಿನ ವಿಚಾರಣೆಗೋಸ್ಕರ ಅವಶ್ಯಕವಾದ ಲವಾಜಮಿಯು ಮೊಕ್ಕರರಾಯಿತು.

ಜನರಲ್ ಕಬ್ಬನ್ ಸಾಹೇಬರವರ ಕಾಲದಲ್ಲಿ ಕಂದಾಚಾರದ ಜಿಲಾಯೆಯಲ್ಲಿ ವಿಶೇಷ ಬದಲಾವಣೆಗಳೇನೂ ನಡೆಯಲಿಲ್ಲ. ಮಿಲಟೆರಿ ಇಲಾಖೆಯಲ್ಲಿ ಸಿಲೆದಾರರಿಗೆ ಒಳ್ಳೇ ಕುದುರೆಗಳು, ಒಳ್ಳೇ ಹತ್ಯಾರು, ದಿರಸು ಮುಂತಾದ ಸಾಮಗ್ರಿ ಸರಬರಾಯಿಯಾಯಿತು. ಸ್ 1856 ರಲ್ಲಿ ಸವಾರಿಲಾಖೆಯಲ್ಲಿ 7 ರಿಜಿಮೆಂಟುಗಳಿದ್ದುವು. ಸ್ 1859 ರಲ್ಲಿ ಬಾರಿನವರು 2616 ಮಂದಿಯೂ ಸಿಲೆದಾರರು 2762 ಮಂದಿಯೂ ಇದ್ದರು.

ಆಯಾ ಇಲಾಖೆಗಳಲ್ಲಿನ್ನ ಸಾಧ್ಯವಾದಮಟ್ಟಿಗೂ ಪೂರ್ವ ಪದ್ಧತಿಗಳಿಗನುಸರಣೆಯಾಗಿ ಕಾಲಾನುಸಾರ ಖರ್ಚು ನಡೆಯದಲ್ಲದೆ ಸ್ 1852-3ನೆ ಯಿಸವಿಯಿಂದ 1861-2ರ ವರೆಗೆ ಸಂದ 9 ವರ್ಷ ಗಳಲ್ಲಿ ಒಟ್ಟು 15 ಲಕ್ಷರೂಪಾಯಿಗಳ ಹೆಚ್ಚು ಖರ್ಚು ಸಂಭವಿಸಿತು.

ಇದರಲ್ಲಿ 7 ಲಕ್ಷವು ಇಂಜಿನಿಯರ್ ಇಲಾಖೆಗೂ ಉಳಿದುದು ಸಂಸ್ಥಾನದ ಇತರಬಾಬುಗಳಿಗೂ ವ್ಯಯವಾಯಿತು.

ಸಳ್ಳಗಾಲದ ಸ್ಥಿತಿ ತರಂಗತಿಗಳನ್ನು ನೋಡಿ ಅವೆಲ್ಲಕ್ಕೂ ತತ್ಕಾಲಾನುಗುಣವಾಗಿ ಸಹಾಯವು ಅವಶ್ಯಕವೆಂದು ಕಂಡುಬರಲಾಕ್ಷಣ ಕಾಮೇಬರು ಆ ಜನರಿಗೆ ನೇಕಡಾ 50 ರಂತೆ ಮರ್ಯಾದೆಯ ತಲಬನ್ನು ಪಡಿಸಿದರು.

ಬ್ರಿಟಿಷ್ ಕಮಿಷನ್ನಿನ ಆದಿಭಾಗದಲ್ಲಿ ಈ ಸೀಮೆಗೆ ಮದ್ರಾಸು ಗವರ್ನ್ಮೆಂಟಿನಲ್ಲಿ 7.7 ಲಕ್ಷರೂಪಾಯಿಗೆ ಮಿಂಚಾರ ಸಾಲವನ್ನು ಸಂಭವಿಸಿತ್ತು. ಜನರಲ್ ಸರ್ ಮಾರ್ಕ್ ಕಬ್ಬನ್ ಸಾಹೇಬರು 1861ನೆ ಯಿಸವಿಯಲ್ಲಿ ಕಮಿಷನರ ಕೆಲಸದಿಂದ ನಿವೃತ್ತರಾಗುವಾಗ್ಗೆ ಸಂಸ್ಥಾನವಲ್ಲಿ ಬರ್ಕ್ಲ್ಲಾ ಕಳೆದು ಸಾಲವು ಪೂರ್ತಿಯಾಗಿ ತೀರಿ, ಬಂದು ಕೋಟಿರೂಪಾಯಿಗಿಂತಲೂ ಜಾಸ್ತಿ ಮೊಬಲಗು ಸಿಲ್ಕಿ ಜಮೆ ಆಯಿತು. ಇದಲ್ಲದೆ ಇವರ ಅಧಿಕಾರದಿಂದ ದೇಶದಲ್ಲಿ ಸ್ವಾಸ್ಥ್ಯವು ನೆಲೆಗೊಂಡು ಕಸಬುಗಳು ಅಭಿವೃದ್ಧಿಯನ್ನು ಪಡೆದುವು. ಪ್ರಜಾಸಂಖ್ಯೆಯು* ಹಿಂದಿನ ಜನರಿಗೆ ಈತಿಬಾಧೆಗಳು ಕಡಿಮೆಯಾಗಿ ಸಂಪದಭ್ಯುದಯವು ತಲೆಯೋರಿತು.

ಪ್ರಜಾಸಂಖ್ಯೆ.	
ಇಸವಿ.	ಅಂದಾಜು.
1840-41	=30,50,715
1851-52	=34,60,646
1854-55	=35,53,411
1855-56	=36,29,527

ತರುವಾಯ ಮೆ॥ ಎಲ್. ಬೌರಿಂಗ್ (Mr. L. Bowring) ಸಾಹೇಬರು ಆಡಳಿತವನ್ನು ನಡೆಸಿದರು. ಇವರೆಕಾಲದಲ್ಲಿ ಇಂಗ್ಲಿಷ್ ರಾಜ್ಯದ ಪದ್ಧತಿಗಳನ್ನನುಸರಿಸಿ ಅನೇಕ ಪರಿವರ್ತನಗಳು ಆಚರಣೆಗೆ ಬಂದು ಇಲಾಖೆಗಳ ಸಿಬ್ಬಂದಿಗಳು ಬದಾಯಿಸಿದುವು. ಸಂಸ್ಥಾನವಲ್ಲಿ ನಾಲ್ಕು ತುಕಡಿಗಳಿಗೆ ಬದಲಾಗಿ 8 ಡಿವಿಜ್ಞನ್ಗಳು ಏರ್ಪಟ್ಟವು ಮೊದಲು ಡಿವೀಜ್ಞನ್ಗಳಿಗೆ ಮೇಲಿತ

ಡಿವಿಜ್ಞನ್	ಡಿಸ್ಟ್ರಿಕ್ಟು
†I ಅಪ್ಪರ್‌ಗಾಮ	1 ಬೆಂಗಳೂರು
	2 ಹಾಸನ
II ನಂಬಿಯರ್	3 ಚಿಂಗಲ್‌ಪೇಟೆ
	4 ಕೋಲಾರ
	5 ತುಮಕೂರು
III ನಗರ	6 ಶಿವಮೊಗ್ಗ
	7 ಇಂಗಾರು
	8 ಚಿಕ್ಕಮಗಳೂರ

ವಾಯಿತು. ಪ್ರತಿ ಡಿಸ್ಟ್ರಿಕ್ಟ್‌ಗೂ ಒಬ್ಬೊಬ್ಬರು ಡೆಪ್ಯುಟಿ ಸೂಪರಿಂಟೆಂಡೆಂಟರೂ. ಪ್ರತಿ ತಿನೀಜನ್ನಿಗೂ ಒಬ್ಬೊಬ್ಬರು ಸೂಪರಿಂಟೆಂಡೆಂಟರೂ ನೇಮಕರಾದರು. ಇವರುಗಳಿಗೂ, ಮತ್ತು ಡಿಸ್ಟ್ರಿಕ್ಟುಗಳಿಗೆ ಒಳಪಟ್ಟ ತಾಲ್ಲೂಕು ಅಮಲ್ದಾರರಿಗೂ ರೆವಿನ್ಯೂ ಕೆಲಸದೊಂದಿಗೆ ಸಿವಿಲ್ ಮತ್ತು ರೆವಿನ್ಯೂ ಮೊಕದ್ದಮೆಗಳನ್ನು ದರ್ಯಾಫ್ತುಮಾಡಲು ಅಧಿಕಾರವು ಮುನಾಸಬು ವರ್ಜಿವಾರಾಗಿ ಏರ್ಪಟ್ಟಿತು. ಸೀಮೆಯ ಒಟ್ಟು ಹುಟ್ಟುವಳಿಯು 1868-69 ರವರೆಗೆ 1,08,78,272 ರೂಪಾಯಿಗಳವರೆಗೆ ಬಡಾಯಿಸಿ ಆ ಸಾಲಿನಲ್ಲಿ 1,16,69,132 ರೂಪಾಯಿ ಖರ್ಚಾಯಿತು.

13. ಮುನಿಸಿಪಲ್ ಬಾಬು.—ಸ್ರ 1861ನೆ ಯಿಸವಿಯಲ್ಲಿ ಮುನಿಸಿಪಾಲಿಟಿ ಎಂದರೆ ಆಯಾಸ್ಥಳಾಧಿಕಾರ ನಿರ್ವಾಹಕ ಸಂಘವೆನ್ನು ಏರ್ಪಡಿಸುವುದಕ್ಕೋಸ್ಕರವಾಗಿ ಇಂಡಿಯಾ ಗವರ್ನ್‌ಮೆಂಟಿನಿಂದ ತಲಪಿದ ಹುಕುಮ್ಮನ್ನು ನುಸರಿಸಿ ಆಗಿನ ಕಮಿಷನರ್ ಮೆ॥ ಬೌರಿಂಗ್ ಸಾಹೇಬರ ಮೇರೆ ಬೆಂಗಳೂರು ಷಹರು ಮತ್ತು ಲಷ್ಕರುಗಳಲ್ಲಿಯೂ ಮೈಸೂರು ರಾಜಧಾನಿಯಲ್ಲಿಯೂ ಮುನಿಸಿಪಾಲಿಟಿಗಳನ್ನೇರ್ಪಡಿಸಿದರು. ಬೆಂಗಳೂರು ಷಹರು ಮುನಿಸಿಪಲ್ ಬೋರ್ಡಿಗೆ ಅಲ್ಲಿನ ಅಸಿಸ್ಟೆಂಟ್ ಸೂಪರಿಂಟೆಂಡೆಂಟರು, ಲಷ್ಕರಿನ ಮುನಸಿಪಲ್‌ಕಮಿಟಿಗೆ ಆಗಿನ ಪೊಲೀಸ್ ಸೂಪರಿಂಟೆಂಡೆಂಟರು, ಮೈಸೂರು ಬೋರ್ಡಿಗೆ ಅಷ್ಟಗ್ರಾಮದ ತಿನೀಜಿನ ಸೂಪರಿಂಟೆಂಡೆಂಟರು ಪ್ರಸಿಡೆಂಟರುಗಳಾಗಿಯೂ, ಬೆಂಗಳೂರು ಷಹರಿನಲ್ಲಿ ಹುಜೂರು ಹೆಷ್ ಸಿರಸ್ತೆದಾರರು ವೈಸ್‌ಪ್ರಸಿಡೆಂಟರಾಗಿಯೂ ನೇಮಕವಾಯಿತು. ಈ ಸ್ಥಳಗಳಲ್ಲಿನ ತಂಬಾಕಿನ ಪೇರಮೊನವು ಆಯಾ ಮುನಿಸಿಪಾಲಿಟಿಗೆ ದಾಖಲಾಯಿತು. ಇದಲ್ಲದೆ ಆಯಾಸ್ಥಳದಲ್ಲಿ ಕರಗು ಪಡಿಯಾಗುವ ಕೆಲವು ಮುಖ್ಯವಾದ ಜಿನಸಿಗಳ ಮೇಲೆ ಮೊಕರರವಾದ ಎಕ್ಟ್ರಾಯಿ ಎಂಬ ತೆರಿಗೆಯೂ ಸರ್ಕಾರದ ಮೊದಲಿನ ತೆರಿಗೆಯೂ ಈ ಮುನಿಸಿಪಾಲಿಟಿಗಳಿಗೆ ನೇರಿದುವು. ಇವು ಮುಂತಾದ ಬಾಬುಗಳ ಹುಟ್ಟುವಳಿಯಿಂದ ಆಯಾ ಮುನಸಿಪಾಲಿಟಿಯಲ್ಲಿ ರಸ್ತೆಕಾಮುಗಾರಿ, ಗ್ರಾಮೆಪಾಕೀಟ್ ಮೊದಲಾದ ಪ್ರಜೆಗಳ ಅನುಕೂಲ್ಯಕ್ಕೂ ಆರೋಗ್ಯಕ್ಕೂ ಅವಶ್ಯಕವಾದ ಕೆಲಸಗಳು ನಡೆಯುವಂತೆ ನೇಮಕವಾಯಿತು.

ಇದೇ ರೀತಿ ನಗರದ ಡಿವೀಜನ್ನಿನ ಅಧಿಕಾರಸ್ಥಾನವಾದ ಶಿವಮೊಗ್ಗೆಯಲ್ಲಿಯೂ ಮುನಿಸಿಪಲ್ ವಿಸರ್ಜಿತನ್ನು ಆಚರಣೆಗೆ ತರುವಂತೆ ಕಮಿಷನರವರು ಹುಕುಂ ಸಾದರ ಮಾಡಿದರು.

14. ಸರ್ವೇ ಮತ್ತು ಇನಾಂ ಇಲಾಖೆಗಳು.—ಸ್ವ 1863 ನೆಯಿಸವಿಯಲ್ಲಿ ಜಮೀನಿನ ನಿಷ್ಕೃಷ್ಟವಾದ ವಿಸ್ತಾರವನ್ನು ನಿರ್ಣಯಿಸಿ ನಾನಾ ವಿಧವಾಗಿ ಪ್ರಚಾರದಲ್ಲಿದ್ದ ಅಯಸ್ಥಳಗಳ ಲೆಕ್ಕಗಳು ದರಗಳನ್ನು ಕ್ರಮಪಡಿಸುವುದಕ್ಕೋಸ್ಕರ ಬೊಂಬಾಯಿ ಸೀಮೆಯಲ್ಲಿ ಭೂಮಿಯನ್ನು ಅಳತೆಮಾಡುವುದಕ್ಕೆ ವಿಸ್ತೃತವಾದ ಪದ್ಧತಿಯು ಅನುಕೂಲವೆಂದು ಭಾವಿಸಿ ಆ ಸೀಮೆಯ ಸರ್ವೇಸೆಟಲ್‌ಮೆಂಟ್ ಕ್ರಮವನ್ನು ಈ ದೇಶದಲ್ಲಿ ಅನುಸರಿಸಬೇಕೆಂದು ಕಮಿಷನರವರು ತೀರ್ಮಾನಿಸಿದರು. ಈ ಪದ್ಧತಿಯುಪ್ರಕಾರ ಅಳತೆಯಾದ ಜಮೀನಿನ ಸ್ವಭಾವವೆರಿತು ಅದಕ್ಕೆ ಮುನಾಸಬು ವಾಜಿಬಲಾದ ಕಂದಾಯದ ರಾಶಿ ಹಕ್ಕು ಪಟ್ಟೆದಾರನಿಗೆ ಖಾಯಮ್ಮಾಗಿ ನಿಶ್ಚಿತವಾಗಿ ಮೂವತ್ತು ವರ್ಷಗಳವರೆಗೆ ದರ ಬದಲಾಯಿಸದೆ ಇರುವಂತೆ ಹುಕುಂ ಸಾದರಾಯಿತು. ಬಳಿಕ 1866ನೆಯಿಸವಿಯಲ್ಲಿ ಮದ್ರಾಸು ಸೀಮೆಯಲ್ಲಿ ಆಚರಿಸುತ್ತಿದ್ದ ಇನಾಂ ವಿಚಾರಣೆಯು ಕ್ರಮವನ್ನನುಸರಿಸುವಂತೆ ತೀರ್ಮಾನವಾಗಿ ಇವಕ್ಕೆ ಒಬ್ಬ ಇನಾಂ ಕಮಿಷನರವರೂ ಒಬ್ಬ ಸ್ಪೆಷಲ್ ಇನಾಂ ಡಿಸಿಸ್ಟೆಂಟರೂ, ಮತ್ತು ಮೂರುಮಂದಿ ಕುಮ್ಮಕ್ಕಿನ ಅಸಿಸ್ಟೆಂಟರೂ ನೇಮಕವಾಗಿ ಇವನ್ನು ಆಚರಣೆಗೆ ತರುವುದಕ್ಕೋಸ್ಕರ ಅನುಕೂಲವಾದ ನಿಯಮಗಳು ಮಂಜೂರಾದುವು. ಈ ಉಭಯ ಇಲಾಖೆಗಳ ಕೆಲಸಗಳು ಕ್ರಮವಾಗಿ ಸಡಿಲುತ ಬಂದವು.

15. ಇತರ ಮುಖ್ಯಾಂಶಗಳು.—ಅರಮನೆಯಲ್ಲಿ ನಡೆಯುವ ಇಂಗ್ಲಿಷ್ ಇಲಾಖೆಯು ಜವಾಬ್ದಾರಿಯ ಕೆಲಸಕ್ಕೆ ಸ್ವ 1854-ನೆಯಿಸವಿಯ ಸಮಯದಲ್ಲಿ ರೆಸಿಡೆಂಟರಾಗಿದ್ದ ಕರ್ನಲ್ ಫ್ರೇಜರ್‌ನವರೆ ರವರ ಶಿಫಾರಸ್ಸಿನಮೇಲೆ ಖಾನೆಂದರವರು ಕೃಷ್ಣಾಜಿಪಂತ ಮೆಸಾಯಿಯು ಎಂಬವರನ್ನು ನೇಮಕಮಾಡಿದರು. ಅವರು ದೊರೆಗಳವರ ಇತುಬಾರಿಗೆ ಖಾತ್ರರಾಗಿ ನಾಲ್ಕುವರ್ಷವಿದ್ದು ಹಜೂರು ಅಪ್ಪಣೆಯನ್ನು ಪಡೆದು

ಜಿಂಗಳೂರಿಗೆ ಹೋದರು. ಅಲ್ಲಿ ಅವರಿಗೆ ಸ್ 1840ನೆ ಯಿಸವಿಯಲ್ಲಿ ಜಿದೀದುಕೋಟ್ಟು ಮುನಿಸಿಫೆ ಕೆಲಸ ಬೊರೆಯಿತು.

ಬ್ರಿಟಿಷ್‌ಕವಿಾರ್ಷ ಮೊಕರರಾದಮೇಲೆ ಕವಿಾಷನ್ನರವೆರ ಅಧೀನದಲ್ಲಿ ಅವರಬಳಿ ಜುಾಬ್ಜಾರಿಯ ಕೆಲಸಗಳನ್ನು ನಿರ್ವಹಿಸಲು ಮೇಲೆ ನೀಳಿದಂತೆ ನೇಮಕವಾದ ದಿವಾ ಬಾಬೂರಾಯರು 1834ನೆ ಯಿಸವಿಯಲ್ಲಿ ಸ್ವರ್ಗಸ್ಥರಾಗಲು ಆಗ ಅದುವರೆಗೂ ಪ್ರತ್ಯೇಕವಾಗಿದ್ದ ದಿವಾನಾಫೀಸು ಮೋಶಿಮೊಫುಗಿ ಅದು ಕವಿಾಷನರವೆರ ಕಛೇರಿಗೆ ಸೇರಿ ಆ ಕಛೇರಿಯ ಅಧಿಕಾರಕ್ಕೆ ತಿಂಗಳೊಂದಕ್ಕೆ 800 ರೂಪಾಯಿ ತಲಿಬಿನ ಮೇಲೆ ಹುಜೂರು ಹೆಡಶಿರಸ್ತೆ ಎಂಬ ಹುದ್ದೆಯು ಮೊಕರರಾಯಿತು. ಅದಕ್ಕೆ ನೇಮಕವಾದ ಕೊಲ್ಲಂ ವೆಂಕಟರಾಯರೆಂಬವರಿಗೆ ಕೆಲವು ಕಾಲದಮೇಲೆ ನೇಟೀವ್ ಅಸಿಸ್ಟೆಂಟ್ ಎಂಬ ಅಭಿಧಾನವು ಅರ್ಪಣೆಯಾಯಿತು. ಅವರು 1838ನೆ ಯಿಸವಿಯಲ್ಲಿ ಅನಂತಕಯನದ ಸಂಸ್ಥಾನಕ್ಕೆ (Travancore) ದಿವಾನರಾಗಿ ಹೊರಟುಹೋಗಲು ಆಗ ಇಲ್ಲಿ ಅವರಿದ್ದ ಅಧಿಕಾರಸ್ಥಾನಕ್ಕೆ ಹುಜೂರು ಹೆಡಶಿರಸ್ತೆ ಎಂಬ ಹೆಸರು ಖಾಯಂಆಗಿ ಅದು ಸೂರಪ್ಪಯ್ಯ ಎಂಬವರಿಗೆ ಲಭಿಸಿತು. ಅವರು 1840 ರಲ್ಲಿ ಸ್ವರ್ಗಸ್ಥರಾಗಲು ಪುನಃ ಕೊಲ್ಲಂವೆಂಕಟರಾಯರೇ ಆ ಹುದ್ದೆಗೆ ಬಂದರು. ಅವರಿಗೆ ರಾಯಿರಾಯಣೀರಾಯಿ ಎಂಬ ಹೆಸರು ಸರಫಾಜಾಯಿತು. ಅವರ ತರುವಾಯ ಈ ಹುಜೂರು ಹೆಡಶಿರಸ್ತೆ ಕೆಲಸವನ್ನು ಸ್ 1868ನೆ ಯಿಸವಿಯವರೆಗೂ ನಿರ್ವಹಿಸಿದವರ ಹೆಸರುಗಳನ್ನೂ ಕಾಲವನ್ನೂ ಇದರಡಿ ತಿಳಿಸಿದೆ.

ಹೆಸರು.	ಕಾಲ.
1 ಕೋಲಾಕೃಷ್ಣಮುನಾಯಡು.	1844ರಿಂದ 1858ರ ವರೆಗೆ.
2 ಇವರ ತಮ್ಮನಾದ ವಿಜಯರಂಗನಾಯಡು	1858ರಿಂದ 1866ರ ವರೆಗೆ.
3 ಅರುಣಾಚಲಂ ಮೊದಲಿಯಾರ್ರು	1866ರಿಂದ 1868ರ ವರೆಗೆ.

ಹಿಂದೆ ಬೊರೆಗಳವರಿಗೆ ರಾಜ್ಯಾಭಿಷೇಕವಾದ ಸಿಲ್ವರ್ ಜುಬ್ಲಿ ಸಂವತ್ಸರವು ಮತ್ತೆ ಪ್ರಾಪ್ತವಾಗಲು 1859ನೆಲ್ಲಿ ಪ್ರಭುಗಳವರು ವೆಜ್ರವೈದ್ಯಾಭಿಷೇಕಕ್ಕೆ ಅರ್ಪಣೆಯಮಾಡಿಸಿದರು. ಆ ಪಷ್ಟಿಪೂರ್ತಿ ಕಾಂತಿಮಹೋ

ತ್ತನೆವು ರಾಜಧಾನಿಯಾದ ಮೈಸೂರಿನಲ್ಲಿ ಕಾಸ್ಟ್ರೀಯುಮಾಗಿ ಮಹಾ ಸಂಭ್ರಮದಿಂದ ಬೆಳಯಿತು.

ಇಂಗ್ಲೆಂಡ್ ದ್ವೀಪದಲ್ಲಿ ಸ್ಟೇಟ್ ಸೆಕ್ರಟರಿಯವರು ಮೈಸೂರು ಸೀಮೆಯು ತಪಬಂದಿಗೆ ಬರುವವರೆಗೆ-ಕಮಿಷರ್ಸ್ ನಿರ್ಣಾಯ ಜಾರಿಯಲ್ಲಿರಬೇಕೆಂದು 1835ನೆ ಯಿಸವಿಯಲ್ಲಿ ತೀರ್ಮಾನಮಾಡಿದಾಗ ಇದಕ್ಕೆ ಕಾಲದ ಅವಧಿಯನ್ನೇನೂ ಅವರು ನಿಷ್ಕರ್ಷ ಮಾಡಲಿಲ್ಲ ಈ ದೇಶವು ಸ್ವಾಸ್ಥ್ಯವನ್ನು ಪಡೆದು ಅಭಿವೃದ್ಧಿಯಾಗುತ ಬಂದಮೇಲೆ ದೊರೆಗಳವರು ತಮ್ಮ ರಾಜ್ಯದ ಆಡಳಿತವನ್ನು ಮೆತ್ತೆ ತಮಗೆ ಒಪ್ಪಿಸುವ ವಿಷಯವಾಗಿ ಗವರ್ನರ್ ಜನರಲ್‌ರವರಿಗೆ ಖರೀತಾ ಅರ್ಜಿಕೊಡಬಾರಿಸಿದರು. ಇದರ ಮೇಲೆ ವಿಚಾರ ನಡೆಯಿತು. ಈ ಮಧ್ಯಕಾಲದಲ್ಲಿ ಗವರ್ನರ್ ಜನರಲ್ ಮಾರ್ಕ್ವಿಸ್ ಆಫ್ ಡಾಲ್‌ಹೌಸಿ ಸಾಹೇಬರವರು (Marquis of Dalhousie) 1855ನೆ ಯಿಸವಿಯಲ್ಲಿ ನೀಲಗಿರಿಯಿಂದ ಮೈಸೂರಿಗೆ ದಯಮಾಡಿಸಿ ಪ್ರಭುಗಳಿಂದ ಸತ್ಕೃತರಾಗಿ ಕೆಲವು ತ್ಸರಾಜಧಾನಿಗೆ ಚಿತ್ತೈಸಿದರು.

ತರುವಾಯ ಇಂಡಿಯಾದೇಶದಲ್ಲಿ 1857ನೆ ಯಿಸವಿಯಲ್ಲಿ ಭಿತ್ತೂರು ನಾನಾಸಾಹೇಬರ ದಂಗೆಯು ಸಂಪ್ರಾಪ್ತವಾಯಿತು. ಆತನ ಕಡೆಯವರು ಎಲ್ಲೆಲ್ಲಿಯೂ ಜನರನ್ನು ದುರ್ಮಾರ್ಗಕ್ಕೆ ಪ್ರೇರಿಸುತ ಬಂದರು. ಆಗ ಇಂಗ್ಲಿಷ್ ಸರ್ಕಾರದವರು ಯುದ್ಧೋನ್ಮುಖರಾದರು. ಈ ಸಮಯದಲ್ಲಿ ಮೈಸೂರು ಸೀಮೆಯಲ್ಲಿ ಯಾವವಿಧವಾದ ಅಸಮಾಧಾನಕ್ಕೂ ದೊರೆಗಳವರು ಅವಕಾಶ ಕೊಡಲಿಲ್ಲ. ಈ ವೇಳೆಯ ಫೌಜು ಬ್ರಿಟಿಷಿನವರ ಸಹಾಯಾರ್ಥವಾಗಿ ಹೋಗಿತ್ತು. ಕಮಿಷನರ್ ಸರ್ ಮಾರ್ಕ್ ಕಬ್ಬರವರು 1860ನೆ ಯಿಸವಿ ಜೂನ್ 2ನೆಯ ತಾರೀಖಿನಲ್ಲಿ ಗವರ್ನರ್ ಜನರಲ್‌ರವರಿಗೆ ಈ ವಿಷಯವಾಗಿ ಬರೆದ ಲೇಖನದಲ್ಲಿ ಇಲ್ಲಿ ಜನರಿಗೆ ಯಾವವಿಧವಾದ ಅತೃಪ್ತಿಗೂ ಅವಕಾಶಕೊಡದೆ ಇಂಗ್ಲಿಷ್ ಪ್ರಭುತ್ವದಲ್ಲಿ ತುಂಬಾ ಭರವಸೆಯಿಟ್ಟು ಅದರ ಶಾಶ್ವತೈಶ್ವರ್ಯ ಪ್ರಾಪ್ತಿವೆನ್ನು ಉದ್ಘೋಷಿಸುತ ಇರುವೆಂದರವರು ಆ ದಂಗೆಯು ನಡೆದ ವಿಷಮಕಾಲದಲ್ಲಿ ಮನಃಶುದ್ಧಿಯಿಂದ ಮಾಡಿದ ಉಪಕಾರಕ್ಕಿಂತ ಅಧಿಕವಾದ ಉಪ

ಕಾರವು ಬೇರೊಂದಿಲ್ಲವೆಂದೂ, ಕೆಲವುಮಂದಿ ಯೂರೋಪಿಯರ್ಜನರು ಮೈಸೂರು ತಲಪಿದಾಗ ಅವನನ್ನು ಆದರದಿಂದ ಸತ್ಕರಿಸಿ ಅವರ ನಿವಾಸಾರ್ಥವಾಗಿ ರಾಜಭವನಗಳಲ್ಲಿಂದನ್ನು ಬಿಟ್ಟುಕೊಟ್ಟು ಅಲ್ಲಿ ಅವರ ಧನಾದಿಗಳನ್ನು ಭದ್ರಪಡಿಸಿದುದಲ್ಲದೆ ತ್ವರಿತವಾಗಿ ನೀಲಗಿರಿಯಿಂದ ಬಳ್ಳಾರಿಗೆ ಪ್ರಯಾಣಮಾಡಿ ಬಂದ ಇಂಗ್ಲಿಷ್‌ಸೈನಿಗೆ ತಮ್ಮ ಖಾಸಿ ಸಿಬ್ಬಂದಿಯ ಬತ್ತಾಸೆಯನ್ನಿತ್ತು ಶತ್ರುತಂತ್ರಗಳಿಗೆ ಸ್ವಲ್ಪವೂ ಅಸ್ಪದವಾಗದಂತೆ ಬ್ರಿಟಿಷ್ ಗವರ್ನಮೆಂಟಿಗೆ ತಮ್ಮಿಂದ ಸಾಧ್ಯವಾದ ಸಾಹಾಯ್ಯವೆನ್ನೆಲ್ಲಾ ಸಂತುಷ್ಟಚಿತ್ತರಾಗಿ ಮಾಡಿದರೆಂದೂ, ಇದರಿಂದ ಜನರಿಗೆ ಧೈರ್ಯೋತ್ಸಾಹಗಳು ಲಭಿಸಿದುವೆಂದೂ ತಿಳಿಸಿದರು. ಇದರಮೇಲೆ ಗವರ್ನರ್ ಜನರಲ್ ಲಾರ್ಡ್ ಕ್ಯಾನಿಂಗ್ ಸಾಹೇಬರವರು ಮೈಸೂರು ದೇಶವಲ್ಲಿ ಪ್ರಜೆಗಳ ರಾಜಭಕ್ತಿಗೂ ಸ್ವಾಸ್ಥ್ಯಕ್ಕೂ ಪ್ರೋತ್ಸಾಹವನ್ನಿತ್ತು ದೂರೆಗಳವರು ಬ್ರಿಟಿಷ್ ಗವರ್ನಮೆಂಟಿನವರಲ್ಲಿ ತಮಗಿರುವ ವಿಶ್ವಾಸಪೂರ್ವಕ ಸ್ನೇಹಾನುಬಂಧ ವೈಭವವನ್ನು ಪ್ರದರ್ಶಿಸಿ ಆ ಕಷ್ಟಕಾಲದಲ್ಲಿ ಮಾಡಿದ ಉಪಕಾರಕ್ಕೊಸ್ಕರವಾಗಿ ಅವರನ್ನು ಪ್ರಶಂಸಿಸಿ ಇದರಿಂದುಂಟಾದ ತಮ್ಮ ಸಂತೋಷ ಸಂತೃಪ್ತಿಗಳನ್ನು ಪ್ರಭುಗಳವರಿಗೆ ತಿಳಿಸಿದುದಲ್ಲದೆ ಈ ವಿಷ್ಯಮಾನವನ್ನೆಲ್ಲಾ ಇಂಗ್ಲಾಂಡಿನೀಮೆಯ ಮಹಾರಾಜಿ ಯವರ ಇಂಡಿಯಾ ಸೆಕ್ರಟರಿ ಆಫ್ ಸ್ಟೇಟ್ ರವರಿಗೂ ಶ್ರುತಪಡಿಸುವದಾಗಿ ಖಾವಂದರವರಿಗೆ 1860ನೆ ಯಿಸವಿ ಜೂನ್ ಮಾಹೆಯಲ್ಲಿ ಪರೀತಾ ಬರೆದರು.

ಮೇಲೆ ಸೂಚಿಸಿದ ದಂಗೆಯೆಲ್ಲವೂ ಅಡಗಿದಕೂಡಲೆ ಬ್ರಿಟಿಷ್ ರಾಜ್ಯದ ಪ್ರಭುತ್ವವೊಡುತ್ತಿದ್ದ ವಿಕ್ಟೋರಿಯಾ ಮಹಾರಾಜಿ ಯವರು ಇಂಡಿಯಾಮಂಡಲದ ದೌಲತ್ತನ್ನು ಸಾಕ್ಷಾತ್ತಾಗಿ ವಹಿಸಿ 1858ನೆ ಯಿಸವಿ ನವೆಂಬರು ತಾರೀಖು 1ರಲ್ಲಿ ಒಂದು ಇಸ್ತಿಹಾರ್ನಾಮೆಯನ್ನು ಸಾದರಾಡಿದರು. ಅದು ಆಗ ಕಮಿಷನರಾಗಿದ್ದ ಸರ್ ಮಾರ್ಕ್ ಕಬ್ಬರವರಮೂಲಕ ದೊರೆಗಳವರಿಗೆ ತಲಪಿತು. ಅವನ್ನು ಪ್ರಭುಗಳವರು ಪರಾಮರ್ಶಿಸಿ ಆನಂದಭರಿತರಾಗಿ ಖರವಸೆಯಲ್ಲಿ ದೊಡ್ಡದರ್ಬಾರು ನಡೆಸಿ ಆ ಸಮಯದಲ್ಲಿ ನೆರೆದ ಸಮಸ್ತಜಾತಿ ಮತಸ್ಥರಿಗೂ ಆ ಯಿಸ್ತಿಹಾರ್ನಾಮೆಯನ್ನು ಯಥೋಚಿತ ಮರ್ಯಾದೆಗಳಿಂದ ಓದಿಸಿ ಪ್ರಸಿದ್ಧಪಡಿಸಿ,

Spotted Eagle

ಈ ವೃತ್ತಾಂತವನ್ನು ಸವಿಸ್ತಾರವಾಗಿ ಅದೇ ಇಸವಿ ಡಿಸೆಂಬರು 31ನೆಯ ತಾರೀಖಿನಲ್ಲಿ ತಮ್ಮ ಪರಿತಾಪಮೂಲಕ ಆ ಮಹಾರಾಣಿಯವರಿಗೆ ಕೃತ ಪಡಿಸಿದುದಲ್ಲದೆ ಆ ಲೇಖನದಲ್ಲಿ ತಾವು ಬಾಲ್ಯವಲ್ಲಿ ಐದುವರ್ಷದ ವಯಸ್ಸಿನವರಾಗಿದ್ದಾಗ ತಮ್ಮ ರಾಜ್ಯವನ್ನು ತಮಗೆ ದಯಪಾಲಿಸಿ ತಮ್ಮನ್ನು ತಮ್ಮ ಪೂರ್ವಿಕರ ಸಿಂಹಾಸನದಮೇಲೆ ಪುನಃ ಸ್ಥಾಪಿಸಿದ ಬ್ರಿಟಿಷಿಗವರ್ನ್ಮೆಂಟಿನವರ ಉಪಕಾರವನ್ನು ಸ್ಮರಣೆಯಿಂದ ತಾವು ಪ್ರವರ್ತಿಸುವುದನ್ನು ಸೂಚಿಸಿ, ಆ ಯಿಸ್ತಾರಿನಿಂದ ವ್ಯಕ್ತಪಡುವ ಆ ಮಹಾರಾಣಿಯವರ ಪ್ರಜಾನುರಾಗ, ಗಾಢಾಳಮನೋವೃತ್ತಿ, ಉಪಕಾರಕಾರುಣ್ಯ, ಪರೋಪಕಾರಬುದ್ಧಿ ಇವು ಮೊದಲಾದ ಸದ್ಗುಣಗಳನ್ನು ಕೊಂಡಾಡಿ ಅವರಿಗೆ ವಂಶಪರಂಪರ್ಯವಾಗಿ ಶ್ರೇಯೋಭಿವೃದ್ಧಿಯುಂಟಾಗಲೆಂದು ತಾವು ಪರಮೇಶ್ವರನನ್ನು ಪ್ರಾರ್ಥಿಸುವುದನ್ನೂ ತಿಳಿಯಪಡಿಸಿದರು.

ಸಕ್ 1861ನೆ ಯಿಸವಿ ಮಾರ್ಚಿ ಮಾಹೆಯಲ್ಲಿ ಶ್ರೀಮನ್ಮಹಾರಾಜರವರು ಗ್ರೇಟ್‌ಬ್ರಿಟನ್, ಐರ್ಲಂಡ್ ಮತ್ತು ಇಂಡಿಯಾ ಈ ರಾಜ್ಯಗಳಿಗೆ ಅಧೀಶ್ವರಿಯವರಾದ ವಿಕ್ಟೋರಿಯಾ ಮಹಾರಾಜ್ಞಿಯವರಿಗೆ ಮೈಸೂರು ದೇವತೆಯ ಆವರಣದಲ್ಲಿ ಪೋಷಿತವಾದ ಕೆಲವು ಜೀವಜಂತುಗಳನ್ನೂ, ಹಿಂದೂ ರಾಜರುಗಳು ಉಪಯೋಗಿಸುವ ನಮೂನೆಯ ಜವಾಹಿರಿ, ಬಿರುದು ಮುಂತಾದ ಕೆಲವು ಚಿತ್ರತರಮಸ್ತುಗಳನ್ನು, ಗವರ್ನರ್ ಜನರಲ್‌ರವರ ಅನುಮತಿಪಡೆದು ತನ್ಮ್ಹಿ ದರ್ಬಾರ್ ಸರ್ಜನ್ ಡಾಕ್ಟರ್ ಕ್ಯಾಂಬಲ್‌ರವರ ಮೂಲಕ ವಿಲಾಯತಿಗೆ ಕಳುಹಿಸಿಕೊಟ್ಟು ಒಪ್ಪಿಸಿದರು. ಇವುಗಳನ್ನು ಮಹಾರಾಣಿಯವರು ಪರಿಗ್ರಹಿಸಿ, ಮಿತ್ರವಾತ್ಸಲ್ಯದಿಂದ ಆಗಿನ ಇಂಡಿಯಾ ಸ್ಟೇಟ್ ಸೆಕ್ರಟೆರಿಯವರಮೂಲಕ ಪ್ರತ್ಯುತ್ತರವನ್ನು ಅಪ್ಪಣೆಕೊಡಿಸಿದರು. ಅದರಲ್ಲಿ ಆ ಸೆಕ್ರಟೆರಿಯವರು ದೊರೆಗಳವರು ತಮ್ಮ ಸೌಹಾರ್ದಾತಿಶಯವನ್ನು ತಿಳಿಸಿರುವುದು ಆ ಮಹಾರಾಣಿಯವರಿಗೆ ಪರಮಾನಂದವನ್ನುಂಟುಮಾಡಿತೆಂದು ಸೂಚಿಸಿ, ಅರುವತ್ತುವರ್ಷಕ್ಕೆ ಮೇಲ್ಪಟ್ಟ ಕಾಲದಿಂದಲೂ ವಿಕ್ರಮರೀತಿಯಲ್ಲಾಗಿ ಬ್ರಿಟಿಷ್ ರಾಜ್ಯಕ್ಕೆ ಖಾವಂದವರು ಮಾನ್ಯಮಿತ್ರರಾಗಿರುವುದಲ್ಲದೆ, ಆಪತ್ಸಮಯದಲ್ಲಿಂದಲೆ ದೊರೆಗಳವರು ಬ್ರಿಟಿಷಿನವರೊಂದಿಗೆ ಜಳಯಿಸಿರುವ ಪುರಾಕೃತವ್ಯುತ್ಪತ್ತಿಗೆ ಅನುಗುಣ

ವಾವ ವ್ಯಥಚಿತ್ತಪರಿಣಾಹದಿಂದ ಸಹಕಾರಿಗಳಾಗಿ ದ್ರೋಹಿಗಳಿಗೆ ಲೇಶ ಮಾತ್ರವೂ ಅವಕಾಶಕೊಡತಕ್ಕವರಲ್ಲವೆಂಬ ಅವರ ಭರವಸೆಯು ಭೂಮಂ ಡಲವನ್ನು ವ್ಯಾಪ್ತಿಸಿರುತ್ತ, ಬ್ರಿಟಿಷ್ಸರವರ ವಿಜಯಾರ್ಥವಾಗಿ ಪ್ರಭುಗಳ ವರು ಮಾಡಿದ ಸಹಾಯವನ್ನು ಕೊಂಡಾಡಿದುದಲ್ಲದೆ, ಆ ಮಹಾರಾಣಿ ಯವರ ಆಜ್ಞಾನುಸಾರ ಖಾವಂದರು ಸ್ವೀಕರಿಸಬೇಕೆಂದು ಬ್ರಿಟಿಷ್ ದೇಶ ದಲ್ಲಿ ತಯಾರಾದ ಕೆಲವ್ಯನಮೂನೆಯ ಪದಾರ್ಥಗಳನ್ನು ಅದೇ ಡಾಕ್ಟರವ ರೊಡನೆ ಕಳುಹಿಸಿಕೊಟ್ಟರು. ಹೀಗೆ ವಿಲಾಯತಿಯಿಂದ ಬಂದ ತಸರೀಫ್ ಪದಾರ್ಥಗಳನ್ನು ಸರ್1862ನೆ ಯಿಸವಿ ಎಪ್ರಿಲ್ 11ನೆಯ ತಾರೀಖು ಬುಕ್ರವಾರದಲ್ಲಿ ಪರವಾನಾಸಮೇತ ಅನೆಯಮೇಲೆ ಅಂಬಾರಿಯಲ್ಲಿಟ್ಟು ಸಕಲ ಮರ್ಯಾದೆಗಳೊಡನೆ ಹಿರೆಮೆರವಣಿಗೆಮಾಡಿಸಿಕೊಂಡು ಆಗಿನ ಅಕ್ಟಿಂಗ್ ಕಮಿಷನರ್ ಮೆ॥ ಸಾಂಡರ್ಸ್ ಸಾಹೇಬರು ಮೊದಲಾದ ಇಂಗ್ಲಿಷ್ ಸರದಾರರೂ, ಮುಖ್ಯಾಧಿಕಾರಿಗಳು ಮುಂತಾದ ಇತರ ಜನರೂ ಅರಮನೆ ನಗೆತಂದಾಗ ದೊರೆಗಳವರು ಅನೆಯ ಬಾಗಿಲಿಗೆ ದಯಮಾಡಿಸಿ ಆ ಪದಾ ರ್ಥಗಳನ್ನೆಲ್ಲ ಬರಮಾಡಿಕೊಂಡು ಅರಮನೆಯ ಬಾಲಾಖಾನೆಯಲ್ಲಿ ಬೆಳ್ಳಿಯ ಮಂಚವಮೇಲಿರಿಸಿ ಮರ್ಯಾದೆಯಿಂದುಪಚರಿಸಿ ಪರಿಗ್ರಹಿಸಿದರು.

16. ದೊರೆಗಳವರ ಪುತ್ರಸ್ವೀಕಾರ.—ಬಳಿಕ 1865ನೆ ಯಿಸವಿ ಯವರೆಗೂ ನಿರೀಕ್ಷಿಸಿ ತಮ್ಮದತ್ತಿನ ವಿಷಯವಾಗಿ ಬ್ರಿಟಿಷ್ ಸರ್ಕಾರ ದಿಂದ ಅಪೇಕ್ಷಿತವಾದ ಪ್ರತ್ಯುತ್ತರವು ಇನ್ನೂ ಬಾರದಿರಲು ಅದೇ ಸಂವತ್ಸ ರದ ಜೂ॥ 18ನೆಯ ತಾರೀಖಿಗೆ ಸರಿಯಾದ ಶಾಲಿವಾಹನಶಕ ೧೭೮೭ನೆಯ ಕ್ರೋಧನನಾಮಸಂವತ್ಸರದ ಜ್ಯೇಷ್ಠ ಬಹುಳ ದಶಮಿ ಭಾನುವಾರ ಪು ಷ್ಯದಿವಸದಲ್ಲಿ ದಿವಿ ೧೨ ಗಳಿಗೆಗೆಸಂದ ಸಿಂಹಲಗ್ನದಲ್ಲಿ ದೊರೆಗಳವರು ತಮ್ಮ ಸಹೋದರಿಯ ಮಕ್ಕಳಾದ ಚಾಮರಾಜ ಒಡೆಯರೆಂಬ ಪುತ್ರರನ್ನು ಸ್ವೀಕಾರ ಮಾಡಿಕೊಂಡರು. ಆ ಮಹೋತ್ಸವವು ಅಂಬಾವಿಲಾಸದ ದರ್ಬಾರಿನಲ್ಲಿ ಜರಗಿತು. ಆ ಮಹೋತ್ಸವಕ್ಕೋಸ್ಕರ ವಿರ್ಮಾಡಿಸಿದ ಮಹಾ ಸಭೆಗೆ ಸಮಾನಸ್ವಾಮಿಯವರು ಸವಾರಿ ಚಿತ್ತೈಸಿ ಆ ಸಭೆಯಲ್ಲಿ ಇಷ್ಟದೇವತಾ ಪ್ರಾರ್ಥನಾದಿಕ್ರಮವನ್ನು ಸಾಂಗವಾಗಿ ನೆರವೇರಿಸಿ ಸಭಿಕರನ್ನು ಕುರಿತು ತಮಗೆ ವಾರ್ಧಿಕ್ಯವು ಪ್ರಾಪ್ತವಾಗಿ ಶರೀರಸ್ಥಿತಿಯು ದಿನೇದಿನೇ ಕುಂಮತ

ಬರುತ್ತಿರುವಕಾರಣ ತಮ್ಮ ಸೇವೆಯು ಅಳಿಕೆಗೂ ತಮ್ಮ ಪ್ರಾಣಿಗಳ ಸಂರಕ್ಷಣೆಗೂ ಅಚಂದ್ರಾರ್ಕವಾಗಿ ತಮ್ಮ ವಂಶಾಭಿವೃದ್ಧಿಗೂ, ತಮ್ಮ ಪೂರ್ವಿಕರ ಪದ್ಧತಿ ಪ್ರಕಾರವಾಗಿಯೂ ಶಾಸ್ತ್ರೀಯವಾಗಿಯೂ ಒಂದು ಮಗುವನ್ನು ಸ್ವೀಕಾರಮಾಡಿಕೊಳ್ಳಬೇಕೆಂದಿರುವ ತಮ್ಮ ದೃಢ ಸಂಕಲ್ಪವನ್ನು ಹೇಳಿ ತಮ್ಮ ಜನಗಳಲ್ಲಿ ಸ್ವೀಕಾರಕ್ಕೆ ಯಾವ ಮಗು ಆಗಬಹುದೋ ಅದನ್ನು ಚೆನ್ನಾಗಿ ಆಲೋಚಿಸಿ ತಿಳಿಸಬೇಕೆಂದು ಅಪ್ಪಣೆಕೊಡಿಸಲು, ರಾಣಿಯರುಗಳೂ ಆಸ್ಥಾನದಲ್ಲಿದ್ದ ಸರ್ವಜನರೂ ಬಹಳ ಸಂತೋಷಗೊಂಡು ಬಿನ್ನವಿಸಿಕೊಂಡುದೇನೆಂದರೆ: "ಸರ್ವಜ್ಞ ನಾವು ಮಹಾಸ್ವಾಮಿಯವರು "ಸರ್ವೋತ್ಕೃಷ್ಟವಾಗಿಯೂ ಸ್ತೋತ್ರಾರ್ಹವಾಗಿಯೂ ಅಪ್ಪಣೆಕೊಡಿ "ಸಿದ ಸೂಕ್ತಿಗಳೆಲ್ಲವನ್ನೂ ನಾವು ಸರ್ವಾಂಶಕೋಳಿ ಆನಂದಭರಿತರಾದೆವು, "ಮತ್ತು ಧನ್ಯರಾದೆವು. ಸರ್ವೋತ್ಕೃಷ್ಟವಾದ ಮಹಾಸಮ್ಮಾನಕ್ಕೆ "ಸ್ವೀಕಾರ ಮಾಡಿಕೊಳ್ಳಲು ತಕ್ಕ ಪುತ್ರರನ್ನು ಜಯಾಯಿಸುವ ಸಾಮರ್ಥ್ಯ "ತ್ರ್ಯವನ್ನು ಸರ್ವಜ್ಞರಾದ ಮಹಾಸ್ವಾಮಿಗಳವರೇ ಪಡಿಸಬೇಕು. "ಮಹಾಪಾದಕ್ಕೆ ನಾವು ವಿಶೇಷ ಬಿನ್ನವಿಸಲು ಶಕ್ತರಲ್ಲ. ಮಹಾಸ್ವಾಮಿ "ಯವರು ಈಗ ಸಂಕಲ್ಪಿಸಿರುವ ಕಾರ್ಯವು ಅತ್ಯಂತ ಶ್ರೇಷ್ಠವಾದುದು. "ಇದನ್ನು ಉತ್ತರಕ್ಷಣವಲ್ಲಿಯೇ ನೆರವೇರಿಸುವುದರಿಂದ ನಾವು ಕೃತಾ "ರ್ಥರಾಗುತ್ತೇವ" ಎಂಬುದಾಗಿ ಪ್ರಾರ್ಥಿಸಿಕೊಂಡರು. ಅದರಮೇಲೆ ಮಹಾಸ್ವಾಮಿಯವರು ತಮ್ಮ ಜ್ಞಾತಿಗಳಲ್ಲಿ ಪುತ್ರನನ್ನು ತೆಗೆದುಕೊಳ್ಳಲು ಅವರೊಬ್ಬರಿಗೂ ಸಂತಾನವಿಲ್ಲದ ಕಾರಣ ತಮಗೆ ಸಮೀಪವರ್ತಿಗಳಾದ ಬಂಧುಗಳಾಗಿಯೂ, ಒಳ್ಳೆಯ ಮನೆತನದವರಾಗಿಯೂ ಇರುವ ಅರಸುಗಳ ಮನೆಯಿಂದ ತರಬೇಕೆಂದು ಆಲೋಚಿಸಿ ತಮ್ಮ ಇಬ್ಬರು ಪತ್ನಿಯರುಗಳಿಗೆ ತಂದೆಯವರಾಗಿ ಹದಿಮೂರು ಮನೆತನಕ್ಕೆ ಸೇರಿದವರಾದ ಬೆಟ್ಟದ ಕೋಟೆ ಗೋವಾಲರಾಜರೇ ಅರಸಿನವರು ಒಳ್ಳೇ ಮನೆತನದವರಾಗಿಯೂ ತಮ್ಮ ಪೂರ್ವಿಕರ ವಿವೇಕದಿಂದ ಬಂಧುಗಳಾಗಿಯೂ ತಮ್ಮ ಅಜ್ಜಿಯವರಾದ ಮಹಾಮಾತೃಶ್ರೀ ಲಕ್ಷ್ಮಮ್ಮಣ್ಣಿಯವರ ತಂದೆಯವರಾದ ಕತ್ತಿ ಗೋಪಾಲರಾಜರೇ ಅರಸಿನವರ ಸುತತಿಯವರಾಗಿಯೂ ಇರುವುದರಿಂದ ಅವರ ಮಕ್ಕಳು ಕೃಷ್ಣರಾಜರೇ ಅರಸಿನವರ ಮಕ್ಕಳಾದ ಚಿಕ್ಕ

ಕೈಪಕ್ಷೀಯರಾಗಿರುವ ಪುತ್ರರುಗಳಲ್ಲಿ ಒಬ್ಬ ಪುತ್ರರನ್ನು ತಮ್ಮ ಸಂತಕ್ಕೆ ಸ್ವೀಕಾರಮಾಡಿಕೊಳ್ಳಬೇಕೆಂಬುದಾಗಿ ತಮ್ಮ ಚಿತ್ರಕ್ಕೆ ತೋರಿ ಅವರು ಮತ್ತು ಅವರ ಪತ್ನಿಯರ ಅನುಮತಿಯಿಂದ ಅವರ ಮೂರುಮಂದಿ ಮಕ್ಕಳಲ್ಲಿ ಮೂರನೆಯ ಮಗು ಸುಮಾರು ಮೂರುವರ್ಷದ ವಯಸ್ಸಿನ ಬಾಲಕರನ್ನು ಸ್ವೀಕಾರ ಮಾಡಿಕೊಳ್ಳುವ ಅಭಿಪ್ರಾಯವನ್ನು ಅಪ್ಪಣೆ ಕೊಡಿಸಿದರು. ಅವನ್ನು ಸಭಾಸದಂಲ್ಲರೂ ಹರ್ಷದಿಂದ ಅನುಮೋದಿಸಿ ಆ ರೀತಿ ಅಪ್ಪಣೆ ಆಗಬಹುದೆಂದು ಪ್ರಾರ್ಥನಾರೂಪವಾಗಿ ವಿನ್ನೈಸಿದ ಉತ್ತರಕ್ಷಣವಲ್ಲಿಯೇ ಪಾಮೆಂದರವರು ಆ ಮಗುವನ್ನು ಕರೆಯಿಸಿ ಶಾಸ್ತ್ರೋಕ್ತಪ್ರಕಾರವಾಗಿ ಸ್ವೀಕಾರ ಮಾಡಿಕೊಂಡು ಆ ಸ್ವೀಕೃತ ಪುತ್ರರಿಗೆ ಚಾಮರಾಜಒಡೆಯರೆಂಬ ಅಭಿಧಾನವನ್ನಿಟ್ಟರುವುದಾಗಿ ಅಪ್ಪಣೆ ಕೊಡಿಸಿದರು. ಆಗ ಆ ಪುತ್ರರ ಮೆರವಣಿಗೆಗೆ ಸರಿಯಾಗಿ ಉತ್ತರ ದರವಾಜೆ ಪೇಷ್ ಬತೇರಿಯಮೇಲೆ 21 ತೋಪುಗಳನ್ನೂ ರಾಜಾಂಗಣ್ಣಿಕ್ಕೆ ತಕ್ಕ ವ್ಯವಸ್ಥೆಗಳನ್ನೂ ನಡೆಸುವನಂತರ ಭೇರಿ ಮುಂತಾದ ವಾದ್ಯಗಳ ಘೋಷಗಳು ಆಗುತಲಿರುವ ಸಮಯದಲ್ಲಿ ಅಪ್ಪಗ್ರಾಮದ ಡಿಪೀಜಕ್ ಸೂಪರಿಂಟೆಂಡೆಂಟರಾಗಿಯೂ ರೆಸಿಡೆಂಟ್ ಕೆಲಸಕ್ಕೆ ಅಸಿಸ್ಟೆಂಟರಾಗಿಯೂ ಇದ್ದ ಕ್ಯಾಪ್ಟೆನ್ ಇಲಿಯಟ್ ಸಾಹೇಬರಿಗೆ ದರ್ಬಾರಿಂದ ಒಂದು ಕಾಗದವು ಅಪ್ಪಣೆಯಾಗಿ ತುರುಫ್ ಸವಾರನ ಕೈಲಿಕೊಟ್ಟು ಸಾರೋಟು ಚೌಕೀವುಪಾರನೊಡನೆ ಕಳುಹಿಸಿ ಮಾಮೂಲು ಮರ್ಯಾದೆಗಳಿಂದ ಅವನ್ನು ಕರೆಯಿಸಿ ಅಂಬಾವಿಳಾಸದಲ್ಲಿ ಅಸ್ಥಾನದ ದರ್ಬಾರಿನ ಮಧ್ಯವಲ್ಲಿ ಕುರ್ಚಿಯಮೇಲೆ ಕುಳ್ಳಿರಿಸಿ ಆ ಕಾಲದಲ್ಲಿ ಶಾಸ್ತ್ರೀಯವಾದ ವಿಧಿಗಳು ಸಾಂಗವಾಗಿ ನಡೆದಮೇಲೆ ದೊರೆಗಳವರು ಆ ಸಾಹೇಬರಿಗೆ ದಿಡ್ಡಿಗೆ ದಫ್ತಮಾಡಿ ಕುರ್ಚಿಯಮೇಲೆ ಕುಳಿತು ಅವರೊಡನೆ ಕುಶಲ ಪ್ರಶ್ನಪೂರ್ವಕ ಸಂಭಾಷಣೆಯಾದ ಬಳಿಕ ಆ ಸಾಹೇಬರಿಗೆ ತಾವು ಯಥಾಶಾಸ್ತ್ರವಾಗಿ ತಮ್ಮ ನಿವಾಸ ಬಂಗಲೆಗದ್ದಲ್ಲಿ ಅರ್ಹರಾದ ಬಾಲಕರೊಬ್ಬರನ್ನು ಸ್ವೀಕಾರಾರ್ಥವಾಗಿ ಅನ್ವೇಷಣೆ ಮಾಡಿದುದನ್ನು ವಿವರವಾಗಿ ತಿಳಿಸಿ ತಮ್ಮ ರಾಜವಂಶಾಭಿವೃದ್ಧಿಗೋಸ್ಕರ ತಾವು ಚಾಮರಾಜಒಡೆಯರೆಂಬ ಪುತ್ರರನ್ನು ಶಾಸ್ತ್ರೀಯವಾಗಿ ಸ್ವೀಕಾರಮಾಡಿರುವುದನ್ನು

ಶ್ರೀಮನ್ಮಹಾರಾಜ ಮುಮ್ಮಡಿ ಶ್ರೀ ಕೃಷ್ಣರಾಜಒಡೆಯರವರ
ಪಟ್ಟಸ್ವೀಕಾರ

ತಿಳಿಸಿ ಆ ಮಗುವನ್ನು ಅವರಿಗೆ ತೋರಿಸಿ ಪಿತಸಮ್ಮತ್ಯನು ಹೇಗೆ ಎಲ್ಲಾ ಪಕ್ಕಗೂ ಸಮಸ್ತ ಮರತಾಜಿಗೂ ಬಾಧ್ಯವಪುವನೋ ಸ್ವೀಕೃತ ಪುತ್ರನೂ ಅದೇಮೇರಗೆ ಸಮಸ್ತ ಪಕ್ಕಗೂ ಸಮಸ್ತ ಮರತಾಜಿಗೂ ಬಾಧ್ಯಪಡುವನೆಂದು ಜೋಳಿ, ತಾವು ಐದು ವರ್ಷದ ವಯಸ್ಸುಳ್ಳವರಾಗಿದ್ದ ಕಾಲವನ್ನು ತಮಗೆ ಯಾವದೊಂದು ಕುಮ್ಮಕ್ಕು ಇಲ್ಲದಿದ್ದರೂ ಬ್ರಿಟಿಷ ನವರು ತಮ್ಮ ಪಕ್ಷವನ್ನು ವಿಚಾರಿಸಿ ತಮ್ಮ ಪೂರ್ವಿಕರ ಸಿಂಹಾಸನದಮೇಲೆ ತಮ್ಮನ್ನು ನೆಲೆಗೊಳಿಸಿ ಸ್ವ 1799 ನೆ ಯಿನವಿಯಲ್ಲಿ ಇಂಗ್ಲಿಷ್ ಕಂಪೆನಿಯ ಸರ್ಕಾರಕ್ಕೂ ಮೈಸೂರು ಸರ್ಕಾರಕ್ಕೂ ತಪನಾಮೆಯನ್ನುಂಟುಮಾಡಿ ಸೂರ್ಯಚಂದ್ರರಿರುವವರೆಗೂ ಇವರಲ್ಲಿ ನಿರ್ಣಯಿಸಿರುವಮೇರೆ ನಡೆಯತಕ್ಕದ್ದೆಂದು ಗೊತ್ತುಮಾಡಿ ತಮ್ಮನ್ನು ಅಭಿವೃದ್ಧಿಗೆ ತಂದಂತೆ ತಾವು ಸ್ವೀಕಾರ ಮಾಡಿಕೊಂಡಿರುವ ಪುತ್ರರಿಗೂ ಆ ತಪನಾಮೆಯ ಪ್ರಕಾರ ಎಲ್ಲಾ ಪಕ್ಕನ್ನೂ ಎಲ್ಲಾ ಮರತಾಜಿಯನ್ನೂ ಹಂಗೆ ಸಂರಂಸ್ಥವಾಗಿ ನಡೆಸುವಂತೆ ಮಾಡಬೇಕೆಂದು ಅಪ್ಪಣೆಕೊಡಿಸಿದನಂತರ ಆ ನಾಹೇ ಬರು ಚಾಮರಾಜಒಡೆಯರವರನ್ನೂ ಆ ಸಭೆಯನ್ನೂ ನೋಡಿ ಹರ್ಷಿತರಾಗಿ ಹೂವಿನಹಾರ ವಸ್ತ್ರದಾನುಗಳನ್ನು ಸ್ವೀಕರಿಸಿ ಮಹಾಸ್ವಾಮಿಯು ವರಿಂದ ಅಪ್ಪಣೆ ತೆಗೆದುಕೊಂಡರು.

ಅನಂತರ ಚಾಮರಾಜಒಡೆಯರ್ ಬಹದೂರರವರಿಗೆ ಆ ದರ್ಬಾರಿನಲ್ಲಿ ನಜರ್ ಮುಂತಾದ ಕ್ರಮಗಳು ನಡೆದು ಆರತಿಯಾದ್ಮತೆ ದಳವಾಯಿಮೇಲೆ ಅವರು ದಂತದ ನವರಂಗ ಪಾಲಕಿಯಲ್ಲಿ ಮುಹೂರ್ತಮಾಡಿ ಛತ್ರಚಾಮರ ಮೊದಲಾದ ಸಮಸ್ತ ರಾಜಮರ್ಯಾದೆಗಳಿಂದೊಪಗೂಡಿ ಉತ್ಸವ ಜೆಳೆಯಿಸಿ ಮಹಾ ವೈಭವದಿಂದ ದೇವರ ದರ್ಶನವನ್ನು ಮಾಡಿಕೊಂಡು ಪ್ರದಕ್ಷಿಣವಾಗಿ ಅರಮನೆಗೆ ಬಯಮಾಡುವ ಕಾಲದಲ್ಲಿ ಅವರ ಮರ್ಯಾದೆಗೆ ತಕ್ಕಹಾಗೆ ವಜ್ರಿಣಬಾಗಿಲ ಪೇಷ್ ಬತೇರಿಯಮೇಲೆ 21 ತೋಪು ಆಯಿತು. ಆಗ ಕೆಮ್ಮಣ್ಣು ಮಟ್ಟಿಯಲ್ಲಿ ಖಾಸ ಸವಾರಿ ಚಿತ್ತೈಸಿ ಇದ್ದು ತಮ್ಮ ಪುತ್ರರನ್ನು ಕರಮುಕೊಂಡು ಅಂತಃಪುರಕ್ಕೆ ಬಯಮಾಡಿಸಿದರು.

17. ಪುತ್ರಸ್ವೀಕಾರಾಭಿನಂದನ.—ಈ ಪರಿಯಾಗಿ ತಾವು ಪುತ್ರ ಸ್ವೀಕಾರ ಮಾಡಿಕೊಂಡ ಅಂಕಪತ್ರವನ್ನು ಆ ದಿವಸವೇ ಬಾವೆಂದರವೆರು

ಷನರ್ ಬೆರಿಂಗ್ ಸಾಹೇಬರಿಗೂ ಅವರಿಗೆ ಹೋಲ್ಪಟ್ಟ ಬ್ರಿಟಿಷ್ ಅಧಿ
ಕಾರಿಗಳಿಗೂ ಯಥಾಕ್ರಮವಾಗಿ ತಿಳಿಸಿದರು. ಇದರಮೇಲೆ ವಿಚಾರ
ಸಿದೆವು 1867ನೆ ಯಿಸವಿಯ ಆರಂಭಾಗದಲ್ಲಿ ಇಂಗ್ಲಾಂಡ್ ದೇಶದ ಮಹಾ
ರಾಣಿಯವರು ತಮ್ಮ ಮಂತ್ರಾಲೋಚನಾ ಸಭೆಯಲ್ಲಿ ಮಾಡಿದ ಆಜ್ಞೆಗ
ನುಸಾರವಾಗಿ ಬೊರೆಗಳವರು ಕ್ರಮಾಗತವಾದ ಮೈಸೂರು ರಾಜ್ಯಕ್ಕೆ
ಅವರ ಸ್ವೀಕೃತಪುತ್ರರಾದ ಶ್ರೀ ಚಾಮರಾಜೇಂದ್ರ ಒಡೆಯರವರು
ಪ್ರಭುಗಳಾಂಬುದಾಗಿ ವ್ಯವಸ್ಥೆಯಾಯಿತು. ಈ ಶುಭವಾರ್ತೆಯನ್ನು ಆಗಿನ
ಮೈಸೂರಾಯ ಲಾರ್ಡ್ ಲಾರೆನ್ಸ್ ಸಾಹೇಬರವರು ಸ್ನೇಹಪರಿಪೂರ್ಣಭಾವ
ದಿಂದ ದೊರೆಗಳವರಿಗೆ 1867 ನೆ ಯಿಸವಿ ಜುಲೈ ತಿಂಗಳಲ್ಲಿ ಲೇಖನದ
ಮೂಲಕ ತಿಳಿಯಪಡಿಸಿದರು. ಆಗ ಅವರ ಅಪ್ಪಣೆಯಂತೆ ಕಮಿಷ
ನರ ಕೆಲಸ ನೋಡುತ್ತಿದ್ದ ಮೆ॥ ಸಾಂಡರ್ಸ್ ಸಾಹೇಬರವರು ಮೈಸೂರಿಗೆ
ಬಂದು ಅರಮನೆಯಲ್ಲಿ ಅದೇ ತಿಂಗಳು 18ನೆಯ ತಾರೀಖಿನಲ್ಲಿ ನಡೆದ
ದರ್ಬಾರಿನಲ್ಲಿ ಬಳ್ಳಿ ಮಹಾಸ್ವಾಮಿಯವರಿಗೆ ಈ ವಿಷಯವನ್ನು ಕ್ರುತ
ಪಡಿಸಿ ಇದಕ್ಕೋಸ್ಕರ ತಮಗುಂಟಾದ ಸಂತೋಷವನ್ನೂ ತಿಳಿಸಿದರು.
ಅದಕ್ಕೆ ಪ್ರತ್ಯುತ್ತರವಾಗಿ ದೊರೆಗಳವರು ಹಿಂದಕ್ಕೆ ತಮ್ಮ ವಂಶ
ವನ್ನು ಈ ಸಂಸ್ಥಾನದಲ್ಲಿ ಪುನಃ ಸ್ಥಾಪಿಸಿದುದಲ್ಲದೆ ಈಗಲೂ ತಮ್ಮ
ಸ್ವೀಕೃತ ಪುತ್ರರ ಪಕ್ಕ ಬಾಧ್ಯತೆಗಳನ್ನು ಸ್ಥಿರಪಡಿಸಿದುದಕ್ಕೋಸ್ಕ
ರ ತಾವು ಬ್ರಿಟಿಷ್ ಗವರ್ನ್‌ಮೆಂಟಿನವರಿಗೆ ತುಂಬಾ ಕೃತಜ್ಞರೆಂದೂ,
ಇಂಗ್ಲಾಂಡ್ ದೇಶಾಧಿಪರು ಹಿಸ್ ಮೆಜಿಸ್ಟಿ ಮೊದಲನೆಯ ಜಾರ್ಜ್
ಪ್ರಭುವರ್ಯರ ಆಳಿಕೆಯಲ್ಲಿ ತಮಗೆ ಪ್ರಾಪ್ತವಾದ ಸಿಂಹಾಸನವು ಈಗ
ಆ ನೈವಶೇಖರರ ಪೌತ್ರಿಯವರಾಗಿ ಅದೇ ಸೀಮೆಯನ್ನಾಳುವ ಮಹಾ
ರಾಜ್ಞಿಯವರು ಕರುಣಾಕಟಾಕ್ಷದಿಂದ ತಮ್ಮ ಸ್ವೀಕೃತ ಪುತ್ರರಿಗೆ ವಂಶ
ಪಾರಂಪರ್ಯವಾಗಿ ಲಭಿಸುವಂತೆ ಮಾಡಿದ ಮಹೋಪಕಾರಕ್ಕೆ ತಾವು
ಗೌರವಪೂರ್ವಕವಾಗಿ ಕೃತಜ್ಞರೆಂಬುದನ್ನು ಅವರ ಸನ್ನಿಧಿಯಲ್ಲಿ ಬಿನ್ನ
ವಿಸುವುದಲ್ಲದೆ ಅವರಿಗೆ ಈ ಭಾಗದಲ್ಲಿ ಅನುಕೂಲವಾದ ಸಲಹೆಯನ್ನಿತ್ತ
ಅವರ ಸಾಹಿವರ್ಯರಿಗೂ ತಮ್ಮ ಕೃತಜ್ಞತೆಯನ್ನು ತಿಳಿಸಬೇಕೆಂದೂ,
ತಮ್ಮ ರಾಜವಂಶವನ್ನು ಈ ರೀತಿಯಲ್ಲಿ ಸಂರಕ್ಷಿಸಿದ ಆ ಮೆದಾರಾಣಿಯು

ನೆಯ ರಾಜಸಂತತಿಯು ಅಭಿವೃದ್ಧಿಪಡೆದು ಅವರ ಆಶ್ರಯವು ತಮಗೆ ಚಿರಸ್ಥಾಯಿಯಾಗಿರಬೇಕೆಂಬುದೇ ತಮ್ಮ ಪ್ರಾರ್ಥನೆಯಿಂದೂ ಅಪ್ಪಣೆ ಕೊಡಿಸಿದರು. ಮತ್ತು ಆ ಕುಲಸಮಾಚಾರವನ್ನು ತಿಳಿಯಪಡಿಸಿದು ದಕ್ಕೊಸ್ತರ ಕವಿಮಾಷನವರಿಗೂ ಪ್ರಭುಗಳವರು ತಮ್ಮ ಸಂತೋಷವನ್ನು ವ್ಯಕ್ತಪಡಿಸಿದರು.

18. ಅದೇ 1867ನೆ ಯಿಸವಿಯಲ್ಲಿ ದೊರೆಗಳವರಿಗೆ ಬ್ರಿಟಿಷ್ ಸರ್ಕಾರದವರು ಜಿ. ಸಿ. ಎಸ್. ಐ., (G. C. S. I.)ಎಂಬ ಬಿರುದನ್ನಿತ್ತು ಮಹಾಸ್ವಾಮಿಯವರನ್ನು ಗೌರವಿಸಿದರು.

ಈ ಪರಿಯಾಗಿ ದೈವಾನುಗ್ರಹದಿಂದ ತಮ್ಮ 74ನೆಯ ವರ್ಷ ವರ್ಧಂತೀಮಹೋತ್ಸವಸಮಯದಲ್ಲಿ ಲಭಿಸಿದ ಕುಲಪರಂಪರೆಯಿಂದ ಶ್ರೀಮನ್ಮಹಾರಾಜರವರು ಆನಂದಭರಿತರಾದರು.

ಐದನೆಯ ಅಧ್ಯಾಯ.

ದೊರೆಗಳವರ ಧರ್ಮಕಾರ್ಯಗಳು,

ಮತ್ತು

ಶ್ರೀಚಾಮರಾಜ ಒಡೆಯರವರ ಪಟ್ಟಾಭಿಷೇಕ.

ಶ್ರೀಮನ್ಮಹಾರಾಜರು ಮುಮ್ಮಡಿ ಶ್ರೀ ಕೃಷ್ಣರಾಜ ಒಡೆಯರವರು ತಮ್ಮ ಸಂಸ್ಥಾನದ ಗುಡಿ, ಗೋಪುರ, ದೇವಾದಾಯ, ಬ್ರಹ್ಮದಾಯ, ತಪೂಜೆ, ಆರಾಮ, ಸಾಲುಮರ,ಕಟ್ಟೆ, ಕಾಲುವೆ, ಸೇತು, ಸೋಪಾನ, ಮಂಟಪ, ಚತ್ರ, ಧರ್ಮಶಾಲೆ ಮುಂತಾದ ಅನೇಕ ಧರ್ಮಕಾರ್ಯಗಳನ್ನು ಸುಲ್ತಾನರು ನಾಶಪಡಿಸಿರುವುದನ್ನು ಪರಾಮರ್ಶಿಸಿ ಆ ಧರ್ಮಕಾರ್ಯಗಳನ್ನು ಪೂರ್ವಕ್ಕಿಂತಲೂ ಇಮ್ಮಡಿಯಾಗಿ ಜೀರ್ಣೋದ್ಧಾರ ಮಾಡಿದ್ದಲ್ಲದೆ ಆಚಂದ್ರಾರ್ಕವಾಗಿರುವಂತೆ ನೂತನವಾಗಿಯೂ ಅನೇಕ ಧರ್ಮಗಳನ್ನು ಮಾಡಿ ಕೀರ್ತಿಭಾಜನರಾದರು.

೭. ಶ್ರೀಚಾಮುಂಡೇಶ್ವರೀ ಸೇವೆ.—ಶ್ರೀಚಾಮುಂಡೇಶ್ವರಿಯಜಿಟ್ಟ ದಮೇಲಕ್ಕೆ ಅನೇಕಾವೃತ್ತಿ ಖಾಸ್ಸನಾರಿ ಮಹಾಮಾತೃಶ್ರೀಯುವರು ಮುಂತಾದ ಜನಾನಾ ಸವಾರಿಗಳೊಡನೆ ಚಿತ್ತೈಸಿದ ಕಾಲಗಳಲ್ಲಿ ಪ್ರಾರ್ಥನೆ ಇಷ್ಟಂತೆಯೂ ಇಚ್ಛಿಬಂದಂತೆಯೂ ತುರಜೀಕಾಸು, ಬಸದರಿವೆರಡ, ಮುಂತಾದ ಚಿನ್ನದ ನಾಣ್ಯಗಳಿಂದ ಅಷ್ಟೋತ್ತರ, ತ್ರಿಶತೀ, ನವಸ್ಸನಾ ಮೊಚರ್ಚನೆಗಳನ್ನು ಮಾಡಿಸಿ ಅನೇಕ ರತ್ನಖಂಡಮಾಲಾಸಹಿತವಾದ ಬಾಳ್ಕಿಯ ಮುಂಟಪ, ಚಿನ್ನಬೆಳ್ಳಿಗಳ ಪೂಜೋಪಕರಣ, ನೈವೇದ್ಯೋಪಕರಣ, ಅಪೂರ್ವಗಳಾಗಿಯೂ ಅಮೂಲ್ಯಗಳಾಗಿಯೂ ಇರುವ ನವರತ್ನದ ಪದಕ ಕಂಠಿ ಮುಂತಾದ ದಿವ್ಯಾಭರಣಗಳು, ಅಮೂಲ್ಯವಾದ ವಸ್ತ್ರಗಳು ಇವುಗಳನ್ನು ಒಪ್ಪಿಸಿ ದೇವತಾಸೇವೆಯನ್ನು ಮಾಡಿದರು.

ಪೂರ್ವದಲ್ಲಿ ಆಮ್ನಾನವರಿಗೆ ಮಾಡಿದ್ದ ಅಷ್ಟಬಂಧವು ಶಿಥಿಲವಾಗಿ ವ್ದುದರಿಂದ ದೊರೆಗಳು ಶಾ॥ ಶಕ ೧೭೪೦-೪೫ನೆಯ ವಿಕ್ರಮ ಸಂವತ್ಸರ ಕಾರ್ತಿಕ ಶುದ್ಧ ೫ ಯಲ್ಲಿ ಅಷ್ಟಬಂಧನವನ್ನೂ ದೇವ್ಯಾಗಮೋಕ್ತ ಪ್ರಕಾರವಾಗಿ ಪಂಚಲೋಹದ ಉತ್ಸವ ವಿಗ್ರಹವನ್ನೂ, ಅಸ್ತ್ರಮೂರ್ತಿಗಳನ್ನೂ, ಶಿಲೆಯಿಂದ ಬಲಿಪೀಠ ಧ್ವಜಸ್ತಂಭ ದ್ವಾರಪಾಲಕರು ಮುಂತಾದವರನ್ನೂ ನೂತನವಾಗಿ ನಿರ್ಮಿಸಿ, ಪ್ರತಿಷ್ಠೆ ಮಾಡಿಸಿ ಬೊಂಬೆಯ ರಥವನ್ನು ಮಾಡಿಸಿದರು.

ಲಿಂದ ಮಹಾಸ್ವಾಮಿಯವರು ಈ ಬೆಟ್ಟವಲ್ಲಿದ್ದ ಅನೇಕವಾದ ಕಲ್ಲುಬೆರಿಗಳನ್ನು ಸುಟ್ಟಿಸಿ, ನಾಲ್ಕು ಬೀದಿಗಳನ್ನು ಮಾಡಿಸಿ, ಸುತ್ತಲೂ ಕಲ್ಲು ಗಾರೆಗಳಿಂದ ಕೋಟೆಯನ್ನು ಕಟ್ಟಿಸಿ, ಈ ಬೀದಿಗಳಲ್ಲಿ ಉತ್ಸವಗಳು ಬರುವಂತೆ ನಿಬಂಧನೆಯನ್ನು ಮಾಡಿ ಶಾ॥ ಶಕ ೧೭೪೦-೪೫ನೇ ವಿಕ್ರಮ ಸಂವತ್ಸರದ ವೈಶಾಖಶುದ್ಧ ೫ ಯಲ್ಲಿ ನೂತನವಾಗಿ ರಥೋತ್ಸವವನ್ನು ಮಾಡಿಸಿ, ಶರತ್ಕಾಲದಲ್ಲಿ ಚಾಮುಂಡೇಶ್ವರೀ ಪೂಜೆಯು ವಿಶೇಷವಾದದ್ದರಿಂದ ಮುಂಬೆ ಪ್ರತಿ ಸಂವತ್ಸರದಲ್ಲಿಯೂ ನವರಾತ್ರಿನು ಉತ್ಸವವು ಬಿಳದಮೇಲೆ/ಯಾಸಾ ಜನ್ಮನಕ್ಷತ್ರವಾದ ಶ್ರವಣದಲ್ಲಿ ಅಂಕುರಾರೋಪ ಐಶ್ವರ್ಯತಮ್ಮ ಧರ್ಮ ಪತ್ನಿಯರುಗಳಾದ ಶ್ರೀಮನ್ಮಹಾರಾಜ ವಿಲಾಸ ಸನ್ನಿಧಾನವ ಲಿಂಗಾ ಜಮ್ಮಣ್ಣಿಯವರ ನಾಮನಕ್ಷತ್ರವಾದ ಭರಣಿಯಲ್ಲು ರಥೋತ್ಸವವು

ತಮ್ಮ ಪಟ್ಟಾಭಿಷೇಕ ಮಹೋತ್ಸವವು ಜರಿದ ಮೋಹಿನೀ ನಕ್ಷತ್ರದಲ್ಲಿ ಅವಭೃಥ ಸ್ನಾನವೂ, ಅನಂತರ ಮಂಟಪೋತ್ಸವ ಮುಂತಾದ ಉತ್ಸವಗಳೂ ನಡೆಯುವಂತೆ ಏರ್ಪಾಟುಮಾಡಿದನು. ಆಗಾಗ್ಗೆ ನಡೆಯುವ ಉತ್ಸವಗಳಿಗೆ ಬೇಕಾದ ವಾಹನಗಳನ್ನು ಮಾಡಿಸಿಟ್ಟಲ್ಲದೆ, ಚಿನ್ನದ ಬಟ್ಟಲುಗಳಿಂದ ಅಭ್ಯಂಜನಕ್ಕಾಗಿ ಸಿಂಹವಾಹನವನ್ನೂ, ಬೆಳ್ಳಿಯ ಪೀಠ ವ್ಯಘ್ರಾಸನವನ್ನೂ, ತಾನು ಮಾಡಿದ ಅಸ್ತ್ರೋತ್ಸವ ತ್ರಿಪತ್ರೀಕಾಮಂಗಳನ್ನು ಕತ್ತಿರುವ ಚಿನ್ನದ ನಕ್ಷತ್ರಮಾಲಿಕೆಯನ್ನೂ ಒಪ್ಪಿಸಿದನು.

ಅನಂತರದಲ್ಲಿ ದೊರೆಗಳು ತಮ್ಮ ಪೂರ್ವಿಕರಾದ ರಾಜಾಧಿರಾಜರ ವೀರ ರಾಯಗೋಪುರವನ್ನು ಕಟ್ಟಸಬೇಕೆಂದು ಸಿಲ್ಲೀಮಪ್ಪ ಶ ನ್ಯಾದಿರಾಜಯನ್ನು ತೆಗೆಸಿ, ನೂತನವಾಗಿ ಅಧಿಷ್ಠಾನಶುದ್ಧಿಯಾಗಿ, ಕಲಿಗಳಿಂದಲೂ ಇಟ್ಟಿಗೆ ಗಾರೆಗಳಿಂದಲೂ ಅಭ್ರಸ್ಪರ್ಶಿಯಾಗಿಯೂ ವಿಚಿತ್ರನಾಗಿಯೂ ಇರುವಂತೆ ವಿಶ್ವಪತಿಯ ಗೋಪುರವನ್ನು ಕಟ್ಟಸಿ, ಶಾ॥ ಶ ೧೩೧೧ನೇ ಸರ್ವಧಾರಿ ಸಂವತ್ಸರದ ಫಾಲ್ಗುನಬಹುಳ ೫ ಸೋಮವಾರದಲ್ಲಿ ಎರಡು ಕೋರಂಬವನ್ನೂ ೩ ಕಲಶಗಳನ್ನೂ ಇಟ್ಟಿಸಿ ಗೋಪುರ ಪ್ರತಿಷ್ಠೆಯನ್ನು ಮಾಡಿಸಿದರು. ಮತ್ತು ಬೆಟ್ಟದಲ್ಲಿರುವ ದೇವಿಕೆರೆ ಎಂಬ ತಟಾಕವನ್ನು ಜೀರ್ಣೋದ್ಧಾರಮಾಡಿಸಿದರು.

ಮಹಾಬಲೇಶ್ವರ ಸ್ವಾಮಿಯವರಿಗೆ ಅಷ್ಟಬಂಧನವು ವಿಫಲವಾಗಿ ಇದ್ದುದರಿಂದ, ದೊರೆಗಳು ಶಾ॥ ೧೩೩೩ನೇ ಆನಂದ ಸಂವತ್ಸರದ ಶ್ರಾವಣ ಶುದ್ಧ ೬ ಸೋಮವಾರದಲ್ಲಿ ನೂತನವಾಗಿ ಅಷ್ಟಬಂಧನವನ್ನು ಮಾಡಿಸಿ, ನಾಗಾಭರಣ ಸಹಿತವಾದ ಬೆಳ್ಳಿಯ ಕೊಳಗವನ್ನೂ ಪೀಠಪ್ರಭಾವಳಿ ಮೊದಲಾದ ರಥ ವಾಹನಗಳನ್ನೂ ಒಪ್ಪಿಸಿದರು. ಬೆಟ್ಟದಲ್ಲಿರುವ ನಾರಾಯಣಸ್ವಾಮಿ ಮುಂತಾದ ದೇವರಿಗೂ ಉತ್ಸವಕಾಲದಲ್ಲಿ ಜ್ವಾಲಾಮುಖಿಗೂ ಚಿನ್ನದ ಬೆಳ್ಳಿ ರತ್ನಗಳ ಆಭರಣಗಳನ್ನೂ ಬೆಳ್ಳಿಯ ನೀರ್ಪೊಸಕರಣ ಪೂಜೋಪಕರಣ ಪಾತ್ರೆಗಳನ್ನೂ ಒಪ್ಪಿಸಿದನು. ಚಾಮುಂಡೇಶ್ವರೀ ದೇವಸ್ಥಾನದ ಬಳಿಗೆ ಉತ್ಸವದ ಸನ್ನಿಧಿಯು ಎದುರಿಗೆ ಕ್ಯಾಮುಗಿನುಕೊಂಡಿರುವಂತೆ ಕಲ್ಲಿಯಿಂದ ಬಾಸಾ ಭಕ್ತ ವಿಗ್ರಹವನ್ನೂ ತಮ್ಮ ಧರ್ಮಪತ್ನಿಯರಾದ ಲಕ್ಷ್ಮೀವಿಲಾಸ ಕೃಷ್ಣವಿಲಾಸ ರಮಾವಿಲಾಸ ಸನ್ನಿಧಾನ

ವರೆರ ಭಕ್ತ ನಿಗ್ರಹಗಳನ್ನೂ ನಿರ್ಮಿಸಿ ಪ್ರತಿಷ್ಠೆ ಮಾಡಿಸಿದರು. ಈ ಬಟ್ಟೆಯ ಮೇಲಿರುವ ಎಲ್ಲಾ ದೇವರುಗಳು, ಉತ್ತನಹಳ್ಳಿಯಲ್ಲಿರುವ ಅಮ್ಮನವರು, ಸಿದ್ಧೇಶ್ವರ ಇವರುಗಳ ನಿತ್ಯಕಟ್ಟಳೆಯು ಪಡಿತರ ದೀಪಾರಾಧನೆಗಳಿಗೂ, ಬಟ್ಟೆಯ ಮೇಲೆ ದೇವೀಕೂಟದಲ್ಲಿ ನಂತರ್ಪಣೆಗಳಿಗೂ, ರಥೋತ್ಸವ ಮುಂತಾದ ಉತ್ಸವಗಳಿಗೂ, ಅರ್ಚಕ, ಆಗಮಿಕ ಮುಂತಾದ ಉಪಾಧಿ ಬ್ರಾಹ್ಮಣರು, ಪೌರುಷತ್ಯೆಗಾರ, ಶಾನುಭೋಗ, ತಮ್ಮಡಿಗಳ್ಳಿ, ಕಾನೆಲಂಗಾರ, ಪಿಲಗತಾಳ ಮೇಳದವರು ಮುಂತಾದ ಜನಗಳ ಜೀವನಕ್ಕೂ ತಕ್ಕಂತೆ ಭೂಮಿ ತಸ್ತೀಕನ್ನು ಉಂಟುಮಾಡಿ, ಕೆಲವು ಬ್ರಾಹ್ಮಣರಿಗೂ ತಮ್ಮಡಿಗಳಿಗೂ ಸಂಬಳವೆಲ್ಲವೆ ಭೂರೂಪವಾಗಿಯೂ ಜೀವನ ಮಾಡಿ ಕೊಟ್ಟು, ಅನಂದಾರ್ಚಕರಾಗಿ ದೇವತಾ ಸೇವೆ ನಡೆಯುವಂತೆ ಕಟ್ಟಳೆ ಮಾಡಿದರು.

೩. ನಂಜನಗೂಡು ಶ್ರೀಕಂಠೇಶ್ವರಸ್ವಾಮಿ ಸೇವೆ.—ಮುಮ್ಮಡಿ ಶ್ರೀ ಕೃಷ್ಣರಾಜ ಒಡೆಯರವರು ಪೂರ್ಣಾಯ್ಯನವರಿಗೆ ಅಪ್ಪಣೆಕೊಟ್ಟು ನಂಜನಗೂಡು ಶ್ರೀ ಶ್ರೀಕಂಠೇಶ್ವರಸ್ವಾಮಿಯವರ ದೇವಾಲಯದಲ್ಲಿ ದಕ್ಷಿಣೋತ್ತರದ ಕೈಸಾಲೆಗಳಲ್ಲಿ ಕೆಲವು ಅಂಕಣಗಳನ್ನು ಹೆಚ್ಚಿಸಿ, ಒಳ್ಳೆ ಗುತ್ತಿಗೆಗಳಲ್ಲಿಯೂ ಯಥಾ ಶಾಸ್ತ್ರವಾಗಿ ಶಿಲೆಯಿಂದ ಪಂಚವಿಂಶತಿ ಲೀಲಾಮೂರ್ತಿಗಳನ್ನು ನಿರ್ಮಿಸಿ ಪ್ರತಿಷ್ಠೆ ಮಾಡಿಸಿದನಂತರ, ಪೂರ್ವದಲ್ಲಿದ್ದ ಚಿಕ್ಕ ಗೋಪುರಕ್ಕೆ ಸುವರ್ಣದ ೫ ಕಲಶಗಳನ್ನೂ ೨ ಹೊರಂಬುಗಳನ್ನೂ ಪ್ರತಿಷ್ಠೆ ಮಾಡಿಸಿದರು. ಮತ್ತು ಆ ಕೈಸಾಲೆಗಳಲ್ಲಿ ಅಡಿಗೆಮನೆ, ಶಿವಕೂಟದ ಮನೆ, ಉಗ್ರಾಣದ ಮನೆಗಳನ್ನು ನೂತನವಾಗಿ ಮಾಡಿಸಿದರು. ದೇವಸ್ಥಾನದ ಹೊರಗಣ ಪ್ರಾಕಾರದ ಸ್ಥಿದ್ದ ಕೈಸಾಲೆಯು ಹೆಚ್ಚು ತಗ್ಗಾಗಿ ಇದ್ದದ್ದರಿಂದ ಅದನ್ನು ಒಂದೇ ಸಮನಾಗಿ ಹೊಸವಾಗಿ ಮಾಡಿಸಿ, ಈ ಒಳಕೈಸಾಲೆ ಹೊರ ಕೈಸಾಲೆಗಳ ಮೇಲೆ ನಾಲ್ಕು ಕಡೆಗಳಲ್ಲಿಯೂ ಗಾರೆಯ ಗೂಡುಗಳನ್ನು ಮಾಡಿಸಿ, ಅವುಗಳಲ್ಲಿ ಅಷ್ಟದಿಕ್ಪಾಲಕರು, ನವಗ್ರಹಗಳು, ಸಪ್ತರ್ಷಿಗಳು, ಸಪ್ತಮಾತೃಕಾವೇಶ್ವರರು, ದಕ್ಷಿಣಾಮೂರ್ತಿಗಳು, ಪಂಚವಿಂಶತಿ ಲೀಲಾಮೂರ್ತಿಗಳು, ಕೆಲವೆರುಪುರಾತನರು, ದ್ವಾತ್ರಿಂಶದ್ಗಣ

ಪತಿಗಳು ಮೊದಲಾದ ವಿಗ್ರಹಗಳನ್ನು ಗಾಲಿಯಿಂದ ಅತಿ ವಿಜೃಂಭಣೆಯಿಂದಲೂ ಯಥಾರಾಸ್ತ್ರವಾಗಿಯೂ ಮಾಡಿಸಿ, ದೇವರ ನೈಮಿತ್ತಿಕೋತ್ಸವಕ್ಕೆ ಚಿತ್ರಮಂಟಪವನ್ನು ನಿರ್ಮಿಸಿದನು. ತಿರುಮಲೇಶ್ವರ ಸ್ವಾಮಿಯು ಬಳಗಡೆಯಿದ್ದು, ಜಾತ್ರೆಯಕಾಲದ ಸಂಪಿಗೆಮಲ್ಲಿ ಸರ್ವರಿಗೂ ದರ್ಶನವಾಗದೆ ಇದ್ದುದರಿಂದ ಚಿಕ್ಕ ಗೋಪುರದಲ್ಲಾಗಿಲ ಮುಂಭಾಗದಲ್ಲಿ ಗುಡಿಯನ್ನು ಕಟ್ಟಿಸಿ, ಪುರಾತನಭಕ್ತರಿಗೆ ಅಭಿಮುಖವಾಗಿ ತಿರುಮಲೇಶ್ವರಸ್ವಾಮಿಯನ್ನು ಪ್ರತಿಷ್ಠೆ ಮಾಡಿಸಿದರು.

ಭೂಕೈಲಾಸಕತಿಯೂದ ನಂಜುಂಡೇಶ್ವರ ಸ್ವಾಮಿಗೂ ಜಗನ್ಮಾತೆಯಾದ ಪಾರ್ವತೀದೇವಿಗೂ, ಗೌತಮಪುರಾಣಿತವಾದ ಶ್ರೀಕಂಠೇಶ್ವರಸ್ವಾಮಿ ಮೊದಲಾದ ಈ ದೇವಸ್ಥಾನದಲ್ಲಿರುವ ಎಲ್ಲಾ ದೇವರಿಗೂ ಸಮರ್ಪಣೆಯಾಗಿರುವ ವಸ್ತುಗಳು ಯಾವುವೆಂದರೆ:— ಮೂಲಸ್ವಾಮಿಗೆ, ಸುವರ್ಣದ ಮೂಲು ವಿಭೂತಿ ರೇಖೆಗಳಿಂದ ಒಪ್ಪಗೂಡಿ ನಾಗಾಭರಣದಿಂದ ಅಲಂಕೃತವಾದ ಚಿನ್ನ ಬಿಳ್ಳಿಯ ರುದ್ರಾಕ್ಷಿಕೊಳಗಗಳು, ಉತ್ಸವ ಮೂರ್ತಿಯ ಸನ್ನಿಧಿಗೆ ಸುವರ್ಣದ ಬಾಳೆದು ಕಂಬ, ಮಾಣಿಕ್ಯಲಯ ತೋರಣಗಳಿಂದ ಅಲಂಕೃತವಾದ ಬೆಳ್ಳಿಮಂಟಪ ಮತ್ತು ಚಿನ್ನಬೆಳ್ಳಿಯ ಪೀಠಪ್ರಭಾವಳಿಗಳು, ಈ ಸನ್ನಿಧಿಯ ಬಾಗಿಲಿಗೆ ಚಿನ್ನದ ಮುಖಾವಿನ ಬಾಗಿಲಹಾಸು, ನವಾಹೋತ್ಸವವಾದ ಬ್ರಹ್ಮೋತ್ಸವ ಕೃತ್ತಿಕೋತ್ಸವದ ಕಾಲದಲ್ಲಿ ಶ್ರೀಕಂಠೇಶ್ವರಸ್ವಾಮಿಯವರಿಗೆ ಧರಿಸುವುದಕ್ಕೆ ಅಪೂರ್ವವಾಗಿ ಅಮೂಲ್ಯ ರತ್ನಗಳಿಂದ ಸಿದ್ಧಮಾಡಿಸಿದ ಶ್ರೀಕಂಠಮುಡಿ (ಕ್ರಿ.ಶ. ೧೬೫೯ನೇ ಪ್ರಮಾದಿ ಸಂವತ್ಸರದ ಚೈತ್ರ ಶುದ್ಧ ೪ ಸ್ಥಿರವಾರದಲ್ಲಿ ಈ ಮುಡಿಯನ್ನು ಸಮರ್ಪಣೆಮಾಡಿ, ಈ ಉತ್ಸವಗಳು ಬೇಡಿದನಂತರ ಮೊದಲು ಮುಡಿ ಅರಮನೆ ಜೊಕ್ಕಸಕ್ಕೆ ಬರುವಂತೆ ಕಟ್ಟಳೆ ಮಾಡಿಸಿದರು.) ಕೋರಂಬು, ಪಸಲ್ಪಾಭರಣ, ಬಂದಾಭರಣ, ಕಂಠಾಭರಣ, ಕರ್ಣಾಭರಣ ನಾಸಿಕಾಭರಣ, ಮಕರಕಂಠಿ, ನಾಗಾಭರಣ ಸಹಿತವಾದ ಒಡ್ಡೆ, ನರಸಾತಿ, ಅನೇಕ ಪವಳಗಳಿಂದ ಯುಕ್ತವಾದ ಬಾಗಿಲಿಗೆಯ ಮುಕ್ತಾಹಾರಗಳು ಮುಂತಾದ ಅನೇಕ ನವರತ್ನಾಭರಣಗಳು, ಚಿನ್ನದ ಕಿರೀಟ ಕವಚ, ಬಿಲ್ಲು, ಬಂದಿ, ತಾಳ ಮೊದಲಾದ ಅಪೂರ್ವವಸ್ತುಗಳ ನಾಮಗಳನ್ನು

ಬರೆದಿರುವ ನಕ್ಷತ್ರಮಾಲಿಕೆ ಮೊದಲಾದ ಅನೇಕ ಸುವರ್ಣಾಭರಣಗಳು, ಪೀತಾಂಬರಾದಿ ಬಗೆಬಗೆಯ ವಸ್ತ್ರಗಳು, ಅಮ್ಮನವರಿಗೆ ಚಿನ್ನದ ಘಂಟೆಗಳನ್ನು ಹಾಕಿಸುವೆ ನೆರಿಯಬಲೆ, ಪೂಜೋಪಚಾರಣ ಸೇವೋಪಕರಣಕ್ಕೆ ಸಹ ಚಿನ್ನ ಬೆಳ್ಳಿಗಳಿಂದ ಮಾಡಿಸಿದ ಕೊಪ್ಪರಿಗೆ ಬಿಂದಿಗೆ, ಚಂಬು, ಪಂಚಪಾತ್ರೆ, ಉದ್ಧರಣೆ, ಅಡ್ಡಣಿಗೆ, ತಟ್ಟೆ, ಬಟ್ಟಲು, ಗಿಂಡಿ ಸಹಸ್ರಧಾರಾಪಾತ್ರೆ, ದೀಪದಕಂಬ, ತೂಗುದೀವಿಗೆ, ಘಂಟೆ, ಧೂಪಾರ್ತಿ, ದೀಪದಬುಗ್ಗೆ ವಿಕಾರ್ತಿ ಮೊದಲು ಬಗೆಬಗೆಯಾದ ಅನೇಕ ಆರ್ತಿಗಳು, ಕುಂಭಾರ್ತಿ, ಸನ್ನಿಧಿಯ ಉಪಚಾರಕ್ಕೆ ಬೆಳ್ಳಿಯ ಛತ್ರ, ಚಾಮರ, ವ್ಯಜನ, ದರ್ಪಣ, ದೊಣ್ಣೆ, ಬಳ್ಳಿಯ ದೀವಟಿಗೆ, ಕನ್ನಡಿ, ಸನ್ನಿಧಿಯಲ್ಲಿರುವ ವೈಷ್ಣವನಿಗೆ ಬೆಳ್ಳಿಯ ಕವೆಜ, ಪಾಷನದ ಚಟ್ಟಿಗೆ ಬೆಳ್ಳಿಯ ಸಿಂಪಲಲಾಟವ ಕೊಳಗ ಇವು ಮೊಂತಾದ ಇನ್ನೂ ಅನೇಕ ಪದಾರ್ಥಗಳನ್ನು ಒಪ್ಪಿಸಿ ಇರುವೆವಲ್ಲದೆ, ಈ ದೇವಸ್ಥಾನದಲ್ಲಿರುವ ನಾರಾಯಣಸ್ವಾಮಿ, ತಾಂಡವೇಶ್ವರ, ಸುಬ್ರಹ್ಮಣ್ಯೇಶ್ವರ ಮೊಂತಾದ ದೇವರಿಗೆ ಬೆಳ್ಳಿಯಪೀಠ ಪ್ರಭಾವಳಿ, ಕಿರೀಟ, ಕವೆಚ ಮೊಂತಾದ ಚಿನ್ನ ಬೆಳ್ಳಿಯ ಆಭರಣಗಳು ಇವುಗಳನ್ನೂ ವಸ್ತ್ರಗಳನ್ನೂ ಕೊಟ್ಟರು.

ಪೂರ್ವದಲ್ಲಿ ಇದ್ದ ಕೃತ್ತಿಕೋತ್ಸವ ಮಂಟಪ ಮೊಂತಾದ ಅನೇಕ ಮಂಟಪಗಳನ್ನು ಜೀರ್ಣೋದ್ಧಾರ ಮಾಡಿಸಿದ್ದಲ್ಲದೆ, ಸ್ವಾಮಿ ದೇವಸ್ಥಾನದ ಸವಿಾಪದಲ್ಲಿ ನಿತ್ಯಗಟ್ಟಳೆ ಹೆಚ್ಚು ಗಟ್ಟಳೆಗಳ ಮಂಟಪೋತ್ಸವಗಳಿಗಾಗಿ ನೂತನ ಮಂಟಪಗಳನ್ನು ಕಟ್ಟಿಸಿದರು. ಗೌತಮರಥ ಮೊದಲಾದ ೩ ರಥಗಳನ್ನು ದೃಢವಾಗಿಯೂ ನೂತನವಾಗಿಯೂ ಜೀರ್ಣೋದ್ಧಾರ ಮಾಡಿಸಿ, ಈ ರಥಗಳು ಸುಲಲಿತವಾಗಿ ಬರುವುದಕ್ಕೆ ವಿಸ್ತಾರವಾದ ಮಾರ್ಗಗಳನ್ನು ಮಾಡಿಸಿ, ಕೆಲವುಕಡೆ ಕಲ್ಲುಗಳನ್ನು ಬಿಗಿಸಿ, ಈ ರಥಕ್ಕೂ ಪುಷ್ಪಮಂಟಪ ಕುರುಜು ಮೊಂತಾದ ವಿಚಿತ್ರವಾದ ಮಂಟಪಗಳನ್ನು ಕಟ್ಟುವುದಕ್ಕೂ ಧ್ವಜ ಪತಾಕಾದಿಗಳಿಗೂ ಬಗೆಬಗೆಯಾಗಿಯೂ ನಾನಾ ವರ್ಣಗಳುಳ್ಳದ್ದಾಗಿಯೂ ಇರುವ ವಸ್ತ್ರಗಳನ್ನು ಕೊಟ್ಟರು. ನದಿಯಲ್ಲಿ ಅನೇಕ ಜನರು ಬಂದು ಆಯಾಸಪಡದಂತೆ ಸ್ನಾನಪಾನಗಳನ್ನು ಮಾಡುವುದಕ್ಕೆ ಅನುಕೂಲವಾಗಿ ಕಾವಿಯ ಕೆಲಸಗಳಿಂದ

ಗೌರೀಘಟ್ಟ, ಮಣಿಕರ್ಣಿಕಾಘಟ್ಟ, ತೀರ್ಥಘಟ್ಟ ಮುಂತಾದ ಸ್ಥಳಗಳಲ್ಲಿ ನವಿಗೆ ಸೋಪಾನವನ್ನು ಕಟ್ಟಿಸಿ, ದೇವರು ದಮುಮುಮುನ್ನದಕ್ಕೆ ಕಲ್ಲು ಮಂಟಪಗಳನ್ನು ಮಾಡಿಸಿ, ಕಪಿಲಾನದೀ ಕಾಂಠಸ್ಥನದಿಗಳ ಸುತ್ತಲೂ ದೇವರ ದರ್ಶನಕ್ಕೆ ದೇಶಾಂತರಗಳಿಂದ ಬಂದ ಜನರು ಬಿಸಿಲಿನಲ್ಲಿ ಅಯಾಸ ಪಡದಂತೆ ಸುಖವಾಗಿ ಇರುವುದಕ್ಕೆ ಅನೇಕವಾದ ತೋಪು ಗಳನ್ನೂ ಮಂಟಪಗಳನ್ನೂ ಸಿದ್ಧಿಸಿ, ಪರದಾಮನೀವರೆಗೆ ಗುಡಿ ಯನ್ನು ಜೀರ್ಣೋದ್ಧಾರ ಮಾಡಿಸಿದರು.

ಮುಮ್ಮಡಿ ಶ್ರೀಕೃಷ್ಣ ರಾಜ ಒಡೆಯರವರು ಎರಡನೆಯ ಶಾ॥ ೧೭೮೦ನೇ ಪೀಳಿಂಗಿ ನಂದನ ಸಂವತ್ಸರದ ಪುಷ್ಯ ಬಹುಳ ೦ ಸ್ಥಿರವಾ ರದಲ್ಲಿ ತಲಾಖಾರ ದಾನವನ್ನು ಮಾಡಿದ ಮೇಲೆ, ಶ್ರೀಕಂಠೇಶ್ವರಸ್ವಾಮಿ ಪ್ರೀತಿಗಾಗಿ ನೈವೇದ್ಯಕರತಗೊಂಡಾನವನ್ನು ಮಾಡುವುದಕಂಯ ಸಂಕ ಲ್ಪಿಸಿ, ಬಂದು ಬಾಣಲಿಂಗವನ್ನು ಪೂಜಿಸಿ, ಆ ಬಾಣಲಿಂಗದ ಎದುರಿಗೆ ವಿಕನ್ನವಭವ ಸಹಿತ ಶತಗೋವ್ರಗಳನ್ನು ಧಾರಾಪೂರ್ವಕವಾಗಿ ಸ್ವಾಮಿಯ ವರಿಗೆ ಒಪ್ಪಿಸಿ, ಆ ಬಾಣಲಿಂಗವನ್ನು ಅಮ್ಮನವರ ನೈವೇದ್ಯದ ಎಡ ಗಡೆಯ ಕೈಸಾಲೆಯಲ್ಲಿ ಪೂಜೆಯಲ್ಲಿ ಪಾದವ ಗುಡಿಯ ಅಂಕಣದಲ್ಲಿ ಪ್ರತಿಷ್ಠೆ ಮಾಡಿಸಿ, ಗೌರೀಪತೀಶ್ವರನೆಂಬುವಾಗಿ ನಾಮವನ್ನಿಟ್ಟು, ಪೂಜೆ ನಡೆ ಯುವಂತೆ ಕಟ್ಟಳೆ ಮಾಡಿಸಿ, ಗೋವ್ರಗಳ ಸಂರಕ್ಷಣಾರ್ಥವಾಗಿ ನಂಜ ನಗೂಡು ತಾಲ್ಲೂಕಿನ ಸಮೀಪದಲ್ಲಿರುವ ಮೆಸಗೆ ಎಂಬ ಗ್ರಾಮ ಮುಂತಾದ ಸ್ಥಳಗಳಲ್ಲಿ ಈವು ಹುಲ್ಲುಗಾವಲುಗಳನ್ನು ಕೊಟ್ಟು, ಹಾಲು ಮೊಸರು ಬೆಣ್ಣೆಗಳು ದೇವರ್ಕಾನಕ್ಕೆ ಬರುವಂತೆ ನಿಬಂಧನೆ ಮಾಡಿಸಿದರು.

ಆಗಮೋಕ್ತ ಪ್ರಕಾರವಾಗಿ ನಡೆಯುತ್ತಲಿರುವ ನಿತ್ಯೋತ್ಸವ ಪಾಕ್ಷೋತ್ಸವ, ಮಾಸೋತ್ಸವ, ಸಂವತ್ಸರೋತ್ಸವ, ದಶೋತ್ಸವ, ಮುಂತಾದ ಉತ್ಸವಗಳಿಗೆ ಕಲಶಪತ್ತು ಪಲ್ಲಕ್ಕಿ, ಛತ್ರ, ಚಾಮರ, ಸುಗಂಧಿಕಾನ, ಪೀಠಿಕಾಲ್, ಬಳ್ಳಿಯಜ್ಯೋತಿಷ, ಬಿಳ್ಳಾದಿ ಆನೆ, ಕುದುರೆ, ವೈಭವ, ಜೆಲುಸ, ನಂದಿ, ಚಂದ್ರಮೇಘಾಡಂಬರ ಮುಂತಾದ ನಾನಾ ವಿಧಗಳಾದ ವಾಹನಗಳನ್ನು ಒಪ್ಪಿಸಿದರು. ಇನ್ನೂ ಅನೇಕ ವಿಚಿತ್ರವಿಚಿತ್ರ

ವಾಗಿಯೂ ಉನ್ನತವಾಗಿಯೂ ಚಿನ್ನದ ಬೆಳ್ಳಿಗಳಿಂದ ಮಾಡಿಸಿರುವ ವಾಹನಗಳು ಯಾವುವೆಂದರೆ:—ಶಾ॥ ೧೬೫೦ನೆಯ ಪ್ಲವಂಗ ಸಂವತ್ಸರದ ಶ್ರಾವಣ ಶುದ್ಧ ೧೫ ಬುಧವಾರವಲ್ಲಿ ಅನೆ ಸಹಿತವಾಗಿ ಗಜರಥ, ಅದೇ ಕಾರ್ತಿಕ ಶುದ್ಧ ೧೫ ಸೋಮವಾರದಲ್ಲಿ ಜಕಣ್ಣಾಕಾರವಾಗಿ ತಿರುಗುವ ಬೆಳ್ಳಿಯ ಕುದುರೆ, ಶಾ॥ ೧೬೬೪ನೆಯ ವಿರೋಧಿಕೃತ್ಸಂವತ್ಸರದ ಮೊಷ ಬಹುಳ ೧೪ ಯಲ್ಲಿ ಬೆಳ್ಳಿಯ ಕೈಲಾಸವಾಹನ. ಈ ಉತ್ಸವಗಳ ಸಂಗಡ ಬರುವುದಕ್ಕೆ ಕಲಾಕತ್ತು ಜೀನಿನಿಂದ ಅಲಂಕೃತವಾದ ಹಿಡಿಗುದುರೆಗಳನ್ನೂ ಡಂಕಾದ ಕುದುರೆಯನ್ನೂ ನಗಾರಿಯಾನೆಯನ್ನೂ ಆಗ್ರೋದಕಕ್ಕೆ ಆನೆಯನ್ನೂ ಬಿಟ್ಟಿಸಿರುವವಲ್ಲದೆ, ಕೆಲವು ಬಾಗಿಲುಗಳಿಗೆ ಹಿತ್ತಾಳೆಯ ಬೆಳಕಟ್ಟುಗಳನ್ನು ಮಾಡಿಸಿ ಬಿಟ್ಟಿಸಿದರು.

ದೇವಸ್ಥಾನದ ಪೂರ್ವ ಪಾರ್ಶ್ವದಲ್ಲಿ ಅಧಿಷ್ಠಾನ ಶುದ್ಧಿಯಾಗಿ ಭೂರಿ ಕಲ್ಲುಗಳಿಂದ ಚಿತ್ರ ವಿಚಿತ್ರವಾಗಿ ಮಹಾದ್ವಾರವನ್ನು ನಿರ್ಮಿಸಿ ತನ್ನ ಸಹಧರ್ಮಿಣಿ ಮಾತೃಶ್ರೀಯವರಾದ ದೇವಾಜಮ್ಮಣಿಯವರ ನಾಮಾಂಕಿತದಿಂದ ಅತ್ಯುನ್ನತವಾಗಿ ಏಳು ಲೆವಲು ಗೋಪುರವನ್ನು ಯಥಾಶಾಸ್ತ್ರವಾಗಿ ನಿರ್ಮಿಸಿ, ಚಿನ್ನದ ಏಳು ಭೂರಿ ಕಲಶಗಳನ್ನೂ ಎರಡು ಕೋರಂಬುಗಳನ್ನೂ ಹಾಕಿಸಿ, ಶಾ॥ ೧೬೫೧ನೆಯ ಕೀಲಕ ಸಂವತ್ಸರದ ಜ್ಯೇಷ್ಠ ಶುದ್ಧ ೫ಗುರುವಾರದಲ್ಲಿ ಪ್ರತಿಷ್ಠೆ ಮಾಡಿಸಿದರು. ಉತ್ಸವದೇವರ ಸನ್ನಿಧಿಯ ಪೂರ್ವ ಭಾಗದ ಅಂಕಣದಲ್ಲಿ ಶಾ॥ ೧೬೫೦ನೆಯ ಪ್ಲವಂಗ ಸಂವತ್ಸರದ ಮಾರ್ಗಶಿರ ಶುದ್ಧ ೧ ಬುಧವಾರದಲ್ಲಿ ಮಹಾಲಿಂಗೇಶ್ವರನೆಂಬ ಶಿವ ಪ್ರತಿಷ್ಠೆಯನ್ನು ಮಾಡಿಸಿದರು.

ಶಾ॥ ೧೬೫೧ನೆಯ ಕೀಲಕ ಸಂವತ್ಸರದ ಅಧಿಕ ಜ್ಯೇಷ್ಠ ಶುದ್ಧ ೧೪ ಸ್ಥಿರವಾರದಲ್ಲಿ ಶ್ರೀಕಂಠೇಶ್ವರಸ್ವಾಮಿಗೆ ಜವಾಹಿರಿ ಪರ್ವತವನ್ನೂ, ಆ ನಿಜಜ್ಯೇಷ್ಠ ಶುದ್ಧ ೧೫ ಸೋಮವಾರವಲ್ಲಿ ಚಿನ್ನದ ಬೆಳ್ಳಿಗಳಿಂದ ಚಿತ್ರ ವಿಚಿತ್ರವಾಗಿ ನಿರ್ಮಿಸಿರುವ ರುದ್ರಾಕ್ಷಿಮಂಟಪವನ್ನೂ, ಆ ಆಶ್ವಯುಜ ಶುದ್ಧ ೧೫ ಸ್ಥಿರವಾರದಲ್ಲಿ ಬೆಳ್ಳಿಯ ಆನೆಯನ್ನೂ, ಪುಷ್ಯ ಶುದ್ಧ ೧೫ ಬುಧವಾರದಲ್ಲಿ ಬೆಳ್ಳಿಯ ವೃಷಭವನ್ನೂ, ಆ ಫಾಲ್ಗುನ ಶುದ್ಧ ೧೪ ಯಲ್ಲಿ ಈಶಾಬತ್ತು ಬೀಸಣಿಗೆ ಮುಂತಾದ ವಸ್ತ್ರಾಭರಣಂಗಳನ್ನು

ಒಪ್ಪಿಸಿ, ಪ್ರತಿದಿನವೂ ಅಮ್ಮನವರ ಸನ್ನಿಧಿಗೆ ಕುಂಕುಮಾರ್ಚನೆ ಮತ್ತು ನೈವೇದ್ಯ ಸಲ್ಲಿಸುವಂತೆ ಕಟ್ಟಳೆ ಮಾಡಿಸಿದರು. ಶಾ॥ ೧೩೦೦ನೆಯ ಪ್ಲವಂಗ ಸಂವತ್ಸರದ ಭಾದ್ರಪದ ಕೃಷ್ಣ ೧೫ ಶುಕ್ರವಾರದಲ್ಲಿ ಉತ್ಸವದೇವರಿಗೆ ಕಲಾಪತ್ತು ಚಾಂದನೀ ಮಂಟಪವನ್ನು ಒಪ್ಪಿಸಿದರು.

ದೊರೆಗಳವರು ಮಾಡಿಸಿರುವ ಇತರ ಶಿವಪ್ರತಿಷ್ಠೆಗಳು ಯಾವುವೆಂದರೆ—ಶಾ॥ ೧೩೫೭ನೆಯ ಜಯ ಸಂವತ್ಸರದ ಕಾರ್ತಿಕ ಶುದ್ಧ ೨ ಸೋಮವಾರದಲ್ಲಿ ಬಸವೇಶ್ವರ, ಅದೇ ಕಾರ್ತಿಕ ಬಹುಳ ೧೦ ಶುಕ್ರವಾರದಲ್ಲಿ ದೇವೇಶ್ವರ, ಶಾ॥ ೧೩೫೮ನೆಯ ಸೌಮ್ಯ ಸಂವತ್ಸರದ ವೈಶಾಖ ಶುದ್ಧ ೨ ಬುಧವಾರದಲ್ಲಿ ಮುದುಕಪ್ಪಣೇಶ್ವರ, ಶಾ॥ ೧೩೫೯ನೆಯ ಸಾಧಾರಣ ಸಂವತ್ಸರದ ಫಾಲ್ಗುಣ ಬಹುಳ ೨ ಮಂಗಳವಾರದಲ್ಲಿ ಬಾಲ ಕೊಂಪನಂಜೇಶ್ವರ ಮತ್ತು ಬಾಲ ಕೊಂಪದೇವಾನೀಶ್ವರ, ಶಾ॥ ೧೩೫೪ನೆಯ ವಿರೋಧಿಕೃತ್ಸಂವತ್ಸರದ ಜ್ಯೇಷ್ಠ ಶುದ್ಧ ೬ ಗುರುವಾರದಲ್ಲಿ ಭದ್ರಕಾಳೇಶ್ವರ.

ಈ ರೀತಿಯಾಗಿ ಶಿವಪ್ರತಿಷ್ಠೆಗಳನ್ನು ಮಾಡಿಸಿ, ದೇವಸ್ಥಾನದ ಹೊರಗೆ ಬಲಗಡೆಯ ಸಮಿಾಪದಲ್ಲಿ ಮೆಂಟಪೋತ್ಸವಕ್ಕೆ ಮೆಂಟಪವನ್ನು ಕಟ್ಟಿಸಿ, ಈ ದೇವರಿಗೆಲ್ಲಾ ಬೆಳ್ಳಿಯಮಂಚಗಳಲ್ಲಿ, ಪೂಜೋಪಕರಣ ಪಾತ್ರೆಗಳನ್ನೂ ವಸ್ತ್ರಾಭರಣಗಳನ್ನೂ ಕೊಟ್ಟು ಅಪರಿಮಿತವಾಗಿ ದೇವತಾ ಸೇವೆ ಮಾಡಿದರು. ಇದಲ್ಲದೆ ಉತ್ಸವದೇವರ ಗುಡಿಯ ಎದುರಿಗೆ ಒಂದು ದೊಡ್ಡ ಅಂಕಣದ ಗುಣಿಯಲ್ಲಿ ಬಾಸಾ ಭಕ್ತವಿಗ್ರಹವನ್ನೂ ಕಲುವು ಪತ್ನೀ ಪುತ್ರರ ವಿಗ್ರಹಗಳನ್ನೂ ಲೋಹದಿಂದಲೂ ಶಿಲೆಯಿಂದಲೂ ಸಮ್ಮಿಸಿ ಪ್ರತಿಷ್ಠೆ ಮಾಡಿಸಿ ವಸ್ತ್ರಾಭರಣಗಳನ್ನು ಕೊಟ್ಟರು. ತ್ರೈಕಾಂತೇಶ್ವರ ಸ್ವಾಮಿಯವರಿಗೆ ಪ್ರತಿದಿನವೂ ಷೋಡಶೋಪಚಾರ ಪೂಜೆ, ಕಾಲ್ಯಾಭಿಷೇಕ, ಶಿವಕೂಟ, ನಿತ್ಯೋತ್ಸವ, ವಾರೋತ್ಸವ, ಪಕ್ಷೋತ್ಸವ, ಮಾಸೋತ್ಸವ, ಸಂವತ್ಸರೋತ್ಸವ, ರಥೋತ್ಸವಾದ್ಯನೇಕೋತ್ಸವಗಳು, ನವರಾತ್ರಿಯಲ್ಲಿ ನವಕಚಂಡಿಜಪ, ಪಾರಾಯಣ, ಪುರಾಣ, ಸಮಾರಾಧನೆ ಮುಂತಾದವುಗಳು ನಡೆಯುವುದಕ್ಕೂ, ಅರ್ಚಕ, ಆಗಮಿಕ,

ಮುಂತಾದ ಉಪಾಧಿ ಬ್ರಾಹ್ಮಣರು, ಪಾರುಪತ್ಯ, ಶಿರಸ್ತೆ, ಕ್ಯಾನುಭೋಗ, ಬಿದ್ದಿಕ, ಮೊನ್ರು, ಸೂಳೆಯರು, ಕಾವಲು, ತಮ್ಮಡಿ, ಶಿಲಗ, ತಾಳ, ಮೇಳ, ಚಿನಿ, ಕುಮುರ, ಕೈವಾಡದ ಜನರು, ದೀವಸ್ಥಾನದಲ್ಲಿ ನಾಲ್ಕು ವೇಳೆ ಪೂಜೆ ಮುಂತಾದ ಕೆಲಸಗಳಲ್ಲಿ ನೆಲೆಗೊಂಡಿರುವ ಜನಗಳ ಜೀವನ ನಡೆಯುವಹಾಗ್ಗೆ ಸಾರೋದ್ಧಾರವಾಗಿ ಇರುವಂತೆ ಭೂರಿ ತಸ್ದೀಕನ್ನು ಬಿಂಟಿಸಿಕೊಡಿ, ತಗಮೆ ರಾಜ್ಯಕ್ಕೆ ಸ್ವಲ್ಪವೂ ನ್ಯೂನತೆಯಿಲ್ಲದಂತೆ ಶ್ರೀ ಶ್ರೀಕಂಠೇಶ್ವರ ಸ್ವಾಮಿಯವರ ಸೇವೆಗಳನ್ನು ಮಹಾವೈಭವದಿಂದ ನಡೆಸಿದರು.

ಮಹಾಸ್ವಾಮಿಯವರಿಗೆ ಕೇವಲ ಬಾಲ್ಯವಲ್ಲಿಯೇ ಮೌತಾಪಿತ್ಯ ವಿಯೋಗವಾದುದಾಗಲು ಅವರನ್ನು ತುಂಬಾ ಮಮತೆಯಿಂದ ಪಾಲಿಸಿ ಪೋಷಿಸಿ, ಬಿಗಿನ ಕಾಲಪ್ರಾಪ್ತಿಯಿಂದ ಬಂದೊದಗಿದ ಕಷ್ಟ ನಿಷ್ಠುರ ವರಾನವೆಲ್ಲವನ್ನೆಲ್ಲ ಸಹಿಸಿಕೊಂಡು ಕುಲಕ್ರಮಾಗತವಾದ ರಾಜ್ಯಲಾಂಛನಕ್ಕೆ ಕಸ್ಮಕ್ಕೆ ಕಾಲೊಟ್ಟಿತ ಕೃತ್ಯಗಳನ್ನೆಲ್ಲ ಸಾಂಗವಾಗಿ ನೆರವೇರಿಸಿ ಕೃತಾರ್ಥರಾದ ತಮ್ಮ ಪಿತಾಮಹಿಯವರು ಮಹಾಮಾತೃಶ್ರೀ ಲಕ್ಷ್ಮಮ್ಮಣ್ಣಿಯವರ ಉದ್ಭೇದದಿಂದ ದೊಸೆಗಳವರು ನಂಜನಗೂಡು ಶ್ರೀಕಂಠೇಶ್ವರ ಸ್ವಾಮಿಯವರ ಸನ್ನಿಧಿಯಲ್ಲಿ ಪ್ರತಿದಿನವೂ ಅಗ್ರೋದಕ, ರುದ್ರ ಪಾರಾಯಣ, ಸಹಸ್ರನಾಮ, ದಧ್ಯೋದನನಿವೇದನ ಮೊತ್ತ ಶ್ರೀ ಪೂರ್ವ ಸೇವೆಯಾಗುವ ಸನ್ನಿಧಿಯಲ್ಲಿ ಪ್ರತಿಮಣ್ಣೆಯಲ್ಲಿಯೂ ಅರಿಸಿನದ ಸೇವೆ ಇವುಗಳು ನಡೆಯುವಂತೆ ಕಟ್ಟಳೆಯನ್ನೇರ್ಪಡಿಸಿ 1824ನೆ ಯ.ಸವಿ (ಪಾರ್ಥಿವ ಸಂವತ್ಸರ) ಜೂನ 3ನೆಯ ತಾರೀಖಿನಲ್ಲಿ ನಂಜನಗೂಡು ತಮಲೆಗಾರ ಮುರಾರಿರಾಯರಿಗೆ ನಿರೂಪವನ್ನು ಅಪ್ಪಣೆ ದಯಪಾಲಿಸಿರುತ್ತಾರೆ.

/ ನಂಜನಗೂಡಿನಲ್ಲಿ ಮೈಸೂರ ಅರಮನೆಯಂತೆ ಅಂತಃಪುರದ ಸ್ತ್ರೀಯರು ಇರುವುದಕ್ಕೆ ಯೋಗ್ಯವಾಗಿ ವಿಸ್ತಾರವಾದ ಅರಮನೆಯನ್ನು ಸಾಗಾಬಾನು ಕರವೆಪಟ್ಟು, ಬಿಂಕರಿ, ಉಗ್ರಾಣ ಮುಂತಾದವುಗಳನ್ನು ಕಟ್ಟಿಸಿ, ಅರಮನೆಯ ಹಿಂದುಗಡೆಯಲ್ಲಿ ಶೃಂಗಾರದ ತೋಟವನ್ನು ಸಿದ್ಧಾನಿಸಿ, ಬೇಕಷ್ಟಾನದ ಈಶಾನ್ಯಭಾಗದಲ್ಲಿ ಒಕ್ಕ ಅರಮನೆ

ಯನ್ನು ಕಟ್ಟಿಸಿ, ಸುಖವಾಗಿ ಜೀವಿಸುವಾಗ ಅಲ್ಲಿಯೇ ದರ್ಬಾರು ಮಾಡಿಕೊಂಡು ಇರುವುದು ಎಂದು ಸಂಬಂಧವನ್ನು ಮುಗಿದರು.

4. ಚಾಮರಾಜನಗರ.—ಅಳಿದ ಮೈಸೂರಿನಿಯವೆಂಬ ನಂದರಾಜಾಸಿಧ ಮುಮ್ಮಡಿ ಶ್ರೀಕೃಷ್ಣರಾಜೇಂದ್ರ ಒಡೆಯರವರು, ತಮ್ಮ ತಂದೆಯವರಾದ ಮುನ್ನಡಿ ಚಾಮರಾಜೇಂದ್ರ ಒಡೆಯರವರು ಅಂಕುತರವೆಂಬ ಗ್ರಾಮವನ್ನು ಅಪೇಕ್ಷಿಸಿದಾನಕಾರಣ ಅವರ ಮನಸ್ಸನ್ನು ಉಳಿದ್ರಾಕ್ಷವಾಗಿ ಇರಬೇಕೆಂದು ಪರ್ಯಾಲೋಚಿಸಿದವರಾಗಿ, ಈ ಅರಿಕುತಾರವೆಂಬ ಗ್ರಾಮಕ್ಕೆ ಪರವನಪಳ್ಳಿ, ಗುಂಪ್ಲು, ಕಳಲೆ, ನಂಜನಗೂಡು ತಾಯೂರು, ತಲಕಾಡು ಮುಂತಾದ ತಾಲ್ಲೂಕುಗಳಲ್ಲಿ ಬರುವ ಕಲವು ಉತ್ತಮವಾದ ಗ್ರಾಮಗಳನ್ನು ಹೊಂಗನೂರು ತಾಲ್ಲೂಕನ್ನು ಸೇರಿಸಿ ಒಟ್ಟು ೭೦ ಸಾವಿರದಹುಟ್ಟುವಳಿಯ ಸೀಮೆಯನ್ನು ಸಂಬಂಧವನ್ನಾಗಿ ಮಾಡಿ ಚಾಮರಾಜನಗರವೆಂಬ ನಾಮಧೇಯವನ್ನು ಉಂಟುಮಾಡಿ ಪಟ್ಟಣದಲ್ಲಿ ಶಿವ ವಿಷ್ಣು ಮುಂತಾದ ದೇವತೆಗಳ ಆಲಯಗಳನ್ನು, ಬ್ರಾಹ್ಮಣರ ಮನೆಗಳನ್ನು, ಅರಸುಗಳು, ಅಧಿಕಾರಿಗಳು, ಗುರಿಕಾರರು, ಸಮುದಾಯದವರೂ, ನಂಗಿತಗಾರರು, ವೈದ್ಯರು ಮುಂತಾದ ಅನೇಕಜನರ ಪಣಕಟ್ಟಿನ ಸೇರಿದ ಸಮಸ್ತ ಜನರ ಮನೆಗಳನ್ನು, ಪೂರ್ವಾರ್ಜಿತ ಧೃತರಲ್ಲದೆ ಅನೇಕಜನ ವೈಶ್ಯರು, ನೆಟ್ಟಿ, ನೇತಗಳರು, ವೀವಾಂಗದವರು ಜಟ್ಟಿಗಳು, ಜೋತಿಷ್ಯರವರು ಮುಂತಾಗಿ ಅನೇಕವಾದ ಕ್ಷತ್ರಿಯಾದ ಜನರ ಮನೆಗಳನ್ನು, ಸಿಪಾಯಿಜನರನ್ನು ಜೀವನ ಮಾಡುವ ರಾಜಪುತ್ರರ ಮೊಗಲಿ ಮುಸಲ್ಮಾನ್ರ ಪೆತ್ತ ಸುಖವಾನದಲ್ಲಿ ನಾನಾಪ್ರಕಾರವಾಗಿ ವಾಸವನ್ನುಮಾಡಿಕೊಂಡಿರುವ ಪಣಕಟ್ಟಿನ ಜನಗಳು ತಮಗಾಗಿ ಮನೆಗಳನ್ನು ಕಟ್ಟಿಸಿ, ಬಗೆಬಗೆಯಾದ ವ್ಯಾಪಾರವನ್ನು ವೃದ್ಧಿಮಾಡಿಕೊಂಡು ಜೀವನ ಮಾಡುವುದಕ್ಕೆ ಯೋಗ್ಯವಾದ ಅಂಗಡಿ ಬೀದಿಗಳನ್ನು ಮಾಡಿಸಿ, ಪುಕ್ರಸಾರನಲ್ಲಿ ಸಂತೆಯಾಗುವಂತೆ ವಿಬಂಧನೆ ಮಾಡಿಸಿದನು.

ಮತ್ತು ದೊಲಿಗಳು ಈ ನಗರದಲ್ಲಿ ತಮ್ಮ ತಂದೆಯವರಾದ ಮುಮ್ಮಡಿ ಚಾಮರಾಜೇಂದ್ರ ಒಡೆಯರವರು ಜನಿಸಿದ ನೆನೆಪು ನುಡ್ಡಲಾಗಿ ಸ್ಮಾರಕವಾಗಿ ಹೊಕ್ಕಿಸಿಕೊಂಡು ಪುಸಾರ ಚಾಮುಂಡೆಯಂತೆ ಅಂಬಾ

ಒ

ವಿಲಾಸ, ಉತ್ಸವವಿಲಾಸ, ಕೃಷ್ಣ ವಿಲಾಸ, ರಮಾವಿಲಾಸ, ಚಂದ್ರವಿಲಾಸ, ಸಭಾಮಂಟಿಲಾಸ, ಮುಂತಾದ ವಿಲಾಸದ ತೊಟ್ಟಿಗಳನ್ನೂ ಸಮುಖದ ತೊಟ್ಟಿ, ಸಾಮತೀರ್ಥದ ತೊಟ್ಟಿ, ಚಾಮುಂಡೀಶ್ವರಿಯತೊಟ್ಟಿ, ಬಿಡದಿ, ಮೂಕ್ಕನ, ಉಗ್ರಾಣ ಮುಂತಾದವುಗಳನ್ನೂ ಕಟ್ಟಿಸಿದ್ದಲ್ಲದೆ ಓಬಗದ ಸೆಟ್ಟಿ, ಅನಂತಗಿಲು, ಮೈಸೂರ ಅರಮನೆಯ ಉಭಯ ಪಾರ್ಶ್ವಗಳಲ್ಲಿಯೂ ಇರುವಂತೆ ೧೪ ಕಚೇರಿಗಳನ್ನೂ, ನಗಾರಿಮನೆ, ಕೆಮ್ಮಣ್ಣು ಮಟ್ಟಿ, ಅರಮನೆಯ ಹಿಂದುಗಡೆಯಲ್ಲಿ ಶೃಂಗಾರದತೋಟ, ಈ ಚಾಮರಾಜನಗರವನ್ನು ಸ್ವಕಲ್ಪಕಂದಾಚಾರದ ಅಡವಣಿಕೆ, ಕೊತ್ತವಾಲ, ಚಾವಡಿ, ಸುಂಕದ ಚಾವಡಿ ಮುಂತಾದವುಗಳನ್ನೂ ಕಟ್ಟಿಸಿ, ಇವಕ್ಕೆ ಬುದ್ಧಿವಂತರಾದ ಸುಬೇದಾರ, ಪೇಷ್ಕಾರ, ಶಿರಸ್ತೆದಾರ, ಗುಮಾಸ್ತೆ, ಮುನಷಿ, ಕಂಠಾಚಾರ ಮತ್ತು ಕೆಲ್ಲೀದಾರ, ಪಿವಸ್ತೆದಾರ, ಹೋಬಳಿದಾರ, ನಧೆದಾರ, ಪಿಲಕಾರ, ಅಂಚೆ ಮುತ್ಸದ್ದಿ, ಊಳಿಗದವರು ಮುಂತಾದ ಅಡವಣಿ ಕಂದಾಚಾರದ ಸಿಬ್ಬಂದಿಯನ್ನು ನಿಬಂಧನೆ ಮಾಡಿದರು.

(ಈ ಚಾಮರಾಜನಗರವು ಕಾಶಿ, ರಾಮೇಶ್ವರ, ಶ್ರೀರಂಗ, ಹುಂಸೂರು, ಅನಂತಶಯನ ಮುಂತಾದ ನುಡಾ ಸ್ಥಳಗಳಿಗೆ ಸಂಚಾರ ಮಾಡುವುದಕ್ಕೆ ಭಾರಿ ಮಾರ್ಗವಾದ್ದರಿಂದ, ಇಲ್ಲಿ ನಿತ್ಯಗಟ್ಟಳೆಯು ಲಿಯೂ ಅನ್ನದಾನ ನಡೆಯುವಂತೆ ಬ್ರಾಹ್ಮಣರ ಛತ್ರವನ್ನೂ ಗಣಾರಾಧನೆಯ ಛತ್ರವನ್ನೂ ನಿರ್ಮಾಣಿಸಿದರು.)

ಈ ರೀತಿಯಾಗಿ ಪ್ರಾಬಲ್ಯಕ್ಕೆ ತಂದ ಚಾಮರಾಜನಗರಕ್ಕೆ ದೊರೆ ಗಳವರು ಕ್ರಿ॥ ೧೮೫೫ನೆಯ ಸ್ವಭಾನು ಸಂವತ್ಸರದ ಮಾಘ ಶುದ್ಧ ೧೨ ಗುರುವಾರದಲ್ಲಿ ಅಂತಃಪುರದ ಸನ್ನಿಧಾನಗಳೊಡನೆ ಮೈಸೂರಿಂದ ಸವಾರಿ ಬೆಳ್ಳಯಿಸಿ, ಅದೇ ಮಾಘ ಬಹುಳ ೫ ಗುರುವಾರ ಶಿಷ್ಟಾ ಸಹಿತ್ರ ವಲ್ಲಿ ಅತಿ ಸಂಭ್ರಮದಿಂದ ಹೊಸ ಅರಮನೆಯ ಗೃಹಪ್ರವೇಶ ಮಹೋತ್ಸವವನ್ನು ನಡಸೇರಿಸಿ, ಅನೇಕ ಜನ ಬ್ರಾಹ್ಮಣರಿಗೆ ದಕ್ಷಿಣೆಗಳನ್ನು ಕೊಟ್ಟು, ಸಮಾರಾಧನೆಯನ್ನು ಮಾಡಿಸಿ, ಅರಸುಗಳು, ಅಧಿಕಾರಿಗಳು, ಗುರಿಕಾರರು, ವಿದ್ವಾಂಸರು ಮುಂತಾದ ಸಮಸ್ತ ಜನಗಳಿಗೂ ಉಡುಗೊರೆಗಳನ್ನು ಕೊಟ್ಟು, ಊಟಗಳನ್ನು ಮಾಡಿಸಿ,

ಅತ್ಯಂತ ವೈಭವದಿಂದ ಮೈಸೂರಿನಲ್ಲಿ ಬೆಳಯುವ ನವರಾತ್ರಿಯ ಓಲಗದಂತೆ ಈ ಸೆಜ್ಜೆಯಲ್ಲಿ ಭದ್ರಾಸನದ ಮೇಲೆ ಮುಹೂರ್ತಮಾಡಿ, ಬಡ್ಡೋಲಗವನ್ನು ತೆಗೆದುಕೊಳ್ಳುತ್ತಾ, ಜಟ್ಟಿಕಾಳಗವನ್ನು ಮಾಡಿಸಿ ಎಲ್ಲಾ ಪಣಕಟ್ಟಿನ ಜನಗಳಿಗೂ ಊಟವನ್ನು ಮಾಡಿಸಿ, ಅವರವರ ವಿಭವದಿತು ಅನೇಕವಾಗಿ ಉಡುಗೊರೆಗಳನ್ನು ಕೊಡಿಸಿದರು. ಈ ರೀತಿಯಾಗಿ ಗೃಹಪ್ರವೇಶ ಮಹೋತ್ಸವವನ್ನು ನೆರವೇರಿಸಿಕೊಂಡು, ಆಳಿದ ಮಹಾಸ್ವಾಮಿಯವರು ಆ ಮೊಹಲ್ಲಾ ಬಹುಳ ೧೩ ಗುರುವಾರದಲ್ಲಿ ಮೈಸೂರಿಗೆ ಚಿತ್ತೈಯಿಸಿದರು.

ಅನಂತರದಲ್ಲಿ ತಮ್ಮ್ಮತಂದೆಯವರಾದ ಮುಮ್ಮಡಿ ಕೃಷ್ಣರಾಜ ಒಡೆಯರವರು ಬಹಳವಾಗಿ ಈಶ್ವರಾರಾಧನೆಯನ್ನು ಮಾಡಿಸ್ಥಲದೆ, ಕೋಟಿ ಶಿವ ಪುಟಪಾಕ್ಷರೀ ಮಹಾ ಮಂತ್ರ ಪುನಶ್ಚರಣೆಯನ್ನು ಮಾಡಿ, ಸಕಲೇಷ್ಟಾರ್ಥಗಳನ್ನು ಪಡೆದು ಸಾಷ್ಟಾಂಗಪುರಮೇಶ್ವರನಲ್ಲಿ ನಿಷ್ಠೆಯನ್ನು ಹೊಂದಿದವರಾಗಿರುವುದರಿಂದಲೂ, ಇವರ ಪತ್ನಿಯವರಾದ ಮಹಾನುಭಾವೆ ಶ್ರೀ ಕೆಂಪನಂಜಮ್ಮಣ್ಣಿಯವರು ಪತಿಯ ಇಷ್ಟಾನುಸಾರವಾಗಿ ಗೌರೀ ವ್ರತ ಮುಂತಾದ ಅನೇಕ ವ್ರತಗಳನ್ನು ಮಾಡಿ, ಸಕಲೇಷ್ಟಾರ್ಥಗಳನ್ನೂ ಪಡೆದು ಪಾರ್ವತೀದೇವಿಯಲ್ಲಿಯೇ ಐಕ್ಯಹೊಂದಿದವರಾದ ರಿಂದಲೂ, ಇವರಿಬ್ಬರ ನಾಮಾಂಕಿತವಾಗಿ ದೇವರನ್ನು ಪ್ರತಿಷ್ಠೆ ಮಾಡಿಸಿದರೆ ಜನಗಳಿಗೆ ಸಕಲೇಷ್ಟಾರ್ಥಗಳನ್ನೂ ಕೊಟ್ಟು ಸಲಹುವರೆಂತಲೂ, ಇವರ ಯಶಸ್ಸು ಅಚಂದ್ರಾರ್ಕವಾಗಿ ಇರಬೇಕೆಂತಲೂ ಪರ್ಯಾಲೋಚನೆಮಾಡಿ, ಅದರ ಮೊದಲ ಬಲಗಡೆಯ ಪೂರ್ವಭಾಗದಲ್ಲಿ ಶಾಸ್ತ್ರೋಕ್ತಪ್ರಕಾರವಾಗಿ ಬಾಲಾಲಯ ಪೂರ್ವಕವಾಗಿ ದೊಡ್ಡದಾಗಿ ಗುಡಿ, ಗೋಪುರ, ವಿಮಾನ, ಪ್ರಾಕಾರ, ಕೈಸಾಲೆ, ಮಂಟಪ, ಅಗ್ರಾಣಿ, ಅಡಿಗೆಮನೆ, ನೀವಸ್ಥಾನದ ಮುಂದುಗಡೆಯಲ್ಲಿ ಸರೋವರ ಮೊದಲಾದವುಗಳನ್ನು ವಿಸ್ತಾರವಾಗಿ ಕಟ್ಟಿಸಿ, ಈ ವಿಮಾನಗಳಿಗೆ ೧೨ ಚಿನ್ನದ ಕಲಶಗಳನ್ನು ಮಾಡಿಸಿ ಬಾಗಿಲುಗಳಿಗೆ ಹಿತ್ತಾಳೆಯ ಬಾಗಿಲ ವಾಡಗಳನ್ನು ಮಾಡಿಸಿ ದೇವಾಲಯ ಪ್ರತಿಷ್ಠೆಯನ್ನು ನೆರವೇರಿಸಿ ದೇವರನ್ನು ಪ್ರತಿಷ್ಠೆ ಮಾಡಿಸಿದರು. ಹೀಗೆ ಪ್ರತಿಷ್ಠೆ ಮಾಡಿರುವ ದೇವರ ವಿವರವೇನೆಂದರೆ:—

ಶಾ॥ ೧೭೮೯ನೇ ವ್ಯಯ ಸಂವತ್ಸರದ ಜ್ಯೇಷ್ಠ ಶುದ್ಧ ೩ ಗುರು ವಾರದಲ್ಲಿ ಪೂರ್ವದಲ್ಲಿ ಶ್ರೀಕಂಠನಂಜಮಾಂಬಾ ಸಮೇತವಾಗಿ ಶ್ರೀಚಾಮುಂಡೇಶ್ವರಸ್ವಾಮಿ *ಪ್ರತಿಷ್ಠೆಯನ್ನು ಮಾಡಿಸಿ, ಈ ಸ್ವಾಮಿಯವರ ಸನ್ನಿಧಾನದ ಉಭಯಪಾರ್ಶ್ವಗಳಲ್ಲಿಯೂ ದೇವನಾಂಬೇಶ್ವರ, ಜೋಲುವಾಂಬೇಶ್ವರ, ದೇವಿರಮ್ಮಾಂಬೇಶ್ವರ, ಲಕ್ಷ್ಮಮ್ಮಾಂಬೇಶ್ವರ, ನಂಜಮ್ಮಾಂಬೇಶ್ವರ, ದೇವಾಜಮ್ಮಾಂಬೇಶ್ವರಿ ಎಂಬುವಾಗಿ ತಮ್ಮ ಸಹೋದರೀ ಮಾತೃಶ್ರೀಯವರ ನಾಮಧೇಯಗಳನ್ನು ಇಟ್ಟು ವೈಭವ ಸಹಿತವಾಗಿ ಪಟ್ಟಮಹಿಷಿ ಪ್ರತಿಷ್ಠೆಯನ್ನು ಮಾಡಿಸಿದರು. ನವ ಚೀನಗಳಿಂದ ಸಾಂಗವಾಲಯವೆನಿಸಬೇಕೆಂಬ ಅಮ್ಮನವರಿಂದ ಬಹಳಗೊಡಿಸುವ ಚಂದ್ರಶೇಖರಸ್ವಾಮಿ, ಮನೋನ್ಮನಾಂಬಾ, ಪಾಂಥವೇಶ್ವರ, ನಿತ್ಯಕಲ್ಯಾಣಮೂರ್ತಿ, ಸೋಮಸ್ಕಂದ, ಕಿರಾತಾರ್ಜುನ, ಉಮಾಮಹೇಶ್ವರ ಎಂಬುವಾಗಿ ಹೆಸರುಗಳುಳ್ಳ ವಿಗ್ರಹಗಳನ್ನೂ, ಅಮ್ಮನವರುಗಳನ್ನೂ, ಗಣಪತಿ, ಚಂಡೀಶ್ವರ, ಅಸ್ತ್ರಮೂರ್ತಿ, ಸರಸ್ವತಿ ಮುಂತಾದ ದೇವರ ಲೋಹವಿಗ್ರಹಗಳನ್ನೂ ಪ್ರತಿಷ್ಠೆ ಮಾಡಿಸಿದರು. ಪ್ರಸನ್ನ ಗಣಪತಿ, ದ್ವಾರಪಾಲಕರು, ಚಾಮುಂಡೇಶ್ವರಿ, ಆಲಯಪ್ರಧಾನಮೂರ್ತಿ, ಶ್ರೀದೇವಿ ಭೂದೇವಿಯರಿಂದೊಡಗೂಡಿದ ಆಲಯ ನಾರಾಯಣಸ್ವಾಮಿ, ಭಾಸ್ಕರಸ್ವಾಮಿ, ಸೂರ್ಯಚಂದ್ರಸೂರ್ತಿಗಳು, ಭಕ್ತಿಕೇಶ್ವರ, ಪಾರ್ವತಿಯಮ್ಮ ಅನ್ನಪೂರ್ಣೇಶ್ವರಿ, ಇದಲ್ಲದೆ ಅಂಕಣ ೧ಕ್ಕೆ ೩ ವಿಗ್ರಹಗಳ ಮೇರೆಗೆ ಅಂಕಣ ೨ಕ್ಕೆ ೬ ಪ್ರಧಾನದ ಭಕ್ತ ವಿಗ್ರಹಗಳು ೬೬, ಈ ರೀತಿಯಾಗಿ ಗಣಪತಿ ದೊಡ್ಡವಾಗಿ ಹೇಳಿರುವ ೩ ಶಿಲಾವಿಗ್ರಹಗಳನ್ನೂ, ಉತ್ತರ ಪಾರ್ಶ್ವದ ಕೈಸಾಲೆಯ ಅಂಕಣದಲ್ಲಿ ಯಥಾಕ್ರಮವಾಗಿ ಪಂಚವಿಂಶತಿ ಲೀಲಾಮೂರ್ತಿಗಳನ್ನೂ, ಕ್ಷೇತ್ರಪಾಲಕ ಮುಂತಾದ ವಿಗ್ರಹಗಳನ್ನೂ, ಚಿನ್ನದ ಫಲಕಗಳಿಂದ ಕೂಡಿದ ೧೧ ವಿಮಾನಗಳನ್ನೂ, ಇದೇ ರೀತಿಯಾಗಿ ಕೊಳಗದಿಂದ ಸಹಿತವಾದ ಧ್ವಜಸ್ತಂಭವನ್ನೂ, ದೊಡ್ಡ ಬಸವೇಶ್ವರ, ದ್ವಾರಪಾಲಕ, ಬಲಿಪೀಠ, ಚಾಮುಂಡೇಶ್ವರೀ ಪಾದಪದ್ಮಗಳನ್ನೂ ಪ್ರತಿಷ್ಠೆ

* ಇಲ್ಲಿ ಪ್ರತಿಷ್ಠೆಯಾಗಿರುವ ದಿವ್ಯ ಲಿಂಗ ಶ್ರೀ ಶೃಂಗೇರಿ ಸ್ವಾಮಿಗಳವರಿಂದ ಅನುಗೃಹೀತವಾದುದು.

ಮಾಡಿಸಿದರು. ಪಶ್ಚಿಮ ದಿಕ್ಕಿನ ಕೈಸಾಲಿನ ಮೆಷ್ಟಿಯ ಅಂಕಣದಲ್ಲಿ ಸ್ವನಾಮಾಂಕಿತವಾಗಿ ಪ್ರಸನ್ನ ನಂಜರಾಜೇಶ್ವರನೆಂಬುವಾಗಿ ವೈಷಭ ಸಹಿತವಾದ ಶಿವಪ್ರತಿಷ್ಠೆಯನ್ನು ಮಾಡಿಸಿ, ಇವರ ಉಭಯ ಪಾರ್ಶ್ವಗಳಲ್ಲಿಯೂ ಚಿಲುಮೇಶ್ವರ, ದೇವೇಶ್ವರ, ಗೌರೀವಲೀಶ್ವರ, ಸಿದ್ಧೇಶ್ವರ, ಬನಶೇಶ್ವರ, ಮುಮ್ಮಡಿ ಕೃಷ್ಣೇಶ್ವರ (ಸ್ವಾಮಿಯ ಗುಡಿಯ ಉತ್ತರ ಪಾರ್ಶ್ವದಲ್ಲಿ) ಎಂಬ ದೇವರುಗಳ ಪ್ರತಿಷ್ಠೆಯನ್ನು ಮಾಡಿಸಿದರು. ಅದೇ ಪರಿಮಾದಿಕ್ಕಿನ ಕೈಸಾಲಿನ ಅಂಗಣಗಳಲ್ಲಿ ಮಹಾಲಿಂಗೇಶ್ವರ, ಮೆರಿವೇಹೇಶ್ವರ, ಬಾಲಲೀಲಾಮುರಾಜೇಶ್ವರ, ಪುಟ್ಟೇರಂಗೇಶ್ವರ, ಮುಮ್ಮಡಿ ಲಿಂಗೇಶ್ವರ, ಮಲ್ಲೇಶ್ವರ, ಲಕ್ಷ್ಮೀಶ್ವರ, ದೇವಾಜೇಶ್ವರ, ಮಹಾದೇವೇಶ್ವರ, ಭದ್ರೇಶ್ವರ, ಬಾಲನಂಜರಾಜೇಶ್ವರ (ಸ್ವಾಮಿಯ ಗುಡಿಯ ಪೂರ್ವಭಾಗದಲ್ಲಿ) ಬಾಲಕೆಂಪನಂಜೇಶ್ವರ, ಬಾಲಕೆಂಪದೇವರಾಜೇಶ್ವರ ಎಂಬುದಾಗಿ ಶಿವಪ್ರತಿಷ್ಠೆಗಳನ್ನು ಮಾಡಿಸಿದರು. ಈ ರೀತಿಯಾಗಿ ಶಿವಪ್ರತಿಷ್ಠೆಗಳನ್ನು ಮಾಡಿಸಿ, ಸಮಸ್ತ ಶಿವಲಿಂಗಗಳಿಗೂ ಚಿಕ್ಕಬಿಯ ಕೊಳಗ ಮುಂತಾದ ಪೂಜೋಪಕರಣ, ಸೇವೋಪಕರಣ, ಪಾತ್ರೆ, ಪದಾರ್ಥಗಳನ್ನು ಕೊಟ್ಟಿದ್ದಲ್ಲದೆ, ಶ್ರೀಮುಂಡೇಶ್ವರೀ ಕೆಂಪನಂಜಮ್ಮಾಂಬಾ ಸಹಿತ ಶ್ರೀಮುರಾಜೇಶ್ವರಸ್ವಾಮಿ ಮೊದಲಾದ ದೇವರ ಸನ್ನಿಧಿಗೆ ಒಪ್ಪಿಸಿದಂತ ಪದಾರ್ಥಗಳು: ಸ್ವಾಮಿಯವರ ಸನ್ನಿಧಿಗೆ ನಾಗಾಭರಣ ಸಹಿತವಾದ ಚಿನ್ನದ ಕೊಳಗ, ಉಪ್ಪವಲೀವರಿಗೆ ಬೆಳ್ಳಿಮುರಾಜಮುಡಿ, ಬೆಳ್ಳಿಯ ಪೀತಪ್ರಭಾವಳಿ, ನವರತ್ನಮಯ ಪದಕಸಹಿತವಾದ ನಾನಾವಿಧ ಮುಕ್ತಾಹಾರಗಳು, ಚಿನ್ನ ಬೆಳ್ಳಿಗಳಿಂದ ಮಾಡಿದ ಹಸ್ತಾಭರಣ, ಕಂಠಾಭರಣ, ನಾಸಿಕಾಭರಣ, ಕರ್ಣಾಭರಣ, ಪಾದಾಭರಣ, ಮುಂತಾದ ಅನೇಕಾಭರಣಗಳು; ಬಗೆಬಗೆಯಾಗಿ ವಿಚಿತ್ರವಿಚಿತ್ರವಾದ ವಸ್ತ್ರಗಳು, ಬೆಳ್ಳಿಯ ಕೊಪ್ಪರಿಗೆ, ಬಿಂದಿಗೆ, ಚಂಬು, ಪಂಚಪಾತ್ರೆ, ತಟ್ಟೆ, ಬಟ್ಟಲು, ಉದ್ಧರಣೆ, ವೇದವಾಮಜ್ಜಿಗಿಂಡಿ, ಅಭ್ಯಂಗಿ, ನೀಲಸ್ತಂಭ, ಬೆಳ್ಳಿನೀಲಿಟಿಗೆ, ಬೆಳ್ಳಿದೊಣ್ಣೆ, ಛತ್ರ, ಚಾಮರ, ವ್ಯಜನ, ಪರ್ಣಿ, ಘಂಟೆ, ಧೂಪಾರ್ತಿ, ಕುಂಭಾರ್ತಿ, ಇಂಗೆ ಬಗೆಯಾವ ಇತರ ಅತ್ಯಂಗಳು ಮುಂತಾವ ಪೂಜೋಪಕರಣಗಳು, ಬಾಸು ಪರ್ವಂತೀ ಮಹೋತ್ಸವವಲ್ಲಿಯೂ ಫಾಲ್ಗುನ ಮಾಸವಲ್ಲಿಯೂ

ಪ್ರತಿನಿತ್ಯ ಪ್ರಧಾನಸಭಾಕ್ಷೇತ್ರದಲ್ಲಿಯೂ ಮಹಾರ್ಜಂಡೋತ್ಸವ ಮುಂತಾದ ಕಾಲಗಳಲ್ಲಿಯೂ ಉತ್ಸವಗಳು ನಡೆಯುವಕ್ಕೆ ಬೊಂಬಿಯರಥ ಮುಂತಾದ ರಥಗಳು, ಗಜವಾಹ, ವೃಷಭ, ರುದ್ರಾಕ್ಷಿಮಂಟಪಗಳು, ಬಗೆಬಗೆಯಾದ ಬಾಣ ವಾದನಗಳು. ಪಲ್ಲಕ್ಕಿ, ಛತ್ರ, ಚಾಮರ, ಪೀಠಿಕಾಳೆ, ಆಗ್ರೋದಕಕ್ಕೆ ಸಗಾರಿಗೂ ಅನೆ, ಉತ್ಸವದ ಸಂಗಡ ಬರುವುದಕ್ಕೆ ಸ್ವರ ಕುದುರೆ.

ಇನ್ನಲ್ಲದೆ ತಮ್ಮ ಧರ್ಮಪತ್ನಿಯರ ನಾಮಾಂಕಿತದಿಂದ ಸೇವಾರ್ಥವಾಗಿ ನಾಡಿನ ಸ್ವಾಮಿಸನ್ನಿಧಿಗೂ ಅಮ್ಮನವರ ಸನ್ನಿಧಿಗೂ ಜಳ್ಳಿಯ ವೆಂಬುದನ್ನು, ಮತ್ತು ನಂಜನಗೂಡು ಶ್ರೀಕಂಠೇಶ್ವರಸ್ವಾಮಿಯ ಮೇಗೆ ಕೃತ್ತಿಕೋತ್ಸವ ಕಾಲದಲ್ಲಿ ರಥೋತ್ಸವ ನಡೆಯುವಂತೆ ಬಾಮ ರಾಜೇಶ್ವರಸ್ವಾಮಿಗೂ ೨೫ ರಿಷಿರಾಂನೇ ಕಾಳಯುಕ್ತಿ ಸಂವತ್ಸರದ ಕಾರ್ತಿಕ ಮಾಸ ಪೂರ್ಣಿಮೆ ಕೃತ್ತಿಕೋತ್ಸವ ಕಾಲದಲ್ಲಿ ರಥೋತ್ಸವ ನಡೆಯುವಂತೆ ಕಟ್ಟಳೆಮಾಡಿಸಿ, ಸುವರ್ಣಮಯವಾದ ರಜತಪೀಠ, ಅನೇಕ ಸ್ತಂಭ ಪುತ್ಥಳಿಕೆ ಕಮಾನು ಲೋಪೆ ಬುಗುರಿ ತೋರಣದ ಕಳಸ ಕುಂಕಣಿ ಮುಕ್ತಾಸ್ರಗಾಳಿ ದಾಸು ವಿತಾನ ಸಿಂಹಲಾಟ ಬೇರಿ ಇವುಗಳಿಂದೊಪಗೂಡಿ ಅನೇಕ ಸುವರ್ಣ ಕಲಶಗಳಿಂದ ಅಲಂಕೃತವಾಗಿ ಬೆಳ್ಳಿಯ ಸರಪಣಿಗಳಿಂದ ಡೋಲಾಯಮಾನವಾಗಿ ಅತ್ಯಾಶ್ಚರ್ಯಕರವಾದ ವಿಚಿತ್ರಪರ್ಣ ರಥವನ್ನೂ, ಕಂಪನಂಜಮಾಂಬಾ ಅಮ್ಮನವರಿಗೆ ವೆಜ್ರದ ಅಡ್ಡಿಕೆ ಮುಂತಾದ ವೆಸ್ತ್ರಾಭರಣಗಳನ್ನೂ ಒಪ್ಪಿಸುವಾ

ಕಾವುಜನ ಬ್ರಾಹ್ಮಣರು ಅರಸುಗಳು ಗುರುಕಾವರು ಮುಂತಾದ ಭಕ್ತಾದಿ ಇಷ್ಟಾರ್ಥಗಳನ್ನು ಪತೆಮಾಡಿಕೊಂದು ತಮ್ಮ ತಮ್ಮ ಭಕ್ತಿಯಿಂದ ಪಾದ್ಯಾನುಸ್ಥಿ ಮೆಂಟಪಗಳನ್ನು ಕಟ್ಟಿಸಿ ದೀಪ್ತ ದಳ್ಳಿಗಳ ಪೂಜೋಪಕರಣ ನೈವೇದ್ಯಾದಿಕರಣಗಳನ್ನು ಒಪ್ಪಿಸಿ ಸ್ವಾಮಿಯ ಒಳಗುಡಿಯ ನಿರಂಗನ್ನಲ್ಲಿಯೂ ಪರಿ ಸುತ್ತಿಕ್ಕಿನ ಕಟ್ಟಿಸಾಲಿನಲ್ಲಿಯೂ ನಾಲು ದೀಪಗಳನ್ನು ಪ್ರತಿನಿ ಮಾಡಿಸಿದ್ದಾರೆ. ಮೊದಲು ಇರುವ ಆ ದೀಪಗಳ ಗಾಯಿಯ ಬಾಗಿಲುಗಳಿಗೆ ಹಿತ್ತಾಳೆಯ ಬಾಗಿಲವಾಡಗಳನ್ನು ಮಾಡಿಸಿ,

ಉತ್ಸವದೇವರಿಗೆ ಪಚ್ಚೆಯ ತಾಳಿ ಹಾಕಿದ ಬಂದಿಯನ್ನು ಭಯನನು ಟಪಕ್ಕೆ ಲವಾಜವೆ ಸಹಿತವಾಗಿ ಚಪ್ಪರಗಾಲುನುಂಚವನ್ನು ಒಪ್ಪಿಸಿರುತ್ತಾರೆ.

ಮತ್ತು ಈ ದೇವಸ್ಥಾನದಲ್ಲಿ ತಮ್ಮ ಬಾಸಾ ಭಕ್ತವಿಗ್ರಹವನ್ನು ತಮ್ಮ ಧರ್ಮಪತ್ನಿಯರು ಭಕ್ತ ವಿಗ್ರಹಗಳನ್ನು ಶಿಬಿರಿಂದಲೂ ಲೋಹದಿಂಲೂ ಮಾಡಿಸಿ, ಪ್ರತಿಷ್ಠೆ ಮಾಡಿಸಿ ನಿತ್ಯೋಪರಿಗಳನ್ನು ಕೊಟ್ಟಿರುತ್ತಾರೆ.

ಈ ಊರ ಬಲಗಡೆಯಲ್ಲಿ ಸ್ವತ್ಯೇಕವಾಗಿ ಗುಡಿಯನ್ನು ಕಟ್ಟಿಸಿ, ವಿಮಾನಕ್ಕೆ ಚಿನ್ನದ ಕಲಶಗಳನ್ನು ಹಾಕಿಸಿ, ಉಭಯನಾಚಾರ ಸಹಿತವಾಗಿ ನಾರಾಯಣ ಸ್ವಾಮಿಯವರನ್ನು ಅವರ ಉತ್ಸವಕ್ಕೆ ಲಿಂಗಾಯಿತ ವಿಗ್ರಹಗಳನ್ನು ಪ್ರತಿಷ್ಠೆ ಮಾಡಿಸಿ, ಈ ದೇವರಿಗೆಲ್ಲಾ ಪಂಚಾಮೃತ ಮುಂತಾದವುಗಳನ್ನು ಅರ್ಪಿಸಿದರು.

ಕೃಷ್ಣ ರಾಜೇಂದ್ರ ಒಡೆಯರವರು ಕೆಂಪನಂಜಮ್ಮಾಂಬಾ ಸಮೇತ ಶ್ರೀಚಾಮರಾಜೇಶ್ವರಸ್ವಾಮಿಯವರಿಗೆ ನಿತ್ಯೋತ್ಸವ, ಪಕ್ಷೋತ್ಸವ, ನವಪ್ರೋತ್ಸವ, ಮಾಸೋತ್ಸವ, ಕೃತ್ತಿಕೋತ್ಸವ, ಸಂವತ್ಸರೋತ್ಸವ, ರಥೋತ್ಸವಾದಿ ಅನೇಕ ಉತ್ಸವಗಳು ನಡೆಯುವಹಾಗ್ಗೆ, ದಿನಕೂಟದಲ್ಲಿ ಸಹಸ್ರನಾಮಾರ್ಚನೆಗೂ ಅರ್ಚಕ ಆಗಮಿಕ ಮುಂತಾದ ಉಪಾಧಿ ಬ್ರಾಹ್ಮಣರು, ದೇವಸ್ಥಾನದ ಪುಜೇದಾರ, ಪರಿಸ್ಥೆದಾರ, ಗುಮಾಸ್ತೆ, ಕಾವಲುಗಾರ, ತಪ್ಪಲಿತಿ, ಓಲಗ, ತಾಳ, ಮೇಳ ಮುಂತಾದ ಕೈವಾಡದ ಜನಗಳ ಜೀವನ ನಡೆಯುವಹಾಗ್ಗೆ, ಮೇಲೆ ಹೇಳಿರುವ ಸಮಸ್ತ ದೇವರಿಗೂ ನಿತ್ಯಕಟ್ಟಳೆಯ ಪರಿತವ ದೀಪಾರಾಧನೆ ಹೊಂದಲಾದ ಸೇವೆಗಳು ನಡೆಯುವುವಹಾಗ್ಗೆ ಧಾರಿ ತೆನ್ನೀರನ್ನು ಉಂಟುಮಾಡಿ, ಅಮೃತಪ್ಪನಿಗೆ ಸರಿಯಾಗಿ ಉಮ್ಮತ್ತೂರು, ನಂಜನೂರು, ಬೆಂಡರವಾಡಿ ಮುಂತಾದ ಸಮೀಪಾಲ್ಲಿ ಗ್ರಾಮಗಳನ್ನು ಪಿಂಗಡಿಸಿ ಕೊಟ್ಟು ಶಿಲಾಪ್ರತಿಷ್ಠೆಯನ್ನು ಮಾಡಿಸಿ, ದೇವಸ್ಥಾನಕ್ಕೆ ಶಿಲಾಶಾಸನವನ್ನು ಬರೆಯಿಸಿ ಬಿಸ್ಸಿಸಿವಷ್ಟಿವ ಕೃತ್ತಿಕೋತ್ಸವದಲ್ಲಿ ರಥೋತ್ಸವಾದ್ಯುತ್ಸವಗಳು ನಡೆಯುವುದಕ್ಕೆ ಕೆಲವು ನಗದು ಹಣವನ್ನು ಕೊಡುವಂತೆ ಕಟ್ಟಳೆ ಮಾಡಿಸಿದರು.

ಈ ಚಕ್ರವರ್ತಿರಾಜನಗರದ ಬಲಭಾಗದಲ್ಲಿ ಇರುವ ಅಮೃಜವಾತಿ ಗುಡ್ಡದಲ್ಲಿ ವ್ಯಾಸಶ್ರಮಕ್ಕೆ ಪ್ರಾಮುಖ್ಯವಾಗಿ ನೆಲಸಿರುವ ನೀರಭದ್ರಸ್ವಾಮಿ ಮತ್ತು ಅಲ್ಲಿರುವ ಮಹಾಲಿಂಗೇಶ್ವರಸ್ವಾಮಿ ಇವರ ದೇವಸ್ಥಾನವನ್ನು ತಮ್ಮ ನಮಸ್ಕಾರಕ್ಕೆ ಯೋಗ್ಯವಾದ ವಿಶಿಷ್ಟವನ್ನಾಗಿ ಮಾಡಿಕೊಂಡಂತೆ ಜೀರ್ಣೋದ್ಧಾರ ಮಾಡಿಸಿದ್ದಲ್ಲದೆ ವಿಸ್ತಾರವಾಗಿ ಗುಡಿ ಗೋಪುರ ಪ್ರಾಕಾರಗಳನ್ನು ನೂತನವಾಗಿ ಕಟ್ಟಿಸಿ, ಈ ಗೋಪುರಕ್ಕೆ ಚಿನ್ನದ ಕಲಶ ಇವನ್ನೂ ಕೊರಂಬು ಎಂಬವನ್ನೂ ಶಾ॥ ೧೭೬೬ನೇ ಕ್ರೋಧಿ ಸಂವತ್ಸರದ ಮಾಘ ಶುದ್ಧ ೫ ಗುರುವಾರದಲ್ಲಿ ಹಾಕಿಸಿ, ಕಲಶ ಪ್ರತಿಷ್ಠೆಯನ್ನು ಮಾಡಿಸಿ, ಈ ವೀರಭದ್ರದೇವರಿಗೆ ಚಿನ್ನದ ಕವಚವನ್ನೂ, ಈಶ್ವರನಿಗೆ ನಾಗಾಭರಣ ಸಹಿತ ತಾಳಿ ಬಳ್ಳಿಯಿಂದಿಗೆ ಮುಂತಾದ ಅನೇಕ ವಸ್ತ್ರಾಭರಣ ಪೂಜೋಪಕರಣ ನೈವೇದ್ಯಕರಣ ಪಾತ್ರೆ ಪದಾರ್ಥಗಳನ್ನು ಒಪ್ಪಿಸಿ, ಈ ದೇವಸ್ಥಾನಕ್ಕೆ ನಿತ್ಯೋಗಸ್ಥರಿಗೆ ಪೂಜಾರಿಗಳ ದೀಪಾರಾಧನೆ ಮುಂತಾದ ಸೇವೆ ನಡೆಯುವಂತೆ ತನ್ನ ಧಿಕಾರವನ್ನು ಉಂಟುಮಾಡಿರುತ್ತಾರೆ.

5. ತಿರುಮುಕೂಡಲು ಕ್ಷೇತ್ರ.— ಶಾ॥ ೧೬೮೫ನೇ ದುಂದುಭಿ ಸಂವತ್ಸರದಲ್ಲಿ ಅಗಸ್ತ್ಯೇಶ್ವರಸ್ವಾಮಿ ದೇವಸ್ಥಾನದಲ್ಲಿ ಚಿನ್ನಬಸವೇಶ್ವರ ನೆಲಹಾಗಿ ದಿವೆ ಪ್ರತಿಷ್ಠೆಯನ್ನು ಮಾಡಿಸಿದರು.

6. ವರದರಾಜಸ್ವಾಮಿ ಸೇವೆ.—ಪೂರ್ವದಲ್ಲಿ ಚಿಕ್ಕದೇವರಾಜ ಒಡೆಯರವರು ಶ್ರೀರಂಗಪಟ್ಟಣ ಸಂಬಂಧ ಕ್ಷೇತ್ರವಲ್ಲಿ ನೆಲಸಿದ್ದ ಶ್ವೇತವರದರಾಜಸ್ವಾಮಿಯವರನ್ನು ತಂದಾಪೂರಕ್ಷೇತ್ರದ ಉಭಯಮುನಾಚಾರು ಸಹಿತವಾದ ನೀಲಕಂಠಚಾಮುಸ್ವಾಮಿಯವರೆಂಬ ಲೋಹದ ಉತ್ಸವಮೂರ್ತಿಯನ್ನೂ ಶ್ರೀರಂಗಪಟ್ಟಣಕ್ಕೆ ತರಿಸಿ, ಅಲ್ಲಿ ನೂತನವಾಗಿ ದೇವಸ್ಥಾನವನ್ನು ಉಂಟುಮಾಡಿ ಈ ಮೂರ್ತಿದೇವರಿಗೆ ಅಂಬುಜವಲ್ಲಿ ಎಂಬ ಅಮ್ಮನವರನ್ನು ಸೇರಿಸಿ ಪ್ರತಿಷ್ಠೆಯನ್ನು ಮಾಡಿಸಿದ್ದರು. ಅದರಂತೆ ಪೂಜೋತ್ಸವಾದಿಗಳು ನಡೆಯುತ್ತಿದ್ದವು. ಟೀಪೂಸುಲ್ತಾನರು ಈ ಗುಡಿ ಗೋಪುರವನ್ನು ಉಡಿಸಿ ದೇವರನ್ನು ಕೆಲವುತಾಕಿನವನಾಂತರ, ಈ ವರದರಾಜಸ್ವಾಮಿಯವರನ್ನು ಶ್ರೀರಂಗದ ರಂಗಸ್ವಾಮಿಯ ಗುಡಿಯಲ್ಲಿ ಬಂದು ಮೂಲೆಪದಲ್ಲಿ ಇರಿಸಿ ಪೂಜೆಯನ್ನು ನಡಿಸುತ್ತಿದ್ದರು. ಈ ವೈಕ್ರಮಾನವನ್ನು ಕೃಷ್ಣ

ರಾಜೇಂದ್ರ ಒಡೆಯುವಪರು ತೆಳಿದು, ಮೈಸೂರಲ್ಲಿ ವಿಸ್ತಾರವಾದ ಗುಡಿಯನ್ನೂ ಗೋಪುರ ಪ್ರಾಕಾರ ಮಂಟಪಮಿವಾನಗಳನ್ನೂ ಕಟ್ಟಿಸಿ, ಐವಸೆಲೆಯ ಈ ಗೋಪುರಕ್ಕೆ ೫ ಸುವರ್ಣ ಕಲಶಗಳನ್ನೂ ೨ ಕೊಳೀ ರಂಬುಗಳನ್ನೂ ವಿಮಾನಗಳಿಗೆ ಚಿನ್ನವ ಕಲಶಗಳನ್ನೂ ಪಾಕಸಿ, ದಾ॥ ೧೫೫೯ನೇ ಶುಕ್ಲ ಸಂವತ್ಸರದ ವೈಶಾಖ ಬಹುಳ ೫ ಸ್ಥಿರವಾರದಲ್ಲಿ ಗೋಪುರ ಪ್ರತಿಷ್ಠೆಯನ್ನು ಮಾಡಿಸಿ, ಅಮ್ಮನವರು ಸಹಿತವಾಗಿ ಶ್ವೇತವರಾಹಸ್ವಾಮಿಯನ್ನೂ ಉತ್ಸವ ವಿಗ್ರಹವನ್ನೂ ಶ್ರೀರಂಗಪಟ್ಟಣದಿಂದ ತರಿಸಿ, ಈ ಶ್ರೇಷ್ಠ ಬಹುಳ ೧೦ಯಲ್ಲಿ ಪ್ರತಿಷ್ಠೆ ಮಾಡಿಸಿ ಪಟ್ಟದ ವೀಳಾರಾಧನೆ, ನಿತ್ಯೋತ್ಸವಕ್ಕೆ ನಿವೃತ್ತಿ, ರಥೋತ್ಸವಾದಿಗಳಿಗೆ ನಡೆಯುವಂಥ ಉಪಾಧಿ ಬ್ರಾಹ್ಮಣರು ಮುಂತಾದವರ ಜೀವನ ನಡೆಯುವುದಕ್ಕೆ ತಸ್ತೀಕನ್ನು ಉಂಟುಮಾಡಿ, ಚಿನ್ನ ಬೆಳ್ಳಿಗಳಿಂದ ಮಾಡಿದ ಪೂಜೋಪಕರಣ ಸೇವೋಪಕರಣಗಳನ್ನೂ ವಸ್ತ್ರಾಭರಣಗಳನ್ನೂ ಉತ್ಸವಕ್ಕೆ ಬೇಕಾದ ವಾಹನಗಳನ್ನೂ ಚಿನ್ನದ ಸೂರ್ಯಮಂಡಲವನ್ನೂ ಒಪ್ಪಿಸಿ, ಸಾಂಗವಾಗಿ ಅಭಿಷೇಕದಿಂದ ಸಾಂಗಾಲಯವನ್ನಿಸಿ, ಈ ದೇವತಾಸೇವೆಯು ಸುಗಮವಾಗಿ ನಡೆಯುವಂತೆ ಕಟ್ಟಳೆಮಾಡಿಸಿದರು.

7. ತೃಣೇಶ್ವರಸ್ವಾಮಿ ಸೇವೆ.—ಟೀಪೂಸುಲ್ತಾನರು ಲಕ್ಷ್ಮೀಮೋಹನಸ್ವಾಮಿ, ಅರಮನೆಯ ಬಲಗಡೆಯಲ್ಲಿದ್ದ ಹಾಳುಬಿದ್ದ ನರಸಿಂಹ, ಪಿಸಿಲ ಮಾರಮ್ಮ ಮುಂತಾದ ಬೇವೆರ ಗುಡಿ ಗೋಪುರಗಳನ್ನು ಕೆಡಹಿ ದೇವರನ್ನು ಕಿತ್ತುಹಾಕಿಸಿದ್ದರು. ಮುಮ್ಮಡಿ ಕೃಷ್ಣ ರಾಜ ಒಡೆಯರವರು ನೆಜರಬಾದು ಕೋಟೆಯ ಒಂದು ಸ್ಥಳದಲ್ಲಿ ಇರಿಸಿದ್ದ ತೃಣೇಶ್ವರ ಸ್ವಾಮಿಯನ್ನು, ಬೆಲೆಯಿಂದಲೂ ತೂಕದಿಂದಲೂ ನೂತನವಾಗಿ ಮಾಡಿಸಿದ ತ್ರಿಪುರಸುಂದರಿ ಅಮ್ಮನವರನ್ನು, ಪಶ್ಚಿಮಾಮುಖ ತಾಯಪೇಶ್ವರ ಉತ್ಸವಮೂರ್ತಿ ಮುಂತಾದ ವಿಗ್ರಹಗಳನ್ನೂ, ಪೂರ್ವದಿಕ್ಕಿನ ಸಾಲಿನಲ್ಲಿ ಪೂರ್ವದಲ್ಲಿ ರಣಧೀರ ಕಂಠೀರವ ನರಸರಾಜ ಒಡೆಯರವರಿಗೆ ಹಿರಿಯಾಕಟ್ಟಳೆಯಿಂದ ಪ್ರಸನ್ನವಾಗಿ ಬಂದಿದ್ದ ಚಾಮುಂಡೇಶ್ವರೀ ಶಿಲಾಮಗ್ರಹವನ್ನು ಗಣಪತಿ ಮೊದಲಾದ ದೇವರನ್ನೂ ಪ್ರತಿಷ್ಠೆ ಮಾಡಿಸಿದರು. ಇವುಗಳಲ್ಲದೆ ಇನ್ನೂ ಮಾಡಿಸಿರುವ ಪಿವ್ರತಿಷ್ಠೆ

ಗಳು: ಶಾಮೇಶಾಜೇಶ್ವರ, ಸೋಮೇಶ್ವರ, ಗಂಗಾಧರೇಶ್ವರ, ಕಾಶೀ ವಿಶ್ವೇಶ್ವರ, ಪ್ರಸನ್ನನಂಜುಂಡೇಶ್ವರ, ದೇವೇಶ್ವರ, ದೇವದೇವೇಶ್ವರ, ದೇವರಾಜೇಶ್ವರ, ದೇವಾಂಬೇಶ್ವರ, ಮಹಾಲಿಂಗೇಶ್ವರ, ಮುದ್ದು ಕೃಷ್ಣೇಶ್ವರ.

ಸೂರ್ಯದಲ್ಲಿ ಈ ತ್ರಿಣೇಶ್ವರಸ್ವಾಮಿದೇವಸ್ಥಾನದಲ್ಲಿದ್ದ ರಣಧೀರ ಕಂಠೀರವನರಸರಾಜ ಒಡೆಯರವರ ಮತ್ತು ದೊಡ್ಡ ದೇವರಾಜ ಒಡೆಯರವರ ಭಕ್ತವಿಗ್ರಹಗಳನ್ನು ಉತ್ಸವಮೂರ್ತಿಯ ಎದುರಿಗೆ ಕೈಸಾಲೆಯಲ್ಲಿ ಪ್ರತಿಷ್ಠೆ ಮಾಡಿಸಿ, ಮೂಲಸ್ವಾಮಿ ಮತ್ತು ಅಮ್ಮನವರ ವಿಮಾನಗಳಿಗೆ ಚಿನ್ನದ ಕಲಶಗಳನ್ನು ಪಾಕಿಸಿದರು.

೮. ಲಕ್ಷ್ಮೀರಮಣಸ್ವಾಮಿ ಸೇವಾ.—ಶ್ರೀಕೃಷ್ಣರಾಜ ಒಡೆಯರವರು ತಮ್ಮ ಪೂರ್ವಿಕರಾದ ರಾಜಒಡೆಯರವರಿಗೆ ವಿಷವನ್ನು ಅಮೃತ ಮಾಡಿದ ಅರವಿಂದನಾಯಿಕಾ ಸಮೇತ ಲಕ್ಷ್ಮೀರಮಣಸ್ವಾಮಿಯನ್ನೂ, ಉಭಯನಾಚಿಯಾರು ಸಹಿತವಾದ ಉತ್ಸವವಿಗ್ರಹ ಮುಂತಾದ ದೇವರುಗಳನ್ನೂ ಪ್ರತಿಷ್ಠೆ ಮಾಡಿಸಿದ್ದಲ್ಲದೆ, ಈ ದೇವಸ್ಥಾನಕ್ಕೆ ಅಧಿಷ್ಠಾನ ಶುದ್ಧಿಯಾಗಿ ಐದು ನಲಿಯ ಗೋಪುರವನ್ನು ಕಟ್ಟಿಸಿ, ೫ ಸುವರ್ಣ ಕಲಶಗಳನ್ನೂ ೩ ಕೋರಂಬುಗಳನ್ನೂ ಪಾಕಿಸಿ, ಶಾ॥ ೧೭೭೪ನೇ ವಿರೋಧಿಕೃತು ಸಂ॥ ಮಾರ್ಗಶಿರ ಶುದ್ಧ ೩ ಸ್ಥಿರವಾರದಲ್ಲಿ ಪ್ರತಿಷ್ಠೆ ಮಾಡಿಸಿದ್ದಲ್ಲದೆ, ರಾಜಒಡೆಯರವರ ಭಕ್ತವಿಗ್ರಹವನ್ನೂ ಪ್ರತಿಷ್ಠೆ ಮಾಡಿಸಿದರು.

ಅದಕ್ಕೆನೆಗೆ ಬಲಗಡೆ ಪೂರ್ವದಲ್ಲಿ ಪ್ರತಿಷ್ಠೆ ತವಾಗಿದ್ದ ಹಾಡ್ಯವನರಸಿಂಹಸ್ವಾಮಿಯು ಭಿನ್ನವಾದ್ದರಿಂದ ಅದೇ ದೇವಸ್ಥಾನದಲ್ಲಿ ವೆಂಕಟರಮಣಸ್ವಾಮಿಯನ್ನು ಪ್ರತಿಷ್ಠೆ ಮಾಡಿಸಿದರು.

ಪೂರೈಗಳವರು ಮೇಲೆ ಹೇಳಿರುವ ತ್ರಿಣೇಶ್ವರ ಮುಂತಾದ ದೇವರಿಗೆಲ್ಲಾ ಪೂಜೋಪಕರಣ ಸೇವೋಪಕರಣ ಪಾತ್ರ ಪಸ್ತ್ರಾಭರಣಗಳನ್ನು ಕೊಟ್ಟು ಪತಿತರ ದೀಪಾರಾಧನೆ ರಥೋತ್ಸವಾದ್ಯುತ್ಸವಗಳು ನಡೆಯುವುದಕ್ಕೆ ಆಯಾ ದೇವಸ್ಥಾನದ ತಾರತಮ್ಯವಿದಂತೆ ತಸ್ತೀಕನ್ನು ಉಂಟುಮಾಡಿದರು. ಈ ಊರಲ್ಲಿರುವ ಪಂಚಮುಖದ ಆಂಜನೇಯ, ಕೋಟೆಬಾಗಿಲ ಆಂಜನೇಯ, ವೀರಣಗೆರೆಯ ಆಂಜನೇಯ, ಬಸವೇ

ಶ್ವರ, ಮೊದೇಶ್ವರಿ, ದಕ್ಷಿಣಾಮೂರ್ತಿರುದ್ರರಿಗಳ ಗಣಪತಿ, ಕೋಟಿಯೋಗಿ ರುವ ಬಿಸಿಲು ಮಾರಮ್ಮ ಮುಂತಾದ ದೇವರಿಗೆ ಪೂಜೆ ನಡೆಯುವಂತೆ ಕಟ್ಟಳೆಮಾಡಿಸಿದರು. ನೂತನವಾಗಿ ಪಶ್ಚಿಮಕ್ಕಿನಲ್ಲಿ ಕಾಣಿಸಿಗ ಬ್ರಹ್ಮ ಪುರಿಯ ಬಾಗಿಲನ್ನು ನಿರ್ಮಿಸಿ, ಗಣಪತಿಯೆಂಬುದನ್ನು ಚಿನ್ನದ ಕಲಶದಿಂದ ಶೋಭಾಯಮಾನವಾಗಿರುವ ವಿಮಾನದ ಗುಮ್ಮಟ್ಟಿಗೆ ಅಳವಡಿಸಿಯು ಅಂಜನೇಯನನ್ನು ಪ್ರತಿಷ್ಠಾಪಿಸಿ, ಪೂಜಾನಮಸ್ಕಾರಗಳೇ ಮೊದಲಾದ ಸಂಪ್ರದಾಯ ಮಾಡಿದರು.

9. ಶ್ರೀಮನ್ನ ಕೃಷ್ಣಸ್ವಾಮಿ ಸೇವೆ.—ಮುಮ್ಮಡಿ ಕೃಷ್ಣರಾಯ ಒಡೆಯರವರು ಅರಮನೆಯ ಬಲಗಡೆಯಲ್ಲಿ ಬಾಲಾಲಯ ಪೂರ್ವಕವಾಗಿ ಪಂಚಕೋಪಸಿಪನ್ನಯವಾದ ಎರಡು ಸುಮಾರು ಕಲಶಗಳಿಂದ ಕೂಡಿದ ಗಿಳಿ ವಿಮಾನಗಳಿಂದ ಶೋಭಿಸುತ್ತಲಿರುವಂತೆ ಗುಡಿಗೋಪುರಗಳನ್ನು, ಕೈಸಾಲೆಯನ್ನು, ಕೊಂತಾರೋತ್ಸವಕ್ಕೆ ಭೂವನೇಶ್ವರಿ ಮುಂತಾದ ಮುಂತಾದ ಪುಗಳನ್ನು ನೂತನವಾಗಿ ಕಟ್ಟಿಸಿ, ದಿವ್ಯಾನಿಸಿದಂತೆ ನವೀರಾದ ಪಿಷ್ಟ ಪ್ರಸಾದಗಳನ್ನು ಸ್ವೀಕರಿಸಿ ಕೃತಾರ್ಥರಾಗಬೇಕೆಂದು, ಈ ದೇವದಲ್ಲಿ ಪ್ರಸಿದ್ಧವಾಗಿರುವ ಯಾದವಾದ್ರಿಯಿಂದ ಚೆಲುವೆರಾಯಸ್ವಾಮಿಯ ಕಾಮ ಕಳಸನ್ನು, ಕಂಚಿಯಿಂದ ಬಂದು ತೆರಕನಾಂಬಿಯಲ್ಲಿ ನೆಲಸಿದ್ದ ಪೆರಂ ದೇವಿ ಅಮ್ಮನವರನ್ನು ಬಿಜಯಮಾಡಿಸಿಕೊಂಡು ಬಂದು, ನಿತ್ಯವೇತ ಸಂಬಂಧವನ್ನು ಬಂಟುಮಾಡಿ, ರುಕ್ಮಿಣೀ ಸತ್ಯಭಾಮಾ ಸಮೇತವಾದ ಅಂಬಗಾಲು ಕೃಷ್ಣಸ್ವಾಮಿ, ರಂಗನಾಥ, ಚೆಲುವರಾಯ, ಸೀತಾ ಲಕ್ಷ್ಮಣ ಸಮೇತ ಶ್ರೀರಾಮ, ಲಕ್ಷ್ಮೀನಾರಸಿಂಹ, ವರದರಾಜ, ಪೆಂಕಟರಮಣ, ಅನಂತ, ಗರುಡ, ವಿಷ್ವಕ್ಸೇನ ಮೊದಲಾದ ದೇವರುಗಳ ದುತ್ತು ನವಾತ್ಮ ಶ್ವಾರು, ರಾಮಾನುಜಾಚಾರ್ಯರು, ನಿಗಮಾಂತಾಚಾರ್ಯರು, ವೇದಾಂತ ನುಂತಾದ ಎಳ ಆಳ್ವಾರಾಚಾರ್ಯರುಗಳ ಶಿಲಾ ವಿಗ್ರಹ ಲೋಹದ ವಿಗ್ರಹಗಳನ್ನು, ಉತ್ಸವಗಳಿಗೆ ಉಧಾಯುಸಾಗಿದ್ದು ಸುಂದರವಾಗಿರುವ ಲೋಹದ ವೇಣುಗೋಪಾಲಸ್ವಾಮಿಯನ್ನು, ಪಾಯಸೋತ್ಸವಕ್ಕೆ ಅಮ್ಮ ನವರಿಂದ ಸಹಿತವಾದ ಬೆಳ್ಳಿಯ ವೇಣುಗೋಪಾಲಸ್ವಾಮಿಯನ್ನು, ಮಹಾದ್ವಾರದ ಬಲಗಡೆ ಗಣಪತಿಯನ್ನು ರಾ॥ ಶ್ರೀ ನೀ ಸರ್ವಾಧಿಕಾರಿ

ಸಂವತ್ಸರದ ಫಾಲ್ಗುನ ಶುದ್ಧ ೧೦ ಸ್ಥಿರವಾರದಲ್ಲಿ ಪಾಂಚರಾತ್ರಾಗಮೋಕ್ತ ಪ್ರಕಾರವಾಗಿ ಪ್ರತಿಷ್ಠೆ ಮಾಡಿಸಿದರು.

ಬೀಳಿಗಳಾಮು ಅಂಬಿಗಾಲು ಕೃಷ್ಣದೇವರಿಗೆ ಪ್ರಸನ್ನಕೃಷ್ಣ ಸ್ವಾಮಿ ಎಂಬ ನಾಮಧೇಯವನಿಸ್ಸುಂಟುಮಾಡಿ, ಕೃಷ್ಣ ಜಯಂತ್ಯುತ್ಸವ, ಕೊಂತಾರೋತ್ಸವ, ರಥೋತ್ಸವಾದ್ಯುತ್ಸವಗಳಲ್ಲಿ ಸ್ವಾಮಿಗೂ ಉಪ್ಪಿನವರಿಗೂ ಅಲಂಕಾರಕ್ಕೊಸ್ಕರ ನವರತ್ನಮುಮುವಾದ ಪದಕಗಳಿಂದೊಡ ಗೂಡಿರುವ ಅನೇಕ ಮುತ್ತಾಹಾರಗಳನ್ನು, ಬಂದಿ ಮೊದಲಾದ ಬಗೆ ಬಗೆಯ ರತ್ನಾಭರಣಂಗಳನ್ನೂ, ಕವಚ, ವಜ್ರಪೀಠ, ಕಿರೀಟ, ಕೂರಂಬು, ಪದಸ್ಥಾಭರಣ ಪಾದಾಭರಣ ಮುಂತಾದ ಚಿನ್ನ ಬೆಳ್ಳಿಗಳ ಆಭರಣಗಳನ್ನೂ ಪೂಜಾಸೇವೆಗಳಿಗೆ ಚಿನ್ನ ಬೆಳ್ಳಿಗಳಿಂದ ಮಾಡಿಸಿದ ಅನೇಕ ಪಾತ್ರೆಗಳನ್ನೂ, ಅಮೂಲ್ಯವಾದ ಶೀತಾಂಬರಾದಿ ವಸ್ತ್ರಗಳನ್ನೂ ಒಪ್ಪಿಸಿದರು. ಇವಲ್ಲದೆ ಈ ದೇವಸ್ಥಾನದಲ್ಲಿ ಇದಷ್ಟಕ್ಕೆ ದೇವರಿಗೆಲ್ಲಾ ಚಿನ್ನ ಬೆಳ್ಳಿ ಮೊದಲಾದ ಲೋಹಗಳಿಂದ ಪೂಜೋಪಕರಣ ಪಾತ್ರೆಗಳನ್ನೂ ಅನೇಕವಾದ ಆಭರಣಂಗಳನ್ನೂ ಕೊಟ್ಟರು. ರಥೋತ್ಸವಕ್ಕೆ ಬೊಂಬೆಯ ರಥವನ್ನೂ, ಬೆಳ್ಳಿಯ ಗರುಡವಾಹನವನ್ನೂ, ಆಂಜನೇಯ ಮೊದಲಾಗಿ ಅನೇಕವಾದ ಬಣ್ಣದ ವಾಹನಗಳನ್ನೂ, ಪಲ್ಲಕ್ಕಿ, ಛತ್ರ, ಚಾಮರ, ಸೂರಿಪಾನೆ, ಮುಂತಾದ ಸೇವೋಪಕರಣಂಗಳನ್ನೂ ಒಪ್ಪಿಸಿದರು.

ಮೇಲೆಕಂಡ ದೇವರಿಗೆಲ್ಲಾ ನಿತ್ಯಗಟ್ಟಳೆಯ ಪತಿತದೀಪಾರಾಧನೆ ರಾಮಾನುಜಕೂಟದಲ್ಲಿ ನಂತರ್ಗತವಾಗಿ ಇವು ನಡೆಯುವುದಕ್ಕಾಗಿ, ನಿತ್ಯೋತ್ಸವ, ವಾರೋತ್ಸವ, ಪಕ್ಷೋತ್ಸವ, ನಕ್ಷತ್ರೋತ್ಸವ, ರಥೋತ್ಸವ, ಊಂಜಲೋತ್ಸವ, ಜಾನಪದ ಪರ್ವಾಂತಿಯ ಮಹೋತ್ಸವದಲ್ಲಿ ಕನಕಾಭಿಷೇಕ ಮುಂತಾದ ಅನೇಕೋತ್ಸವಗಳು ನಡೆಯುವುದಕ್ಕೂ, ಅರ್ಚಕ ಅಧ್ಯಾಪಕ ಮೊದಲಾದ ಗುರುಹಿರಿ ಬ್ರಾಹ್ಮಣರು, ಸುಬೇದಾರ, ಶಿರಸ್ತೆದಾರ್, ಗುಮಾಸ್ತ, ಸಾಸಿಕ, ಮೇಣಿಯ, ಅರ್ದಿಕ, ಮುದ್ರೆ, ಓಲಗ, ತಾಳಿ, ಮೋಳ, ನೌಪತ್ತು, ಕೈವಾಡದವರ ಮುಂತಾದವರ ಜೀವನ ನಡೆಯುವುದಕ್ಕೂ ಭಾರೀ ಜಸ್ತೀಕನ್ನು ಗುಂಟುಮಾಡಿ, ಈ ದೇವಸ್ಥಾನವು ಶಿಲಾಶಾಸನದಲ್ಲಿ ತಾವು ಮಾಡಲುವ ನೈವೇದ್ಯಸೇವಾ, ದಾನ, ಧರ್ಮ, ಗ್ರಂಥ

ನಿರ್ಮಾಣ ಮೊದಲಾದ ಅನೇಕ ಕಾರ್ಯಗಳನ್ನು ಸಂಕ್ಷೇಪವಾಗಿ ಬರೆಯಿಸಿ, ನವರತ್ನಪಿಂಬ* ಪೆಸರನ್ನಿಟ್ಟು ಒಪ್ಪಿಸಿದರು. ತಮ್ಮ ಪತ್ನಿಯರಿಂದ ಒಡಗೊಡಿದ ಬಾಸಾ ಭಕ್ತ ವಿಗ್ರಹಗಳನ್ನು ಶಿಲೆಯಿಂದಲೂ ಲೋಹದಿಂದಲೂ ಮಾಡಿಸಿ, ಈ ಭಕ್ತವಿಗ್ರಹಗಳಿಗೆ ಪ್ರತಿದಿನವಲ್ಲಿಯೂ ದೇವತಾಸೇವೆ ಆದನಂತರ ದೀವಟಿಗೆಸಲ್ಲಾಂ ಪಡೆದು ಮುಂತಾದ ಮರ್ಯಾದೆಗಳು ನಡೆಯುವಂತೆ ಕಟ್ಟಳಮಾಡಿಸಿ, ದೇವತಾಸೇವೆಯು ಸಾಲೋದ್ಧಾರವಾಗಿ ನಡೆಯುವಂತೆ ಮಾಡಿರುತ್ತಾರೆ.

10. ಶ್ರೀರಂಗಪಟ್ಟಣದಲ್ಲಿ ದೇವರಸೇವೆ.—ಮುಮ್ಮಡಿ ಕೃಷ್ಣರಾಜ ಒಡೆಯರವರು ರಂಗನಾಥಸ್ವಾಮಿ, ಗಂಗಾಧರೇಶ್ವರ, ಕರೀಘಟ್ಟದ ವೆಂಕಟರಮಣಸ್ವಾಮಿ ಮುಂತಾದ ದೇವರ ಆಲಯಗಳನ್ನು ಜೀರ್ಣೋದ್ಧಾರ ಮಾಡಿಸಿದರು. ತಮ್ಮ ಪೂರ್ವಿಕರಾದ ರಣಧೀರ ಕಂಠೀರವ ನರಸರಾಜ ಒಡೆಯರವರು ದೊಡ್ಡದಾಗಿ ಗುಡಿಗೋಪುರಗಳನ್ನು ಕಟ್ಟಿಸಿ ಪ್ರತಿಷ್ಠೆಮಾಡಿಸಿದ್ದ ಲಕ್ಷ್ಮೀನರಸಿಂಹ ಮುಂತಾದ ದೇವರುಗಳನ್ನು ಟೀಪೂಸುಲ್ತಾನರು ಕಿತ್ತುಹಾಕಿಸಿದ್ದಾರೆಂಬುದನ್ನು ಕೇಳಿ, ಆ ದೇವಸ್ಥಾನವನ್ನು ಜೀರ್ಣೋದ್ಧಾರಮಾಡಿಸಿ, ರಂಗನಾಥಸ್ವಾಮಿಯ ಗುಡಿ

*ನಂಜನಗೂಡು ಮೇಲುಕೋಟೆ ಮೊದಲಾದ ಸ್ಥಳಗಳಲ್ಲಿ ದೇವರಿಗೆ ರತ್ನಮಯವಾದ ಮುಡಿಗಳನ್ನು ಒಪ್ಪಿಸಿದ್ದು ಭೂಷಾರತ್ನ. ಚಾಮರಾಜನಗರ ಮೊದಲಾದ ನಗರ ಪುರ ಗ್ರಾಮಗಳನ್ನು ನಿರ್ಮಿಸಿದ್ದು ವೀರರತ್ನ. ಮೈಸೂರು ಚಾಮರಾಜನಗರ ಮುಂತಾದ ಅನೇಕ ಸ್ಥಳಗಳಲ್ಲಿ ಅನೇಕ ದೇವಸ್ಥಾನಗಳನ್ನು ನಿರ್ಮಿಸಿದ್ದು ಸೇವಾರತ್ನ. ಅನೇಕಾಗ್ರಹಾರ ನಿರ್ಮಾಣಪೂರ್ವಕವಾಗಿ ಅನೇಕ ಗ್ರಾಮ ಭೂಮಿಗಳನ್ನು ಕೊಟ್ಟಿದ್ದು ದಾನರತ್ನ. ಶ್ರೀರಾಮಮಂಡೇಶ್ವರೀ ಗೋಪುರಾದಿ ಅನೇಕ ಗೋಪುರಗಳನ್ನು ಸ್ಥಾಪಿಸಿದ್ದು ಪ್ರತಿಷ್ಠಾರತ್ನ. ಕಾವೇರಿ ಮೊದಲಾದವುಗಳಲ್ಲಿ ಸೋಪಾನ, ಸೇತುವೆ ಮುಂತಾದ್ದನ್ನು ಕಟ್ಟಿಸಿದ್ದು ಉಪಕಾರರತ್ನ. ಕಾಕಿ ತಿರುಪತಿ ಮೊದಲಾದ ಕ್ಷೇತ್ರಗಳಲ್ಲಿ ಅನ್ನದಾನ ಸತ್ರಗಳನ್ನು ಮಾಡಿರುವುದು ಧರ್ಮರತ್ನ. ಕೃಷ್ಣರಾಜ ವರಹ ರೂಪಾಯಿ ಮುಂತಾದ ಸುವರ್ಣ ರಜತದ ನಾಣ್ಯಗಳು ಕೀರ್ತಿರತ್ನ. ಶ್ರೀಭೂಗವತ ಭಾರತಾದಿ ಪುರಾಣೇತಿಹಾಸಗಳಿಗೆ ರಚಿಸಿದ ಕಾರ್ಣಾಟಕ ಭಾಷಾ ವ್ಯಾಖ್ಯಾನಗಳೂ ಪುತ್ರ ಸಾಗಂಧಿಕಾಪರಿಣಯಾದಿ ಗ್ರಂಥ ರಚನೆಯೂ ಸಾರಸ್ವತರತ್ನ. ಇವು ನವರತ್ನಗಳು.

ಯಲ್ಲಿ ಇರಿಸಿದ್ದ ಅಲಕ್ಷ್ಮೀನೃಸಿಂಹಸ್ವಾಮಿಯನ್ನೂ ರಣಧೀರ ಕಂಠೀರವ ನರಸರಾಜ ಒಡೆಯರವರ ಭಕ್ತಿವಿಗ್ರಹವನ್ನೂ ಪುನಃ ಶಾಸ್ತ್ರೋಕ್ತವಾಗಿ ನೇ ನರ್ವಧಾರಿ ಸಂವತ್ಸರದಲ್ಲಿ ಪ್ರತಿಷ್ಠೆಮಾಡಿಸಿದರು. ಈ ದೇವರಿಗೆಲ್ಲಾ ಪೂಜೋಪಕರಣ, ನೇವೋಪಕರಣ, ಪಸ್ತ್ರಾಭರಣ ಮುಂತಾದ ಕದಾ ರ್ಥಗಳನ್ನೂ ರಥ ವಾಹನಗಳನ್ನೂ ಕೊಟ್ಟು, ನಿತ್ಯೋತ್ಸವ ಪಕ್ಷಿತರ ದೀಪಾರಾಧನೆ, ಸಿತೋತ್ಸವ, ರಥೋತ್ಸವ, ಕೊತಾರೋತ್ಸವ ಮುಂತಾದ ಉತ್ಸವಗಳಿಗೆ ತಸ್ತೀಕುಗಳನ್ನು ಉಂಟುಮಾಡಿದರು.

ತಮ್ಮ ತಂದೆಯವರಾದ ಮುಮ್ಮಡಿ ಚಾಮರಾಜೇಂದ್ರ ಒಡೆಯರ ವರ ದಹನಸ್ಥಳವಾದ ಕಾವೇರೀತೀರದ ಭಕಂದ್ರವನದ ಬಳಿಯಲ್ಲಿ ದೇವ ಸ್ಥಾನವನ್ನು ಕಟ್ಟಿಸಿ, ಚಾಮರಾಜೇಶ್ವರನೆಂಬುದಾಗಿ ಶಿವಪ್ರತಿಷ್ಠೆಯನ್ನು ಮಾಡಿಸಿ, ಪಶ್ಚಿಮವಾಹಿನಿಯಾದ ತೀರದಲ್ಲಿ ತಮ್ಮ ಮಾತೃಶ್ರೀಯವರಾದ ಕೆಂಪನಂಜಮ್ಮಣ್ಣಿಯವರ ದಹನಸ್ಥಳದಲ್ಲಿ ಬೃಂದಾವನವನ್ನು ಕಟ್ಟಿಸಿ. ಈ ಎರಡುಕಡೆಯಲ್ಲಿಯೂ ಪೂಜೆ ಮತ್ತು ನಾಲ್ಕು ವೇಳೆ ನೈವೇದ್ಯ ನಡೆಯಂತೆ ಕಟ್ಟಳೆ ಮಾಡಿದರು.

11. ಮೇಲುಕೋಟೆಯಲ್ಲಿ ದೇವರನೇವೆ.—ಮುಮ್ಮಡಿ ಕೃಷ್ಣರಾಜ ಒಡೆಯರವರು ಚೆಲುವರಾಯಸ್ವಾಮಿ, ನಾರಾಯಣಸ್ವಾಮಿ, ಯೋಗ ನೃಸಿಂಹಸ್ವಾಮಿ ಮುಂತಾದ ದೇವರ ಆಲಯಗಳನ್ನು ಜೀರ್ಣೋದ್ಧಾರ ಮಾಡಿಸಿ ಪೂಜೋಪಕರಣ ನೇವೋಪಕರಣಗಳಿಗೆ ಚಿನ್ನ ಬೆಳ್ಳಿಗಳಿಂದ ಮಾಡಿದ ತಟ್ಟೆ, ಬಟ್ಟಲು, ಅರ್ಘ್ಯಪಾತ್ರೆ, ಕೊಪ್ಪರಿಗೆ, ಬಿಂದಿಗೆ, ದೀಪ ಸ್ತಂಭ, ದೀವಟಿಗೆ ಮುಂತಾದ ಬಗೆಬಗೆಯ ಪಾತ್ರೆಗಳನ್ನೂ, ಚಿನ್ನದ ಸರದೊಡನೆ ಕೂಡಿದ ನವರತ್ನಮಯವಾದ ಗೆಂಡಭೇರುಂಡ ಪದಕ, ಶಂಖ, ಚಕ್ರ, ಪಚ್ಚೆಯ ಬಾಪುರಿ, ಜವಾಹಿರು ಪದಕದೊಡನೆ ಕೂಡಿದ ಐವಳಿಯ ಮುತ್ತಿನಸರಂತಿ ಮೊದಲಾದ ನಾನಾವಿಧ ಮುಸ್ತಾಭರಣ ಗಳನ್ನೂ, ಪಸ್ತ್ರಾಭರಣ, ಪಾದಾಭರಣ, ಕೇಯೂರಾಭರಣ, ನಾಸಿಕಾಭರಣ, ಕಿರೀಟ ಮುಂತಾದ ಚಿನ್ನ ಬೆಳ್ಳಿ ಮುತ್ತುಗಳಿಂದಲೂ ರತ್ನಗಳಿಂದಲೂ ಮಾಡಿಸಿದ ಅನೇಕಾಭರಣಗಳನ್ನಲ್ಲದೆ ಅಮೂಲ್ಯವಾಗಿ ನಾನಾವಿಧವಾದ ಪೀತಾಂಬರಾದಿ ವಸ್ತ್ರಗಳನ್ನೂ ಒಪ್ಪಿಸಿದರು. ರಾಜಮುಡಿಗೆ ಸರಿ

ಯಾಗಿ ಅನೂಚ್ಯ ರತ್ನಗಳಿಂದ ಅತ್ಯಂತ ಶೋಭಾಕರವಾಗಿರುವ ಕೃಷ್ಣ
ರಾಜಮುಡಿ ಎಂಬ ಕಿರೀಟವನ್ನು ನೂತನವಾಗಿ ಮಾಡಿಸಿ, ವಿಳಂಬಿ
ಈಶ್ವರ ಸಂವತ್ಸರದ ಆಷಾಢ ಬಹುಳ ೭ ಬುಕ್ರವಾರದಲ್ಲಿ ಚಿಲುಮೆರಾಯ
ಸ್ವಾಮಿಗೆ ಒಪ್ಪಿಸಿ, ಶ್ರಾವಣ ವರ್ಧಂತ್ಯುತ್ಸವದಲ್ಲಿ ಈ ದೇವರಿಗೆ
ಕಲ್ಯಾಣೋತ್ಸವದ ಪೂರ್ವದ ಕೃಷ್ಣ ರಾಜ ತಿರುನಾಳಂಬ ರಥೋತ್ಸವವನ್ನು
ನಡೆವಂತೆ ಬೊಂಬೆಯ ರಥವನ್ನು ಮಾಡಿಸಿ ಒಪ್ಪಿಸಿ, ಈ ರಥೋತ್ಸವದಲ್ಲಿ
ಚೆಲುವರಾಯಸ್ವಾಮಿಗೆ ಕೃಷ್ಣರಾಜಮುಡಿಯನ್ನು ಅಲಂಕರಿಸಿ ಉತ್ಸವ
ವಳದಮೇಲೆ ವೈರಮುಡಿ, ರಾಜಮುಡಿಗಳಂತೆ ಈ ಕೃಷ್ಣರಾಜಮು
ಗೂ ಜೊಹರುಮಾಡಿ ಮೈಸೂರ ಅರಮನೆಯ ಜೊಕ್ಕನಕ್ಕ ತಂದು
ಸುವಂತೆ ನಿಬಂಧನೆಮಾಡಿ, ಈ ಉತ್ಸವಕ್ಕೆ ದಯಮಾಡಿಸುವ ತಮ್ಮ
ಗಳಾದ ಶ್ರೀ ಪರಕಾಲಸ್ವಾಮಿಗಳಿಗೂ ಕೆಲವರು ಆಚಾರ್ಯಪುರು
ರಿಗೂ ಮರ್ಯಾದೆಗಳು ನಡೆವಂತೆ ಕಟ್ಟಳೆ ಮಾಡಿಸಿದರು.

ಮೊರಗಳವರು ಮೇಲುಕೋಟೆಯಲ್ಲಿ ವಾಸಿಸುವ ಶ್ರೀವೈಷ್ಣ
ವರು ಮುಂತಾದ ತ್ರಿಮತಸ್ಥ ಬ್ರಾಹ್ಮಣರೆಲ್ಲರಿಗೂ ಜನ 1ಕ್ಕೆ ಒಂದು
ಪಗೆಯಕ್ಕಿಯ ಮೇರೆಗೆ ಪ್ರತಿದಿನದಲ್ಲಿಯೂ ಕೊಡುವಂತೆ ರಾಜಕಟ್ಟಳೆ
ಎಂಬವಾಗಿ ನಿಬಂಧನೆ ಮಾಡಿದರು. ನಿತ್ಯೋತ್ಸವ, ನವಹೋತ್ಸವ,
ಬ್ರಹ್ಮೋತ್ಸವ (ವೈರಮುಡಿ), ಕೃಷ್ಣರಾಜತಿರುನಾಳು, ಅಷ್ಟಮಿರೋಹಿಣೋ
ತ್ಸವ ಮುಂತಾದ ಉತ್ಸವಗಳು ನಡೆವುದಕ್ಕೂ, ನಿತ್ಯಕಟ್ಟಳೆ ಪಣಿತರ
ವೀಪಾರಾಧನೆಗಳಿಗೂ ಉಪಾಧಿ ಬ್ರಾಹ್ಮಣರು ಮುಂತಾದ ನಮಸ್ತ ಸೇವಾ
ಜನಗಳ ಜೀವನ ನಡೆವುದಕ್ಕೂ ಭಾರಿ ತನ್ತೀಕನ್ನು ಉಂಟುಮಾಡಿದರು.
ಕಲ್ಯಾಣ ಎಂಬ ತೀರ್ಥದ ಸಮೀಪದಲ್ಲಿ ನೂತನವಾಗಿ ವಿಶ್ರಾಮವಾದ ಭುವ
ನೇಶ್ವರೀ ಮಂಟಪವನ್ನು ಕಟ್ಟಿಸಿ, ಇಲ್ಲಿ ಕೃಷ್ಣರಾಜ ತಿರುನಾಳಿನ ಮಂಟ
ಪೋತ್ಸವವಾಗುವಂತೆ ಕಟ್ಟಳೆ ಮಾಡಿಸಿದರು. ಇವಲ್ಲದೆ ನಾನಾವಿಧವಾದ
ಬಣ್ಣದ ಪಾಪನಗಳನ್ನು ಮಾಡಿಸಿ, ಉತ್ಸವದಲಂಕಾರದ ಸುವರ್ಣಾ
ಕಂಠಾಭರಣ ಮುಂತಾದ ಆಭರಣಗಳನ್ನೂ ಚಿಟ್ಟವನಾಲಿಯಲ್ಲಿ
ಯೋಗನರಸಿಂಹ ಸ್ವಾಮಿಯವರಿಗೆ ಚಿನ್ನದ ಕಿರೀಟವನ್ನೂ ಒಪ್ಪಿಸಿ, ಈ
ಸೇವೆಗಳೆಲ್ಲವೂ ಸಾರೋದ್ಧಾರವಾಗಿ ನಡೆವಂತೆ ಕಟ್ಟಳೆಮಾಡಿಸಿ

ಖಾನಾ ಸವಾರಿಯು ದೇವರ ನರ್ತನಕ್ಕೆ ಚಿತ್ತವಿಸಿದಾಗ ಖಾನಪೋಷು ವುವಕ್ಕೆ ಅರಮನೆಯನ್ನು ನಿರ್ಮಿಸುವರು.

12. ತಿರುಪತಿಯಲ್ಲಿ ದೇವರಸೇವೆ.—ಕೃಷ್ಣ ರಾಜ ಒಡೆಯರವರು ಪೂರ್ವದಲ್ಲಿ ರಾಜಒಡೆಯರವರು ಒಪ್ಪಿಸಿದ್ದ ಮುತ್ತಿನ ಛತ್ರಿಯೂ ಚಿಕ್ಕ ದೇವರಾಜಒಡೆಯರವರು ಒಪ್ಪಿಸಿದ್ದ ಎರಡು ಚಿನ್ನದ ಛತ್ರಿಗಳೂ ಶಿಥಿಲವಾಗಿ ದೇವರಸೇವೆಗೆ ಉಪಯೋಗಿಸದೆ ಇರುವುದನ್ನು ಪರಾಂಬರಿಸಿ ಬಹು ದ್ರವ್ಯವನ್ನು ಮುಟ್ಟಿಸಿ ಅವುಗಳನ್ನು ಜೀರ್ಣೋದ್ಧಾರ ಮಾಡಿಸಿ ಒಪ್ಪಿಸಿದರು. ತಾವು ಚಿನ್ನಬೆಳ್ಳಿಯ ಅನೇಕ ಆಭರಣಗಳನ್ನೂ ಪೂಜೋಪಕರಣ ನೈವೇದ್ಯೋಪಕರಣ ಪಾತ್ರೆಗಳನ್ನೂ, ಪೀತಾಂಬರಾದಿ ವಸ್ತ್ರಗಳನ್ನೂ ಒಪ್ಪಿಸಿದರು. ಚಿನ್ನದ ಭಾರಿ ಎರಡು ಗಂಗಾಳಗಳನ್ನು ಮಾಡಿಸಿ ಅವುಗಳ ತುಂಬ ಪೊಂಗಲು ನೈವೇದ್ಯವನ್ನು ಮಾಡಿ, ಈ ಪ್ರಸಾದವನ್ನು ಪರಸ್ಥಳದಿಂದ ಬಂದ ಬ್ರಾಹ್ಮಣರಿಗೆ ಪ್ರತಿದಿನದಲ್ಲಿಯೂ ಕೊಡುವಂತೆಯೂ ಪ್ರಾತಃಕಾಲದಲ್ಲಿ ಪುಣಂಗು, ಕಸ್ತೂರಿ, ಪಚ್ಚ ಕರ್ಪೂರ, ಕೇಸರಿ ಮುಂತಾದ ಪರಿಮಳದ್ರವ್ಯಗಳಿಂದ ಯುಕ್ತವಾದ ಗಂಧದ ಎರಡು ದೊಡ್ಡ ಉಂಡೆಗಳನ್ನು ದೇವರ ಎರಡು ಪಾದಗಳಿಗೆ ಸಮರ್ಪಿಸುವಂತೆಯೂ, ನೊರೆ ಹಾಲು, ಬೆಣ್ಣೆ, ಸಕ್ಕರೆ, ದ್ರಾಕ್ಷಿ, ಖರ್ಜೂರ ಮುಂತಾದ ಪದಾರ್ಥಗಳ ನಿವೇದನವಾಗುವಂತೆಯೂ ನಿಬಂಧನೆ ಮಾಡಿದರು. ಈ ಜಟ್ಟದಮೇಲೆ ಬಂದ ಸಕಲ ಬ್ರಾಹ್ಮಣರಿಗೂ ಸರ್ವಕಾಲದಲ್ಲಿಯೂ ಮೃಷ್ಟಾನ್ನ ಭೋಜನ ನಡೆಯಂತೆ ಸತ್ರವನ್ನು ಏರ್ಪಡಿಸಿ ಬಡವರಾದ ಬ್ರಾಹ್ಮಣರು ಕೇಳಿಕೊಂಡರೆ, ಈ ಸತ್ರದಲ್ಲಿ ಧರ್ಮೋಪನಯನ ವಿವಾಹಗಳನ್ನು ಮಾಡುವಂತೆ ನೇಮಿಸಿದರು. ಹೌದಾ ಸಹಿತವಾದ ಆನೆ, ಜಲಾಪತ್ತು ಜೀನಿನಿಂದ ಅಲಂಕೃತವಾದ ಕುದುರೆ, ಛತ್ರ, ಚಾಮರ ಮುಂತಾದ ಅನೇಕ ನೈವೇದ್ಯೋಪಕರಣಗಳನ್ನು ಒಪ್ಪಿಸಿ, ಬ್ರಹ್ಮೋತ್ಸವ, ಪ್ರತಿ ಶ್ರವಣ ನಕ್ಷತ್ರೋತ್ಸವ ಮುಂತಾದ ಉತ್ಸವಕಾಲಗಳಲ್ಲಿ ಉಪಚಾರ ಸೇವೆಗಳನ್ನು ಮಾಡುವಜನಗಳ ಜೀವನ ನಡೆಯುವುದಕ್ಕೆ ಭೂರೀ ತಸ್ತೀಕನ್ನುಂಟುಮಾಡಿ, ಈ ತಸ್ತೀಕಿನ ದಾನಪತ್ರವನ್ನು ಮುಳಬಾಗಿಲು ತಾಲ್ಲೂಕಿನಿಂದ ಕೊಡುವಂತೆ ನಿಬಂಧನೆಮಾಡಿ, ದೇವತಾಸೇವೆಯು

ಸಾರೋದ್ಧಾರವಾಗಿ ನಡೆವಂತೆ ಕಟ್ಟಳೆಮಾಡಿ, ಇನ್ನೂ ಅನೇಕವಾಗಿ ಸೇವೆಯನ್ನು ಮಾಡಿರುತ್ತಾರೆ.

13. ತಿರುಗಂಗೆಯಲ್ಲಿ ನೀವರ ಸೇವೆ.—ಮುಮ್ಮಡಿ ಕೃಷ್ಣರಾಜಒಡೆಯರವರು ಶಾ॥ ೧೭೫೧ನೇ ಬಹುಧಾನ್ಯ ಸಂವತ್ಸರದ ಆಷಾಢಬಹುಳ ೩ಯಲ್ಲಿ ತಿರುಗಂಗೆಗೆ ಚಿತ್ತೈಯಿಸಿ ಗಂಗಾಧರೇಶ್ವರಸ್ವಾಮಿ ಮೊನ್ನಾದೇವಿಯರ ದರ್ಶನವನ್ನು ಮಾಡಿ, ದೇವರಿಗೆ ಅನೇಕ ವಸ್ತ್ರಾಭರಣಾ ಪಾತ್ರೆಗಳನ್ನು ಒಪ್ಪಿಸಿ, ಈ ಬೆಟ್ಟದ ಕಮರಿಯ ಬಳಿಯಲ್ಲಿರುವ ಕೋಡುಗಲ್ಲಿನ ಕೆಳಗೆ ಪೂರ್ವದಲ್ಲಿದ್ದ ಘಂಟೆಯು ಬಿದ್ದು ಹೋಗಿರಲು ನೂತನವಾಗಿ ಐದು ಜೆಳ್ಳಿಯ ಘಂಟೆಗಳನ್ನು ಮಾಡಿಸಿ, ಅವುಗಳನ್ನು ನಿರಾಲಂಬ ಪ್ರದೇಶದ ಕೋಡುಗಲ್ಲಿಗೆ ಅತಿ ಚಮತ್ಕಾರವಾಗಿ ಹಾಕಿಸಿದರು.

14. ಇತರ ಸ್ಥಳಗಳಲ್ಲಿ ನೀವರ ಸೇವೆ.—ಮುಮ್ಮಡಿ ಕೃಷ್ಣರಾಜ ಒಡೆಯರವರು ಸೋಸಲೆಯಲ್ಲಿ ಮೊನ್ನಾದೇವಿ, ಮೂಗೂರಿನಲ್ಲಿ ತಿಬ್ಬಾದೇವಿ, ಮುಡುಕತೊರೆಯಲ್ಲಿ ಮಲ್ಲಿಕಾರ್ಜುನಸ್ವಾಮಿ, ಪ್ರಮರಾಂಬಿಕೆ ಬಿಳಿಗಿರಿಯಲ್ಲಿ ರಂಗಸ್ವಾಮಿ, ಹಿಮವದ್ಗೋಪಾಲಸ್ವಾಮಿ, ತಲಕಾಡಿನಲ್ಲಿ ವೈದ್ಯೇಶ್ವರ ಮೊದಲಾದ ದೇವರ ಆಲಯಗಳನ್ನು ಜೀರ್ಣೋದ್ಧಾರಮಾಡಿಸಿ, ದೇವರ ದರ್ಶನಕ್ಕೆ ಚಿತ್ತೈಯಿಸಿದ ಬೇಳೆಯಲ್ಲಿ ಆಯಾ ದೇವಸ್ಥಾನಗಳ ವಿಭವರಿತು ಅನೇಕ ವಸ್ತ್ರಾಭರಣಗಳನ್ನು ಸಮರ್ಪಿಸಿದ್ದಲ್ಲದೆ, ಆಯಾ ಗತಿಗಳಲ್ಲಿಯೂ ಇನುನೆ ಶಿವ, ವಿಷ್ಣು, ಗಣಪತಿ, ಮಾವೇಶ್ವರ, ಬಸವೇಶ್ವರ ಮೊದಲಾದ ದೇವರಿಗೂ, ಮಾರಿ ಮುಂತಾದ ಶಕ್ತಿಗಳಿಗೂ, ಆಯಾ ದೇವಸ್ಥಾನಗಳ ತಾರತಮ್ಯವಿದ್ದಂತೆ ಹೆಚ್ಚು ಕಡಿಮೆ ಮಾಡಿ, ಪ್ರತಿದಿನವೂ ಷೋತ್ಸವಾದ್ಯುತ್ಸವಗಳೂ ನಡೆಯುವಂತೆ ಕಟ್ಟಳೆ ಮಾಡಿಸಿದರು. ಇಂಥ ನೀವರಾಜಸ್ವಾಮಿಯು ಗರುಡೋತ್ಸವಕ್ಕೆ, ಶ್ರೀರಂಗದ ರಂಗನಾಥಸ್ವಾಮಿಗೆ ನಂದಾದೀಪ ಸಹಸ್ರನಾಮಾರ್ಚನೆ ಯಜ್ಞೋಪವೀತ ಮುಂತಾದ ಸೇವೆಗಳು ಪ್ರತಿದಿನವೂ ನಡಪುವಂತೆ, ತಿರುಚನಗುಡಿ ಆದಿನಾರಿಶ್ವರ ಸ್ವಾಮಿಯ ಸೇವೆಗೂ ತೆಸ್ತೀಕನ್ನು ಕಟ್ಟುಮಾಡಿದರು. ರತ್ನಗಿರಿ ಮೇಲೆ ಯೂ ಸನಿಹದ ವೈಷ್ಣವಾರ್ಯಾಲ್ಲಿರುವ ಸುಂದರವಾಹು ದೇವರಿಗೆ ಮುಕ್ತಾಹಾರ ಮೊದಲಾದ ಆಭರಣಗಳನ್ನು, ದಿವ್ಯವಸ್ತ್ರಗಳನ್ನು ಸಮ

ರ್ಪಿಸಿದರು. ಶ್ರೀಕೈಲಾಸದ ಮಲ್ಲಿಕಾರ್ಜುನಸ್ವಾಮಿಗೆ ರುದ್ರಾಕ್ಷಿ ಮೊಂಟಿಯ ಸೆನ್ನಿ ಬೆಳ್ಳಿಯ ಕಂಬಿಯನ್ನೂ ಒಪ್ಪಿಸಿದರು. ಕಂಚಿಯ ವಿಶಾಂಬರೀ ಪ್ರವರಸ್ವಾಮಿಯ ದೇವಸ್ಥಾನಕ್ಕೆ ಒಂದು ಆನೆಯನ್ನು ಕೊಟ್ಟರು. ಈ ಪ್ರಕಾರವಾಗಿ ಅನೇಕ ದೇವತಾ ಸೇವೆಗಳನ್ನು ಮಾಡಿರುತ್ತಾರೆ.

15 ಸುಬ್ರಹ್ಮಣ್ಯಕ್ಕೆ ಸವಾರಿ.—ಆಳಿದ ಮಹಾನವಮಿಯವರಾದ ಮುಮ್ಮಡಿ ಕೃಷ್ಣರಾಜೇಂದ್ರ ಒಡೆಯರವರು ತಮ್ಮ ಧರ್ಮಪತ್ನಿಯರಿಂದಲೂ, ಸಾಮಂತರಿಂದಲೂ, ಆಪಮನೆಯಿಲಾಪೆಯ ಜನಗಳಿಂದಲೂ. ೧೮ ಕಚೇರಿಯ ಜನಗಳಿಂದಲೂ, ಸೇನಾಜನಗಳಿಂದಲೂ ಸಹಿತರಾಗಿ ವೈಭವದಿಂದ ಶಾ॥ ೧೭೪೩ನೇ ವಿಕ್ರಮ ಸಂವತ್ಸರದ ಮಾರ್ಗಶಿರ ಬಹುಳ ೮ ಬುಧವಾರದಲ್ಲಿ ಮೈಸೂರು ನಗರವನ್ನು ಬಿಟ್ಟು ಎಡತೊರೆ, ಚುಂಚನಕಟ್ಟೆ, ರಾಮೇನಾಥಪುರ, ಅರಕಲಗೂಡು, ಕಂಚಮ್ಮನ ಹೊಸ ಕೋಟೆ, ಇವುಗಳ ಮಾರ್ಗವಾಗಿ ಹೊರಟು ಆ ಪುಷ್ಯ ಶುದ್ಧ ೦ ಶನಿವಾರದಲ್ಲಿ ಘಾಟಿ ಯಿಳಿದು, ಬಿಸಲೆ ಘಾಟಿಗೆ ಚಿತ್ತಯಿಸಿ, ಅಲ್ಲಿ ಶಿಬಿರದಲ್ಲಿ ಶ್ರೀನಿವಾಸಯ್ಯನು ಮಾಡಿಸಿದ ಆರೋಗಣೆಯನ್ನು ಒಪ್ಪಿಸಿಕೊಂಡು ಆ ಶುದ್ಧ ೫ ಸೋಮವಾರದ ದಿನ ಸುಬ್ರಹ್ಮಣ್ಯಕ್ಕೆ ಚಿತ್ತಯಿಸಿದರು. ಮಾರನೆಯದಿನ ಶುಕ್ರವಾರಧಾರೆಯ ತೀರ್ಥದಲ್ಲಿ ಸ್ನಾನಮಾಡಿ, ದೇವರ ದರ್ಶನವನ್ನು ಮಾಡಿದನಂತರ ಉತ್ಸವಾರ್ಥವಾಗಿ ಚಿನ್ನದ ಸುಬ್ರಹ್ಮಣ್ಯ ಸ್ವಾಮಿಯನ್ನು ಒಪ್ಪಿಸಿ, ನೂತನವಾಗಿ ಬೊಂಬೆಯ ರಥವನ್ನು ಮಾಡಿಸಿ ಮಾರ್ಗಶಿರ ಪುಷ್ಯಮಾಸ ಮೊದಲಾದ ಕಾಲಗಳಲ್ಲಿ ಈ ರಥವನ್ನೇರಿ ಉತ್ಸವ ನಡೆಸಿಕೊಂಡು ನಿಬಂಧನೆ ಮಾಡಿದರು ಈ ಮಾರ್ಗಶಿರ ಮಾಸ ರಥೋತ್ಸವಕಾಲದಲ್ಲಿ ೧೭ ಸಾವಿರ ಬ್ರಾಹ್ಮಣರಿಗೆ ಸಂತರ್ಪಣೆಯೂ ಪ್ರತಿದಿನವೂ ಸಂಜೆಯಲ್ಲಿ ೧೦೦ ಜನ ಬ್ರಾಹ್ಮಣರಿಗೆ ಭೋಜನವೂ ನಡೆಯುವುದಕ್ಕೆ ಮುಂಜರಾಬಾದು ತಾಲ್ಲೂಕಿನಿಂದ ಸಲ್ಲುವಂತೆ ತಸ್ದೀಕನ್ನು ಗಂಟು ಮಾಡಿ ಪೂಜೋಪಕರಣ ಸೇವೋಪಕರಣಗಳನ್ನೂ, ಚಿನ್ನ ಬೆಳ್ಳಿ ಜವಾಹಿರಿಯ ಆಭರಣಗಳನ್ನೂ ಒಪ್ಪಿಸಿದರು.

ಮತ್ತು ಅಲ್ಲಿ ಕಂಪಿನಿಯ ಬಹದ್ದರರಾದ ರೆಸಿಡೆಂಟರು ಕಲೆಕ್ಟರ ಮೊದಲಾದ ಸುಬಾರರು ಮೂರೆಗಳಿಗೆ ಇನ್ಸ್‌ಕಾಪಲು ಬರಲು ದೂರಿಗಳ

ವರು ಅವೆರಲ್ಲರಿಗೂ ವಿಷ್ಣ್ವಾಭರಣಗಳನ್ನು ಕೊಟ್ಟು ಮೇಜು ಮುಂತಾ
ದುದನ್ನು ಮಾಡಿಸಿ, ಅನೇಕಡೆಯಿಂದ ತಾನು ಅನೇಕ ಸನ್ಮಾನಗಳನ್ನು
ಪಡೆದ ಬಳಿಕ, ಆ ಪುಷ್ಯ ಶುದ್ಧ ೧೫ ಮಂಗಳವಾರ ಅಲ್ಲಿಂದ ಹೊರಟು
ಕಡಬ, ಸ್ಯಾರಂಗಿ, ಉಪ್ಪಿನಂಗಡಿ, ಸಪಾಣಿ, ಬಂಟಮಾಳ, ಪರಂಗಿಪೇಟೆ
ಇವುಗಳ ಮಾರ್ಗವಾಗಿ ಬಂದು, ಆ ಬಳಿಕ ಸೋಮವಾರವಲ್ಲಿ ಕೊಡಿ
ಯಾಲಕ್ಕೆ ಚಿತ್ತೈಯಿಸಿ, ನೇತ್ರಾವತೀ ಫಲ್ಗುಣೀ ನದಿಗಳೂಪಸಂಗ
ಮವಾಗಿರುವ ಪಶ್ಚಿಮಸಮುದ್ರವಲ್ಲಿ ಸ್ನಾನಮಾಡಿ, ಸಮುದ್ರರಾಜ
ನನ್ನು ಅನೇಕ ವಸ್ತ್ರಾಭರಣ ರತ್ನಗಳ ಕಾಣಿಕೆಗಳಿಂದ ಪೂಜಿಸಿ
ಅಲ್ಲಿ ಬಂದು ಸಪ್ತೋಪವಿಷ್ಟರು. ಆ ಬಳಿಕ ಅಲ್ಲಿಂದ ಹೊರಟು ಗುರು
ಪುರ, ಮೂಡಬಿದರೆ, ಧರ್ಮಸ್ಥಳ, ಹಾರಕಳ, ಹಿರಣಕ ಇವುಗಳ ಮಾರ್ಗ
ವಾಗಿ ಆ ಬಹುಳ ೩ ಶುಕ್ರವಾರದಲ್ಲಿ ಉಡುಪಿಗೆ ಚಿತ್ತೈಯಿಸಿ, ಅಲ್ಲಿ
ಸಮುದ್ರಸ್ನಾನವಾದ ನಂತರ, ರಜತಪೀಠಪುರವಲ್ಲಿ (ಉಡುಪಿ) ರುವ
ಶ್ರೀಕೃಷ್ಣದೇವರ ದರ್ಶನವನ್ನು ಮಾಡಿ, ಅನೇಕ ರತ್ನಗಳಿಂದೊಡ
ಗೂಡಿರುವ ಮುಕ್ತಾದಾರಗಳನ್ನೂ, ರತ್ನದ ಕಿರೀಟ ಚಿನ್ನದ ಕನಕಾ
ಮುಂತಾದ ಅನೇಕ ಆಭರಣಗಳನ್ನೂ, ವಸ್ತ್ರಗಳನ್ನೂ ಚಿನ್ನ
ಬೆಳ್ಳಿಗಳ ಪೂಜೋಪಕರಣ ಸೇವೋಪಕರಣಗಳನ್ನೂ ಒಪ್ಪಿಸಿ, ಪ್ರತಿ
ದಿವಸವಲ್ಲಿಯೂ ನಡೆಯತಕ್ಕ ದೇವತಾಸೇವೆ, ಸಂತರ್ಪಣೆ, ರಥೋ
ತ್ಸವ ಮೊದಲಾದ ಉತ್ಸವಗಳು ವಿಶೇಷವಾಗಿ ನಡೆಯಂತೆ ಧಾರಿ ತಸ್ತೋ
ಕನ್ನನ್ನಿಂಟುಮಾಡಿ, ಈ ಪಣವನ್ನು ನಗರದ ಫೌಜು ಕಚೇರಿಯಿಂದ
ಕೊಡುವಂತೆ ಕಟ್ಟಳೆ ಮಾಡಿಸಿದರು. ಮಾಘ ಶುದ್ಧ ೪ ಮಂಗಳ
ವಾರದಲ್ಲಿ ಉಡುಪಿಯಿಂದ ಹೊನ್ನಾಟು, ಬ್ರಹ್ಮಾವರ, ಹಿರೀದೇವತೆಗುಡಿ,
ಕುಂದಾಪುರ, ಕೊಡಚೂರು, ಸಿದ್ದಾಪುರ, ಹೊಸಅಂಗಡಿ, ಹೈವರಫಾ
ಟಗಳ ಮಾರ್ಗವಾಗಿ ಆ ಶುದ್ಧ ೧೫ ಬುಧವಾರವಲ್ಲಿ ನಗರಕ್ಕೆ ಚಿತ್ತೈ
ಯಿಸಿ, ಅಲ್ಲಿನ ಅರಮನೆಯ ದೇವತಾಖಾನೆಯ ಮುಂದುಗಡೆ ಪಟ್ಟಿಯ
ಕಾಳಗ ಮುಂತಾದ ಉತ್ಸವಗಳನ್ನು ನವೆಲಾತ್ರಿಯ ಬಿಜಯದಂತೆ ಮಾಡಿ
ಸಿದರು. ಅನಂತರ ಆ ಬಹುಳ ೧ ಯಲ್ಲಿ ಅಲ್ಲಿಂದ ಹೊರಟು ಸತ್ತೂರು
ಪೇಟೆ, ಮಾವಿನಹೊಳೆ, ಅನಂತಪುರ, ಕುಂಬಳೆ, ಮುನ್ನನಕೂಪ್ಪಲು,

ಶಿವಮೊಗ್ಗಾ, ಹೂವಿನ್ಲಿ, ಬೆಂಕಿಪುರ, ತರಿಕೆರೆ, ಕಡೂರು, ಸಕ್ಕರೆ ಪಟ್ಟಣ ಇವುಗಳ ಮೂರ್ಗವಾಗಿ ಬಂದು ಆ ಬಹುಳ ೫ ಭಾನುವಾರದಲ್ಲಿ ಸೂರ್ಯ ಗ್ರಹಣವಾದುದರಿಂದ ಚಂದ್ರದ್ರೋಣಪರ್ವತಕ್ಕೆ ಚಿತ್ತೈಯಿಸಿ, ಅದರಲ್ಲಿರುವ ದತ್ತಾತ್ರೇಯ ಪೀಠಕ್ಕೆ ಕಾಣಿಕೆ ಬೆಳ್ಳಿಯ ದೀಪಸ್ತಂಭ ಅನೆ ಮುಂತಾದ ಪದಾರ್ಥಗಳನ್ನೂ ವಸ್ತ್ರಾಭರಣಗಳನ್ನೂ ಕೊಟ್ಟು, ಫಾಲ್ಗುನ ಕುದ ೧ ಸೋಮವಾರದವರೆಗೆ ಅಲ್ಲಿಯೇ ಇದ್ದರು. ಮೂರ ನೆಯದಿನ ಅಲ್ಲಿಂದ ಹೊರಟು ಚಿಕ್ಕಮೆಗಳೂರು, ಬೇಲೂರು, ಮಾದೇನ ಹಳ್ಳಿ, ಹಾಸನ, ಗ್ರಾಮ, ಚನ್ನರಾಯಪಟ್ಟಣ, ಶ್ರವಣಬೆಳುಗುಳ, ಮೇಲುಕೋಟೆ, ಬಾಳೇಅರಸಿನವರ ಸತ್ರ, ದರಸಕುಪ್ಪೆ ಇವುಗಳ ಮೂರ್ಗವಾಗಿ ಫಾಲ್ಗುನ ಕುದ ೧೫ ಭಾನುವಾರದಲ್ಲಿ ಶ್ರೀರಂಗಪಟ್ಟಣಕ್ಕೆ ಚಿತ್ತೈಯಿಸಿದರು.

ಈ ರೀತಿಯಾಗಿ ಅನೇಕ ಸೀಮೆಗಳಲ್ಲಿ ಸಂಚರಿಸಿ, ಬರುವ ಮೂರ್ಗದಲ್ಲಿ ಆಯಾ ಸ್ಥಳಗಳಲ್ಲಿರುವ ದೇವರುಗಳ ದರ್ಶನವನ್ನು ಮಾಡಿ ಕೊಂಡು, ಆಯಾ ದೇವಸ್ಥಾನಗಳ ತಾರತಮ್ಯವಿದ್ದಂತೆ ಸೇವೆಗಳನ್ನು ನಡೆಸಿ, ಮೂರ್ಗದಲ್ಲಿ ಜನರು ತಂದು ಒಪ್ಪಿಸಿದ ಕಪ್ಪಕಾಣಿಕೆಗಳನ್ನು ಸ್ವೀಕರಿಸಿ ದೀನಜನರು ಶೂರಜನರು ಯಾಚಕರು ಮುಂತಾದವರಿಗೆಲ್ಲಾ ಅವರವರ ಮರ್ಯಾದೆಗನುಸಾರವಾಗಿ ವಸ್ತ್ರಾಭರಣ ದ್ರವ್ಯಗಳನ್ನು ಕೊಟ್ಟು, ಶಾ॥ ೧೭೪೫ನೇ ವಿಕ್ರಮ ಸಂವತ್ಸರದ ಫಾಲ್ಗುನ ಬಹುಳ ೧ ಸೋಮವಾರದಲ್ಲಿ ಅಂಬಾರಿಯಮೇಲೆ ಮುಹೂರ್ತಮಾಡಿ, ಬಹಳ ವೈಭವದಿಂದ ಅಭಿಜಿನ್ಮುಹೂರ್ತದಲ್ಲಿ ಮೈಸೂರಿಗೆ ಚಿತ್ತೈಯಿಸಿ, ಅರಮನೆಯ ಬಾಲಾಖಾನೆಯಲ್ಲಿ ದರಬಾರುಮಾಡಿ, ಸರ್ವರೂ ನಜರು ಮುಜರೆಗಳನ್ನು ಮಾಡಿದಮೇಲೆ, ಅವರಿಗೆ ಹೂವಿನೆದಾರ ವೀಳ್ಯಗಳನ್ನು ಅಪ್ಪಣೆ ಕಯಪಾಲಿಸಿದರು

15. ಅಗ್ರಹಾರಗಳ ದಾನ—ಮುಮ್ಮಡಿ ಶ್ರೀ ಕೃಷ್ಣರಾಜ ಒಡೆಯರವರು ಸ್ವನಾಮಾಂಕಿತವಾಗಿಯೂ, ಮಹಾಮಾತ್ಯ ಶ್ರೀಯವರ ನಾಮಾಂಕಿತವಾಗಿಯೂ ತಮ್ಮ ಪತ್ನಿಯರ ನಾಮಾಂಕಿತವಾಗಿಯೂ ಅಗ್ರಹಾರಗಳನ್ನು ಮಾಡಿಸಿ, ಮನೆಗಳನ್ನು ಕಟ್ಟಿಸಿ, ದೇವಾಲಯ ತಟಾ

ಕಾರಾಮೆ ಸರೋವರಗಳನ್ನು ನಿರ್ಮಿಸಿ, ಫಲಸಮೃದ್ಧಿಯಿಂದ ಕೂಡಿದ ಅನೇಕ ಗ್ರಾಮಗಳನ್ನು ಕಟ್ಟಿಸಿ ಕಾಲುವೆಸಹಿತವಾಗಿ ಧಾರೆಯಿರೆದು, ಕೊಟ್ಟರುವೆ ವಿವರ ವಿನೆಂದರೆ :—

ಕೃಷ್ಣರಾಜೇಂದ್ರಪುರಾಗ್ರಹಾರ.—ಮುಮ್ಮಡಿ ಕೃಷ್ಣರಾಜಒಡೆಯರವರು ಶಾ|| ೧೭೪೮ನೇ ಪ್ರಮಾದಿ ಸಂವತ್ಸರದ ಶ್ರಾವಣ ಕೃಷ್ಣ ೧೦ ಭಾನುವಾರದಲ್ಲಿ ತ್ರಿಮತಸ್ಥ ಬ್ರಾಹ್ಮಣರ ದಂಪತಿಗಳನ್ನು ಪಸ್ತ್ರಗಳಿಂದಲೂ ಚಿನ್ನ ಬೆಳ್ಳಿಗಳಿಂದ ಮಾಡಿದ ಆಭರಣಗಳಿಂದಲೂ ಅಲಂಕರಿಸಿ ಗೃಹೋಪಕರಣ ಭೋಗೋಪಕರಣ ಪಸ್ತ್ರಪಾತ್ರಗಳನ್ನೂ, ಗೋ ಮೆಹಿಷಿ ಮುಂತಾದವುಗಳನ್ನೂ ಮುಂದಿನ ಫಲ ಬರುವವರೆಗೆ ಪರಾಪೇಕ್ಷೆ ಯಿಲ್ಲದಂತೆ ಸೋಪಸ್ಕರವಾಗಿ ಕೊಟ್ಟರು. ಈ ದಿನ ಧಾರೆಯೆರೆದು ಕೊಟ್ಟ ೭೦ ಬ್ರಾಹ್ಮಣರ ವೃತ್ತಿ, ಮತ್ತು ೨೦ ದೇವರವೃತ್ತಿ, ಅಂತು ೭೪ ವೃತ್ತಿಗಳಿಗೂ, ನಂಜನಗೂಡಿನ ಸಮೀಪದ ಕಪಿಲಾನದೀ ತೀರದಲ್ಲಿ ಕತ್ತವಾಡಿ ಪುರವೆಂಬ ಗ್ರಾಮಕ್ಕೆ ಉತ್ತರದಲ್ಲಿ ೭೪ ಮನೆಗಳನ್ನೂ, ಗೋಪಾಲಕೃಷ್ಣಸ್ವಾಮಿಯ ಮತ್ತು ಕೃಷ್ಣರಾಜೇಶ್ವರಸ್ವಾಮಿಯ ದೇವಸ್ಥಾನಗಳನ್ನೂ, ಕಪಿಲಾನದಿಗೆ ಸೋಪಾನ ಸಂಧ್ಯಾ ಮಂಟಪಗಳನ್ನೂ ಕಟ್ಟಿಸಿ, ದೇವರ ಪ್ರತಿಷ್ಠೆ ಅಗ್ರಹಾರವ ಪ್ರತಿಷ್ಠೆಗಳನ್ನು ಮಾಡಿಸಿದರು. ಈ ೭೪ ವೃತ್ತಿಗಳಿಗೂ ವೃತ್ತಿಯೊಂದಕ್ಕೆ ಕಂತೀರಾಯಿ ೫೬ ವೆರಹಗಳ ಪ್ರಕಾರ ೨,೬೬೪ ವರಹ ಹುಟ್ಟುವೆಂಥ ಕುಳಲೆ ತಾಲ್ಲೂಕಿಗೆ ಸೇರಿದವಾದ ಕೂಡಲಾಪುರ ಮುಂತಾದ ಅಸಲೀಗ್ರಾಮ ೧೪ನ್ನೂ, ದಾಖಲೆ ಗ್ರಾಮ ೫೧ನ್ನೂ, ಹಿರಣ್ಯೋದಕಧಾರಾಪೂರ್ವಕವಾಗಿ ಕೊಟ್ಟು, ಈ ಅಗ್ರಹಾರಕ್ಕೆ ಕೃಷ್ಣರಾಜೇಂದ್ರಪುರಾಗ್ರಹಾರವೆಂಬುದಾಗಿ ನಾಮಧೇಯವನ್ನಿಟ್ಟುಮಾಡಿ, ಈ ಅಗ್ರಹಾರದ ಸೀಮಾವನದಲ್ಲಿ ಪ್ರತಿ ಮಂಗಳವಾರದಲ್ಲಿಯೂ ಸಂತೆ ಕಟ್ಟುವಂತೆ ನಿಬಂಧನೆ ಮಾಡಿಸಿದರು. ಈ ಅಗ್ರಹಾರದ ಒಕ್ಕಲಿಗರಪ್ಪಗಳಿಗೂ ಕೂಡಲಾಪುರ ಮುಂತಾದ ಅಸಲೀಗ್ರಾಮಗಳಿಗೂ ದಾಖಲೆಗ್ರಾಮಗಳಿಗೂ ಪಾಮನನುಮೈ ೬೦೦ ಪ್ರತಿಪತ್ರಗಳನ್ನು ಮಾಡಿಸಿಕೊಡುವಂತೆಯೂ, ಇವುಗಳನ್ನು ಉಯಾ ವೃತ್ತಿವಂತರು ಪುತ್ರಪೌತ್ರಪಾರಂಪರ್ಯವಾಗಿ ನಡೆಸಿಕೊಂಡು ಬರುವಂತೆಯೂ, ಕುಳಲೆ ತಾಲ್ಲೂಕು

ಸುಬೀಜಾರಸಿಗೆ ದಾತೃಪ್ರತಿಗೃಹೀತೃತ್ರಿವೂರುಷನಾಮೋಚ್ಚಾರಣಪೂರ್ವಕವಾಗಿ ಒಟ್ಟು ದಾನಶಾಸನವನ್ನು ಬರೆಸಿಕೊಟ್ಟಿರುವುದಲ್ಲದೆ, ಈ ಮೈತ್ರಿಯಂತರಿಗೆ ಪ್ರತ್ಯೇಕವಾಗಿಯೂ ದಾನಶಾಸನವನ್ನು ಬರಯಿಸಿಕೊಟ್ಟರು. ಈ ಕೃಷ್ಣರಾಯಪುರಾಗ್ರಹಾರದವರು ಕಳ್ಳರ ಬಾಧೆಯನ್ನು ತಾಳಲಾರದೆ ಬಂದು ಬೊಕ್ಕೆಗಳಿಗೆ ವಿಜ್ಞಾಪಿಸಿಕೊಳ್ಳಲು, ಅವರ ಮಹಾಸ್ವಾಮಿಯವರು ಮೈಸೂರ ಕೋಟೆಗೆ ನೈಋತ್ಯದಿಕ್ಕಿನಲ್ಲಿ ಎಲ್ಲರಿಗೂ ನಿವೇಶಗಳನ್ನು ಕಟ್ಟಿಸಿಕೊಟ್ಟು, ಸುಖವಾಗಿರುವಂತೆ ಕಟ್ಟಳೆ ಮಾಡಿಸಿದರು.

ನಂಜರಾಜಾಬ್ದಾಗ್ರಹಾರ.—ಶಾ॥ ೧೩೫೭ನೇ ತಾರಣ ಸಂವತ್ಸರದ ಪೌಷ ಶುದ್ಧ ೧೫ ಗುರುವಾರದಲ್ಲಿ ಸಪತ್ನೀ ಮಾತೃಗಳಾದ ನಂಜಮ್ಮಣ್ಣಿಯವರ ಕೈಯಿಂದ ತುಲಾಭಾರದಾನವನ್ನು ಮಾಡಿಸಿ, ಈ ದಿನವೇ ಗೋಪಾಲಕೃಷ್ಣದೇವರಿಗೆ ೫೦ ವೃತ್ತಿಯನ್ನು ಧಾರೆಯೆರೆಸಿ, ಈ ವೃತ್ತಿಯೊಂದಕ್ಕೆ ಕಂಠೀರಾಯಿ ೫೦ ವರಹಗಳು ಹುಟ್ಟುವಂತ ಎಡತೊರೆ ತಾಲ್ಲೂಕು ಹಳಯೂರು, ಕಾಳೇನಹಳ್ಳಿ, ಹೊಸೂರು, ಅರಕೆರೆ ಎಂಬ ಗ್ರಾಮಗಳನ್ನು ಕೊಟ್ಟು, ಗೋಪಾಲ ಕೃಷ್ಣಸ್ವಾಮಿಯನ್ನು ಪ್ರತಿಷ್ಠೆ ಮಾಡಿಸಿದ್ದಲ್ಲದೆ ಕೆಲವು ಬ್ರಾಹ್ಮಣರಿಗೆ ಅವರು ಕೇಳಿಕೊಂಡ ಸ್ಥಳದಲ್ಲಿ ಗದ್ದೆ ಬೆದ್ದಲು ಸಹ ೬ ವರಹ ಭಟ್ಟನೆಸ್ಯ ಭೂಮಿಯನ್ನು ಧಾರೆಯೆರದು ಕೊಟ್ಟರು.

ವೀರೇಶ್ವರಾಬ್ದಾಗ್ರಹಾರ.—ಶಾ॥ ೧೩೬೯ನೇ ವ್ಯಯಸಂವತ್ಸರದ ಜ್ಯೇಷ್ಠ ಶುದ್ಧ ೧೫ ಭೃಗುವಾರದಲ್ಲಿ ಸಪತ್ನೀ ಮಾತೃಗಳಾದ ವೀರೇಶ್ವರಮ್ಮಣ್ಣಿಯವರ ಕೈಯಿಂದ, ೨೦ ವೃತ್ತಿಯನ್ನು ತ್ರಿಮತಸ್ಥ ಬ್ರಾಹ್ಮಣರಿಗೂ ಧಾರೆಯೆರೆಸಿ, ವೃತ್ತಿಯೊಂದಕ್ಕೆ ಕಂಠೀರಾಯಿ ೫೦ ವರಹ ಹುಟ್ಟುವಮೇರೆಗೆ ನುಳವೆಳ್ಳಿ ತಾಲ್ಲೂಕು ಕೊಂಡಾಪುರ, ಮೂಗಾಪುರ, ಹೊನ್ನಾಯಕನಪಳ್ಳಿ ನಿಯಂತಾದ ೬ ಗ್ರಾಮಗಳನ್ನು ಕೊಟ್ಟರು. ಮತ್ತು ಕೆಲವು ಬ್ರಾಹ್ಮಣರಿಗೆ ಗದ್ದೆ ಬೆದ್ದಲು ಸಹಿತವಾಗಿ ೬ ವರಹಗಳ ಭಟ್ಟಮಾನ್ಯ ಭೂಮಿಯನ್ನು ಧಾರೆಯೆರೆಸಿ ಅವರು ಕೇಳಿಕೊಂಡ ಸ್ಥಳದಲ್ಲಿ ಕೊಡಿಸಿದರು. ಈ ೨೦ ವೃತ್ತಿವಂತರಾದ ಬ್ರಾಹ್ಮಣರಿಗೆ ಮೈಸೂರ ಕೋಟೆಗೆ ದಕ್ಷಿಣ ಪಾರ್ಶ್ವದ ನಿವೇಶನದಲ್ಲಿ ೨೦ ಮನೆಗಳನ್ನು, ಅಗ್ರಹಾರವು

ಪುತ್ತಿಳ್ಳು ಮೊಕಟರಮಣಪಾಸ್ಪ್ರಗಳಿಗೆ ೧ ಮನೆಯನ್ನೂ, ಅಂತು ೩೫ ಮನೆಗಳನ್ನು ಕಟ್ಟಿಸಿ, ವಿಶ್ವಾವಸು ಸಂವತ್ಸರದ ಜ್ಯೇಷ್ಠ ಬಹುಳ ೭ ಗುರುವಾರದಲ್ಲಿ ಅಗ್ರಹಾರ ಪ್ರತಿಷ್ಠೆಯನ್ನು ಮಾಡಿಸಿ ಸೋಪಸ್ಕಾರವಾಗಿಯೂ ಗೃಹೋಪಕರಣ ಸಹಿತವಾಗಿಯೂ, ಧಾರೆಯೆರೆಸಿದರು.

ದೇವಾಜ್ಞಾಂಬಾಗ್ರಹಾರ.—ಕ್ರಿ॥ ೧೬೪೯ನೇ ಪ್ಲವಂಗ ಸಂವತ್ಸರದ ಆಷಾಢ ಶುದ್ಧ ೧೦ ಶುಕ್ರವಾರ ಕರ್ನಾಟಕ ಸಂಕ್ರಮಣದ ದಿನದಲ್ಲಿ ಪತ್ನೀ ಮಾತೃ ದೇವಜ್ಞಮ್ಮನವರಾದ ದೇವಾಜಮ್ಮಣ್ಣಯ್ಯನವರ ಕೈಯಿಂದ ತುಲಾಭಾರ ದಾನವನ್ನು ಮಾಡಿಸಿ, ತಾವು ಪ್ರತಿಷ್ಠೆ ಮಾಡಿಸಿದ ಶ್ರೀಕಂಠೇಶ್ವರಸ್ವಾಮಿ ದೇವಸ್ಥಾನಕ್ಕೆ ೧, ತ್ರಿಮತಸ್ಥ ಬ್ರಾಹ್ಮಣರಿಗೆ ೫೪, ಜೈನರಿಗೆ ೫೫, ಅಂತು ೬೦ ವೃತ್ತಿಯನ್ನು ಧಾರೆಯೆರೆಸಿ, ವೃತ್ತಿಯೊಂದಕ್ಕೆ ೩೬ ವರಹಗಳ ಮೀರೆಗೆ ಹುಟ್ಟುವಂಥ ಹೊಳೆ ನರಶಿಪುರವ ತಾಲ್ಲೂಕು ಬಂಡುಹೊಳೆ, ಯಾಚನಹಳ್ಳಿ, ಮೆಡವನಕೋಟಿ ಮುಂತಾದ ೧೫ ಗ್ರಾಮಗಳನ್ನು ಕೊಟ್ಟು ಈ ಬಂಡುಹೊಳೆ ಗ್ರಾಮದಲ್ಲಿ ನಮ್ಮ ತಿ ಸಂವತ್ಸರದ ಮಿಥುನಸಂಕ್ರಮಣ ಆಷಾಢ ಶುದ್ಧ ೫ಯಲ್ಲಿ ಶ್ರೀಕಂಠೇಶ್ವರ ಪ್ರತಿಷ್ಠೆಯನ್ನು ಮಾಡಿಸಿದರು.

ಲಕ್ಷ್ಮಣ್ಣಾಂಬಾಗ್ರಹಾರ.—ಕ್ರಿ॥ ೧೬೫೦ನೇ ಸರ್ವಜಿತು ಸಂವತ್ಸರದ ಆಷಾಢ ಬಹುಳ ೬ ಸ್ಥಿರವಾರ ಕರ್ನಾಟಕ ಸಂಕ್ರಮಣದ ದಿನದ ಪತ್ನೀ ಮಾತೃಗಳಾದ ಲಕ್ಷ್ಮಕ್ಕಮ್ಮಣ್ಣಿಯವರ ಕೈಯಿಂದ ತುಲಾಭಾರ ದಾನವನ್ನು ಮಾಡಿಸಿ, ತ್ರಿಮತಸ್ಥ ಬ್ರಾಹ್ಮಣರಿಗೂ ೬೦ ವೃತ್ತಿಯನ್ನು ಧಾರೆಯೆರೆಸಿ, ವೃತ್ತಿ ೧ಕ್ಕೆ ಹಂತಿರಾಯಿ ೫೦ ವರಹ ಹುಟ್ಟುವಳಿಯ ಕಲ್ಲಹಳ್ಳಿ ರಾಯಕಟ್ಟೆ ತಾಲ್ಲೂಕು ಪೈಕಿ ಬೊಸಕೋಟೆ, ಎಲೆಮನಗನಹಳ್ಳಿ, ಗುಡಗನಹಳ್ಳಿ, ಚಿಕ್ಕನಮ್ಮಗೆರೆ ಮುಂತಾದ ೧೪ ಗ್ರಾಮಗಳನ್ನು ಕೊಟ್ಟರು. ಮತ್ತು ಕೆಲವು ಮಂದಿ ಬ್ರಾಹ್ಮಣರಿಗೆ ಅವರವರು ಕೇಳಿಕೊಂಡ ಸ್ಥಳಗಳಲ್ಲಿ ಗದ್ದೆ ಬೆದ್ದಲು ಸಮೇತ ವರಹಗಳ ಭಟ್ಟವೊನ್ಯ ಭೂಮಿಯನ್ನು ಕೊಟ್ಟರು. ಈ ವೃತ್ತಿಪಂಕ್ತಿರಿಗೆ ಎಷ್ಟತೊರೆಯಲ್ಲಿ ೬೦ ಮನೆಗಳನ್ನು ಕಟ್ಟಿಸಿ, ಗೃಹೋಪಕರಣ ಸಹಿತವಾಗಿ ಕ್ರಿ॥ ೧೬೫೦ನೇ ವಿರೋಧಿ ಸಂವತ್ಸರದ ಶ್ರಾವಣ ಬಹುಳ ೧೫ಯಲ್ಲಿ ಅಗ್ರಹಾರ ಪ್ರತಿಷ್ಠೆಯನ್ನು ಮಾಡಿಸಿ ಕೊಟ್ಟರು.

ಕೆಂಪನಂಜಮ್ಮಾಂಬಾ, ಕೆಂಪದೇವಾಂಬಾ, ಜೆಲುವಾಂಬಾಗ್ರಹಾರಗಳು.—ಮೇಲೆ ಕಂಡ ಕಾ॥ ೧೭೫೦ನೇ ಸರ್ವಜಿತು ಸಂವತ್ಸರದ ಅಷಾಢ ಬಹುಳ ೬ ಸ್ಥಿರವಾರ ಕರ್ನಾಟಕ ಸಂಕ್ರಮಣದಲ್ಲಿ ಮಹಾ ಮಾತೃಶ್ರೀ ಯನೆರಾವ ಖಾಸಾ ಕೆಂಪನಂಜಮ್ಮಣ್ಣಿಯವರಿಗೂ, ಸಖತ್ನೀ ಮಾತೃಗ ಳಾವ ಕೆಂಪದೇವಾಜಮ್ಮಣ್ಣಿಯವರಿಗೂ, ಜೆಲುವಾಜಮ್ಮಣ್ಣಿಯವರಿಗೂ, ಶಾಶ್ವತ ಪುಣ್ಯಲೋಕ ಬರಬೇಕೆಂದು, ಆಳಿದ ಮಹಾಸ್ವಾಮಿಯವರು ಸನ್ನಿಧಾನ ೧೯೬ ವಿಧರ ಪ್ರಕಾರ ವೃತ್ತಿ ೧೯೬ ಕ್ಕೆ ೩೬ ವೆರಹಗಳು ಹುಟ್ಟುವ ಮೇರೆಗೆ ೬೦ ವೃತ್ತಿಗಳನ್ನು ನಾಲೆಯೆರೆದು ಕೊಟ್ಟು, ೩ ಅಗ್ರಹಾರ ಗಳನ್ನು ಕಟ್ಟಿಸಿಕೊಟ್ಟರು. ಇವುಗಳಲ್ಲಿ ಕೆಂಪನಂಜಮ್ಮಾಂಬಾಗ್ರ ಹಾರದ ವೃತ್ತಿವಂತರಿಗೆ ಜನ್ನಪಟ್ಟಣದ ತಾಲ್ಲೂಕು ಕೂಡ್ಲೂರು ಮುಂತಾದ ಗ್ರಾಮಗಳೂ ಕೆಂಪದೇವಾಂಬಾಗ್ರಹಾರದ ವೃತ್ತಿವಂತ ರಿಗೆ ಮೆದ್ದೂರು ತಾಲ್ಲೂಕು ಕೆಸ್ತೂರು, ಅತಗನಹಳ್ಳಿ, ಕಂಸಲಾಪುರದ ದೊಡ್ಡಿ ಮುಂತಾದ ೪ ಗ್ರಾಮಗಳೂ ಜೆಲುವಾಂಬಾಗ್ರಹಾರದ ವೃತ್ತಿ ವಂತರಿಗೆ ಮಂಡ್ಯದ ತಾಲ್ಲೂಕು ಈಸೂರೆರೆ ಮುಂತಾದ ಗ್ರಾಮಗಳೂ ಸೇರಿವೆ. ಈ ಮೂರು ಅಗ್ರಹಾರಗಳಿಗೆ ಸೇರಿದ ೬೦ ಮಂದಿ ವೃತ್ತಿ ವಂತರಿಗೂ, ಮೈಸೂರ ಕೋಟೆಗೆ ನೈರುತ್ಯದಲ್ಲಿ ೬೦ ಮನೆಗಳನ್ನು ಕಟ್ಟಿಸಿ, ಕಾ॥ ೧೭೫೧ನೇ ವಿರೋಧಿ ಸಂವತ್ಸರದ ಮಾಘ ಶುದ್ಧ ೪ ಯಲ್ಲಿ ಅಗ್ರಹಾರ ಪ್ರತಿಷ್ಠೆ ಯನ್ನು ಮಾಡಿಸಿ, ಧಾರೆಯೆರೆದು ಕೊಟ್ಟರು.

ಪೇವಾಂಬಾ, ಜೆಲುವಾಂಬಾ, ಲಿಂಗಾಂಬಾಗ್ರದ್ವಾರಗಳು.—ಕಾ॥ ೧೭೪೪ನೇ ವಿಷ್ಣು ಸಂವತ್ಸರದ ಚಾತುರ್ಮಾಸ ಶುದ್ಧ ೦ ಸ್ಥಿರವಾರದಲ್ಲಿ ಆಳಿದ ಮಹಾಸ್ವಾಮಿ ಯವರು ಕೃಷ್ಣರಾಜೇಂದ್ರಪುರಾಗ್ರಹಾರದ ಬ್ರಾಹ್ಮಣರಿಗೆ ಕೊಟ್ಟಿಂತೆ, ವಸ್ತ್ರಾಭರಣ ಮುಂತಾದ ಪದಾರ್ಥಗಳನ್ನು ಕೊಟ್ಟು, ಪ್ರಸನ್ನನಂಜು ಂಡೇಶ್ವರನಿಗೆ ೧ ವೃತ್ತಿ, ಆಮೋಘಬಲಮೆತವ ಲಕ್ಷ್ಮೀನರಸಿಂಹಸ್ವಾಮಿಗೆ ೧ ವೃತ್ತಿ, ಶ್ರೀಪರಕಾಲಸ್ವಾಮಿಗಳ ಮೆತವ ಪಯಗ್ರೀವಪೆರುಮಾಳರಿಗೆ ೧ ವೃತ್ತಿ, ತ್ರಿಮತಸ್ಥ ಬ್ರಾಹ್ಮಣರಿಗೆ ೬೦ ವೃತ್ತಿ, ಒಟ್ಟು ೬೪ ವೃತ್ತಿಗಳನ್ನು ಧಾರೆಯೆರೆದು ಕೊಟ್ಟು ಮೈಸೂರ ಅಷ್ಟಗ್ರಾಮವ ತಾಲ್ಲೂಕು ಚಂದ ಗಾಲದ ಕಾವೇರೀ ನದಿಗೆ ದಕ್ಷಿಣಪಾರ್ಶ್ವದಲ್ಲಿ ೬೪ ಮನೆಗಳನ್ನೂ ಶಿವ

ದೇವಸ್ಥಾನವನ್ನು ಕಟ್ಟಿಸಿ, ಈ ವೃತ್ತಿಯೊಂದಕ್ಕೆ ಕುಂದಿರಾಯಿ ೩೬ ಮನೆ ಹಗಳ ಮೇರೆಗೆ ಹುಟ್ಟುವಳಿಯ ಗ್ರಾಮಗಳನ್ನು ಕೊಟ್ಟನು. ಇವಕ್ಕೆ ವಿವರ: (೧) ಲಕ್ಷ್ಮೀವಿಲಾಸದ ದೇವಾಂಬಾಗ್ರಹಾರದವರಿಗೆ ಕೊಟ್ಟರುವ ೨೦ ವೃತ್ತಿಗಳಿಗೆ ಸೇರಿದವುಗಳು ಎಡತೊರೆ ತಾಲ್ಲೂಕು ಕುಂಬೂರು, ಕಲ್ಲಳ್ಳಿ, ಬಿಡ್ಡರಹಳ್ಳಿ ಮುಂತಾದ ೫ ಗ್ರಾಮಗಳು (೨) ರಮಾವಿಲಾಸದ ಜೆಲುವಾಂಬಾಗ್ರಹಾರದವರಿಗೆ ಕೊಟ್ಟ ೨೧ ವೃತ್ತಿಗಳಿಗೆ ಸೇರಿದವುಗಳು ಬೂಕನಕೆರೆ ತಾಲ್ಲೂಕು ಬೇಬಿ, ಡಿಂಕ, ಹೊನ್ನಾಯಕನಹಳ್ಳಿ ಎಂಬ ೩ ಗ್ರಾಮಗಳು. (೩) ಕೃಷ್ಣವಿಲಾಸದ ಲಿಂಗಾಂಬಾಗ್ರಹಾರದವರಿಗೆ ಕೊಟ್ಟ ೨೦ ವೃತ್ತಿಗಳಿಗೆ ಸೇರಿದವುಗಳು ಅತ್ತಿಕುಪ್ಪೆ ತಾಲ್ಲೂಕು ಮೋದೂರು, ಚಿಟ್ಟಹಳ್ಳಿ, ಬೆಟ್ಟಹಳ್ಳಿ, ಕಾಮೆನಾಯಕನಹಳ್ಳಿ ಎಂಬ ೪ ಗ್ರಾಮಗಳು. ಈ ಅಗ್ರಹಾರಗಳ ಬ್ರಾಹ್ಮಣರು ಕೆಲವು ದಿವಸ ಸುಖವಾಗಿದ್ದು, ಅನಂತರ ರೋಗಾದ್ಯುಪದ್ರವಗಳು ಬಲವಾಗಿ ಜನಗಳಿಗೆ ಬಹಳ ಕೊಂಪರೆ ಯಾದ್ದರಿಂದ, ಮಹಾಸನ್ನಿಧಾನದಲ್ಲಿ ಬಂದು ಅರಿಕೆಮಾಡಿಕೊಳ್ಳಲು, ಆಳಿದ ಮಹಾಸ್ವಾಮಿಯವರು ಮೈಸೂರ ಕೋಟೆಗೆ ಪಶ್ಚಿಮ ಪಾರ್ಶ್ವದಲ್ಲಿ ಆದೇ೩ ಅಗ್ರಹಾರಗಳ ಮನೆಗಳನ್ನು ಕಟ್ಟಿಸಿ, ಶಾ॥ ೧೭೪೪ನೇ ಪಾರ್ಥಿವ ಸಂವತ್ಸರದ ವೈಶಾಖ ಬಹುಳ ೬ ಭಾನುವಾರದಲ್ಲಿ ಪ್ರತಿಷ್ಠೆಯನ್ನು ಮಾಡಿಸಿ, ಈ ಬ್ರಾಹ್ಮಣರು ಸುಖವಾಗಿ ವಾಸಮಾಡಿಕೊಂಡಿರುವಂತೆ ನಿಬಂಧನೆ ಮಾಡಿದರು. ಈ ಅಗ್ರಹಾರಗಳ ಬ್ರಾಹ್ಮಣರು ಮುಂತಾದ ಸರ್ವಜನರೂ ಸಂಚಾರಮಾಡುವುದಕ್ಕೆ ಕೋಟೆಯ ಪಶ್ಚಿಮಭಾಗದಲ್ಲಿ ಹೊಸ ಬಾಗಿ ಬ್ರಹ್ಮಪುರಿಯ ಬಾಗಿಲನ್ನು ನಿರ್ಮಿಸಿ, ಈ ಅಗ್ರಹಾರಗಳಿಗೆ ಪೇಟೆಯನ್ನು ಕಟ್ಟಿಸಿ, ಪ್ರತಿ ಶುಕ್ರವಾರದಲ್ಲಿಯೂ ಸಂತೆಕೂಡಿ ವ್ಯಾಪಾರ ನಡೆಯುವಂತೆ ನಿಬಂಧನೆ ಮಾಡಿಸಿದರು. ಈ ಅಗ್ರಹಾರಗಳ ಸಮೀಪದಲ್ಲಿ ನೂತನವಾಗಿ ಶಿವ ದೇವಸ್ಥಾನವನ್ನು ಕಟ್ಟಿಸಿ, ಪಂಚಪೀಠಗಳು ಅಮ್ಮನವರು ಸಹಿತವಾಗಿ ಪ್ರಸನ್ನ ನಂಜುಂಡೇಶ್ವರಸ್ವಾಮಿ ಪ್ರತಿಷ್ಠೆಯನ್ನು ಮಾಡಿಸಿ, ರಥೋತ್ಸವಾದ್ಯುತ್ಸವಗಳಿಗೂ ಪ್ರತಿದಿವಸದ ಪೂಜೆಗೂ ತಸ್ತೀಕನ್ನು ಗಂಟುಮಾಡಿದರು. ಪೂರ್ವದ ಅಗ್ರಹಾರದಲ್ಲಿ ಪ್ರತಿಷ್ಠೆಯಾಗಿ ಚಂದಗಾಲದಲ್ಲಿದ್ದ ದೇವರಿಗೆ ಅಲ್ಲಿಯೇ ಪೂಜೆ ನಡೆಯುವಂತೆ ನಿಬಂಧನೆ ಮಾಡಿದರು.

ದನಕೊಟ್ಟು ಮೊಹರಿ ಮಾಡಿಸಿಕೊಟ್ಟರು. ಮೇಲ್ಕಿ ಆಗ್ರಹಾರವನ್ನು ಕೊಟ್ಟಸುಸ ಯಜಮಾನನ ತ್ರಿಪುರುಷನಾಮೋಚ್ಚಾರಣ ಪೂರ್ವಕವಾಗಿಯೂ, ಪ್ರತಿಗ್ರಹೀತೃಗಳ ತ್ರಿಪುರುಷನಾಮೋಚ್ಚಾರಣ ಪೂರ್ವಕವಾಗಿಯೂ, ಪ್ರತ್ಯೇಕವಾಗಿ ದಾನಶಾಸನಗಳನ್ನು ಬರಮಿಸಿ, ಅವರವರ ದನಕತ್ತು ಮಾಡಿಸಿಕೊಟ್ಟು, ಈ ಆಗ್ರಹಾರಗಳಿಗೆ ಆಯಾ ದಾತೃಗಳ ಹೆಸರುಗಳನ್ನು ಇಟ್ಟಿರುವರಲ್ಲದೆ ಭಟ್ಟಮಾನ್ಯವು ಬ್ರಾಹ್ಮಣರಿಗೆ ಸೇರಿದನ್ನು ಬರೆದು ಕೊಟ್ಟಿರುತ್ತಾರೆ.

ಆಳಿದ ಮಹಾಸ್ವಾಮಿಯವರು ಈ ಮೇರಗೆ ಅಧಿಕಾರಸ್ಥರು, ವಿದ್ವಾಂಸರು, ಅರಸುಗಳು, ಸಾಹುಕಾರರು, ಜೈನರು, ತಪಸ್ವಿಗಳು, ಅರಮನೆಯ ಸೇವಾಜನರು, ಮೆತಗೆಳ ಯತಿಶ್ವರರು ಮುಂತಾದ ಅನೇಕ ಜನಗಳಿಗೆ ಅವರವರ ಯೋಗ್ಯತಾನುಸಾರವಾಗಿ ಭಟ್ಟಮಾನ್ಯ ರೂಪವಾಗಿ ಭೂಮಿಯನ್ನೂ ನಗದನ್ನೂ ಕೊಟ್ಟಿರುವರಲ್ಲದೆ, ಅನೇಕ ಜೋಡಿಗ್ರಾಮಗಳು ಖಾಯಂಗಂತ್ರಿಗೆಯಗ್ರಾಮಗಳು, ಸಂಬಳ ಮುಂತಾದವುಗಳನ್ನೂ ಕೊಟ್ಟು ಸಕಲರನ್ನೂ ಸಂರಕ್ಷಿಸುತ್ತಿದ್ದರು.

16. ಛತ್ರಗಳು.—ಆಳಿದ ಮಹಾಸ್ವಾಮಿಯವರು ತಮ್ಮ ಸೀಮೆಯ ಭಾಟಮಾರ್ಗಗಳಲ್ಲಿ ಗಾವುದಕ್ಕೆ ಒಂದು ಸ್ಥಳದಲ್ಲಿ ಅನ್ನಸತ್ರಗಳು, ಸಾಲು ಮರ, ತೋಪು, ಧರ್ಮಶಾಲೆ, ಬಂಗಲೆ, ಸರೋವರ, ತಟಾಕಗಳನ್ನು ಮಾಡಿಸಿದುದಲ್ಲದೆ, ಕಾಶಿ, ಕಂಚಿ, ಶ್ರೀರಂಗ ಮುಂತಾದ ದಿವ್ಯಕ್ಷೇತ್ರಗಳಲ್ಲಿ ಪ್ರತಿದಿನವಲ್ಲಿಯೂ ಅನ್ನದಾನ ನಡೆಯಂತೆ ಸತ್ರಗಳನ್ನು ಏರ್ಪಾಟುಮಾಡಿದರು. ಲಕ್ಷ್ಮೀವಿಲಾಸ ಸೆನ್ನಿಧಾನದ ದೇವಾಜಮ್ಮಣ್ಣಿಯವರ ಹೆಸರಿನಿಂದ ತಿರುಮುಕೂಡಲು ಮಾರ್ಗದಲ್ಲಿ ಹೊರಣವೆಂಬ ಗ್ರಾಮದಲ್ಲಿ ದೇವಾಂಬುಧಿ ಎಂಬ ತಟಾಕವನ್ನೂ ದೇವದೇವ್ಯರನೆಂಬ ಶಿವನ ಆಲಯವನ್ನೂ ಅನ್ನಸತ್ರ ತೋಪು ಮೊದಲಾದವುಗಳನ್ನೂ ಮಾಡಿಸಿ, ಈ ದೇವರಿಗೆ ಸಸ್ಯಾಭರಣಗಳನ್ನು ಕೊಟ್ಟು, ರಥೋತ್ಸವಾದ್ಯುತ್ಸವಗಳೂ ಪೂಜೆಯೂ ನಡೆಯುವಂತಕ್ಕೆ ತಸ್ತೀಕನ್ನು ಉಂಟುಮಾಡಿದರು. ಪೆಗಡದೇವನಕೋಟೆ ತಲಚೇರಿಯ ಮಾರ್ಗದಲ್ಲಿ ಮೈಸೂರ ಸಮೀಪದಲ್ಲಿ ಛಾಯಾಗಿ ಒಂದು ಕೆರೆಯನ್ನು ಕಟ್ಟಿಸಿ, ಲಿಂಗಾಂಬುಧಿ ಎಂಬ ನಾಮಧೇಯವನ್ನಿಟ್ಟು,

ಇದರ ಸಮೀಪದಲ್ಲಿಯೇ ಒಂದು ಶಿವ ದೇವಸ್ಥಾನವನ್ನು ಕಟ್ಟಿಸಿ, ಮೂರು ಲಿಂಗೇಶ್ವರನೆಂಬುದಾಗಿ ಶಿವಪ್ರತಿಷ್ಠೆಯನ್ನು ಮಾಡಿಸಿ, ವಸ್ತ್ರಾಭರಣಾದಿಗಳನ್ನು ಕೊಟ್ಟರು. ಪೂಜೆಗಳೂ ರಥೋತ್ಸವಾದ್ಯೋತ್ಸವಗಳೂ ನಡೆಯುವದಕ್ಕೆ ತಸ್ತೀಕನ್ನು ಒಂದುಮಾಡಿದುದಲ್ಲದೆ, ಬ್ರಾಹ್ಮಣರಿಗೆ ಅನ್ನದಾನ ನಡೆಯುವದಕ್ಕೆ ಸತ್ರವನ್ನು ಹಾಕಿಸಿದರು. ಎಷ್ಟೊರೆ ಸುಬ್ರಹ್ಮಣ್ಯಕ್ಕೆ ಹೋಗಿ ಬರುವ ಮಾರ್ಗಗಳಲ್ಲಿ ಅನ್ನಸತ್ರ, ಅರವಟ್ಟಿಗೆ, ಧರ್ಮಶಾಲೆ, ಚಿತ್ತರಂಜನ ಮಹಲೆಂಬ ಬಂಗಲೆ, ತಟಾಕ, ತೋಪು, ಸಾಲುಮರ ಮುಂತಾದ ಧರ್ಮಕಾರ್ಯಗಳನ್ನು ಮಾಡಿಸಿದರು. ನಂಜನಗೂಡಿನ ಮಾರ್ಗದಲ್ಲಿಯೂ ಶ್ರೀರಂಗಪಟ್ಟಣದ ಮಾರ್ಗದಲ್ಲಿಯೂ ಅನ್ನಸತ್ರ ಧರ್ಮಶಾಲೆ ದೇವಸ್ಥಾನ ಸರೋವರ ತೋಪು ಅರವಟ್ಟಿಗೆ ಮುಂತಾದವುಗಳನ್ನು ಮಾಡಿಸಿದರು. ಕೊಳ್ಳೆಗಾಲ, ಮಾದೇಶ್ವರಬೆಟ್ಟ, ತಿರುಮಕೂಡಲು, ಗರ್ಭೇಶ್ವರಿ ಮುಂತಾದ ಸ್ಥಳಗಳಿಗೆ ಜನಗಳುಸಂಚರಿಸುವ ಭಾಟಿಮಾರ್ಗಗಳಲ್ಲಿ ಮೈಸೂರ ಸಮೀಪದಲ್ಲಿ ಮನೋಹರವಾದ ಸರೋವರವನ್ನೂ ಚಿನ್ನದ ಕಲಶದಿಂದ ಕೂಡಿಸುವ ದೇವಸ್ಥಾನವನ್ನೂ ಕಟ್ಟಿಸಿ, ಮುಮ್ಮಡಿಕೃಷ್ಣೇಶ್ವರನೆಂಬುದಾಗಿ ಶಿವಪ್ರತಿಷ್ಠೆಯನ್ನು ಮಾಡಿಸಿ ಪೂಜೆ ನಡೆಯಂತೆ ತಸ್ತೀಕನ್ನು ಒಂದುಮಾಡಿದರು. ಮತ್ತು ಬ್ರಾಹ್ಮಣರಿಗೂ ಗಣಂಗಳಿಗೂ ಅನ್ನಸತ್ರ ಅರವಟ್ಟಿಗೆಗಳು ನಡೆಯಂತೆ ಕಟ್ಟಳೆಮಾಡಿಸಿ ಧರ್ಮಶಾಲೆಯನ್ನೂ ಮನೋರಂಜನ ಮಹಲೆಂಬ ಚಿತ್ರವಿಚಿತ್ರವಾದ ಬಂಗಲೆಯನ್ನೂ ನಿರ್ಮಿಸಿ, ಸಾಲುಮರ ಹಾಕಿಸಿ, ಚಂಪಕ ಬಿಲ್ವ ಮೊದಲಾದ ನಾನಾಜಾತಿ ವೃಕ್ಷಗಳಿಂದ ವನವನ್ನು ಉಂಟುಮಾಡಿದರು. ಬಡವರಾಗಿ ಬಂದ ಜನಗಳಿಗೆ ಈ ಸತ್ರದಲ್ಲಿ ಧರ್ಮಾರ್ಥವಾಗಿ ಮದುವೆ ಮುಂಜಿಗಳನ್ನು ಮಾಡಿಸಿ, ಅವರಿಗೆ ವಸ್ತ್ರಾಭರಣ ಪಾತ್ರೆಗಳನ್ನು ಕೊಟ್ಟು, ಸಂತೋಷಪಡಿಸುತ್ತಿದ್ದರು. ಇದಲ್ಲದೆ ಈ ಸ್ಥಳದಲ್ಲಿ ತುರುವೇಕೆರೆಯ ಸೋಮಯಾಜಿಗಳು ಮೊದಲಾದ ಬ್ರಾಹ್ಮಣರುಗಳ ಕೈಯಿಂದ ಅತಿರಾತ್ರಯೂಪ ಮುಂತಾದ ಧರ್ಮಕಾರ್ಯಗಳನ್ನು ಅನೇಕವಾಗಿ ಮಾಡಿಸಿದರು.

ಆಳಿದ ಮಹಾಸ್ವಾಮಿಯವರು ಮೈಸೂರ ಮೆಳುವಿನ ಬಳಿಯಲ್ಲಿ ಧರ್ಮಶಾಲೆಯನ್ನು ಕಟ್ಟಿಸಿ ಮಾರ್ಗಸ್ಥರಾಗಿ ಬಂದ ಗೋಸಾವಿ

ಗಳಿಗೂ ಜೈರಾಗಿಗಳಿಗೂ ದೀಪದಾಗಿ ಬಂದ ಜನಗಳಿಗೂ ಪ್ರತಿದಿನದ ಲ್ಲಿಯೂ ಸಮಾಪತ್ತಿ ಕೊಡುವಂತೆಯೂ ಮಂಗಳವಾರಗಳಲ್ಲಿ ಬಂದ ಈ ಜಾತಿ ಸ್ತ್ರೀ ಪುರುಷರಿಗೆ ಬಾವಿ ಮುಂತಾದ್ದನ್ನು ಕೊಡುವಂತೆಯೂ ಕಟ್ಟಳೆ ಮಾಡಿಸಿದರು. ಸಂವತ್ಸರಕ್ಕೆ ಬಂದುಹಾರಿ ಅನೇಕಜನ ಮುತ್ತೈದೆಯರಿಗೆ ಅರಿಸಿನ ಕುಂಕುಮ ಸೀರೆ ರವಿಕೆ ವಸ್ತ್ರಿಗೆಗಳನ್ನು ಕೊಡುವುದಲ್ಲದೆ ಅನೇಕ ಜೈರಾಗಿ ಗೊಸಾಯಿಗಳಿಗೆ ಛೋಟ್ರಿ, ಧಾವಳಿ, ಕಾವಿ, ಚಂಬು, ರೂಪಾಯಿ, ಕಾಲು ಮುಂತಾದವುಗಳನ್ನು ಅಪ್ಪಣೆ ದಯಪಾಲಿಸುತ್ತಿದ್ದರು.

18. ಮಠಗಳಿಗೆ ಸೇವೆ: ಶ್ರೀ ಪರಕಾಲನು.—ಮುಮ್ಮಡಿ ಕೃಷ್ಣ ರಾಜ ಒಡೆಯರವರು ತಮ್ಮ ಮುತ್ತಜ್ಜಂದಿರಾದ ನೆಂಪ್ಪಜ್ಜಪ್ಪ ರಾಜ ಒಡೆಯರವರಿಗೆ ಸಮಾಶ್ರಯಣವನ್ನು ಮಾಡಿದ ಶ್ರೀ ದೊಪ್ಪ ಪರಕಾಲ ಸ್ವಾಮಿಗಳವರ ಪರಕಮಲಸಂಜಾತ ಪರಂಪರೆಯಾಗಿ ಬಂದ ಶ್ರೀಪಂಚಾ ಮತಾದ ಪರಕಾಲಸ್ವಾಮಿಗಳವರಲ್ಲಿ ಸಮಾಶ್ರಯಣವನ್ನು ಮಾಡಿಸಿ ಕೊಂಡು, ಸ್ವಾಮಿಗಳಿಗೂ ಮಠದ ಶ್ರೀ ಪಯಗ್ರೀವ ಲಕ್ಷ್ಮೀನಾರಾಯಣ ದೇವರಿಗೂ ಸೇವಾಸಾರ್ಥವಾಗಿ ಕೃಷ್ಣಾಪುರ, ಮೇಲುಕೋಟೆ, ಶ್ರೀರಂಗ ಪಟ್ಟಣದ ಕೊಪ್ಪಲು, ಮೈಸೂರು ಮುಂತಾದ ಸ್ಥಳಗಳಲ್ಲಿ ವಿಸ್ತಾರ ವಾಗಿ ಮಠಗಳನ್ನು ಕಟ್ಟಿಸಿಕೊಟ್ಟರು. ಮತ್ತು ದೇವರಿಗೆ ಒಪ್ಪಿಸಿರುವ ಸೇವೋಪಕರಣ ಮುಂತಾದವು ಯಾವುವೆಂದರೆ: ಸವರತ್ನದ ತೊಟ್ಟಿಲು, ಚತಕೋಪ, ಸೀತ ಸೊಂತವಾದ ಬುಮೊರಿ ಕಂಬಿ, ಛತ್ರಾವಳಿ ಜೊತೆ, ಕನ್ನಡಿ ಇವು ಮುಂತಾದ ನವರತ್ನಸಹಿತವಾದವುಗಳು; ಪಚಿ ಬಾ ಮಕರ ಕಂಠಿ ಮತ್ತು ಜಂಪಾಕಲ್ಲಿನದು, ವಜ್ರದ ಸಂಜವಾತ್ರಿ ನಿತ್ಯೋತ್ಸವಾಭರಣ, ನವರತ್ನದ ಖಡಕಗಳಿಂದ ಕೂಡಿದ ಅನೇಕ ಮುಕ್ತಾಹಾರಗಳು; ಕಿನ್ನದ ಪೀತ ಪ್ರಭಾವಳಿಗಳು, ತಳುಕಿನ ಸರವಿನ ಕೂಡಿದ ಪಿಂಟದ, ತೊಟ್ಟಿಲು, ಸರಪಣಿ, ಚತಕೋಪ, ಬಾವುಕ ಜೊತೆ, ಕೊಪ್ಪ ಗೆ, ಗಿಂಡಿ, ಪಾಸಾಲೆ, ತಟ್ಟೆ, ಅನೇಕ ಬಟ್ಟಲುಗಳು, ಚಾವಿ ಇವು ಮುಂತಾದ ಚಿನ್ನದ ಸಹಮಾಸುಗಳು; ಬೆಳ್ಳಿಯ ಪೀತ ಪ್ರಭಾವಳಿಗಳು ಪಿಂಟದ, ತೊಟ್ಟಿಲ ಸರಪಣಿ, ಕೊಪ್ಪರಿಗೆ, ಪಿಂಡಿಗೆ, ಟವಿಗೆ ಕಂಬಗಳು,

ದೀವಟಿಗೆ, ತಟ್ಟೆ, ಬುಟ್ಟಿಲುಗಳು, ಗಿಂಡಿ, ಪಂಕಾಲೆ, ಚಂಬು, ಪಂಜಕ ಪಾತ್ರೆ, ಉದ್ದರಣೆ, ದೊಣ್ಣೆ, ಗುಂಬಾತಿ, ಏಕಾತಿ ಮೊದಲಾದ ಅನೇಕ ಆರ್ಚಿಗಳು ಇವು ಮುಂತಾದ ಬೆಳ್ಳಿಯ ಸಾಮಾನುಗಳು; ಕಲಾಪತ್ತಿ ಛತ್ರ, ಚಾಮರ, ಸೂರಿಪಾನೆ, ಮೋರ್ಚಾಲು, ಪಲ್ಲಕ್ಕಿ, ಆನೆ, ಕುದುರೆ, ಅಂಬಾರಿ, ನಗಾರಿ, ನೌಬತ್ತು, ಚಿನ್ನದ ಮಕರ ತೋರಣ ಇವು ಮುಂತಾದ ಅನೇಕ ಬಿರುದುಗಳು. ಹಿಂತ್ತಿಳ ತಾಮ್ರಗಳಿಂದ ಮೂಡಿದ ಅನೇಕ ಕಟಾಕ್ಷಗಳು

ಮೇಲೆ ಕಂಡ ವಸ್ತುಗಳನ್ನು ಕೊಟ್ಟಷ್ಟಲ್ಲದೆ ಶ್ರೀಸ್ವಾಮಿಗಳಿಗೆ ತಿರುಪತಿ, ರಾಮೇಶ್ವರ, ಶ್ರೀರಂಗ ಮುಂತಾದ ದಿವ್ಯದೇಶಗಳ ಯಾತ್ರೆ ಗೋಸ್ಕರ ಬಹಳವಾಗಿ ದ್ರವ್ಯವನ್ನು ಕೊಟ್ಟು ಸನ್ಮಾನ ಪೂರ್ವಕವಾಗಿ ಕಳುಹಿಸಿ ಅನೇಕ ಮಾತ್ಸರ್ಯಗಳನ್ನು ಮಾಡಿಸಿ, ಮತಕ್ಕೆ ಅಪ್ಪಯ್ಯಗಾಮಿಯವ ಶೈವರಿಂದ ಬಂದ ಕಷ್ಟಕ್ಕೆ ೧೩,೫೦೦ ವರಹಗಳ ತನ್ನೀಕು ಕೊಡಿಸಿ ಮಂತ್ರಿಕಟ್ಟಳೆ ಮಾಡಿಸಿ, ಮತ್ತು ಮೊದಮಲೈವರ ವರಹಗಳ ಹುಟ್ಟು ವಳಿಯ ಕೆಲವು ಗ್ರಾಮಶಾಸನಗಳನ್ನು ಸದೇಮಾನ್ಯವಾಗಿ ಕೊಟ್ಟು ಮತವನ್ನು ಜೀರ್ಣೋದ್ಧಾರ ಮಾಡಿದರು. ಶ್ರೀಷೆಂಟುವತಾರ ಪರಕಾಲ ಸ್ವಾಮಿಗಳ ಕರಕಮಲ ಸಂಜಾತರಾದ ಶ್ರೀವೇದಾಂತ ಬ್ರಹ್ಮತಂತ್ರ ಪರ ಕಾಲಸ್ವಾಮಿಗಳಿಗೆ ಅನೇಕ ವಸ್ತ್ರಾಭರಣ ಪಾತ್ರೆಗಳನ್ನೂ, ಪಲ್ಲಕ್ಕಿ, ಛತ್ರ, ಚಾಮರ, ಸೂರಿಪಾನೆ ಮುಂತಾದವುಗಳನ್ನೂ ಒಪ್ಪಿಸಿದರು. ಇವರ ಕರಕಮಲ ಸಂಜಾತರಾದ ಶ್ರೀನಿವಾಸ ಬ್ರಹ್ಮತಂತ್ರ ಪರಕಾಲಸ್ವಾಮಿಗಳ ಪನ್ನಿರಿಮುನ್ನಿ ಭಗವದ್ಗೀತೆ ಬೇಸವೇಶವನ್ನು ಮಾಡಿಸಿಕೊಂಡು, ಅನೇಕ ವಸ್ತ್ರಾಭರಣಗಳನ್ನು ಒಪ್ಪಿಸಿ, ಇವರಿಗೆ ಯಥಾಶಕ್ತಿಯಾಗಿ ಉಗ್ರ ರಥಾರೂಢಿಯನ್ನು ಮಾಡಿಸಿ, ಈ ಸ್ವಾಮಿಗಳು ಪಂಚಮಟೆ ಕೃಷ್ಣಾನದಿ ಮುಂತಾದ ತೀರ್ಥಗಳ ಯಾತ್ರೆಗೋಸ್ಕರ ಹೊರಡುವಲ್ಲಿ ಪಂಚಕಲಶದ ಪಲ್ಲಕ್ಕಿಯನ್ನು ಕೊಟ್ಟು ಕಳುಹಿಸಿ, ಅವರು ಯಾತ್ರೆಯನ್ನು ಮಾಡಿ ಕೊಂಡು ದಯಮಾಡಿಸಿದಾಗ ಪಶ್ಚಿಮವಾಹಿನಿಗೆ ಚಿತ್ತೈಸಿ ಸ್ವಾಮಿಗಳ ದರ್ಶನವನ್ನು ಮಾಡಿಕೊಂಡು ಪಂಚಕಲಶಗಳ ಚಿನ್ನದ ಪಲ್ಲಕ್ಕಿ, ಛತ್ರ, ಚಾಮರ, ವಸ್ತ್ರಾಭರಣಗಳನ್ನು ಒಪ್ಪಿಸಿ ಬಂದು ತಮ್ಮಲ್ಲಿ ಉಗ್ರರಥಕಾಂತಿ

ಮುಂತಾದ ಉತ್ಸವಕಾಲಗಳಲ್ಲಿ ತಾವು ಮಾಡಿಸಿದ ಅಷ್ಟೈಶ್ವರ್ಯಗಳನ್ನು ಹೇಳುತ್ತ, ಚಿನ್ನ ಬೆಳ್ಳಿಯ ಹೂಗಳಿಂದ ಪಾದಪೂಜೆಯನ್ನು ಮಾಡುತ್ತಿದ್ದರು. ಮತ್ತು ಶ್ರೀ ಸ್ವಾಮಿಗಳಿಗೆ ಭೀಮರಥಶಾಂತಿಯನ್ನೂ ಮಾಡಿಸಿದರು. ಅನಂತರ ಈ ಸ್ವಾಮಿಗಳ ಕರಕಮಲ ಸಂಜಾತರಾದ ಶ್ರೀನಿವಾಸದೇಶಿಕೇಂದ್ರ ಬ್ರಹ್ಮತಂತ್ರ ಪರಕಾಲಸ್ವಾಮಿಗಳಿಗೆ ಅನೇಕ ವಸ್ತ್ರಾಭರಣಾದಿಗಳನ್ನು ಒಪ್ಪಿಸಿ, ಅನೇಕ ಜನರ ಕಡೆಯಿಂದ ಪಾದಪೂಜೆಯನ್ನು ಮಾಡಿಸಿ, ಸ್ವಾಮಿಗಳು ಆ ಜನಗಳಿಗೆಲ್ಲಾ ಶಾಲು ಮುಂತಾದ ವಸ್ತ್ರಗಳನ್ನು ಮರ್ಯಾದೆಮಾಡಿದನಂತರ, ಸ್ವಾಮಿಗಳಿಗೆ ಉಗ್ರರಥಶಾಂತಿಯನ್ನು ಮಾಡಿಸಿ, ಮೇಲೆ ಹೇಳಿದ ನಾಲ್ಕು ಮಂದಿ ಸ್ವಾಮಿಗಳ ಪಾದುಕೆಗಳನ್ನೂ ಸ್ವೀಕರಿಸಿ, ದೇವರ ಮನೆಯಲ್ಲಿರಿಸಿ ಕೊಂಡು ಪ್ರತಿದಿನದಲ್ಲಿಯೂ ಪೂಜೆ ಮಾಡುತ್ತಿದ್ದರು.

ಶ್ರೀ ಶೃಂಗೇರೀ ಮಠ.—ಆಳಿದ ಮಹಾಸ್ವಾಮಿಯವರು ಶೃಂಗೇರಿಯ ಶ್ರೀ ನೃಸಿಂಹಭಾರತೀ ಸ್ವಾಮಿಗಳ ಪರಮಗುರುಗಳು ಮೂರು ಸಾರಿ ಬಂದಕಾಲದಲ್ಲಿಯೂ ಅವರ ಅನಂತರದಲ್ಲಿ ಶ್ರೀ ನೃಸಿಂಹಭಾರತೀಸ್ವಾಮಿಗಳು ಅನೇಕಾವೃತ್ತಿ ದಯಮಾಡಿದ ಕಾಲದಲ್ಲಿಯೂ ಒಟ್ಟಾಗಿ ವಸ್ತ್ರಾಭರಣ ಕಾಣಿಕೆಗಳನ್ನು ಒಪ್ಪಿಸಿದರು. ಸರ್ವಧಾರಿಸಂವತ್ಸರದಲ್ಲಿ ಸ್ವಾಮಿಗಳಿಗೆ ಅಮೂಲ್ಯವಾದ ನವರತ್ನ ಕಿರೀಟವನ್ನೂ ಅಭರಣಗಳನ್ನೂ ಗ್ರಾಸುಗಳನ್ನೂ ಕೊಟ್ಟು, ಚಂದ್ರಮೌಳೀಶ್ವರ ದೇವರಿಗೆ ರತ್ನದ ನಾಗಾಭರಣ ಸಹಿತವಾದ ಕೊಳಗ ಮುಂತಾದ ಅನೇಕಾಭರಣಗಳನ್ನು ಸಮರ್ಪಿಸಿ, ತಮ್ಮ ಮಾತೃಶ್ರೀಯವರಿಂದಲೂ ಧರ್ಮಪತ್ನಿಯವರಿಂದಲೂ ಅಳಿಯಂದಿರು ಮುಂತಾದ ಅರಸುಗಳಿಂದಲೂ ಭಿಕ್ಷಪಾದಪೂಜೆಗಳನ್ನು ಮಾಡಿಸಿ ಕಾಣಿಕೆಗಳನ್ನು ಕೊಡಿಸಿದರು. ದುರ್ಮತಿ ಸಂವತ್ಸರದಲ್ಲಿ ಶ್ರೀ ಸ್ವಾಮಿಗಳು ರಾಮೇಶ್ವರ ಯಾತ್ರಾರ್ಥವಾಗಿ ಬರಲು, ಪೂರ್ವದಂತೆ ಸೇವೆಯನ್ನು ಮಾಡಿ, ರಾಮೇಶ್ವರದಿಂದ ದಯಮಾಡಿಸಿದಾಗ ಘಂಟೆಗಳಿಂದ ಅಲಂಕೃತವಾದ ಬರಗು ಮಣೆಯೊಡನೆ ಕೂಡಿದ ಬೆಳ್ಳಿಯ ಪೀಠವನ್ನು ಒಪ್ಪಿಸಿ, ಶ್ರೀಸ್ವಾಮಿಗಳನ್ನು ಬಹಳ ಸನ್ಮಾನ ಪೂರ್ವಕವಾಗಿ ಕಳುಹಿಸಿ ಉತ್ತರದೇಶದಲ್ಲಿರುವ ಸಿಂಧ್ಯಾ, ಒಳ್ಕರು, ಬರೋಡ

ನ್ಯಾಸ್ಯನವರ್ಷ, ದ್ಯಾರಕಿ ಮುಂತಾದ ಸ್ಥಳಗಳಲ್ಲಿರುವ ಇವರ ಶಿಷ್ಯರಿಗೆ ತಿಳಿಸಿ ಸ್ವಾಗತಕ್ಕೆ ಏರ್ಪಾಡುಮಾಡಿಸಿದರು. ಶ್ರೀಸ್ವಾಮಿಗಳು ಅಲ್ಲಿರುವಷ್ಟು ಕಾಲವೆಲ್ಲ ಪಂಡಿತರಿಗೆ ಬಹಳ ಬಹುಮಾನಗಳನ್ನು ಕೊಡಿಸಿದರು. ಈ ಕಡೆ ಆಳಿದ ಮಹಾರಾಜರುಗಳಿಗೆ ರಾಜಧಾನಿಗೆ ದಯಮಾಡಬೇಕೆಂದು ವಿಜ್ಞಾಪನೆಯ ಪತ್ರಿಕೆಯನ್ನು ಬರೆದು ಸ್ವಾಮಿಗಳನ್ನು ಕರೆತರಿಸಿ, ಸಾವಿರ ಸಂಖ್ಯೆತ್ತರದ ಸಜಾತಿಯ ಭಕ್ತರುಗಳಿಂದ ಮೈಸೂರಿಗೆ ಬರಮಾಡಿಸಿ ಕಲ್ಲಿನಮಂಟಪದಲ್ಲಿ ಉತ್ಸವಮೂರ್ತಿಯನ್ನು ಪ್ರತಿಷ್ಠೆಮಾಡಿಸಿ, ಸ್ವಾಮಿಗಳಿಗೆ ಪೂರ್ಣಕುಂಭವನ್ನು ಮಾಡಿ, ಪುಸಿ ಅಮೂಲ್ಯವಾದ ನವರತ್ನದ ಕಿರೀಟವನ್ನೂ ಅನೇಕ ವಸ್ತ್ರಾಭರಣಗಳನ್ನೂ ಕೊಟ್ಟು ಬಂದರು. ಅನಂತರ ಮಾರ್ಗದಲ್ಲಿ ತಾವು ಕಷ್ಟಪಟ್ಟಿರುವ ಸತ್ರದ ಒಳಿಗೆ ಚತುರಂಗ ಸೈನ್ಯಸಮೇತರಾಗಿ ಕಳುಹಿಸಿ, ಸ್ವಾಮಿಗಳಿಗೆ ಪಂಚಕಲಶಗಳಿಂದ ಶೋಭಿಸುವ ಚಿನ್ನದ ಪಲ್ಲಕ್ಕಿ, ಛತ್ರ, ಸುವರ್ಣದಂಡೆ, ಚಾಮರ, ಮೊಗಚಾಲು, ಚಿನ್ನದ ಮಕರ ತೋರಣ, ಚಿಕ್ಕೆಯ ಪಂಚವೀಸಟಿಗೆ ಜೊತೆ ಮುಂತಾದ ಬಿರುದುಗಳನ್ನು ಒಪ್ಪಿಸಿ ಕರೆದುಕೊಂಡು ಬಂದು, ಅರಮನೆಯ ಕರಿಕಲ್ಲು ತೊಟ್ಟಿಯಲ್ಲಿ ತಿಳಿಸಿದರು. ಆ ಬಳಿಕ ಚಾತುರ್ಮಾಸ್ಯ ಸಂಕಲ್ಪವನ್ನು ೪–೧೦ ಲಕ್ಷ ಬ್ರಾಹ್ಮಣರ ಸಮಾರಾಧನೆಯನ್ನೂ ಮೇಲಕಲ್ಲಿ ನಡೆಯುತಕ್ಕ ನವರಾತ್ರಿಯ ಮುಂತಾದ ಉತ್ಸವಗಳನ್ನು ಮಾಡಿಸಿ, ತಪೋನಿಷ್ಠರೂ ಮುಖ್ಯ ಶಿಷ್ಯರುಗಳೂ ಆದ ಶ್ರೀ ಸ್ವಾಮಿಗಳಿಂದ ಶಿವಗೀತೋಪದೇಶವನ್ನು ಮಾಡಿಸಿಕೊಂಡು, ಅದ್ವೈತಪಿಚಾರವನ್ನು ಮಾಡಿ ಈ ಗೀತಾ ಮಂಗಳ ಕಾಲದಲ್ಲಿ ತಾವು ಮಾಡಿದ ಅಷ್ಟೋತ್ತರನಾಮಗಳನ್ನು ಹೇಳುತ್ತ ಸ್ವಾಮಿಗಳ ಪಾದ ಪೂಜೆಯನ್ನು ಮಾಡಿ, ಅಮೂಲ್ಯವಾದ ವಜ್ರ ಪಚ್ಚೆ ಮುಂತಾದ ರತ್ನಗಳಿಂದ ಕೂಡಿರುವ ಮಕರಕಂಠಿಯನ್ನೂ, ನವರತ್ನಮಯವಾದ ಅನೇಕ ಮುಕ್ತಾಹಾರಗಳನ್ನೂ, ಚಂದ್ರಮೌಳೀಶ್ವರ ಸ್ವಾಮಿಗೆ ಬೆಳ್ಳಿಯ ನಾಗಾಭರಣವನ್ನೂ, ಅಮೂಲ್ಯವಾದ ಅನೇಕ ವಸ್ತ್ರ, ಪಾತ್ರೆ, ಹಾಣಿಕೆಗಳನ್ನೂ ಒಪ್ಪಿಸಿ ಶ್ರೇಯಸ್ಸನ್ನು ಪಡೆದರು. ಅನಂತರದಲ್ಲಿ ತಮ್ಮ ಎಲ್ಲಾ ಧರ್ಮಪತ್ನಿಯರಿಂದಲೂ ವಜ್ರಗಳಿಂದ ಅಲಂಕೃತವಾದ ಪಂಚಪಾತ್ರೆ, ರತ್ನದ ಉದ್ಧರಣೆ, ಅಷ್ಟಕೋಣದ ನವ

ರತ್ನದ ಸಂಪುಟ, ರತ್ನಮಯವಾದ ಬಟ್ಟಲು, ರತ್ನಮಯವಾದ ಬಲಮುರಿ ಶಂಖ ಮುಂತಾದ ಅನೇಕ ಪದಾರ್ಥಗಳು ಕಾಣಿಕೆಗಳನ್ನು ಒಪ್ಪಿಸಿ ಭಿಕ್ಷೆ ಪಾವಪೂಜೆಗಳನ್ನು ಮಾಡಿಸಿದರು. ಮತ್ತು ಅಳಿಯಂದಿರು ಮುಂತಾದ ಅರಸುಗಳು, ಗುರಿಕಾರರು, ತ್ರಿಮತಸ್ಥ ಧಿಕಾರಿಗಳು, ನವಖಂಡ ವಿದ್ವಾಂಸರು, ಗೋಸಾವಿಗಳು, ವೈದ್ಯರು, ಗುಜರಾತಿಯವರು ಮುಂತಾದ ವರ್ತಕರು, ಚಿತ್ರಗಾರರು ಮುಂತಾದ ಹಣಕಟ್ಟಿನವರು ಇವರು ಮೊದಲಾದ ನವಸ್ಥಜನಗಳಿಂದಲೂ ಅವರವರ ಯೋಗ್ಯತಾನುಸಾರವಾಗಿ ಭಿಕ್ಷೆ ಪಾವಪೂಜೆಗಳನ್ನು ಮಾಡಿಸಿ, ಅನೇಕ ವಸ್ತ್ರಾಭರಣಗಳನ್ನು ಕೊಡಿಸಿದರು. ಮತ್ತು ಮತಕ್ಕೆ ಪೂರ್ವವಲ್ಲಿದ್ದ ಕೆಲವು ಸಾಲವನ್ನು ತೀರಿಸಿ, ವಿಶೇಷವಾಗಿ ವಿಷಾದನವನ್ನು ಮಾಡಿಕೊಟ್ಟು, ಜಂಬ್ರಮಹೊಳೀಶ್ವರಸ್ವಾಮಿಗೆ ಚಿನ್ನ ಜಳ್ಳಿಗಳಿಂದ ನಿರ್ಮಿತವಾದ ಮಂಟಪವನ್ನು ಒಪ್ಪಿಸಿ, ಸ್ವಾಮಿಗಳ ಪಾದುಕೆಗಳನ್ನು ಸ್ವೀಕರಿಸಿ ಪ್ರತಿದಿನವೂ ಪೂಜಿಸುತ್ತ, ಮತವನ್ನು ಪ್ರೇಮದಿಂದ ಸಂರಕ್ಷಿಸುತ್ತ ಒಂದರು.

ಅಹೋಬಲ ಮಠ.—ತಿರುಪ್ಪತ್ತೂರ್ ಸ್ಥಳದಲ್ಲಿರುವ ಈ ಮಠದ ಶ್ರೀನಿವಾಸಸ್ವಾಮಿಗಳನ್ನು ಕರೆಯಿಸಿ. ಅವರ ಶಿಷ್ಯರಿಗೆ ಸಹಾಶ್ರಯವನ್ನು ಮಾಡಿಸಿ, ಅನೇಕವಾಗಿ ಕಾಣಿಕೆಗಳನ್ನು ಕೊಡಿಸಿ ಅರಮನೆಯಲ್ಲಿ ದೇವರ ಪೂಜೆಯನ್ನೂ ಭಿಕ್ಷ ಪಾದಪೂಜೆಗಳನ್ನೂ ಮಾಡಿಸಿ, ಅಮೂಲ್ಯವಾದ ಅನೇಕ ವಸ್ತ್ರಾಭರಣಗಳನ್ನು ಒಪ್ಪಿಸಿ, ಶ್ರೀರಂಗಪಟ್ಟಣ, ಮೇಲುಕೋಟೆ, ಮೈಸೂರು ಮುಂತಾದ ಸ್ಥಳಗಳಲ್ಲಿ ಮಠವನ್ನು ಕಟ್ಟಿಸಿಕೊಟ್ಟರು. ಇದೇ ಮೊದಲಾದ ರಂಗನಾಥಕವಿಗಳು ಮಯನಮಾಡಿಸಿದ್ದಾಗಲೂ, ಮೇಲ್ಕಂಡ ರೀತಿಯಾಗಿ ಪೂಜೆಯನ್ನು ಮಾಡಿ, ಮತದ ಲಕ್ಷ್ಮೀನರಸಿಂಹ ದೇವರಿಗೆ ಅನೇಕ ವಸ್ತ್ರಾಭರಣಗಳನ್ನು ಜವಾಹಿರು ಮಾಣಿಕ, ದಶಾವತಾರವನವರತ್ನದ ಪೆಟ್ಟಿಗೆ, ಸಂಪುಟ, ಜಳ್ಳಿಯ ಮಂಟಪ, ಶ್ರೀಗಂಧದ ಪಲ್ಲಕ್ಕಿ, ಛತ್ರ, ಚಾಮರ, ಸೂರಿಪಾನ, ಆನೆ, ಕುದುರೆ, ನವರತ್ನದ ಪಾದುಕೆ, ಚಿನ್ನ ಬೆಳ್ಳಿಯೂಡಲಾದ ಲೋಹಗಳಿಂದ ಮಾಡಿಸಿ ಪೂಜೋಪಕರಣ ಸಾಮಾನುಕಾಣಿಕೆಗಳು, ನವರತ್ನದ ಚಿಲುಕಗಳಿಂದ ಕೂಡಿರುವ ಮುಕ್ತಾಹಾರಗಳು ಮುಂತಾದವುಗಳನ್ನು ಸಮರ್ಪಿಸಿದರು. ಇದಲ್ಲದೆ

ಸೋಸಲೆ ತಲಕಾಡಿಗೆ ಪಳಿತವಾದ ಬಂದು ಸಾಫಿರ ವರಹಗಳ ಮೇಲೆ ಹುಟ್ಟುವಳಿಯಾಗುವ ನಾಗನಹಳ್ಳಿ, ಮೋಗಳಹಳ್ಳಿ, ಜೆನಕನಹಳ್ಳಿ, ಎಂಬ ೩ ಗ್ರಾಮಗಳನ್ನು ಕೊಟ್ಟರು. ಶಾ॥ ೧೫೫೬ನೇ ಆನಂದ ಸಂವತ್ಸರದ ಫಾಲ್ಗುನ ಶುದ್ಧ ೪ ಮಂಗಳವಾರದಲ್ಲಿ ಅಹೋಬಿಲ ಮಠದ ಸ್ವಾಮಿಗಳು ತಿರುಮುಕೂಡಲು ಮಾರ್ಗವಾಗಿ ಆಲನಹಳ್ಳಿಯ ಸರೋವರದ ಅನ್ನ ಸತ್ರದ ಧರ್ಮಶಾಲೆಗೆ ಬಂದು ಇಳಿದುಕೊಂಡಾಗ, ಮುಮ್ಮಡಿ ಕೃಷ್ಣ ರಾಜ ಒಡೆಯರವರು ಅಲ್ಲಿಗೆ ಚಿತ್ತೈಯಿಸಿ, ಸನ್ನಿಧಾನದಿಂದ ದೇವ ಪೂಜಾರಿಗಳನ್ನು ಮಾಡಿಸಿ, ವಸ್ತ್ರಭೂಷಣಾದಿ ಮರ್ಯಾದೆಗಳನ್ನು ಮಾಡಿ, ಈ ಶುದ್ಧ ೫ ಬುಧವಾರದಲ್ಲಿ ಮೈಸೂರಿಗೆ ಕರೆದುಕೊಂಡು ಬಂದು, ವರಾಹ ಸ್ವಾಮಿ ದೇವಸ್ಥಾನದಲ್ಲಿ ಇಳಿಸಿದರು. ಈ ಶುದ್ಧ ೯ ಭಾನುವಾರದಲ್ಲಿ ಅರಮನೆಯು ಕನ್ನಡಿ ತೊಟ್ಟಿಯಲ್ಲಿ ದೇವರ ಪೂಜೆಯೂ ಡೋಲೋತ್ಸವ ವೂ ಆದನಂತರ, ದೇವಸ್ಥಾನದಲ್ಲಿ ಭಿಕ್ಷೆಯನ್ನು ಮಾಡಿಸಿ, ಜವಾಹಿರು ಪದಕದಿಂದಕೂಡಿದ ನಾಲ್ಕೆಳೆಯಮುಕುಂಠಿ ಮೊದಲಾದ ಮುಕ್ತಾಹಾರಗಳು, ಪೀತಾಂಬರಾದಿ ವಸ್ತ್ರಗಳು, ಮ್ಯಾನಾ, ಚಿನ್ನದ ಕಲಶವೃಕ್ಷ ಛತ್ರ, ಚಾಮರ, ಮೋಜಾರ್ಜಾಲ್, ಗಂಧದ ಚಾಮರ, ಬೀಸಣಿಗೆ, ಖಾಸಾ ದೇವರ ಮನೆಯಲ್ಲಿದ್ದ ರಾಮಾನುಜಾಚಾರ್ಯರ ಮತ್ತು ವೇದಾಂತಾಚಾರ್ಯರ ಚಿನ್ನದ ವಿಗ್ರಹಗಳು, ಇವು ಮುಂತಾದ ಅನೇಕ ವಸ್ತುಗಳನ್ನೂ ದ್ರವ್ಯವನ್ನೂ ಕೊಟ್ಟು ಮರ್ಯಾದೆ ಮಾಡಿದರು.

ತೋತಾದ್ರಿ ಮಠ.—ಆಳಿದ ಮಹಾಸ್ವಾಮಿಯವರು ತೋತಾದ್ರಿ ಮಠದ ವಾನಮಾಮಲೈ ರಾಮಾನುಜಸ್ವಾಮಿಗಳು ದಯಮಾಡಿಸಿದಾಗ ಅವರಿಗೆ ಅನೇಕ ವಸ್ತ್ರಗಳನ್ನೂ ಮಕರಕಂಠಿ ಮೊದಲಾದ ಆಭರಣಗಳನ್ನೂ ಕೊಟ್ಟು ಮರ್ಯಾದೆ ಮಾಡಿದರು.

ವ್ಯಾಸರಾಯ ಮಠ.—ಮುಮ್ಮಡಿ ಕೃಷ್ಣ ರಾಜ ಒಡೆಯರವರು ವ್ಯಾಸರಾಯ ಮಠದ ವಿದ್ಯಾವೆಲ್ಲಭ ಸ್ವಾಮಿಗಳನ್ನು ಕುಂಭಕೋಣದಿಂದ ಕರಸಿ, ಸೋಸಲೆಯಲ್ಲಿ ಮಠವನ್ನು ಕಟ್ಟಿಸಿಕೊಟ್ಟು ನವರತ್ನವ ಪದಕಗಳಿಂದಕೂಡಿರುವ ಮುಕ್ತಾಹಾರ ಮುಂತಾದ ಆಭರಣಗಳನ್ನೂ ವಸ್ತ್ರಗಳನ್ನೂ ಕೊಟ್ಟರು. ಇವರು ಮೊದಲಾದ ಈ ಮಠದ ಪರಂಪರೆಯ